ಡಿಸೆಂಬರ್ 2021

ಸಂಚಿಕೆ 2

ಬೆಂಗಳೂರು ಇತಿಹಾಸ ವೈಭವ

ಜಕ್ಕೂರು
ಅಲ್ಲಾಳಸಂದ್ರ
ಅಗ್ರಹಾರ
ದಾಸರಹಳ್ಳಿ



The Mythic Society
Founded 1909

ಬೆಂಗಳೂರು ಇತಿಹಾಸ ವೈಭವ

ಡಿಸೆಂಬರ್ 2021, ಸಂಚಿಕೆ 2 (ಜಕ್ಕೂರು)



ದಿ ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡ :

ಮೇಲಿನ ಸಾಲು
ಶಶಿಕುಮಾರ ನಾಯ್ಕ ಕೆ.ಸಿ.
ಮಧುಸೂದನ ಎಂ.ಎನ್.
ಭೈರಪ್ಪ ಎಂ.ಜಿ.

ಕೆಳಗಿನ ಸಾಲು
ಉದಯ ಕುಮಾರ್ ಪಿ.ಎಲ್.
ಯುವರಾಜು ಆರ್

ಮತ್ತು
ಆರ್ಟೆಕ್ ಸ್ಪೇಸ್ ಸ್ಪೈಡರ್



ಸಂಪರ್ಕಕ್ಕಾಗಿ

ದಿ ಮಿಥಿಕ್ ಸೊಸೈಟಿ

ಉದಯ ಕುಮಾರ್ ಪಿ.ಎಲ್.
98452 04268

ಜಯಸಿಂಹ ಪಿ.
94480 03909

3dscanning.mythicsociety@gmail.com

The Mythic Society
Inscription Stones of Bangalore

@MythicSociety

Jakkur (Bengaluru Ithihaasa Vaibhava Series: 2)
ISBN: 978-81-954980-8-6
Download PDF from:
https://bit.ly/BIV_Dec21_Jakkur_Kannada

ನಿಮ್ಮ ಪ್ರತಿಕ್ರಿಯೆಯನ್ನು ತಿಳಿಸಲು

https://bit.ly/biv2_feedback

ಮೊದಲ ಮಾತು

ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ (ಅವಿಭಜಿತ ಬೆಂಗಳೂರು ಜಿಲ್ಲೆ) ಬಡಾವಣೆಗಳು ಮತ್ತು ಗ್ರಾಮಗಳ ಸ್ಥಳೀಯ ಇತಿಹಾಸವನ್ನು "**ಬೆಂಗಳೂರು ಇತಿಹಾಸ ವೈಭವ**" ಎಂಬ ಸರಣಿ ಮಾಲಿಕೆಗಳಲ್ಲಿ ರಚಿಸಲಿದೆ. ಈ ಮಾಲಿಕೆಯ ಮೊದಲ ಸಂಚಿಕೆಯಾದ 'ಸಿಂಗಾಪುರ'ವು ಈಗಾಗಲೇ ಬಿಡುಗಡೆಯಾಗಿದ್ದು, ಸ್ಥಳೀಯರಿಂದ ಹಾಗೂ ಇತಿಹಾಸ ಆಸಕ್ತ ವಲಯದಿಂದ ಅಪಾರವಾದ ಜನಮನ್ನಣೆಯನ್ನು ಪಡೆದುಕೊಂಡಿದೆ. ಮಾಲಿಕೆಯ ಮುಂದುವರೆದ ಭಾಗವಾಗಿ 'ಜಕ್ಕೂರು' ಎಂಬ ಈ ಸಂಚಿಕೆಯಲ್ಲಿ **ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ** ಇತಿಹಾಸವನ್ನು ಶಾಸನಗಳ ಹಿನ್ನಲೆಯಲ್ಲಿ ರಚಿಸುತ್ತಿರುವುದರಿಂದ, ಆಧುನಿಕ 3ಡಿ ತಂತ್ರಜ್ಞಾನದಿಂದ ಪಡೆದ ಶಿಲಾಶಾಸನಗಳ ಡಿಜಿಟಲ್ ಚಿತ್ರಗಳಿಂದ ಶಾಸನದ ನೈಜ ಪಾಠ ಹಾಗೂ ಇನ್ನಿತರೆ ಪೂರಕ ಆಧಾರಗಳನ್ನು ಬಳಸಿಕೊಂಡು ವಸ್ತುನಿಷ್ಠವಾದ ಇತಿಹಾಸವನ್ನು ರಚಿಸಲಾಗಿದೆ.

ಸ್ಥಳೀಯ ಇತಿಹಾಸಕ್ಕೆ **ಶಾಸನಗಳು ಅತ್ಯಮೂಲ್ಯವಾದ ಐತಿಹಾಸಿಕ ಮಾಹಿತಿಯನ್ನು ಒದಗಿಸುತ್ತವೆ**. ಆದರೆ **ಸಾಮಾನ್ಯ ಜನರಿಗೆ** ಅವುಗಳ ಮೌಲ್ಯ ಹಾಗೂ ಮಹತ್ವದ ಬಗ್ಗೆ ಹೆಚ್ಚಿನ ಅರಿವು ಇರುವುದಿಲ್ಲ. ಈ **ತಿಳುವಳಿಕೆಯ ಕೊರತೆ** ಹಾಗೂ **ತೀವ್ರಗತಿಯ ನಗರೀಕರಣ**ದ ಪ್ರಭಾವವು **ಅಮೂಲ್ಯವಾದ ಶಾಸನ ಪರಂಪರೆಯ ವಿನಾಶಕ್ಕೆ ಕಾರಣವಾಗಿದೆ**. ಆದ್ದರಿಂದ **ದಿ ಮಿಥಿಕ್ ಸೊಸೈಟಿಯ 3ಡಿ ಶಾಸನಗಳ ಯೋಜನಾ ತಂಡ**ವು ನಮ್ಮ ಪರಂಪರೆಯ ಭಾಗವಾಗಿರುವ ಈ ಶಾಸನಗಳನ್ನು ಶಾಶ್ವತವಾಗಿ ಡಿಜಿಟಲ್ ರೂಪದಲ್ಲಿ ಸಂರಕ್ಷಿಸುವ ಮೂಲ ಉದ್ದೇಶವನ್ನು ಹೊಂದಿದೆ. ಇದಕ್ಕಾಗಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಕಂಡುಬರುವ **1500ಕ್ಕೂ ಹೆಚ್ಚು ಶಿಲಾ ಶಾಸನಗಳನ್ನು ಹೈ-ರೆಸಲ್ಯೂಶನ್ 3ಡಿ ಸ್ಕ್ಯಾನಿಂಗ್** ಮಾಡುವ ಮೂಲಕ ಡಿಜಿಟಲ್ ಸಂರಕ್ಷಣೆ ಕಾರ್ಯದಲ್ಲಿ ತೊಡಗಿಕೊಂಡಿದೆ.

ಡಿಜಿಟಲ್ ಸ್ಕ್ಯಾನಿಂಗ್ ನಂತರ 3ಡಿ ಮಾಡೆಲ್‌ಗಳನ್ನು ಬಳಸಿಕೊಂಡು ನಮ್ಮ ತಂಡ ಹಾಗೂ ಶಾಸನತಜ್ಞರ ತಂಡವು ಈ ಶಾಸನಗಳ ಪಠ್ಯವನ್ನು ಪುನರ್ ಅಧ್ಯಯನ ಮಾಡುತ್ತಿದೆ. ಮುಖ್ಯವಾಗಿ ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಮೇಲೆ ಹೆಸರಿಸಿದ ಮೂರೂ ಜಿಲ್ಲೆಗಳ ದಾಖಲಾದ ಒಟ್ಟು 1500 ಶಾಸನಗಳಲ್ಲಿ ಶೇಕಡ 90ರಷ್ಟನ್ನು ಕರ್ನಾಟಕದ ಶಾಸನ ಪಿತಾಮಹ ಬೆಂಜಮಿನ್ ಲೂಯಿಸ್ ರೈಸ್ ಅವರು ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09 (1905) ರಲ್ಲಿ ಸಂಪಾದಿಸಿದ್ದಾರೆ. ಇನ್ನೂ ಹಲವು ಹೊಸ ಶೋಧನೆಯ ಶಾಸನಗಳನ್ನು ಸಂಶೋಧಕರು ಮತ್ತು ವಿದ್ವಾಂಸರು ಬೇರೆ ಬೇರೆ ಗ್ರಂಥ ಹಾಗೂ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದು, ಅವುಗಳನ್ನು ಸಹ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ದಾಖಲಾದ ಈ ಶಾಸನಗಳು ಮಾತ್ರವಲ್ಲದೇ ದಾಖಲಾಗದ ಎಷ್ಟೋ ಶಾಸನಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆಯುತ್ತಿದ್ದು, ಇವುಗಳನ್ನು ಸಹ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದೇವೆ. ಕ್ಷೇತ್ರಕಾರ್ಯದಲ್ಲಿ ಗುರುತಿಸಿದ ಎಲ್ಲಾ ಶಾಸನಗಳನ್ನು **ಗೂಗಲ್ ಮ್ಯಾಪ್ ನಲ್ಲಿ (https://bit.ly/inscriptionblr)** ಸೇರಿಸಲಾಗಿದೆ.

ಈ ಮೊದಲು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸ್ಥಳೀಯ ಇತಿಹಾಸ ಲೇಖನಗಳನ್ನು ವ್ಯವಸ್ಥಿತವಾಗಿ ಪ್ರಕಟಿಸಿರುವುದು ವಿರಳ. ವ್ಯವಸ್ಥಿತವಾಗಿ ಪ್ರಕಟಿಸಿದ ಕೆಲವೇ ಕೆಲವು ಲೇಖನಗಳು 'ವಿದ್ವತ್ಪೂರ್ಣ ನಿಯತಕಾಲಿಕೆ'ಗಳಲ್ಲಿವೆ ಹಾಗೂ ಇನ್ನೂ ಕೆಲವು ಲೇಖನಗಳು ಖಾಸಗಿ ಅಥವಾ ಸಾರ್ವಜನಿಕ ಗ್ರಂಥಾಲಯಗಳಲ್ಲಿರುವ ಪುಸ್ತಕಗಳಲ್ಲಿದ್ದು ಎಲ್ಲರೂ ಅವುಗಳನ್ನು ಓದಲು ಸಾಧ್ಯವಾಗಿಲ್ಲ. ಆದ್ದರಿಂದ ಸಾಮಾನ್ಯ ಜನರಿಗೆ ತಮ್ಮ ಸ್ಥಳೀಯ ನೈಜ ಇತಿಹಾಸವನ್ನು ತಿಳಿಯಲು ಸಾಧ್ಯವಾಗಿಲ್ಲ ಎಂದೇ ಹೇಳಬಹುದು. ಹಾಗಾಗಿ ನಮ್ಮ ತಂಡವು ಈ ಪರಿಸ್ಥಿತಿಯನ್ನು ಸುಧಾರಿಸಲು ಬಯಸುತ್ತದೆ. ಅಂದರೆ ಈ ಲೇಖನಗಳ ಮೂಲಕ ಸ್ಥಳೀಯ ಇತಿಹಾಸವನ್ನು ಜನಸಾಮಾನ್ಯರಿಗೆ ತಲುಪಿಸುವ ಗುರಿಯನ್ನು ಹೊಂದಿದ್ದೇವೆ. ಇತಿಹಾಸಕಾರ **ಎ.ಎಸ್.ಅಲ್ತೇಕರ್** ಅವರು ತಮ್ಮ ಪುಸ್ತಕದಲ್ಲಿ (1927) ಬರೆದಿರುವ ಈ ಕೆಳಗಿನ ಸಾಲುಗಳನ್ನು ನಮ್ಮ ತಂಡವು ಸಂಪೂರ್ಣವಾಗಿ ಒಪ್ಪುತ್ತದೆ[1]:

---

1 Altekar , A S. A History of Village Communities in Weswtern India. University of Bombay Economics Series No. 5, 1927. p-26

"It is indeed high time for scholars to realize that real and reliable history of the (India's) past can be reconstructed not by wide generalizations but by intense research, province by province, century by century....epigraphic evidence shows quite clearly how dangerous it is to draw general conclusions applicable to India as a whole from data supplied by the smritis of one province or the inscriptions of another".

ಕನ್ನಡ ಅನುವಾದ : ಪ್ರಾಂತ್ಯದಿಂದ ಪ್ರಾಂತ್ಯಕ್ಕೆ, ಶತಮಾನದಿಂದ ಶತಮಾನಕ್ಕೆ ಅನುಗುಣವಾದ ಮತ್ತು ತೀವ್ರವಾದ ಸಂಶೋಧನೆಯಿಂದ ಭಾರತದ ಗತಕಾಲದ ನೈಜ ಮತ್ತು ವಿಶ್ವಾಸಾರ್ಹ ಇತಿಹಾಸದ ಪುನರ್ ರಚನೆಯು ಸಾಧ್ಯವಿದೆಯೇ ಹೊರತು ಸಾಮಾನ್ಯೀಕರಣದಿಂದಲ್ಲ ಎಂದು ಅರಿತುಕೊಳ್ಳಲು ಇದು ಸರಿಯಾದ ಸಮಯ. ಒಂದು ಪ್ರಾಂತ್ಯದ ಸ್ಮೃತಿಗಳು (ಜನಪದ/ದಂತಕಥೆ/ಸಾಹಿತ್ಯ..) ಅಥವಾ ಮತ್ತೊಂದು ಪ್ರಾಂತ್ಯದ ಬರಹಗಳಿಂದ ದೊರೆತ ಮಾಹಿತಿಗಳನ್ನು ಇಡೀ ಭಾರತಕ್ಕೆ ಅನ್ವಯವಾಗುವಂತೆ ಸಾಮಾನ್ಯಗೊಳಿಸಿ ತೀರ್ಮಾನಿಸುವುದು ಎಷ್ಟು ತಪ್ಪಾಗಬಹುದು ಎಂಬುದನ್ನು ಶಾಸನ ಬರಹಗಳ ಆಧಾರಗಳು ಸಾಕಷ್ಟು ಸ್ಪಷ್ಟವಾಗಿ ತೋರಿಸುತ್ತವೆ

ಸ್ಥಳೀಯ ಇತಿಹಾಸವನ್ನು ಸ್ಥಳೀಯರಿಗೆ ತಿಳಿಸದಿದ್ದರೆ ಅದನ್ನು ಐತಿಹಾಸಿಕ ಪ್ರಮಾದವೆಂದೇ ನಾವು ಭಾವಿಸುತ್ತೇವೆ. ಆದ್ದರಿಂದ ಈ ಲೇಖನಗಳನ್ನು ವಿಶೇಷವಾಗಿ ಸ್ಥಳೀಯ ನಿವಾಸಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ. ಇವರಲ್ಲಿ ಮಕ್ಕಳು, ವಿದ್ಯಾರ್ಥಿಗಳು ಅಥವಾ ವಯಸ್ಕರು ಯಾರಾದರೂ ಆಗಿರಬಹುದು. **ಮಕ್ಕಳಿಗೂ ಅರ್ಥವಾಗಬೇಕೆಂಬ ದೃಷ್ಟಿಯಿಂದ ಈ ಲೇಖನವನ್ನು ಸರಳ ಭಾಷೆಯಲ್ಲಿ ರಚಿಸಿದ್ದರೂ ಸಹ, ಇಲ್ಲಿ ಪ್ರಸ್ತುತ ಪಡಿಸಲಾದ ಮಾಹಿತಿಯ ಸಂಶೋಧನಾ ಗುಣಮಟ್ಟ ಮತ್ತು ಆಳ ಸತ್ಯಾಸತ್ಯತೆಯಿಂದ ಕೂಡಿದೆ**, ಈ ವಿಚಾರದಲ್ಲಿ ಯಾವುದೇ ರಾಜಿಯನ್ನು ಮಾಡಿಕೊಂಡಿಲ್ಲ. ಮಕ್ಕಳಿಗೂ ಈ ಲೇಖನವನ್ನು ಅರ್ಥಮಾಡಿಕೊಳ್ಳಲು ಮತ್ತು ಆನಂದಿಸಲು ಸಾಧ್ಯವಾದರೆ, ವಿದ್ವಾಂಸರಲ್ಲದೆ, ಹೆಚ್ಚಿನ ಶಿಕ್ಷಣವಿಲ್ಲದ ಗ್ರಾಮಸ್ಥರಿಗೆ ಹಾಗೂ ಇನ್ನಿತರ ವಿವಿಧ ವಲಯದ ಜನ ಸಮುದಾಯಕ್ಕೆ ಇತಿಹಾಸವನ್ನು ತಿಳಿಸಬಹುದು ಎಂಬುದು ನಮ್ಮ ಬಲವಾದ ನಂಬಿಕೆ.

ಈ ಇತಿಹಾಸ ಲೇಖನಗಳನ್ನು ಅಂತರ್ಜಾಲದಲ್ಲಿ (Internet) ಮುಕ್ತವಾಗಿ ಅಪ್ಲೋಡ್ (**https://bit.ly/BIV_Dec21_Jakkur_Kannada**) ಮಾಡಲಾಗುತ್ತಿದೆ . ಅಂದರೆ **Facebook, Whatsapp, Twitter** ಹಾಗೂ ಇನ್ನಿತರ ಮಾಧ್ಯಮಗಳಲ್ಲಿ ಹಂಚಲಾಗುತ್ತದೆ. ಸಾಮಾಜಿಕ ಮಾಧ್ಯಮಗಳನ್ನು ಬಳಸುವ ಯಾರು ಬೇಕಾದರೂ ಈ ಲೇಖನಗಳನ್ನು ಓದಬಹುದು. ಮುಖ್ಯವಾಗಿ '**ದಿ ಮಿಥಿಕ್ ಸೊಸೈಟಿಯು**' ತನ್ನ ಹೆಚ್ಚು ಮೆಚ್ಚುಗೆ ಪಡೆದ '**ಬೆಂಗಳೂರು ಇತಿಹಾಸ ವೈಭವ**' ಎಂಬ ಮಾಲಿಕೆಯಲ್ಲಿ ಮತ್ತು ಇತರೆ ಮುದ್ರಣ ಸ್ವರೂಪಗಳಲ್ಲಿ ಈ ಲೇಖನಗಳನ್ನು ಪ್ರಕಟಿಸುತ್ತದೆ. ಜೊತೆಗೆ ಇತಿಹಾಸಕಾರರು, ಎಪಿಗ್ರಾಫಿಸ್ಟ್‌ಗಳು ಪ್ರಕಟಿಸುವ ವಿಶೇಷ ಶೈಕ್ಷಣಿಕ ಜರ್ನಲ್‌ಗಳಲ್ಲಿಯೂ ಪ್ರಕಟಿಸಲು ಉದ್ದೇಶಿಸಲಾಗಿದೆ. ಹಾಗಾಗಿ ಈ ಲೇಖನಗಳಲ್ಲಿನ ಮಾಹಿತಿಯು ಶಾಸನಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು ಮತ್ತು ಸ್ಥಳೀಯ ವಿಷಯಗಳ ಕುರಿತು ಹೆಚ್ಚಿನ ಸಂಶೋಧನೆ ಮತ್ತು ಪರಿಶೋಧನೆಯನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ. ಈ ಲೇಖನಗಳು **CC-BY-SA-2.0** ಪರವಾನಗಿ ನಿಯಮಗಳಿಗೆ ಅನುಗುಣವಾಗಿರುತ್ತವೆ.

ಈ ಮಾಲಿಕೆಯು ಹಲವು ಜನರಿಗೆ ತಲುಪಿ, ಅವರಿಗೂ ಇದಕ್ಕಿಂತ ಹೆಚ್ಚಿನ ವಿಷಯ ಸಂಗ್ರಹಿಸಲು ಹಾಗೂ ಪ್ರಚಾರ ಮಾಡಲು ಪ್ರೇರಣೆಯಾದರೆ, ಈ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇವೆ.

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡ

ಉದಯ ಕುಮಾರ್ ಪಿ. ಎಲ್.

ಭೈರಪ್ಪ ಎಂ.ಜಿ.

ಮಧುಸೂದನ ಎಂ.ಎನ್.

ಯುವರಾಜು ಆರ್.

ಶಶಿಕುಮಾರ ನಾಯ್ಕ ಕೆ.ಸಿ.

ಕೃತಜ್ಞತೆಗಳು



ಇತಿಹಾಸವನ್ನು ಸಾರುವ ಕುರುಹುಗಳ ಸಂರಕ್ಷಣೆಯಲ್ಲಿ ಸ್ಥಳೀಯರ ಸಹಕಾರ ಮತ್ತು ಕೊಡುಗೆ ಅಪಾರವಾದುದು. ಜಕ್ಕೂರಿನ ಶಾಸನಗಳು, ವೀರಗಲ್ಲನ್ನು ಗುರುತಿಸಲು ಮತ್ತು ಸಂರಕ್ಷಿಸಲು **ಜಕ್ಕೂರಿನ ಬಿ.ರವಿಗೌಡ, ಎಸ್.ನಾಗರಾಜ್, ಎಂ.ಶ್ರೀನಿವಾಸ್ ಮೂರ್ತಿ, ಪಿ.ರಮೇಶ್, ಎನ್.ಶ್ರೀಕಂಠಪ್ಪ, ಮುನಿಗೌಡ ಮತ್ತು ಕೆ.ಆರ್.ರಾಮು** ನೆರವಾಗಿರುತ್ತಾರೆ. ಈ ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳ ರಕ್ಷಣೆಯಲ್ಲಿ ಶಾಸನ ತಜ್ಞರಾದ **ಕೆ.ಆರ್.ನರಸಿಂಹನ್** ಮತ್ತು **ಧನಪಾಲ್ ಮಂಚೆನಹಳ್ಳಿ** ಅವರುಗಳು ಜಕ್ಕೂರು ಗ್ರಾಮಸ್ಥರಿಗೆ ಮಾರ್ಗದರ್ಶನ ನೀಡಿರುತ್ತಾರೆ. ಆದ್ದರಿಂದ ಇವರೆಲ್ಲರಿಗೂ ಕೃತಜ್ಞತೆಗಳು.

ಅಲ್ಲಾಳಸಂದ್ರ ಶಾಸನ ಮತ್ತು ಯಂತ್ರದ ಕಲ್ಲಿನ ಭೌತಿಕ ಸಂರಕ್ಷಣೆ ಮಾಡಿದ ಸ್ಥಳೀಯರಾದ **ಎಸ್.ಸೋಮಶೇಖರ್** ಹಾಗೂ ಗ್ರಾಮಸ್ಥರಿಗೆ, ದಾಸರಹಳ್ಳಿಯ ಶಾಸನ ಮತ್ತು ವೀರಗಲ್ಲುಗಳನ್ನು ಸಂರಕ್ಷಿಸಿರುವ ಗ್ರಾಮಸ್ಥರಿಗೆ ಕೃತಜ್ಞತೆಗಳು.

ಎರಡು ತುಂಡಾಗಿ ಬಿದ್ದಿದ್ದ ಅಗ್ರಹಾರದ ಶಾಸನವನ್ನು ತಜ್ಞರ ಸಹಾಯದಿಂದ ವೈಜ್ಞಾನಿಕ ವಿಧಾನದಿಂದ ಮರು ಜೋಡಿಸಿ ದೇವಾಲಯದ ಬಳಿ ಸಂರಕ್ಷಿಸಲಾಗಿದೆ. ಈ ಒಂದು ಮಹತ್ವಪೂರ್ಣ ಕೆಲಸಕ್ಕೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೆರವಾದ **ನೀಲೇಶ್ ಥಾಕ್ಕರ್** (Jeernodhar Conservators), **ಯಶಸ್ವಿನಿ ಶರ್ಮ** (Esthétique Architects), **ನಂಜುಂಡಸ್ವಾಮಿ** ಮತ್ತು ಅವರ ತಂಡಕ್ಕೆ ಹಾಗೂ ಈ ಕೆಲಸಕ್ಕೆ ಸಹಕರಿಸಿದ ಅಗ್ರಹಾರದ ಗ್ರಾಮಸ್ಥರೆಲ್ಲರಿಗೂ ಕೃತಜ್ಞತೆಗಳು.

ಈ ಸಂಚಿಕೆಯಲ್ಲಿ ಬಳಸಿರುವ ಜಕ್ಕೂರು ಮತ್ತು ಅಲ್ಲಾಳಸಂದ್ರ ಶಾಸನಗಳ ಡಿಜಿಟಲ್ ಚಿತ್ರಗಳ ಸಹಾಯದಿಂದ ನಮ್ಮ ತಂಡವು ಮರು ಓದಿದ ಶಾಸನ ಪಾಠವನ್ನು ಪರಿಷ್ಕರಿಸಿ, ಸಾರಾಂಶ ರಚನೆಯಲ್ಲಿ ಸಹಕರಿಸಿದ ಶಾಸನ ತಜ್ಞರಾದ **ಡಿ.ಸ್ಮಿತಾ ರೆಡ್ಡಿ, ಕೆ.ಆರ್.ನರಸಿಂಹನ್** ಅವರಿಗೆ ಮತ್ತು ದಾಸರಹಳ್ಳಿ ಶಾಸನವನ್ನು ಪರಿಷ್ಕರಿಸಿ, ಸಾರಾಂಶ ರಚನೆಯಲ್ಲಿ ಸಹಕರಿಸಿದ **ಪಿ.ವಿ.ಕೃಷ್ಣಮೂರ್ತಿ** ಅವರಿಗೆ, ಅಗ್ರಹಾರದ ಗ್ರಂಥ ತಮಿಳು ಶಾಸನವನ್ನು ಮರು ಓದಿದ **ಎಸ್.ರಾಜ ಗೋಪಾಲ್, ಸೌಂದರಿ ರಾಜ್ ಕುಮಾರ್, ಪ್ರೊನ್ ಕಾರ್ತೀಕೆಯನ್** ಮತ್ತು **ಪಿ.ವಿ.ಕೃಷ್ಣಮೂರ್ತಿ** ಅವರಿಗೆ ಕೃತಜ್ಞತೆಗಳು.

ವೀರಗಲ್ಲುಗಳನ್ನು ಗುರುತಿಸುವಲ್ಲಿ ಮತ್ತು ಮಹತ್ವವನ್ನು ತಿಳಿಯಲು ನೆರವಾಗಿರುವ ವೀರಗಲ್ಲು ತಜ್ಞರಾದ **ಆರ್.ಶೇಷಶಾಸ್ತ್ರಿ** ಅವರಿಗೆ, ದೇವಾಲಯಗಳ ಬಗ್ಗೆ ಮಾಹಿತಿ, ಶಿಲ್ಪಗಳ ವಿವರಣೆ ಮತ್ತು ಶ್ರಾದ್ಧದ ಬಗ್ಗೆ ತಿಳಿಸಿಕೊಟ್ಟ **ಶಲ್ವಪಿಳ್ಳೈ ಅಯ್ಯಂಗಾರ್** ಅವರಿಗೆ, ಮೂರ್ತಿ ಶಿಲ್ಪಗಳನ್ನು ಗುರುತಿಸಲು ನೆರವಾದ **ವಿ.ಅನುರಾಧ** ಅವರಿಗೆ ಕೃತಜ್ಞತೆಗಳು.

ಸಂಚಿಕೆಯ ಕರಡನ್ನು ಓದಿ ಸಲಹೆ ನೀಡಿದ **ವಿಕಾಸ್ ಹೆಗಡೆ, ಪಿ.ಜಯಸಿಂಹ** ಮತ್ತು **ಕೌಸ್ತುಭ ವೇಣುಗೋಪಾಲ್** ಅವರಿಗೆ ಪ್ರೀತಿಪೂರ್ವಕ ಧನ್ಯವಾದಗಳು.

ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡಲು ಅನುಮತಿ ನೀಡಿ ಸದಾ ಬೆನ್ನೆಲುಬಾಗಿ ನಿಂತಿರುವ **ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ**ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರೆಲ್ಲರಿಗೂ ಧನ್ಯವಾದಗಳು.

ಸಂಚಿಕೆಯ ರಚನೆಯಲ್ಲಿ ಬೇಕಾದ ಪೂರಕ ಆಕರ ಗ್ರಂಥಗಳನ್ನು ಸೂಕ್ತ ಸಮಯಗಳಲ್ಲಿ ಒದಗಿಸಿ ನೆರವಾದ ನಮ್ಮ **ದಿ ಮಿಥಿಕ್ ಸೊಸೈಟಿಯ ಗ್ರಂಥಾಲಯದ ಶ್ರೀನಿವಾಸನ್, ಕುಶಾಲ್ ಮತ್ತು ಸಿಬ್ಬಂದಿ ವರ್ಗದವರೆಲ್ಲರಿಗೂ** ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದಂತಹ **ವಿ.ನಾಗರಾಜ್** ಅವರಿಗೆ, ಗೌರವ ಕೋಶಾಧ್ಯಕ್ಷರಾದ **ಹಿರಿಅಣ್ಣಯ್ಯ** ಅವರಿಗೆ, ಆಡಳಿತ ಮಂಡಳಿಯ ಸದಸ್ಯರಾದ **ಎಂ.ಆರ್.ಪ್ರಸನ್ನ ಕುಮಾರ್** ಅವರಿಗೆ, ಸಂಶೋಧಕರಾದ **ಪಿ.ಜಯಸಿಂಹ** ಅವರಿಗೆ, ಸಂಸ್ಥೆಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರೆಲ್ಲರಿಗೂ ಕೃತಜ್ಞತೆಗಳು.

ಹಿಂದಿನ ಸಂಚಿಕೆಯನ್ನು (ಸಿಂಗಾಪುರ) ಓದಿ ಪ್ರತಿಕ್ರಿಯೆ ನೀಡಿದವರಿಗೆ ಹಾಗೂ ಸಿಂಗಾಪುರ ಸಂಚಿಕೆಯ ಬಗ್ಗೆ ವರದಿ ಮಾಡಿದ ಮಾಧ್ಯಮ ಮಿತ್ರರೆಲ್ಲರಿಗೂ ಕೃತಜ್ಞತೆಗಳು

ಪರಿವಿಡಿ















ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಬಡಾವಣೆಗಳ ಸಾವಿರಾರು ವರ್ಷದ ಇತಿಹಾಸವನ್ನು ಹೇಳುವ ಶಾಸನಗಳು, ದೇವಾಲಯಗಳು, ಸ್ಮಾರಕ ಶಿಲ್ಪಗಳು ದೊರೆತಿದ್ದು, ಇವುಗಳು ಸ್ಥಳೀಯ ಇತಿಹಾಸಕ್ಕೆ ಮಹತ್ವದ ಕೊಡುಗೆಯಾಗಿವೆ. ಇಲ್ಲಿ ದೊರೆತಿರುವ ಐತಿಹಾಸಿಕ ಕುರುಹುಗಳಿಂದ ಸ್ಥಳೀಯರು ತಮ್ಮ ಊರಿನ ಬಗ್ಗೆ ಹೆಮ್ಮೆ ಪಡುವಂತಾಗಿದೆ. ತಮ್ಮ ಊರಿನ ಪ್ರಾಚೀನತೆಯನ್ನು ಹಾಗೂ ತಮ್ಮ ಪೂರ್ವಜರು ಬಿಟ್ಟು ಹೋಗಿರುವ ಸಂಪ್ರದಾಯ, ಆಚರಣೆಗಳನ್ನು ಮತ್ತೊಮ್ಮೆ ನೆನಪಿಸಿಕೊಂಡು ಅವುಗಳನ್ನು ಆಚರಿಸಿ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ಕೊಡುವ ಜವಾಬ್ದಾರಿ ಇಲ್ಲಿನ ಪ್ರತಿಯೊಬ್ಬ ಪ್ರಜೆಯದ್ದಾಗಿರುತ್ತದೆ.

ಹಾಗೆಯೇ ಪ್ರತೀ ಊರಿನ ಶಾಸನದಲ್ಲಿ ಮೊದಲಿಗೆ ಉಲ್ಲೇಖವಾಗಿರುವ ದಿನವನ್ನು ಆ ಊರಿನ ದಿನವಾಗಿ ಆಚರಿಸಿ ಪರಂಪರೆಯ ಬಗ್ಗೆ ಅರಿವು, ಜಾಗೃತಿ ಮೂಡಿಸುವಂತಹ ಕೆಲಸಗಳು ಆಗಬೇಕಾಗಿದೆ. ಹಾಗಾಗಿ **ಜಕ್ಕೂರಿನ ದಿನವನ್ನು ಅಕ್ಟೋಬರ್ 05**, **ಅಲ್ಲಾಳಸಂದ್ರದ ದಿನವನ್ನು ನವೆಂಬರ್ 10**, **ಅಗ್ರಹಾರದ ದಿನವನ್ನು ಜನವರಿ 13** ಮತ್ತು **ದಾಸರಹಳ್ಳಿ ದಿನವನ್ನು ಫೆಬ್ರವರಿ 17**ರಂದು **ಐತಿಹಾಸಿಕ ಪರಂಪರೆಯ ದಿನವನ್ನಾಗಿ** ಆಚರಿಸುವುದರ ಮೂಲಕ ತಮ್ಮ ಊರಿನ ಗತ ವೈಭವವನ್ನು ನೆನಪು ಮಾಡಿಕೊಳ್ಳಬೇಕಾಗಿದೆ.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಶಾಸನಗಳಲ್ಲಿನ ಹೆಸರುಗಳ ಡಿಜಿಟಲ್ ಚಿತ್ರಗಳು

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಬಡಾವಣೆಗಳು ಬೆಂಗಳೂರಿನ ಐತಿಹಾಸಿಕ ಪ್ರದೇಶಗಳಾಗಿದ್ದು, ಇವು ಸುಮಾರು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿವೆ ಎಂಬುದು ಇಲ್ಲಿ ದೊರೆತಿರುವ ಶಾಸನಗಳು, ಸ್ಮಾರಕ ಶಿಲ್ಪಗಳು, ದೇವಾಲಯಗಳು ಮತ್ತು ಇನ್ನಿತರ ಅವಶೇಷಗಳಿಂದ ತಿಳಿಯುತ್ತದೆ. ಈ ಐತಿಹಾಸಿಕ ಆಧಾರಗಳನ್ನು ಬಳಸಿಕೊಂಡು ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಬಡಾವಣೆಗಳ ಸ್ಥಳೀಯ ಇತಿಹಾಸದ ಗತ ವೈಭವವನ್ನು ಈ ಸಂಚಿಕೆಯಲ್ಲಿ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆ ಜೊತೆಗೆ ಆಧುನಿಕವಾಗಿಯೂ ಈ ಪ್ರದೇಶದ ಮಹತ್ವವನ್ನು ಸಹ ತಿಳಿಸಲಾಗಿದೆ.

ಜಕ್ಕೂರು ಏರೋಡ್ರೋಮ್ ಈ ಪ್ರದೇಶದ ಒಂದು ಆಧುನಿಕ ಸಂಸ್ಥೆಯಾಗಿದ್ದು, ಇದೊಂದು ವಿಮಾನಗಳನ್ನು ಚಲಾಯಿಸಲು ತರಬೇತಿ ನೀಡುವ ಸಂಸ್ಥೆ ಎಂದು ಸಾಮಾನ್ಯವಾಗಿ ತಿಳಿದುಕೊಳ್ಳಲಾಗಿರುತ್ತದೆ. ಆದರೆ ಈ ಏರೋಡ್ರೋಮ್‌ನ ರನ್‌ವೇ, ಜಾಲಹಳ್ಳಿ ಏರ್ ಫೋರ್ಸ್ ಸ್ಟೇಷನ್ ಮತ್ತು ಯಲಹಂಕ ವಾಯುನೆಲೆಗಳನ್ನು,

ಜಕ್ಕೂರು ಏರೋಡ್ರೋಮ್

ಇಟಲಿಯ ಖೈದಿಗಳಿಂದ ನಿರ್ಮಾಣ ಮಾಡಿಸಿದ್ದಾರೆ ಎಂಬುದು ವಿಶೇಷ ಸಂಗತಿಯಾಗಿದ್ದು ಈ ಅಂಶಗಳನ್ನು ಈ ಸಂಚಿಕೆಯ **ಪುಟ ಸಂಖ್ಯೆ 18** ರಲ್ಲಿ ತಿಳಿಸಲಾಗಿದೆ.

ಜಿಕೆವಿಕೆ ಯು ಈ ಪ್ರದೇಶದ ಮತ್ತೊಂದು ಆಧುನಿಕ

ಜಿಕೆವಿಕೆ ಅಲ್ಲಾಳಸಂದ್ರ

ಸಂಸ್ಥೆಯಾಗಿದ್ದು, ಇಲ್ಲಿನ ಕಟ್ಟಡಗಳನ್ನು ಅಮೇರಿಕಾದ ಕೃಷಿ ಕಾಲೇಜುಗಳ ಕಟ್ಟಡಗಳ ರೀತಿಯಲ್ಲಿ ಕಟ್ಟಲಾಗಿದೆ

ಎಂಬುದು ವಿಶೇಷ ಹಾಗೂ ಈ ಜಿಕೆವಿಕೆ ಆವರಣವು 60 ವರ್ಷಗಳ ಹಿಂದೆ ಅಲ್ಲಾಳಸಂದ್ರದ ಕಂದಾಯ ಭೂಮಿಯು ಆಗಿತ್ತು ಎಂಬ ಇನ್ನೂ ಹಲವಾರು ಮಾಹಿತಿಯನ್ನು ಸಂಕ್ಷಿಪ್ತವಾಗಿ **ಪುಟ ಸಂಖ್ಯೆ 23** ರಲ್ಲಿ ತಿಳಿಸಲಾಗಿದೆ.

ಇಡೀ ಭಾರತದ ಭೂಮಿಯನ್ನು ವೈಜ್ಞಾನಿಕವಾಗಿ ಅಳೆಯುವ ದೃಷ್ಟಿಯಿಂದ 1800 ರಲ್ಲಿ ದಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ ಎಂಬ ಯೋಜನೆಯು ಪ್ರಾರಂಭವಾಯಿತು. ಈ ಸರ್ವೆ ಯೋಜನೆಯ ಒಂದು ಪ್ರಮುಖ ಗುರುತು ಜಕ್ಕೂರಿನ ಪಕ್ಕದಲ್ಲೇ ಇರುವ ಸಂಪಿಗೆಹಳ್ಳಿಯ ಗುಡ್ಡದ ಮೇಲೆ ಇದೆ ಎಂಬುದು ವಿಶೇಷವಾದ ಸಂಗತಿಯಾಗಿದ್ದು ಈ ವಿಚಾರಗಳನ್ನು ಸಹ **ಪುಟ ಸಂಖ್ಯೆ 25** ರಲ್ಲಿ ತಿಳಿಸಲಾಗಿದೆ.

ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ - ಸಂಪಿಗೆಹಳ್ಳಿ

ಈ ಮೇಲೆ ತಿಳಿಸಿದ ವಿಚಾರಗಳು ಮಾತ್ರವಲ್ಲದೇ ಇನ್ನೂ ಹಲವಾರು ಆಧುನಿಕ ವಿಚಾರಗಳ ಮೇಲೆ ಈ ಸಂಚಿಕೆಯಲ್ಲಿ ಬೆಳಕು ಚೆಲ್ಲಲಾಗಿದೆ.

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಪ್ರದೇಶಗಳು ಆಧುನಿಕವಾಗಿ ಎಷ್ಟು ಮಹತ್ವವನ್ನು ಪಡೆದಿವೆಯೋ ಇದಕ್ಕಿಂತ ಹೆಚ್ಚಿನದಾಗಿ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು, ಈ ಐತಿಹಾಸಿಕ ವಿಚಾರಗಳನ್ನು ಈ ಸಂಚಿಕೆಯಲ್ಲಿ ವಿವರವಾಗಿ ತಿಳಿಸಲಾಗಿದೆ.

ಜಕ್ಕೂರು ಒಂದು ಐತಿಹಾಸಿಕ ಬಡಾವಣೆಯಾಗಿದ್ದು ಇದು ಸುಮಾರು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ ಎಂದರೆ ನಿಜಕ್ಕೂ ಅಲ್ಲಿನ ಜನರಿಗೆ ಹೆಮ್ಮೆಯ ಸಂಗತಿ. ಜಕ್ಕೂರಿನ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿರುವ ಒಂದು ಪ್ರಶಸ್ತಿ ಶಾಸನವು ಗಂಗವಾಡಿ ತೊಂಭತ್ತಾರು ಸಾವಿರ ಎಂಬ ಅಂಶವನ್ನು ಹಾಗೂ ಬಲ್ಲವತಿರಾಯ ಮತ್ತು ಬಿರುದಸೆದೇವ ಎಂಬ ವ್ಯಕ್ತಿಗಳ ನಡುವೆ ಕಾಳಗವನ್ನು ಉಲ್ಲೇಖಿಸುತ್ತದೆ. ಈ ಶಾಸನದಿಂದ ಸಾ.ಶ.10ನೇ ಶತಮಾನದಲ್ಲೇ ಈ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ಅಂಶ ತಿಳಿಯುತ್ತದೆ. ಇದರಿಂದ ಜಕ್ಕೂರು ಸುಮಾರು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ ಎಂಬುದು ದೃಢವಾಗುತ್ತದೆ. ಈ ಶಾಸನದ ಪಕ್ಕದಲ್ಲೇ ಇರುವ ಸಾ.ಶ.1342ರ ಹೊಂನಮಾರಯನಾಯಕನ ದಾನ ಶಾಸನವು ಜಕ್ಕೂರಿನ ಹೆಸರು, ಗದ್ದೆ, ಬೆದ್ದಲು ಹಾಗೂ ನಾಡಸೇನಬೋವ (ತೆರಿಗೆ ವಸೂಲಿಗಾರ) ಅಲ್ಲಾಳ ಎಂಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಇಂದು ನಾವು ಸರ್ಕಾರಕ್ಕೆ ಹೇಗೆ ವಿವಿಧ ರೀತಿಯ ತೆರಿಗೆಯನ್ನು ಕಟ್ಟುತ್ತಿದ್ದೇವೆಯೋ ಅದೇ ರೀತಿ ಜಕ್ಕೂರಿನ ಜನರು ಸಹ ಸುಮಾರು 650 ವರ್ಷಗಳ ಹಿಂದೆಯೇ ತೆರಿಗೆಯನ್ನು ಕಟ್ಟುತ್ತಿದ್ದರು ಹಾಗೂ ಈ ತೆರಿಗೆಯನ್ನು ವಸೂಲಿ ಮಾಡಲು ನಾಡಸೇನಬೋವ ಎಂಬ ಹುದ್ದೆಯು ಇತ್ತೆಂಬುದು ಮುಖ್ಯ ಸಂಗತಿ. ಜಕ್ಕೂರಿಗೆ ಸಂಬಂಧಿಸಿದ ಇನ್ನೊಂದು ಪ್ರಮುಖ ಐತಿಹಾಸಿಕ ಆಧಾರವೆಂದರೆ ಆತ್ಮ ಬಲಿದಾನದ ಶಿಲ್ಪ. ಆತ್ಮಬಲಿದಾನ ಎಂದರೆ ಒಂದು ಒಳ್ಳೆಯ ಉದ್ದೇಶಕ್ಕಾಗಿ ತಮ್ಮ ಪ್ರಾಣವನ್ನು ಸ್ವಇಚ್ಛೆಯಿಂದ ತ್ಯಾಗ ಮಾಡುವುದು. ಇಂತಹ ಒಂದು ಶಿಲ್ಪವು ಕೆ.ವಿ.ಭೈರೇಗೌಡ ಕಲಾ ಮಂದಿರದ ಆವರಣದಲ್ಲಿದ್ದು, ಸುಮಾರು ಸಾವಿರ ವರ್ಷಗಳ ಹಿಂದೆಯೇ ಜಕ್ಕೂರಿಗೋಸ್ಕರ ಸತಿ-ಪತಿಗಳಿಬ್ಬರೂ ತಮ್ಮ ಪ್ರಾಣವನ್ನು ಅರ್ಪಿಸಿರುವುದು ಅಂದಿನ ಜಕ್ಕೂರಿನ ಜನರ ತ್ಯಾಗದ ಗುಣವನ್ನು ತಿಳಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಸೈನಿಕರು ವೀರ ಮರಣವನ್ನು ಹೊಂದಿದಾಗ ಹೇಗೆ ಸ್ಮಾರಕಗಳನ್ನು ನಿರ್ಮಿಸುತ್ತೇವೆಯೋ ಅದೇ ರೀತಿ ಈ ಸತಿ-ಪತಿಗಳಿಬ್ಬರಿಗೆ ಗೌರವ ಸೂಚಕವಾಗಿ ಜಕ್ಕೂರಿನಲ್ಲಿ ಈ ವೀರಗಲ್ಲು ಸ್ಮಾರಕವನ್ನು ನಿರ್ಮಿಸಲಾಗಿದೆ. ಇದೂವರೆಗೂ ಈ ಮೇಲೆ ತಿಳಿಸಿದ ಅಂಶಗಳ ಜೊತೆಗೆ ಇನ್ನೂ ಹಲವಾರು ವಿಷಯಗಳನ್ನು ಈ ಸಂಚಿಕೆಯಲ್ಲಿ ವಿವರವಾಗಿ ತಿಳಿಸಲಾಗಿದೆ.

ಜಕ್ಕೂರಿನ ಸಾವಿರ ವರ್ಷಗಳ ಇತಿಹಾಸ

ಅಲ್ಲಾಳಸಂದ್ರ ಬಡಾವಣೆಯು ಸಹ ಸಾಕಷ್ಟು ಐತಿಹಾಸಿಕ ಅಂಶಗಳನ್ನು ಒಳಗೊಂಡಿದ್ದು, ಇಲ್ಲಿ ದೊರೆತಿರುವ ಸಾ.ಶ.1544ರ ರಾಚುರ ನರಸಪಯರ ದಾನಶಾಸನವು ಅಲ್ಲಾಳಸಂದ್ರದ ಸುಮಾರು 480 ವರ್ಷಗಳ ಪ್ರಾಚೀನತೆಯನ್ನು ತಿಳಿಸುತ್ತದೆ. ಈ ಶಾಸನವು ಜಕ್ಕೂರಿನ ಅಲ್ಲಾಳನಾಥ ದೇವಾಲಯಕ್ಕೆ ಅಲ್ಲಾಳಸಂದ್ರದ ಕೆರೆ-ಕುಂಟೆ, ಗದ್ದೆ-ಬೆದಲು, ಗುಡೆ-ಗುಯಲು, ತೋಟ-ತುಡಕೆ ಇವುಗಳೆಲ್ಲವನ್ನು ದಾನ ನೀಡಿರುವುದನ್ನು ಉಲ್ಲೇಖಿಸುವುದರಿಂದ ಜಕ್ಕೂರಿನಲ್ಲಿ ಪ್ರಸಿದ್ಧವಾದ ಅಲ್ಲಾಳನಾಥ ದೇವಾಲಯವಿತ್ತೆಂದು ತಿಳಿದುಬರುತ್ತದೆ. ದುರಾದೃಷ್ಟವಷಾತ್ ಇಂದು ಈ ದೇವಾಲಯ ಜಕ್ಕೂರಿನಲ್ಲಿ ಕಂಡುಬರುವುದಿಲ್ಲ. ಅಲ್ಲಾಳಸಂದ್ರದ ಸಾ.ಶ.1080ರ ಹಂದಿಬೇಟೆಯ ವೀರಗಲ್ಲು ಶಾಸನವು, ರಾಮದೇವ ಎಂಬ ವ್ಯಕ್ತಿಯು ಹಂದಿ ಬೇಟೆಗೆಂದು ಹೋದಾಗ, ಈತನು ಹಂದಿಯ ದಾಳಿಗೆ ಸಿಲುಕಿ ಮರಣ ಹೊಂದಿದ್ದನ್ನು

ತಿಳಿಸುತ್ತದೆ. ಇದರಿಂದ ಅಲ್ಲಾಳಸಂದ್ರ ಪ್ರದೇಶದಲ್ಲಿ ಸುಮಾರು ಸಾವಿರ ವರ್ಷಗಳ ಹಿಂದೆಯೇ ಹಂದಿಗಳಿದ್ದು,

ಅಲ್ಲಾಳಸಂದ್ರದ ಪ್ರಾಚೀನತೆ ಮತ್ತು ಅಲ್ಲಾಳನಾಥನ ದೇವಾಲಯ

ಇವು ಆ ಪ್ರದೇಶದಲ್ಲಿ ರೈತರು ಬೆಳೆದ ಬೆಳೆಗಳಿಗೆ ಹಾನಿ ಮಾಡುತ್ತಿದ್ದವು ಹಾಗೂ ಇದನ್ನು ತಡೆಯಲು ಬೇಟೆಗಳು ನಡೆಯುತ್ತಿದ್ದವು ಎಂಬುದು ತಿಳಿಯುತ್ತದೆ. ಹೀಗೆ ಮೇಲೆ ತಿಳಿಸಿದ ವಿಚಾರಗಳ ಜೊತೆಗೆ ಇನ್ನೂ ಹಲವಾರು ಮಾಹಿತಿಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಸಂಚಿಕೆಯಲ್ಲಿ ಮಾಡಲಾಗಿದೆ.

ಈ ಸಂಚಿಕೆಯಲ್ಲಿ ಬಂದಿರುವ ಅಗ್ರಹಾರ ಬಡಾವಣೆಯೂ ಸಹ ಒಂದು ಐತಿಹಾಸಿಕ ಗ್ರಾಮವಾಗಿತ್ತು ಎಂಬುದು ಇಲ್ಲಿ ದೊರೆತಿರುವ ಸಾ.ಶ.1350ರ ಕಾಲದ ಶಾಸನದಿಂದ ತಿಳಿದುಬರುತ್ತದೆ. ಇದೊಂದು ವಿಶೇಷ ತಮಿಳು ಶಾಸನವಾಗಿದ್ದು, ಇದರಲ್ಲಿ ಅರುಳಾಳ ಪೆರುಮಾಳ್ ಕಣ್ಣಪ್ಪನ್ ಎಂಬ ವ್ಯಕ್ತಿಯು ತನ್ನ ಆಪ್ತರು ಸತ್ತ ಕಾರಣಕ್ಕಾಗಿ ಶ್ರಾದ್ಧವನ್ನು ಮಾಡಿಸಿ ಹನ್ನೊಂದು ಜನ ನಾನಾ ಗೋತ್ರದ ಬ್ರಾಹ್ಮಣರಿಗೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಇಂದು ನಾವು ವ್ಯಕ್ತಿ ಸತ್ತ ನಂತರ ಹೇಗೆ ತಿಥಿ ಅಥವಾ

ಅರುಳಾಳಮೂರ್ತಿ ಅಗ್ರಹಾರ ಒಂದು ವಿದ್ಯಾಕೇಂದ್ರ

ಶ್ರಾದ್ಧ ಎಂಬ ಕಾರ್ಯವನ್ನು ಮಾಡುತ್ತೇವೋ ಅದೇ ರೀತಿ ಸುಮಾರು 700 ವರ್ಷಗಳ ಹಿಂದೆಯೇ ಶ್ರಾದ್ಧ ಎಂಬ ಪುಣ್ಯ ಕಾರ್ಯಗಳನ್ನು ಮಾಡಲಾಗುತ್ತಿತ್ತು. ಹಾಗೂ ಸತ್ತ ವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಕಾರಣದಿಂದ ವಿವಿಧ ದಾನಗಳನ್ನು ನೀಡಲಾಗುತ್ತಿತ್ತು ಎಂಬ ವಿಚಾರವನ್ನು ತಿಳಿಸುತ್ತದೆ. ಹಾಗೂ ಈ ಅಗ್ರಹಾರ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲೇ ತಮಿಳು ಮಾತನಾಡುವ ಜನರಿದ್ದರು. ಹಾಗೂ ಮುಖ್ಯವಾಗಿ ಈ ಅಗ್ರಹಾರವು ಪಾಠಶಾಲೆ (ವಿದ್ಯಾಕೇಂದ್ರ) ಆಗಿತ್ತು. ಇಲ್ಲಿ ಗಣಿತ, ವಿಜ್ಞಾನ, ಖಗೋಳಶಾಸ್ತ್ರ, ವೇದ ಉಪನಿಷತ್ತು, ತರ್ಕ ಮುಂತಾದ ವಿಷಯಗಳನ್ನು ಕಲಿಸಲಾಗುತ್ತಿತ್ತು ಎಂಬ ಇನ್ನೂ ಹಲವಾರು ವಿಚಾರಗಳನ್ನು ಈ ಸಂಚಿಕೆಯಲ್ಲಿ ಚರ್ಚಿಸಲಾಗಿದೆ.

ಜಕ್ಕೂರಿನ ಸಮೀಪದಲ್ಲೇ ಇರುವ ದಾಸರಹಳ್ಳಿ ಬಡಾವಣೆಯು ಸಹ ಒಂದು ಐತಿಹಾಸಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ ಎಂಬುದು ಇಲ್ಲಿ ದೊರೆತಿರುವ ಸಾ.ಶ.1532ರ ದಾನ ಶಾಸನದಿಂದ ತಿಳಿದುಬರುತ್ತದೆ. ಇದರಲ್ಲಿ ಬೇಟೆಯರಾಯ ಎಂಬ ದೇವಾಲಯಕ್ಕೆ ಚೊಕ್ಕನಹಳ್ಳಿ ಗ್ರಾಮವನ್ನು ದಾನ ನೀಡಿದ ವಿಷಯ ತಿಳಿಯುತ್ತದೆಯಾದರೂ ಈ ದೇವಾಲಯ ಕಂಡುಬರುವುದಿಲ್ಲ. ಈ ಶಾಸನ ಮಾತ್ರವಲ್ಲದೇ

ಐತಿಹಾಸಿಕ ದಾಸರಹಳ್ಳಿ ಹಾಗೂ ಭೇಂಟೆಯರಾಯನ ದೇವಾಲಯ

ಚೌಡೇಶ್ವರಿ ದೇವಾಲಯದ ಆವರಣದಲ್ಲಿ ದೊರೆತಿರುವ ಸ್ಮಾರಕ ಶಿಲ್ಪಗಳೂ ಸಹ ದಾಸರಹಳ್ಳಿಯ ಪ್ರಾಚೀನ ಸಂಸ್ಕೃತಿಯನ್ನು ತಿಳಿಸುತ್ತವೆ. ಇಲ್ಲಿ ಕಂಡುಬಂದಿರುವ ಸಪ್ತಮಾತೃಕೆಯರ ಶಿಲ್ಪಗಳಿಂದ ಈ ಪ್ರದೇಶವು ಶಕ್ತಿ ದೇವತೆಗಳ ಆರಾಧನೆಗಳಿಗೆ ಪ್ರಸಿದ್ಧವಾಗಿತ್ತು ಎಂಬುದು ತಿಳಿಯುತ್ತದೆ. ಹಾಗೂ ಇದೇ ಸ್ಥಳದಲ್ಲಿ ದೊರೆತಿರುವ ಭಕ್ತರ ಶಿಲ್ಪಗಳಿಂದ ಅಂದಿನ ಕಾಲದ ಜನರು ದೇವರ ಮೇಲೆ ಹೊಂದಿದ್ದ ಭಕ್ತಿ, ಇವರ ಉಡುಗೆ-ತೊಡುಗೆಗಳು ಇನ್ನೂ ಮುಂತಾದ ವಿಚಾರಗಳನ್ನು ಈ ಸಂಚಿಕೆಯಲ್ಲಿ ವಿವರಿಸಲಾಗಿದೆ.

ಜಕ್ಕೂರು, ಅಲ್ಲಾಳಸಂದ್ರ ಮತ್ತು ಅಗ್ರಹಾರದ ಶಾಸನಗಳು ಮತ್ತು ಕೆಲವು ಸ್ಮಾರಕ ಶಿಲ್ಪಗಳು ಜನರ ನಿರಾಸಕ್ತಿಯಿಂದ ವಿವಿಧ ಸ್ಥಳಗಳಲ್ಲಿ ಅಜ್ಞಾತವಾಗಿ ಬಿದ್ದಿದ್ದವು. ನಂತರ ವಿವಿಧ ಪ್ರಯತ್ನಗಳ ಫಲವಾಗಿ ಅವುಗಳನ್ನು ಹೇಗೆ ಭೌತಿಕ ಮತ್ತು ಡಿಜಿಟಲ್ ಸಂರಕ್ಷಣೆ

ಪರಂಪರೆಯ ಭೌತಿಕ ಹಾಗೂ ಡಿಜಿಟಲ್ ಸಂರಕ್ಷಣೆ

ಮಾಡಲಾಯಿತು ಹಾಗೂ ಈ ಶಾಸನಗಳಲ್ಲಿ ಬರುವ ವಿಚಾರಗಳನ್ನು ಸ್ಥಳೀಯರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಇನ್ನಿತರ ಜನರಿಗೆ ಹೇಗೆ ಪ್ರಚಾರ ಮಾಡಲಾಯಿತು ಎಂಬ ಹಲವಾರು ಸ್ವಾರಸ್ಯಕರ ವಿಷಯಗಳು ಈ ಸಂಚಿಕೆಯಲ್ಲಿ ಬಂದಿರುತ್ತವೆ. ಹಾಗೂ ಶಾಸನಗಳಲ್ಲಿ ಬಂದಿರುವ ಸ್ಥಳನಾಮಗಳ ಹಿನ್ನೆಲೆ, ಐತಿಹಾಸಿಕ ವ್ಯಕಿಗಳು ಹಾಗೂ ಆಡಳಿತ ವಿಭಾಗಗಳ ಬಗ್ಗೆಯೂ ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಇಲ್ಲಿನ ಶಾಸನಗಳ ಪ್ರಕಾರ ಈ ಪ್ರದೇಶವು ಯಲಹಂಕ ನಾಡು ಮತ್ತು ಶಿವನಸಮುದ್ರ

ಸೀಮೆ (ಇಂದಿನ ಹೆಸರಘಟ್ಟ) ಎಂಬ ಆಡಳಿತ ವಿಭಾಗಗಳಿಗೆ ಒಳಪಟ್ಟಿತ್ತು ಎಂಬ ಹಲವು ವಿಚಾರಗಳು ಈ ಸಂಚಿಕೆಯಲ್ಲಿವೆ.

ಬೆಂಗಳೂರು ಪ್ರದೇಶದ ಭಾಷಾ ವೈವಿಧ್ಯತೆ, ಜಕ್ಕೂರು, ಅಲ್ಲಾಳಸಂದ್ರ, ಮತ್ತು ದಾಸರಹಳ್ಳಿ ಕೆರೆಗಳು ಎಷ್ಟು

ಭಾಷಾ ವೈವಿಧ್ಯತೆ

ಪ್ರಾಚೀನವಾದವು ಮತ್ತು ಇಲ್ಲಿ ಕಂಡುಬರುವ ಪಕ್ಷಿಗಳು ಯಾವುವು ಹಾಗೂ ಇಲ್ಲಿನ ಜನರ ಜೀವನದ ಮೇಲೆ ಈ ಕೆರೆಗಳು ಹೇಗೆ ಪ್ರಮುಖ ಪಾತ್ರವನ್ನು ವಹಿಸಿದ್ದವು ಎಂಬ ಹಲವಾರು ಅಂಶಗಳನ್ನು ಈ ಸಂಚಿಕೆಯಲ್ಲಿ ಚರ್ಚಿಸಲಾಗಿದೆ.

ದಾಸರಹಳ್ಳಿಯ ಶಾಸನದಲ್ಲಿ ಗದ್ದೆ- ಬೆಜಲು, ತೋಟ-ತುಡಕೆ, ಆಣೆ-ಆಚುಕಟು, ಕಾಡರಂಭ-ನೀರಾರಂಬ, ಮನೆದೆರೆ-ಮಗ್ಗದರೆ, ಸುವರ್ಣಾದಾಯ, ನಿಧಿ-ನಿಕ್ಷೇಪ, ಜಲ-ಪಾಷಣ, ಅಕ್ಷೀಣಿ-ಆಗಾಮಿ, ಸಿದ್ಧ-ಸಾಧ್ಯ,

ನಾಲ್ಕು ಪ್ರಾಚೀನ ಕೆರೆಗಳು

ಅಷ್ಟಭೋಗ ಎಂಬ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದ ಹಲವಾರು ಪದಗಳ ಉಲ್ಲೇಖ ಕಂಡುಬರುವುದರಿಂದ ಈ ಪ್ರದೇಶದ ಜನರು ವಿವಿಧ ರೀತಿಯ ತೆರಿಗೆಗಳನ್ನು ಕಟ್ಟುತ್ತಿದ್ದರು ಎಂಬ ಹಲವಾರು ಅಂಶಗಳು ತಿಳಿಯುತ್ತದೆ. ಈ ಪದಗಳ ಅರ್ಥವನ್ನುತಿಳಿಸುವುದರ ಜೊತೆಗೆ ಅಂದಿನ ಕಾಲದ ತೆರಿಗೆ ಪದ್ಧತಿಯ ಬಗ್ಗೆ **ಪುಟ ಸಂಖ್ಯೆ 170** ರಲ್ಲಿ

ಪ್ರಾಚೀನ ತೆರಿಗೆಗಳು

ವಿವರಿಸಲಾಗಿದೆ.


ಹೀಗೆ ಮೇಲೆ ತಿಳಿಸಿದ ಹಲವಾರು ಸ್ವಾರಸ್ಯಕರ ವಿಷಯಗಳನ್ನು ಈ ಸಂಚಿಕೆಯಲ್ಲಿ ವಿವರವಾಗಿ ತಿಳಿಸುವ ಪ್ರಯತ್ನ ಮಾಡಲಾಗಿದ್ದು, ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಐತಿಹಾಸಿಕ ವ್ಯಕ್ತಿಗಳ ಹೆಸರುಗಳನ್ನು ಪ್ರಶಸ್ತಿಗಳಿಗೆ, ಶಾಲೆಗಳಿಗೆ, ರಸ್ತೆಗಳಿಗೆ, ಪಾರ್ಕ್‌ಗಳಿಗೆ, ಇನ್ನಿತರ ಸಾರ್ವಜನಿಕ ಸ್ಥಳಗಳಿಗೆ ಇಡುವ ಮೂಲಕ ಹಾಗೂ ಶಾಸನಗಳಲ್ಲಿ ಉಲ್ಲೇಖವಾದ ದಿನವನ್ನು ಆ ಬಡಾವಣೆಯ ದಿನವನ್ನಾಗಿ ಆಚರಿಸುವ ಮೂಲಕ ತಮ್ಮ ಪ್ರಾಚೀನ ಪರಂಪರೆಯನ್ನು ಸ್ಮರಿಸುವ ಹಾಗೂ ಉಳಿಸುವ ಕಾರ್ಯವನ್ನು ಮಾಡಬೇಕಿದೆ.

ಆಧುನಿಕ ಇತಿಹಾಸದ ಕಿರು ಪರಿಚಯ

ಇಂದಿನ ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಬಡಾವಣೆಗಳು ಆಧುನಿಕ ಹೊಸತನಗಳೊಂದಿಗೆ ಬೆರೆತು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿರುವಂತಹ ಸಂಸ್ಥೆಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಈ ಸಂಸ್ಥೆಗಳು ಈ ಬಡಾವಣೆಗಳ ವಿಸ್ತರಣೆಗೂ ಕಾರಣವಾಗಿದ್ದು, ಬೆಂಗಳೂರಿಗೆ ಕಿರೀಟ ಪ್ರಾಯವಾಗಿದೆ.

ಈ ಪ್ರದೇಶವು ಒಟ್ಟು 25.5 ಚದರ ಕಿಲೋ ಮೀಟರ್ (ಕಿ.ಮೀ.) ವಿಸ್ತೀರ್ಣ ಅಂದರೆ ಸುಮಾರು 6300 ಎಕರೆಯಷ್ಟು, 25 ಕಿ.ಮೀ. ನಷ್ಟು ಸುತ್ತಳತೆ ಇರುವ ಹಾಗೂ ಒಟ್ಟು 15 ಕಂದಾಯ ಹಳ್ಳಿಗಳನ್ನು ಒಳಗೊಂಡಿದೆ. ಅದರಲ್ಲಿ ಪ್ರಮುಖವಾಗಿ ಅಗ್ರಹಾರ, ಅಲ್ಲಾಳಸಂದ್ರ, ಅಮೃತಹಳ್ಳಿ, ಬ್ಯಾಟರಾಯನಪುರ, ಚೊಕ್ಕನಹಳ್ಳಿ, ದಾಸರಹಳ್ಳಿ, ಗಸ್ತಿ ಕೆಂಪನಹಳ್ಳಿ, ಜಕ್ಕೂರು, ಜಕ್ಕೂರು ಪ್ಲಾಂಟೇಷನ್, ರಾಚೇನಹಳ್ಳಿ, ಸಂಪಿಗೆಹಳ್ಳಿ, ಶಿವನಹಳ್ಳಿ, ಶ್ರೀರಾಮಪುರ, ವೆಂಕಟೇಶ್ವರಪುರ, ಯೆಲಹಂಕ ಅಮಾನಿಕೆರೆ ಮುಂತಾದ ಭೂಪ್ರದೇಶಗಳಿಂದ ಕೂಡಿದ ಪ್ರದೇಶವಾಗಿತ್ತು.

ಈ ವಿಭಾಗದಲ್ಲಿ ಗ್ರಾಮಗಳು, ಬಡಾವಣೆಗಳಾಗಿ ವಿಸ್ತರಣೆಯಾದ ಪರಿಚಯ, ಬಡಾವಣೆಗಳ ವ್ಯಾಪ್ತಿಯಲ್ಲಿ ಸ್ಥಾಪನೆಗೊಂಡಿರುವ ಜಗತ್ಪ್ರಸಿದ್ಧವಾದ ಸಂಸ್ಥೆಗಳು, ಅವುಗಳು ಸ್ಥಾಪನೆ ಹಿಂದಿನ ರೋಚಕ ಇತಿಹಾಸವನ್ನು ಕುರಿತು ಚರ್ಚಿಸಲಾಗಿದೆ.



ಈ ಸಂಚಿಕೆಯಲ್ಲಿ ಬರುವ ಗ್ರಾಮ/ಬಡಾವಣೆಗಳ ಗೂಗಲ್ ನಕ್ಷೆ
(ಈ ಭೂಪ್ರದೇಶ ಸುಮಾರು 25.5 ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ)

ಜಕ್ಕೂರು


ಸಾಮಾನ್ಯ ಶಕ (ಸಾ.ಶ.) ಒಂಭತ್ತು ಮತ್ತು ಹತ್ತನೇ ಶತಮಾನದ ಐತಿಹಾಸಿಕ ಆಧಾರಗಳನ್ನು ಹೊಂದಿರುವ ಜಕ್ಕೂರು, ಚಾರಿತ್ರಿಕವಾಗಿ ಭವ್ಯ ಪರಂಪರೆಯನ್ನು ಹೊಂದಿರುವ ಬಡಾವಣೆಯಾಗಿದೆ. ಬೆಂಗಳೂರಿನ ಉತ್ತರಕ್ಕಿರುವ ಈ ಬಡಾವಣೆಯು ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ 12 ಕಿ.ಮೀ. ಹಾಗೂ ಯಲಹಂಕದಿಂದ 3 ಕಿ.ಮೀ. ದೂರದಲ್ಲಿದೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.05ಕ್ಕೆ ಸೇರಿರುವ ಜಕ್ಕೂರು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತದೆ. ಜಕ್ಕೂರಿಗೆ ಸಂಬಂಧಿಸಿದ **ಮೊಟ್ಟ ಮೊದಲ ಜನಸಂಖ್ಯಾ ದಾಖಲೆಯಾದ 1871ರ ಮೈಸೂರು ಸಾಮಾನ್ಯ** ಜನಗಣತಿಯ ಪ್ರಕಾರ (Mysore General Census), **106 ಮನೆಗಳಿಂದ ಕೂಡಿದ ಗ್ರಾಮದಲ್ಲಿ ಒಟ್ಟು 392 ಜನಸಂಖ್ಯೆಯಿದ್ದು, ಇವರಲ್ಲಿ 208 ಜನ ಗಂಡಸರು ಮತ್ತು 184 ಜನ ಹೆಂಗಸರು ಇದ್ದರು**[1]. 1871ರ ಜನಗಣತಿಯ ಪ್ರಕಾರ 392 ಜನಸಂಖ್ಯೆಯನ್ನು ಹೊಂದಿದ್ದ ಜಕ್ಕೂರು ಗ್ರಾಮದಲ್ಲಿ, **2001ರ ಜನಗಣತಿಯ ಪ್ರಕಾರ 12,387 ಮನೆಗಳು ಮತ್ತು 20,964 ಜನಸಂಖ್ಯೆಯಿದ್ದು, ಇದರಲ್ಲಿ 10,906 ಪುರುಷರು, 10,058 ಮಹಿಳೆಯರು ಸೇರಿರುತ್ತಾರೆ**[2] (2011ರ ಜನಗಣತಿಯ ಮಾಹಿತಿ ದೊರೆತಿಲ್ಲ).

ಹಾಗೆಯೇ ಜಕ್ಕೂರಿಗೆ ಸಂಬಂಧಿಸಿದ **1904ರ ಕಂದಾಯ ನಕ್ಷೆಯ ಪ್ರಕಾರ**[3] **ಈ ಬಡಾವಣೆಯು/ಗ್ರಾಮವು ಬ್ಯಾಟರಾಯನಪುರ, ಅಗ್ರಹಾರ, ಯಲಹಂಕ**

1 Lindsay, Major. A. W. C., Mysore Commission, Supplement to Mysore General Census, Appendices A To H of 1871 (Bangalore, Mysore Government Press, 1875), page 71, https://bit.ly/1871MysoreCensus

2 BBMP Ward Wise Information For Citizens Awareness. https://bit.ly/jakkur_population

3 Government of Karnataka. Revenue Maps Online. n.d. https://bit.ly/1905Jakkur



ಜಕ್ಕೂರಿನ 1904ರ ಭೂ ಕಂದಾಯ ಇಲಾಖೆಯ ನಕ್ಷೆ
(ಈ ಭೂಪ್ರದೇಶ ಸುಮಾರು 3 ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ)


ಅಮಾನಿಕೆರೆ, ಶಿವನಹಳ್ಳಿ, ದಾಸರಹಳ್ಳಿ, ಶ್ರೀರಾಮಪುರ, ಅಮೃತಹಳ್ಳಿ, ಸಂಪಂಗಿಹಳ್ಳಿ, ಜಕ್ಕೂರು ಪ್ಲಾಂಟೇಷನ್ ಗಡಿಗಳಿಂದ ಸುತ್ತುವರೆದ ಪ್ರದೇಶವಾಗಿತ್ತು. ಹಾಗೂ ಇದೇ ನಕ್ಷೆಯ ಪ್ರಕಾರ ಒಂದು ಗುಡ್ಡ, ಒಂದು ಕೆರೆ, ಒಂದು ಹಳ್ಳ, ಎರಡು ದೇವಾಲಯಗಳು, ನಾಲ್ಕು ಬಾವಿಗಳು, ಸುಮಾರು 56 ಕಪಿಲೆ ಬಾವಿಗಳಿದ್ದವು[4]. ಈ ಬಾವಿಗಳು ಅಂದಿನ ಜನರಿಗೆ ದಿನನಿತ್ಯದ ಚಟುವಟಿಕೆಗಳಿಗೆ ಪ್ರಮುಖವಾದ ನೀರಿನ ಮೂಲಗಳಾಗಿದ್ದವು. ಆದರೆ ಪ್ರಸ್ತುತ ಜಕ್ಕೂರಿನಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕಪಿಲೆ ಬಾವಿಗಳು ಉಳಿದಿವೆ ಹಾಗೂ ಇವುಗಳ ಬಳಕೆ ಇಲ್ಲವೇ ಇಲ್ಲ ಎಂದು ಹೇಳಬಹುದು.

4 ಕಪಿಲೆ ಬಾವಿ ಎಂದರೆ ಗ್ರಾಮೀಣ ಭಾಷೆಯಲ್ಲಿ ಸೇದುವ ಬಾವಿ. ಹಗ್ಗದ ಒಂದು ತುದಿಯನ್ನು ಕುಣಿಕೆಯ ರೀತಿ ಮಾಡಿ ಈ ಕುಣಿಕೆಗೆ ಬಿಂದಿಗೆಯನ್ನು ಅಳವಡಿಸಿ ರಾಟೆಯ ಮೂಲಕ ಈ ಕಪಿಲೆ ಬಾವಿಗಳಿಂದ ನೀರನ್ನು ಎತ್ತಲಾಗುತ್ತಿತ್ತು

ಅಲ್ಲಾಳಸಂದ್ರ

ಜಕ್ಕೂರಿನಿಂದ 4 ಕಿ.ಮೀ. ಅಂತರದಲ್ಲಿ ಬಳ್ಳಾರಿ ರಸ್ತೆಯಲ್ಲಿರುವ **ಗಾಂಧಿ ಕೃಷಿ ವಿಜ್ಞಾನ ಕೇಂದ್ರಕ್ಕೆ (ಜಿಕೆವಿಕೆ)** ಹೊಂದಿಕೊಂಡಂತಿರುವ ಈ ಅಲ್ಲಾಳಸಂದ್ರ ಬಡಾವಣೆಯು ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.04ಕ್ಕೆ ಸೇರಿದ್ದು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಕಂಡುಬರುತ್ತದೆ. ಅಲ್ಲಾಳಸಂದ್ರಕ್ಕೆ ಸಂಬಂಧಿಸಿದ **ಮೊಟ್ಟ ಮೊದಲ ಜನಸಂಖ್ಯಾ ದಾಖಲೆಯಾದ 1871ರ ಮೈಸೂರು ಸಾಮಾನ್ಯ ಜನಗಣತಿಯ ಪ್ರಕಾರ (Mysore General Census)[5], ಈ ಗ್ರಾಮದಲ್ಲಿ 27 ಮನೆಗಳಿದ್ದು ಅವುಗಳಲ್ಲಿ ಒಟ್ಟು 198 ಜನಸಂಖ್ಯೆಯಲ್ಲಿ 98 ಜನ ಗಂಡಸರು ಮತ್ತು 100 ಜನ ಹೆಂಗಸರು ಇದ್ದರು**.

5 Lindsay, Major. A. W. C., Mysore Commission, Supplement to Mysore General Census, Appendices A To H of 1871 (Bangalore, Mysore Government Press, 1875), page 72, https://bit.ly/1871MysoreCensus



ಅಲ್ಲಾಳಸಂದ್ರದ 1904ರ ಭೂಕಂದಾಯ ಇಲಾಖೆಯ ನಕ್ಷೆ
(ಈ ಭೂಪ್ರದೇಶ ಸುಮಾರು 2.5 ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ)

ಭೌಗೋಳಿಕ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಗ್ರಾಮದ **1904ರ ಭೂಕಂದಾಯ ನಕ್ಷೆಯ ಪ್ರಕಾರ[6] ಯಲಹಂಕ ಕಸಬಾ, ಶಿವನಹಳ್ಳಿ, ಜಕ್ಕೂರು ಪ್ಲಾಂಟೇಷನ್, ಬ್ಯಾಟರಾಯನಪುರ, ಕೋತಿ ಹೊಸಹಳ್ಳಿ, ಕೊಡಿಗೇಹಳ್ಳಿ, ಕೊಡಿಗೇಹಳ್ಳಿ ಪ್ಲಾಂಟೇಷನ್ ಮತ್ತು ಚಿಕ್ಕಬೊಮ್ಮಸಂದ್ರ ಗ್ರಾಮದ ಗಡಿ**ಗಳೊಂದಿಗೆ ಹೊಂದಿಕೊಂಡಿದೆ. ಈ ಗ್ರಾಮದಲ್ಲಿ ಎರಡು ಕೆರೆಗಳು, 11 ಬಾವಿಗಳು, 23 ಕಪಿಲೆ ಬಾವಿಗಳು ಹಾಗೂ 2 ಕೊಳವೆಗಳು ಕಂಡು ಬಂದಿವೆ.

ಅಗ್ರಹಾರ


ಅಗ್ರಹಾರವು ಬೆಂಗಳೂರಿನ ಐತಿಹಾಸಿಕ ಗ್ರಾಮಗಳಲ್ಲಿ ಒಂದಾಗಿದ್ದು, ಜಕ್ಕೂರಿನಿಂದ ಕೇವಲ ಎರಡು ಕಿ.ಮೀ. ಅಂತರದಲ್ಲಿ ಕಂಡುಬರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.05ಕ್ಕೆ (ಜಕ್ಕೂರು ವಾರ್ಡ್) ಸೇರಿರುವ ಅಗ್ರಹಾರವು ಸಹ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಕಂಡುಬರುತ್ತದೆ. ಅಗ್ರಹಾರಕ್ಕೆ ಸಂಬಂಧಿಸಿದ **ಮೊಟ್ಟ ಮೊದಲ ಜನಸಂಖ್ಯಾ ದಾಖಲೆಯಾದ 1871ರ ಮೈಸೂರು ಸಾಮಾನ್ಯ ಜನಗಣತಿಯ ಪ್ರಕಾರ[7], ಈ ಗ್ರಾಮದಲ್ಲಿ ಒಟ್ಟು 35 ಮನೆಗಳಿದ್ದವು, ಅದರಲ್ಲಿ 125 ಜನಸಂಖ್ಯೆಯಿದ್ದು, ಇವರಲ್ಲಿ 61 ಜನ ಗಂಡಸರು ಮತ್ತು 64 ಜನ ಹೆಂಗಸರು ವಾಸವಾಗಿದ್ದರು**.

6 Government of Karnataka. Revenue Maps Online. https://bit.ly/1905AllalasandraMap

ಅಗ್ರಹಾರದ ಕಂದಾಯ ಇಲಾಖೆಯ **1904ರ ನಕ್ಷೆಯ ಪ್ರಕಾರ[8] ಈ ಗ್ರಾಮವು ಜಕ್ಕೂರು, ಗಸ್ತಿ ಕೆಂಪನಹಳ್ಳಿ, ಕೋಗಿಲು, ತಿರುಮಲೇನಹಳ್ಳಿ, ಚೊಕ್ಕನಹಳ್ಳಿ ಮತ್ತು ಸಂಪಿಗೆಹಳ್ಳಿ ಗ್ರಾಮದ ಗಡಿ**ಗಳಿಂದ ಸುತ್ತುವರಿದಿದೆ. ಹಾಗೂ ಒಂದು ಕೆರೆ, ಒಂದು ಹಳ್ಳ, ಒಂದು ಮೆಟ್ಟಿಲು ಬಾವಿ, ನಾಲ್ಕು ತೆರೆದ ಬಾವಿಗಳು ಹಾಗೂ ನಾಲ್ಕು ಕಪಿಲೆ ಬಾವಿಗಳು ಕಂಡು ಬರುತ್ತವೆ.

7 Lindsay, Major. A. W. C., Mysore Commission, Supplement to Mysore General Census, Appendices A To H of 1871 (Bangalore, Mysore Government Press, 1875), page 71, https://bit.ly/1871MysoreCensus

8 Government of Karnataka. Revenue Maps Online. n.d. https://bit.ly/1904AgraharaMap



ಅಗ್ರಹಾರದ 1904ರ ಭೂಕಂದಾಯ ಇಲಾಖೆಯ ನಕ್ಷೆ
(ಈ ಭೂಪ್ರದೇಶ ಸುಮಾರು 2 ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ)


ದಾಸರಹಳ್ಳಿ

ಜಕ್ಕೂರಿನ ಗಡಿಗೆ ಹೊಂದಿಕೊಂಡಂತೆ ಕಂಡುಬರುವ ದಾಸರಹಳ್ಳಿ ಗ್ರಾಮವು, ಜಕ್ಕೂರಿನಿಂದ 3 ಕಿ.ಮೀ. ಅಂತರದಲ್ಲಿದೆ. ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.06ಕ್ಕೆ ಸೇರಿರುವ ಈ ದಾಸರಹಳ್ಳಿಯು, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಹಾಗೂ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗಿದೆ. ದಾಸರಹಳ್ಳಿಗೆ ಸಂಬಂಧಿಸಿದ **ಮೊಟ್ಟ ಮೊದಲ ಜನಸಂಖ್ಯಾ ದಾಖಲೆಯಾದ 1871ರ ಮೈಸೂರು ಸಾಮಾನ್ಯ ಜನಗಣತಿಯ ಪ್ರಕಾರ (Mysore General Census)[9], ಈ ಗ್ರಾಮದಲ್ಲಿ ಒಟ್ಟು 43 ಮನೆಗಳಿದ್ದು ಅದರಲ್ಲಿ 277 ಜನರು ವಾಸವಾಗಿದ್ದರು, ಇವರಲ್ಲಿ 144 ಜನ ಗಂಡಸರು ಮತ್ತು 133 ಜನ ಹೆಂಗಸರು ಇದ್ದರು**.

ಈ ಗ್ರಾಮದ **1904ರ ಕಂದಾಯ ನಕ್ಷೆಯ ಪ್ರಕಾರ**[10] **ಅಮೃತಹಳ್ಳಿ, ಜಕ್ಕೂರು, ರಾಜೇನಹಳ್ಳಿ (ರಾಚೇನಹಳ್ಳಿ), ನಾಗವಾರ ಮತ್ತು ಕೆಂಪಾಪುರ ಗ್ರಾಮಗಳೊಂದಿಗೆ ಗಡಿ**ಯನ್ನು ಹಂಚಿಕೊಂಡಿದೆ. ಹಾಗೂ ಒಂದು ಕೆರೆ, ಒಂದು ಹಳ್ಳ, 15 ತೆರೆದ ಬಾವಿಗಳು, 34 ಕಪಿಲೆ ಬಾವಿಗಳು, 19 ಗುಡ್ಡಗಳು ಮತ್ತು ಎರಡು ದೇವಾಲಯಗಳು ಕಂಡು ಬರುತ್ತವೆ.

9 Lindsay, Major. A. W. C., Mysore Commission, Supplement to Mysore General Census, Appendices A To H of 1871 (Bangalore, Mysore Government Press, 1875), page 72, https://bit.ly/1871MysoreCensus

10 Government of Karnataka. Revenue Maps Online. https://bit.ly/1904DasarahalliMap



ದಾಸರಹಳ್ಳಿಯ 1904ರ ಭೂಕಂದಾಯ ಇಲಾಖೆಯ ನಕ್ಷೆ
(ಈ ಭೂಪ್ರದೇಶ ಸುಮಾರು 2.4 ಚದರ ಕಿಲೋ ಮೀಟರ್ ವಿಸ್ತೀರ್ಣ ಹೊಂದಿರುತ್ತದೆ)

ಆಧುನಿಕ ಸಂಸ್ಥೆಗಳು

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ ಬಡಾವಣೆಗಳ ಇತಿಹಾಸ ಪ್ರಸಿದ್ಧ ಭೂಪ್ರದೇಶದಲ್ಲಿ, ಇಂದು ಹಲವಾರು ವಿಶ್ವ ಪ್ರಸಿದ್ಧಿ ಪಡೆದಿರುವ ಸಂಸ್ಥೆಗಳು ಸ್ಥಾಪನೆಯಾಗಿದ್ದು, ಇವುಗಳ ಕಿರು ಪರಿಚಯವನ್ನು ಮುಂದೆ ನೋಡಬಹುದು.

ವಿಮಾನ ಹಾರಾಟ ತರಬೇತಿ ಕೇಂದ್ರ (ಏರೋಡ್ರೋಮ್)

ದೇಶದ ಪ್ರತಿಷ್ಠಿತ ವಿಮಾನ ಹಾರಾಟ ತರಬೇತಿ ಕೇಂದ್ರ (ಏರೋಡ್ರೋಮ್) ಜಕ್ಕೂರು ಮತ್ತು ಅಲ್ಲಾಳಸಂದ್ರ ಪ್ರದೇಶದಲ್ಲಿರುವುದು ಇಲ್ಲಿನ ಸ್ಥಳೀಯರಿಗೆ ಮಾತ್ರವಲ್ಲದೇ ಬೆಂಗಳೂರಿಗರಿಗೆ ಹೆಮ್ಮೆ ತರಿಸುವಂತಹ ವಿಚಾರವಾಗಿದೆ. ಈ ತರಬೇತಿ ಕೇಂದ್ರವು ಸುಮಾರು 214 ಎಕರೆಯಷ್ಟು (87 ಹೆಕ್ಟೇರ್) ವಿಸ್ತಾರವಾದ ಪ್ರದೇಶದಲ್ಲಿದೆ. ಜಕ್ಕೂರು ಏರೋಡ್ರೋಮ್ ನಿರ್ಮಾಣವಾಗುವುದಕ್ಕೂ ಮೊದಲು, ಅಂದರೆ **ಎರಡನೇ ಮಹಾಯುದ್ಧದ ಸಂದರ್ಭದಲ್ಲಿ (1941-1946) ಬ್ರಿಟಿಷರು ಉತ್ತರ ಆಫ್ರಿಕಾದಲ್ಲಿ ಬಂಧಿಸಿದ ಸುಮಾರು 22,000 ಇಟಲಿಯ ಸೈನಿಕರನ್ನು ಜಕ್ಕೂರು, ಹೆಬ್ಬಾಳ ಮತ್ತು ಜಾಲಹಳ್ಳಿ ಪ್ರದೇಶಗಳಲ್ಲಿ ತಂದು ಬಿಟ್ಟಿದ್ದರು.** ಈ ಬಂಧಿತ ಸೈನಿಕರಿಗೆ ಮೊದಲು ಬಿಡಾರಗಳನ್ನು ನಿರ್ಮಿಸಿ ನಂತರ ಹೆಂಚಿನ ಮನೆಗಳನ್ನು ನಿರ್ಮಿಸಿದ್ದರು. ಹಾಗೂ ಇಲ್ಲಿ ಬಂಧಿತರಿಗಾಗಿಯೇ ಚರ್ಚ್, ಪ್ರತ್ಯೇಕ ನಾಣ್ಯ ವ್ಯವಸ್ಥೆ, ಸ್ಮಶಾನಗಳಿದ್ದವು. (ಜಾಲಹಳ್ಳಿಯಲ್ಲಿ ಮಾತ್ರ ಹೆಂಚಿನ ಮನೆಗಳು, ಚರ್ಚ್, ಸ್ಮಶಾನಗಳು ಇದ್ದುದಕ್ಕೆ ಆಧಾರಗಳು ಸಿಗುತ್ತವೆ. ಹಾಗೂ ಈ **ವಿಚಾರ ಮತ್ತು ಛಾಯಾಚಿತ್ರಗಳನ್ನು ನಮ್ಮ ಹಿಂದಿನ ಸಿಂಗಾಪುರ ಸಂಚಿಕೆಯಲ್ಲಿ ತಿಳಿಸಲಾಗಿದೆ**[11]). ಮತ್ತೊಂದು ಮುಖ್ಯವಾದ ವಿಷಯವೇನೆಂದರೆ ಈ **ಬಂಧಿತ ಇಟಾಲಿಯನ್ ಖೈದಿಗಳಿಂದಲೇ ಜಕ್ಕೂರು ಏರೋಡ್ರೋಮ್, ಜಾಲಹಳ್ಳಿ ಏರ್ ಫೋರ್ಸ್ ಸ್ಟೇಷನ್**

11 ಬೆಂಗಳೂರು ಇತಿಹಾಸ ವೈಭವ ಮಾಲಿಕೆಯ 'ಸಿಂಗಾಪುರ' ಸಂಚಿಕೆಯ ಇ-ಕಾಪಿ.

ಕನ್ನಡ: https://bit.ly/Bengaluru_Itihaasa_Vaibhava_Singapura

English: https://bit.ly/Bengaluru_Itihaasa_Vaibhava_Singapura_English



ಎರಡನೇ ಮಹಾಯುದ್ಧದಲ್ಲಿ (1943) ಬಂಧಿಸಲ್ಪಟ್ಟ ಇಟಲಿ ಸೈನಿಕರು ಕೆಲಸ ಮಾಡುತ್ತಿರುವುದು ಹಾಗೂ ಅವರ ಹಿಂಭಾಗದಲ್ಲಿ ಬಿಡಾರಗಳನ್ನು ನೋಡಬಹುದು.(ಚಿತ್ರಕೃಪೆ - ಇಂಟರ್ ನ್ಯಾಷನಲ್ ರೆಡ್ ಕ್ರಾಸ್ ಫೋಟೋ ಆರ್ಕೈವ್ಸ್)

ಮತ್ತು ಯಲಹಂಕ ವಾಯುನೆಲೆಯ ಕಾಮಗಾರಿಗಳನ್ನು ಮಾಡಿಸಲಾಗಿದೆ. ಈ ಖೈದಿಗಳು ಬೆಳಿಗ್ಗೆ ತಮ್ಮ ಕ್ಯಾಂಪ್‌ಗಳಿಂದ ಹೊರಟು ಜಾಲಹಳ್ಳಿ, ಜಕ್ಕೂರು ಮತ್ತು ಯಲಹಂಕ ವಾಯುನೆಲೆಯಲ್ಲಿ ಕೆಲಸ ಮಾಡಿ ಸಂಜೆ ತಮ್ಮ ಕ್ಯಾಂಪ್‌ಗಳಿಗೆ ಮರಳುತ್ತಿದ್ದರು.

ಜಕ್ಕೂರು, ಯಲಹಂಕ, ಜಾಲಹಳ್ಳಿಯ ಕಾಮಗಾರಿ ಪೂರ್ಣವಾದ ಮೇಲೆ ಇದೇ ಖೈದಿಗಳಿಂದ ಆಸ್ಟ್ರೇಲಿಯದಲ್ಲಿ ರೈಲ್ವೆ ಹಳಿಗಳ ನಿರ್ಮಾಣ ಕೆಲಸವನ್ನು ಸಹ ಮಾಡಿಸಲಾಗಿದೆ.

ಜಕ್ಕೂರು ಏರೋಡ್ರೋಮ್ ಒಳಗೊಂಡಂತೆ ಸುಮಾರು 377 ಎಕರೆ ವಿಸ್ತೀರ್ಣದ **ಜಕ್ಕೂರು ಪ್ಲಾಂಟೇಷನ್** ಭೂ ಪ್ರದೇಶವು ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1935ರಲ್ಲಿ ಮೈಸೂರು ಸಂಸ್ಥಾನದ ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಟ್ಟ **ಜಕ್ಕೂರು ಮತ್ತು ಅಲ್ಲಾಳಸಂದ್ರ ಮೀಸಲು ಅರಣ್ಯ ಪ್ರದೇಶವಾಗಿತ್ತು**. ನಂತರ 1936ರಲ್ಲಿ ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 199 ಎಕರೆಯಷ್ಟು ಭೂಮಿಯನ್ನು ಡಿ ನೋಟಿಫೈ ಮಾಡುವ ಮೂಲಕ ಜಕ್ಕೂರು ಏರೋಡ್ರೋಮ್‌ಗೆ ಹಸ್ತಾಂತರಿಸಿದರು. ಇನ್ನುಳಿದ 177 ಎಕರೆ ಭೂ ಪ್ರದೇಶವು ಮೀಸಲು ಅರಣ್ಯ ಪ್ರದೇಶವಾಗಿಯೇ ಉಳಿಯಿತು. ನಂತರ **1950ರ ದಶಕದಲ್ಲಿ ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಜಲಾಶಯದ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡ ರೈತರಿಗೆ, ಇದೇ ಜಕ್ಕೂರು ಮೀಸಲು ಅರಣ್ಯದ ಭೂಮಿಯನ್ನೇ ಕೃಷಿ ಉದ್ದೇಶಕ್ಕಾಗಿ ಮಂಜೂರು ಮಾಡಲಾಯಿತು**[12]. (ಪ್ರಸ್ತುತ ಈ ಪ್ರದೇಶದಲ್ಲಿ ಇಂದು ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕಟ್ಟಡಗಳು ಹಾಗೂ ಹೊಸ ಹೊಸ ಬಡಾವಣೆಗಳು ನಿರ್ಮಾಣಗೊಂಡಿವೆ). ಪ್ರಸ್ತುತ ಜಕ್ಕೂರು ಪ್ಲಾಂಟೇಷನ್ ಭೂಮಿಯಲ್ಲಿ ಕೇವಲ **4 ಎಕರೆಯಷ್ಟು ಮಾತ್ರ ಅರಣ್ಯ ಇಲಾಖೆಯ ಅಧೀನದಲ್ಲಿದೆ**. ಸ್ವಾತಂತ್ರ್ಯ ನಂತರ ಮೈಸೂರು ಸಂಸ್ಥಾನದ ಅಧೀನದಲ್ಲಿದ್ದ ಈ ಜಕ್ಕೂರು ಏರೋಡ್ರೋಮನ್ನು ಕರ್ನಾಟಕ ಸರ್ಕಾರಕ್ಕೆ ಹಸ್ತಾಂತರಿಸಿ, ಮಾರ್ಚ್ 26, 1949 ರಂದು **GFTS (Government Flying Training School)** ಪ್ರಾರಂಭಿಸಲಾಯಿತು. ಈ ಪ್ರದೇಶವನ್ನು ವಿಮಾನ ಹಾರಿಸುವ ತರಬೇತಿಗಾಗಿ ಬಳಸಿಕೊಳ್ಳುವುದರ ಜೊತೆಗೆ ಹ್ಯಾಂಗರ್‌ಗಳು ಮತ್ತು ನಿರ್ವಹಣಾ ಚಟುವಟಿಕೆಗಳಿಗಾಗಿ ಖಾಸಗಿ ವಿಮಾನಯಾನ ಸಂಸ್ಥೆಗಳಿಗೂ ಗುತ್ತಿಗೆ ನೀಡಲಾಗುತ್ತಿತ್ತು. ಇಲ್ಲಿ ಏರ್‌ಸ್ಟ್ರಿಪ್, ಫ್ಯೂಯಲ್ ಸ್ಟೇಷನ್ ಇತ್ಯಾದಿ ಸಾಮಾನ್ಯ

12 ಡಿಸಿ ಮತ್ತು ತಹಶೀಲ್ದಾರ್ ಕಚೇರಿ ಪತ್ರಗಳು



ಜಕ್ಕೂರು GFTS (Government Flying Training School) ಹ್ಯಾಂಗರ್
(ಚಿತ್ರಕೃಪೆ - https://www.facebook.com/flyatgfts/photos/306784039693544)

ಸೌಲಭ್ಯಗಳಿದ್ದವು[13]. ಇಂದಿಗೂ **ಹ್ಯಾಂಗ್ ಗ್ಲೈಡಿಂಗ್ (Hang Gliding)** ಮತ್ತು **ಪ್ಯಾರಾ ಗ್ಲೈಡಿಂಗ್ (Para Gliding)** ಎಂಬ ಸಾಹಸಮಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಬೆಂಗಳೂರಿನ ಪರಂಪರೆಯನ್ನು **ಹೆಲಿಕಾಪ್ಟರ್ ಮೂಲಕ** ತಿಳಿಸುವ **'ಬೆಂಗಳೂರು ದರ್ಶನ'** ಎಂಬ ಕಾರ್ಯಕ್ರಮವು ಜಕ್ಕೂರು ಏರೋಡ್ರೋಮ್ ಪ್ರದೇಶದಲ್ಲಿಯೇ ನಡೆಯುತ್ತಿದ್ದುದು ವಿಶೇಷ.

ಮತ್ತೊಂದು ಸಂತೋಷದ ವಿಷಯವೇನೆಂದರೆ ಡಿಸೆಂಬರ್-2021ರಂದು ಜಕ್ಕೂರು ಏರೋಡ್ರೋಮ್‌ಗೆ ಎರಡು ಎಂಜಿನ್‌ಗಳನ್ನು ಹೊಂದಿರುವ ಏರ್‌ಕ್ರಾಫ್ಟ್ ಸೇರ್ಪಡೆಯಾಗಿರುತ್ತದೆ. ಈ ಏರ್‌ಕ್ರಾಫ್ಟ್‌ಅನ್ನು GFTS-(Government Flying Training School) 5 ಕೋಟಿ ರೂಪಾಯಿ ವೆಚ್ಚ ಮಾಡಿ ಖರೀದಿಸಿರುತ್ತದೆ. ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಎವಿಯೇಷನ್ (DGCA) ನಿಯಮಗಳ ಪ್ರಕಾರ ಕಮರ್ಷಿಯಲ್ ಪೈಲಟ್‌ಗಳು ಕನಿಷ್ಠ 200 ಗಂಟೆಗಳ ವಿಮಾನ ಹಾರಾಟದ ತರಬೇತಿಯನ್ನು ಪಡೆದಿರಬೇಕು. ಇದರಲ್ಲಿ 185 ಗಂಟೆಗಳಷ್ಟು ಸಿಂಗಲ್ ಎಂಜಿನ್ ವಿಮಾನ ಹಾಗೂ 15 ಗಂಟೆಗಳಷ್ಟು ಡಬಲ್ ಎಂಜಿನ್ ಇರುವ ವಿಮಾನದಲ್ಲಿ ತರಬೇತಿಯನ್ನು ಪಡೆದಿರಬೇಕು. ಆದರೆ ಇದಕ್ಕೂ ಮೊದಲು ಜಕ್ಕೂರು ಏರೋಡ್ರೋಮ್‌ನಲ್ಲಿ ಯಾವುದೇ ಡಬಲ್ ಎಂಜಿನ್ ವಿಮಾನವಿರಲಿಲ್ಲ. ಆದ್ದರಿಂದ ಇಲ್ಲಿನ ವಿದ್ಯಾರ್ಥಿಗಳು ಡಬಲ್ ಎಂಜಿನ್ ವಿಮಾನದ ತರಬೇತಿಗಾಗಿ ಬೇರೆ ಕೇಂದ್ರಗಳಿಗೆ ಹೋಗಬೇಕಿತ್ತು. ಆದರೆ ಇನ್ನು ಮುಂದೆ ಈ ಏರ್‌ಕ್ರಾಫ್ಟ್‌ನ ಲಭ್ಯತೆಯಿಂದ GFTS ನ ವಿದ್ಯಾರ್ಥಿಗಳು ಜಕ್ಕೂರು ಏರೋಡ್ರೋಮ್ ಕೇಂದ್ರದಲ್ಲಿಯೇ ಸಂಪೂರ್ಣ ತರಬೇತಿಯನ್ನು ಪಡೆಯಲಿದ್ದಾರೆ. ಈಗ ಜಕ್ಕೂರು ಏರೋಡ್ರೋಮ್‌ನಲ್ಲಿ **5 ಸಿಂಗಲ್ ಎಂಜಿನ್ ಹಾಗೂ 1 ಡಬಲ್ ಎಂಜಿನ್ ವಿಮಾನವು ಸೇರಿದಂತೆ, ಒಟ್ಟು 6 ತರಬೇತಿ ವಿಮಾನಗಳು ಕಾರ್ಯನಿರ್ವಹಿಸಲಿವೆ**.

ಬ್ಲೇಡ್ ಇಂಡಿಯಾ (BLADE India) ಎಂಬ ಸಂಸ್ಥೆಯು 2019ರಿಂದ ಖಾಸಗಿ ಚಾಪರ್ (ಹೆಲಿಕಾಪ್ಟರ್)ಗಳನ್ನು 'buy-a-seat' ಎಂಬ ಅಭಿಯಾನದಡಿಯಲ್ಲಿ ಪ್ರವಾಸಿಗಳಿಗೋಸ್ಕರ ಜಕ್ಕೂರು ಏರೋಡ್ರೋಮ್ ನಿಂದ ಒದಗಿಸುತ್ತಿದೆ. ಈ ಸಂಸ್ಥೆಯ ಚಾಪರ್‌ಗಳು **ಜಕ್ಕೂರು ಏರೋಡ್ರೋಮ್‌ನಿಂದ ಹೊರಟು ಕೊಡಗಿನ ಕಬಿನಿ ಪ್ರದೇಶ**ದಲ್ಲಿ ಲ್ಯಾಂಡ್ ಆಗುತ್ತವೆ. ಸುಮಾರು ಆರೇಳು ಗಂಟೆಯ ರಸ್ತೆ ಪ್ರಯಾಣದ ಅವಧಿಯನ್ನು ಈ ಚಾಪರ್‌ಗಳು ಕೇವಲ ಒಂದು ಗಂಟೆಯಲ್ಲಿ ತಲುಪುತ್ತವೆ[14].

13 https://en.wikipedia.org/wiki/Jakkur_Aerodrome

14 https://timesofindia.indiatimes.com/city/bengaluru/take-chopper-ride-from-jakkur-to-kabini-kodagu/articleshow/88112132.cms



ಜಕ್ಕೂರು ಏರೋಡ್ರೋಮ್‌ನಲ್ಲಿ ಪ್ಯಾರಾ ಗ್ಲೈಡಿಂಗ್ (Para Gliding)
(ಚಿತ್ರಕೃಪೆ - https://www.facebook.com/flyatgfts/photos/561186817586597)

ಈ ಸೌಲಭ್ಯವು ಪ್ರತಿವರ್ಷ ಡಿಸೆಂಬರ್ ತಿಂಗಳಿನಲ್ಲಿ ಜಕ್ಕೂರು ಏರೋಡ್ರೋಮ್ ಪ್ರದೇಶದಿಂದ ದೊರೆಯುತ್ತದೆ. ಹಾಗೂ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಜನರಲ್ ತಿಮ್ಮಯ್ಯ ನ್ಯಾಷನಲ್ ಅಕಾಡೆಮಿ ಆಫ್ ಅಡ್ವೆಂಚರ್ ಇವರ ಸಹಯೋಗದೊಂದಿಗೆ ಡಿಸೆಂಬರ್-2021ರಂದು ಪ್ಯಾರಾಸೈಲಿಂಗ್ ಎಂಬ ಸಾಹಸಮಯ ಅಡ್ವೆಂಚರ್ ಗೇಮ್‌ಗಳು ಸಹ ಇದೇ ಜಕ್ಕೂರು ಏರೋಡ್ರೋಮ್ ಪ್ರದೇಶದಲ್ಲಿ ನಡೆದಿರುವುದು ನಿಜಕ್ಕೂ ಈ ಪ್ರದೇಶದ ಹಿರಿಮೆಯನ್ನು ಹೆಚ್ಚಿಸುತ್ತದೆ[15].

ಕಡಿಮೆ ವೆಚ್ಚದಲ್ಲಿಯೂ ಜನರು ವಿಮಾನಗಳಲ್ಲಿ ಪ್ರಯಾಣಿಸುವಂತಾಗಬೇಕು ಎಂಬ ಮಹದಾಶಯವನ್ನು ಹೊಂದಿದ್ದ, ಕರ್ನಾಟಕದವರೇ ಆದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರು ಪ್ರಾರಂಭಿಸಿದ **"ಏರ್ ಡೆಕ್ಕನ್ (Air Deccan)"** ಎಂಬ ಖಾಸಗಿ ವಿಮಾನಯಾನ ಸಂಸ್ಥೆಯ **ಕೇಂದ್ರ (Hub) ಈ ಜಕ್ಕೂರು ಏರೋಡ್ರೋಮ್ ಪ್ರದೇಶದಲ್ಲಿಯೇ ಇದ್ದುದು** ವಿಶೇಷ. ಆದರೆ ನಂತರದ ಕೆಲವು ವರ್ಷಗಳಲ್ಲಿ ಈ ಏರ್ ಡೆಕ್ಕನ್ ಸಂಸ್ಥೆಯು ಕಿಂಗ್ ಫಿಷರ್ ಏರ್‌ಲೈನ್ಸ್ (Kingfisher Airlines) ಸಂಸ್ಥೆಗೆ ಮಾರಾಟವಾಗುವುದರೊಂದಿಗೆ ತನ್ನ ಯಾನವನ್ನು ನಿಲ್ಲಿಸಿತು.

2004ರಲ್ಲಿ ಕನ್ನಡ ಚಿತ್ರರಂಗದ ಪ್ರಸಿದ್ಧ ಹಾಗೂ **ಬಹು ಭಾಷಾ ನಟಿ ಸೌಂದರ್ಯ** ಅವರು ಇಂದಿನ **ಜಿ.ಕೆ.ವಿ.ಕೆ ಆವರಣದಲ್ಲಿ ಹೆಲಿಕಾಪ್ಟರ್ ಕ್ರ್ಯಾಶ್ ದುರಂತ**ದಲ್ಲಿ ಮರಣ ಹೊಂದಿದ್ದು ಇದೇ ಜಕ್ಕೂರು ಏರೋಡ್ರೋಮ್ ಪ್ರದೇಶದಿಂದ ಹೊರಟ (Take off) ಹೆಲಿಕಾಪ್ಟರ್‌ನಲ್ಲಿಯೇ ಎಂಬುದು ಒಂದು ದುರಂತದ ಸಂಗತಿ.

ಬೆಂಗಳೂರಿನ ಟ್ರಾಫಿಕ್ ದಟ್ಟಣೆಯ ಸಮಸ್ಯೆಯನ್ನು ಸಾಧ್ಯವಾದಷ್ಟು ಪರಿಹರಿಸುತ್ತಿರುವ ಬಿ.ಎಂ.ಆರ್.ಸಿ.ಎಲ್ ನ (BMRCL - Bengaluru Metro Rail Corporation Limited) 'ನಮ್ಮ ಮೆಟ್ರೋ' ಯೋಜನೆಯ, ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೋ ಕಾಮಗಾರಿಯ ನೀಲನಕ್ಷೆಯು ಜಕ್ಕೂರಿನ ಏರೋಡ್ರೋಮ್‌ನ ರನ್‌ವೇ (Run way) ಪಕ್ಕದಲ್ಲಿಯೇ ಹಾದು ಹೋಗುವುದನ್ನು ತೋರಿಸುತ್ತಿದೆ. ಈ ನೀಲನಕ್ಷೆಯ ಪ್ರಕಾರ ಮೆಟ್ರೋ ಕಾಮಗಾರಿ ನಡೆದಿದ್ದೇ ಆದರೆ, ಜಕ್ಕೂರಿನ ಗೌರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್ (GFTS)ನ ರನ್ ವೇ ಯ ಉದ್ದವು ಕಡಿಮೆಯಾಗಲಿದೆ. ಏಕೆಂದರೆ ಈಗಾಗಲೇ ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಸಂಪರ್ಕವನ್ನು ಸುಧಾರಿಸಲು

15 https://www.newindianexpress.com/cities/bengaluru/2021/dec/15/parasailing-starts-as-a-weekend-must-



ಏರ್ ಡೆಕ್ಕನ್ (Air Deccan) ವಿಮಾನ

ರಾಷ್ಟ್ರೀಯ ಹೆದ್ದಾರಿ 44ರ (Bellary road) ಮೇಲೆ ಒಂದು ಫ್ಲೈ ಓವರ್ ಅನ್ನು ನಿರ್ಮಿಸಲಾಗಿದ್ದು, ಇದರಿಂದ ಜಕ್ಕೂರು ಏರೋಡ್ರೋಮ್ ನ 854 ಮೀಟರ್ ಉದ್ದವಿದ್ದ ರನ್ ವೇಯು 413 ಮೀಟರ್‌ಗೆ (40%) ಕುಸಿದಿದೆ. ಇದರಿಂದ ತರಬೇತಿಯಲ್ಲಿರುವ ಪೈಲೆಟ್‌ಗಳು ವಿಮಾನಗಳನ್ನು ಹಾರಿಸಲು (take off) ಮತ್ತು ಇಳಿಸಲು (landing) ತೀರಾ ಸಮಸ್ಯೆಯಾಗುತ್ತದೆ ಎಂಬ ಕಾರಣದಿಂದಾಗಿಯೇ ಏರೋಡ್ರೋಮ್‌ನ ರನ್‌ವೇಯ ಪಶ್ಚಿಮ ಭಾಗವನ್ನು ಈಗಾಗಲೇ ಮುಚ್ಚಲಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಮೆಟ್ರೋ ಕಾಮಗಾರಿಯೂ ಇದೇ ಹಾದಿಯಲ್ಲಿ ಸಾಗಿದ್ದೇ ಆದರೆ ರನ್ ವೇಯ ಉದ್ದವು ಮತ್ತಷ್ಟು ಕಡಿಮೆ ಆಗಲಿದೆ. ಆದ್ದರಿಂದ ಗೌರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್‌ನ (GFTS) ವಿದ್ಯಾರ್ಥಿಗಳು ಮತ್ತು ತರಬೇತುದಾರರು ಈ ಮೆಟ್ರೋ ಕಾಮಗಾರಿಯನ್ನು ವಿರೋಧಿಸಿ ಸಾಂಕೇತಿಕವಾಗಿ ಪ್ರತಿಭಟನೆಗಳನ್ನು ನಡೆಸಿರುತ್ತಾರೆ[16]. ಈ ಎಲ್ಲಾ ಅಂಶಗಳನ್ನು ಗಮನಿಸಿ

16 https://www.deccanherald.com/city/bengaluru-infrastructure/airport-metro-may-well-shut-down-jakkur-flying-school-809648.html



JNCASR
(ಚಿತ್ರಕೃಪೆ - Maneesha Inamdar via Wikimedia Commons)



ಚಿತ್ರಕೃಪೆ - JNCASR ವೆಬ್‌ಸೈಟ್


ಇತ್ತೀಚಿನ ದಿನಗಳಲ್ಲಿ ಏರೋಡ್ರೋಮ್‌ನ ಪೂರ್ವ ಭಾಗದಲ್ಲಿ ರನ್‌ವೇ ಅನ್ನು **ವಿಸ್ತರಿಸಲಾಗಿದ್ದು, ಪ್ರಸ್ತುತ 974 ಮೀಟರ್ ಉದ್ದದ ರನ್‌ವೇ ಕಂಡುಬರುತ್ತದೆ** ಹಾಗೂ ಈ ರನ್‌ವೇ ಅನ್ನು ಮತ್ತಷ್ಟು ವಿಸ್ತರಿಸಲು ಭೂಮಿಯನ್ನು ಕಾಯ್ದಿರಿಸಲಾಗಿದೆ.

ಜವಾಹರ್‌ಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್ (JN-CASR)

ಜಕ್ಕೂರು ಭೂ ಪ್ರದೇಶದಲ್ಲಿ ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಉನ್ನತ ಸಂಶೋಧನೆಗೆ ಒತ್ತು ನೀಡುತ್ತಿರುವ 'ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್' ಎಂಬ ಸಂಸ್ಥೆಯಿದ್ದು, ಇಲ್ಲಿ **ಭಾರತ ರತ್ನ ಪುರಸ್ಕೃತ ಸಿ.ಎನ್.ಆರ್ ರಾವ್** ಅವರು ಸಂಸ್ಥಾಪನಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವುದು ಮಹತ್ವದ ಸಂಗತಿ. ಮೆಟಿರಿಯಲ್ಸ್‌ನಿಂದ ಜೆನೆಟಿಕ್ಸ್ ವರೆಗಿನ ವಿಶಾಲ ಕ್ಷೇತ್ರಗಳನ್ನು ಹೊಂದಿರುವ ಈ ಸಂಸ್ಥೆಯು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ. ಇದು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ



ಬಕಿಬಾಲ್ JNCASR
(ಚಿತ್ರಕೃಪೆ - Arunlovy, via Wikimedia Commons)



ಚಿತ್ರಕೃಪೆ - JNCASR ವೆಬ್‌ಸೈಟ್

ಇಲಾಖೆಯ ಅಧೀನದಲ್ಲಿ ಬರುವ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಪ್ರಸ್ತುತ ಈ ಸಂಸ್ಥೆಯಲ್ಲಿ **500ಕ್ಕೂ ಹೆಚ್ಚು ಸಂಶೋಧಕರು** ಕಾರ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿ ಮೆಟೀರಿಯಲ್ ಸೈನ್ಸ್, ರಸಾಯನಶಾಸ್ತ್ರ, ಥಿಯಾರಿಟಿಕಲ್ ಸೈನ್ಸ್, ಇಂಜಿನಿಯರಿಂಗ್ ಮೆಕ್ಯಾನಿಕ್, ನ್ಯೂರೋ ಸೈನ್ಸ್, ಮಾಲಿಕ್ಯುಲರ್ ಬಯೊಲಜಿ ಮತ್ತು ಜೆನೆಟಿಕ್ಸ್ ಎಂಬ ಹಲವು ವಿಭಾಗಗಳು ಕಂಡುಬರುತ್ತವೆ. ಮೆಟೀರಿಯಲ್ ಸೈನ್ಸ್ ವಿಭಾಗದಲ್ಲಿ ನ್ಯಾನೊ ವಸ್ತುಗಳು, ನ್ಯಾನೊ ಸಾಧನಗಳು, ಘನ ಸ್ಥಿತಿಯ ರಸಾಯನಶಾಸ್ತ್ರ, ಸರಂಧ್ರ ವಸ್ತುಗಳು, ಗಾಜಿನ ಪರಿವರ್ತನೆ ಇತ್ಯಾದಿ ವಿಷಯಗಳ ಕುರಿತು ಸಂಶೋಧನೆಯನ್ನು ಮಾಡಲಾಗುತ್ತದೆ. ರಸಾಯನಶಾಸ್ತ್ರ ವಿಭಾಗದಲ್ಲಿ ಸೂಪರ್ ಮಾಲಿಕ್ಯುಲರ್ ಕೆಮಿಸ್ಟ್ರಿ, ಕೆಮಿಕಲ್ ಬಯಾಲಜಿ, ಆರ್ಗನೊ ಕ್ಯಾಟಲಿಸಿಸ್, ಆಂಟಿಮೈಕ್ರೊಬಿಯಲ್ ಥೆರಪ್ಯೂಟಿಕ್ಸ್, ಘನ ಸ್ಥಿತಿಯ ಅಜೈವಿಕ ರಸಾಯನಶಾಸ್ತ್ರ ಇತ್ಯಾದಿ ವಿಷಯಗಳ ಕುರಿತು ಸಂಶೋಧನೆಗಳು ನಡೆಯುತ್ತವೆ. ಸೈದ್ಧಾಂತಿಕ ವಿಜ್ಞಾನ (ಥಿಯಾರಿಟಿಕಲ್ ಸೈನ್ಸ್) ವಿಭಾಗದಲ್ಲಿ ಕಂಪ್ಯೂಟೇಶನಲ್ ನ್ಯಾನೊಸೈನ್ಸ್, ಸ್ಟಾಟಿಸ್ಟಿಕಲ್ ಫಿಸಿಕ್ಸ್, ಬಯೋಫಿಸಿಕ್ಸ್, ಬಯೋ ಇನ್ಫರ್ಮ್ಯಾಟಿಕ್ಸ್, ಸೈದ್ಧಾಂತಿಕ ವಿಕಸನದ ಜೀವಶಾಸ್ತ್ರ ಇತ್ಯಾದಿಗಳ ಕುರಿತು ಅಧ್ಯಯನ ನಡೆಯುತ್ತದೆ. ಇಂಜಿನಿಯರಿಂಗ್ ಮೆಕ್ಯಾನಿಕ್ಸ್‌ನಲ್ಲಿ ದ್ರವ ಯಂತ್ರಶಾಸ್ತ್ರ, ಶಾಖ ವರ್ಗಾವಣೆ, ಗ್ರ್ಯಾನ್ಯುಲರ್ ಮ್ಯಾಟರ್‌ನ ಯಂತ್ರಶಾಸ್ತ್ರ, ರೇಖಾತ್ಮಕವಲ್ಲದ ಡೈನಾಮಿಕ್ಸ್ ಇತ್ಯಾದಿಗಳ ಕುರಿತು ಹಾಗೂ ನರವಿಜ್ಞಾನ ವಿಭಾಗದಲ್ಲಿ ಸಿರ್ಕಾಡಿಯನ್ ರಿದಮ್ಸ್ ಮತ್ತು ಎಲೆಕ್ಟ್ರೋಫಿಸಿಯಾಲಜಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆಯುತ್ತವೆ. ಮಾಲಿಕ್ಯುಲರ್ ಬಯೊಲಜಿ (ಅಣು ಜೀವಶಾಸ್ತ್ರ) ಮತ್ತು ಜೆನೆಟಿಕ್ಸ್ ವಿಭಾಗದಲ್ಲಿ ಮಾನವ ತಳಿಶಾಸ್ತ್ರ, ವೈರಾಲಜಿ, ಇಮ್ಯುನೊಲಾಜಿ, ಪರಾವಲಂಬಿ ಶಾಸ್ತ್ರ, ಚಯಾಪಚಯ, ಬೆಳವಣಿಗೆಯ ಜೀವಶಾಸ್ತ್ರ, ಕಾಂಡಕೋಶಗಳು, ಶಿಲೀಂಧ್ರ ರೋಗಕಾರಕಗಳ ಜೀವಶಾಸ್ತ್ರ, ಆಟೋಫೇಜಿ ಇನ್ನೂ ಮುಂತಾದ ವಿಷಯಗಳ ಕುರಿತು ಸಂಶೋಧನೆಗಳು ನಡೆಯುತ್ತವೆ. ಈ JNCASR ನಲ್ಲಿ ಪ್ರಾಣಿಗಳ ನಡವಳಿಕೆಗಳು, ಏಷ್ಯನ್ ಆನೆಗಳ ಸಮಾಜಶಾಸ್ತ್ರ, ಜೀವ ವಿಕಸನದ ಇತಿಹಾಸ ಮತ್ತು ಜನಸಂಖ್ಯಾ ಪರಿಸರ ವಿಜ್ಞಾನಗಳ ಕುರಿತಾಗಿಯೂ ಸಂಶೋಧಗಳು ನಡೆಯುವುದರ ಜೊತೆಗೆ ಇದುವರೆಗೂ ಹೆಸರಿಸಿದ ವಿವಿಧ ಕ್ಷೇತ್ರಗಳ ಸಂಶೋಧನೆಯ ಫಲಿತಾಂಶವು ಪೀರ್-ರಿವ್ಯೂಡ್ ಜರ್ನಲ್‌ಗಳಲ್ಲಿ ಪ್ರಕಟವಾಗುತ್ತವೆ. ಮುಖ್ಯವಾಗಿ ಬಹುಮುಖಿ ಸಂಶೋಧನೆಗೆ ಪ್ರಸಿದ್ಧವಾದ ಈ JNCASR ಕೇಂದ್ರವು ತನ್ನ ಮೌಲ್ಯಯುತವಾದ ಪ್ರಕಟಣೆಗಳು ಮತ್ತು ಪೇಟೆಂಟ್‌ಗಳಿಗೆ ಹೆಸರುವಾಸಿಯಾಗಿದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (G.K.V.K)

ಈ ಸಂಸ್ಥೆಯು ಜಕ್ಕೂರು ಮತ್ತು ಅಲ್ಲಾಳಸಂದ್ರ ಪ್ರದೇಶಗಳಿಗೆ ಹೊಂದಿಕೊಂಡಂತೆ ಬೆಂಗಳೂರು-ಬಳ್ಳಾರಿ ರಸ್ತೆ ಬಳಿ ಕಂಡುಬರುತ್ತದೆ. 1969ರಲ್ಲಿ ಸ್ಥಾಪನೆಯಾದ ಈ ಜಿ.ಕೆ.ವಿ.ಕೆ ಗೆ **ಜಕ್ಕೂರು, ಅಲ್ಲಾಳಸಂದ್ರ ಮತ್ತು ಕೊಡಿಗೇಹಳ್ಳಿಯ ಭೂಮಿಯನ್ನು ನೀಡಲಾಗಿದೆ**. ಈ ಕೃಷಿ ವಿಜ್ಞಾನ ಕೇಂದ್ರವು ದೇಶದಲ್ಲಿಯೇ ಕೃಷಿ ಅಭಿವೃದ್ಧಿ, ಅಧ್ಯಯನ ಹಾಗೂ ಸಂಶೋಧನೆಗೆ ತೊಡಗಿಸಿಕೊಂಡಿರುವ ಪ್ರಮುಖ ಸಂಸ್ಥೆಯಾಗಿದ್ದು, ಇಲ್ಲಿ ಕೃಷಿ ಸಂಬಂಧಿತ ಬೆಳೆಗಳ ಹೊಸ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ನೀಡಲಾಗುತ್ತದೆ. ದೇಶದ ಬೆನ್ನೆಲುಬಾದ ರೈತನಿಗೆ ಹೆಚ್ಚು ಇಳುವರಿ ಬರುವ ಬಿತ್ತನೆ ಬೀಜಗಳನ್ನು ಅಭಿವೃದ್ಧಿ ಪಡಿಸಿ ಹಂಚುವುದರಲ್ಲಿ ದೇಶದಲ್ಲಿಯೇ ಉನ್ನತ ಸ್ಥಾನವನ್ನು ಪಡೆದುಕೊಂಡಿರುವ ಈ ಸಂಸ್ಥೆಯು, ಹಲವಾರು ಹಣ್ಣಿನ ಗಿಡಗಳನ್ನು ಕಸಿ ಮಾಡಿ ಹೆಚ್ಚಿನ ಇಳುವರಿ ಬರುವ ಹಾಗೆ ಮಾಡಿದೆ. ಅದರಲ್ಲೂ ವಿಶೇಷವಾಗಿ ನೂರಾರು ಮಾವಿನ ಹಣ್ಣಿನ ತಳಿಗಳನ್ನು ಅಭಿವೃದ್ಧಿ ಪಡಿಸಿರುವುದು ಸಂಸ್ಥೆಯ ಹೆಮ್ಮೆಯ ವಿಷಯವಾಗಿದೆ. ಜೊತೆಗೆ ಕೃಷಿಯಲ್ಲಿ ಹೊಸ ಮಾದರಿಗಳನ್ನು ತಿಳಿದು ರೈತರು ಅಳವಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಪ್ರತಿ ವರ್ಷ **ಕೃಷಿ ಮೇಳವನ್ನು** ಸಹ ನಡೆಸುತ್ತಾ ಬರುತ್ತಿದೆ.

ಜಿ.ಕೆ.ವಿ.ಕೆ ಯ ಬಗ್ಗೆ ತಿಳಿಯುವುದಕ್ಕಿಂತ ಮುಂಚೆ ಈ ಸಂಸ್ಥೆಯು ಸ್ಥಾಪನೆಯಾದ ಹಿನ್ನೆಲೆಯನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. 1948ರಲ್ಲಿ ಶಿಕ್ಷಣ ತಜ್ಞ ಎಸ್. ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ಜಾಕಿರ್ ಹುಸೇನ್ ಮತ್ತು ಅಮೆರಿಕನ್ ಶಿಕ್ಷಣ ತಜ್ಞ ಜೆ.ಜೆ. ಟೈಗರ್ಟ್ ಹಾಗೂ ಆರ್ಥರ್ ಅರ್ನೆಸ್ಟ್ ಮೋರ್ಗನ್ ಅವರನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವನ್ನು (UGC) ಪ್ರಾರಂಭಿಸಲಾಯಿತು. ಈ ತಂಡವು ಭಾರತದ ಗ್ರಾಮೀಣ ಮತ್ತು ಕೃಷಿ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ **ಅಮೆರಿಕಾದ ಮಾದರಿಯನ್ನು (ಲ್ಯಾಂಡ್ ಗ್ರ್ಯಾಂಟ್ ಕಾಲೇಜುಗಳು)** ಅಳವಡಿಸಿಕೊಳ್ಳಲು ಯೋಚಿಸುತ್ತದೆ. ಇದರ ಪರಿಣಾಮವಾಗಿ 1954ರಲ್ಲಿ ಮೊದಲ ಜಂಟಿ ಇಂಡೋ-ಅಮೆರಿಕನ್ ತಂಡವು ಅಮೆರಿಕನ್ ವಿಶ್ವವಿದ್ಯಾನಿಲಯಗಳನ್ನು ಅಧ್ಯಯನ ಮಾಡಿತು ಮತ್ತು ಈ ತಂಡವು ಭಾರತದ ಕೃಷಿ ಶಿಕ್ಷಣದಲ್ಲಿ ಭಾರತ ಮತ್ತು ಅಮೆರಿಕಾದ ಕೃಷಿ ವಿಶ್ವವಿದ್ಯಾನಿಲಯಗಳ ಸಹಭಾಗಿತ್ವವನ್ನು ಒತ್ತಿ ಹೇಳುತ್ತದೆ. 1959ರಲ್ಲಿ ಎರಡನೇ ತಂಡವು ಕೃಷಿ ವಿಶ್ವವಿದ್ಯಾನಿಲಯಗಳನ್ನು ಸ್ವಾಯತ್ತಗೊಳಿಸುವುದರ ಜೊತೆಗೆ **ಪಶು ವೈದ್ಯಕೀಯ, ಗೃಹ ವಿಜ್ಞಾನ ಮತ್ತು ಕೃಷಿ ಶಿಕ್ಷಣವನ್ನು ಒಂದೇ ಕ್ಯಾಂಪಸ್** ನಲ್ಲಿ ಸಮಗ್ರವಾಗಿ ನೀಡುವಂತೆ ಶಿಫಾರಸ್ಸು ಮಾಡುತ್ತದೆ. ಇದರಂತೆ 1961ರಲ್ಲಿ ಭಾರತದ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಲು ಇಂಡೋ-ಅಮೇರಿಕನ್ ತಂಡವನ್ನು ರಚಿಸುವುದರೊಂದಿಗೆ ಈ ಶಿಫಾರಸನ್ನು ತೆಗೆದುಕೊಳ್ಳಲಾಗುತ್ತದೆ. ಈ ಶಿಫಾರಸನ್ನು ಜಾರಿಗೊಳಿಸಲು ಅಂದಿನ ಮೈಸೂರು ರಾಜ್ಯ (ಕರ್ನಾಟಕ ರಾಜ್ಯದ ಮೊದಲ ಹೆಸರು) ಸರ್ಕಾರವು 1963ರಲ್ಲಿ ಒಂದು ಕಾಯ್ದೆಯನ್ನು ಅಂಗೀಕರಿಸುವ ಮೂಲಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ರಚಿಸಲು ಅವಕಾಶ ಮಾಡಿಕೊಟ್ಟಿತು. ಅದರಂತೆ **21-ಆಗಸ್ಟ್-1964ರಂದು ಬೆಂಗಳೂರಿನ ಹೆಬ್ಬಾಳದಲ್ಲಿ ಅಂದಿನ ಭಾರತದ ಉಪರಾಷ್ಟ್ರಪತಿಗಳಾದ ಜಾಕಿರ್ ಹುಸೇನ್, ಅಮೆರಿಕಾದ ರಾಯಭಾರಿ ಚೆಸ್ಟರ್ ಬೌಲ್ಸ್**



ಗಾಂಧಿ ಕೃಷಿ ವಿಜ್ಞಾನ ಕೇಂದ್ರ (G.K.V.K)



ಜಿ.ಕೆ.ವಿ.ಕೆ
(ಚಿತ್ರಕೃಪೆ - L. Shyamal, via Wikimedia Commons)

ಮತ್ತು ಕರ್ನಾಟಕದ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಉಪಸ್ಥಿತಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಉದ್ಘಾಟಿಸಲಾಯಿತು.

ಇಂದು ಕಂಡುಬರುವ **ಜಿ.ಕೆ.ವಿ.ಕೆ** ಯು ಕೃಷಿ ವಿಶ್ವವಿದ್ಯಾನಿಲಯದ ಒಂದು ವಿಸ್ತರಿತ ಕೇಂದ್ರವಾಗಿದ್ದು, ಇದನ್ನು **12-ಜುಲೈ-1969ರಂದು ಭಾರತದ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಉದ್ಘಾಟಿಸಿದರು**. ಹಾಗೂ ಇಲ್ಲಿರುವ ಕಟ್ಟಡಗಳನ್ನು ವಾಲ್ಟರ್ ಗ್ರೋಪಿಯಸ್‌ನಿಂದ ಪ್ರಭಾವಿತರಾದ ಅಚ್ಯುತ್ ಕಣ್ವಿಂದೆ ಮತ್ತು ಶೌಕತ್ ರೈ ಎಂಬ ವಾಸ್ತುಶಿಲ್ಪಿಗಳು ಅಮೆರಿಕಾದ ಕೃಷಿ ಕಟ್ಟಡಗಳ ಮಾದರಿಯಲ್ಲೇ ವಿನ್ಯಾಸಗೊಳಿಸಿದ್ದಾರೆ. ಈ ಕೃಷಿ ವಿಶ್ವವಿದ್ಯಾನಿಲಯವು 2001 ಮತ್ತು 2012ರಲ್ಲಿ ದೇಶದ ಅತ್ಯುತ್ತಮ ಕೃಷಿ ವಿಶ್ವವಿದ್ಯಾನಿಲಯ ಎಂಬ ಗೌರವಕ್ಕೆ ಪಾತ್ರವಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಕೃಷಿ ಅಭಿವೃದ್ಧಿ ಮತ್ತು ಸಂಶೋಧನೆಗೆ ಸಂಬಂಧಪಟ್ಟಂತೆ ಹೆಚ್ಚಿನ ಅಧ್ಯಯನಕ್ಕಾಗಿ ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ನೀಡಲಾಗುತ್ತಿದೆ. ಹಾಗೂ ಈ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನು ಮಂಡ್ಯ ಜಿಲ್ಲೆಯ V.C ಫಾರಂ ಹಾಗೂ ಹಾಸನ ಜಿಲ್ಲೆಯಲ್ಲಿಯೂ ಸ್ಥಾಪಿಸಲಾಗಿದೆ. ಈ ಪ್ರದೇಶವು (GKVK Campus) ಕೃಷಿ ವಿಜ್ಞಾನ ಕೇಂದ್ರವಾಗುವುದಕ್ಕೂ ಮುಂಚೆ ಇದೊಂದು **ಪ್ರಾಗೈತಿಹಾಸಿಕ (Pre-Historic site) ನೆಲೆಯಾಗಿತ್ತೆಂಬುದು** ಕೆಲವರ ಅಭಿಪ್ರಾಯ. ಏಕೆಂದರೆ ಇಲ್ಲಿನ **ಸ್ಥಳೀಯರು ಇಲ್ಲಿ ಬೂದಿ ಗುಂಡಿಗಳು/ ಬೂದಿ ದಿಬ್ಬಗಳು (Ash mounds) ಇದ್ದವು ಎಂಬುದನ್ನು ತಿಳಿಸುತ್ತಾರೆ**. ಪ್ರಾಗೈತಿಹಾಸಿಕ ಅಧ್ಯಯನದ ಪ್ರಕಾರ ಬೂದಿ ಗುಂಡಿಗಳು ಇರುವ ಪ್ರದೇಶಗಳು ಜನವಸತಿ ಇದ್ದುದಕ್ಕೆ ಸಾಕ್ಷ್ಯವಾಗಿ ನಿಲ್ಲುತ್ತವೆ. ಆದ್ದರಿಂದ ಈ GKVK ಇರುವ ಪ್ರದೇಶವು ಪ್ರಾಚೀನ ಕಾಲದಲ್ಲಿ ಪೂರ್ವ ಇತಿಹಾಸದ ನೆಲೆಯಾಗಿತ್ತೆಂದು ಹೇಳಬಹುದು.

ದಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ ಸಂಪಿಗೆಹಳ್ಳಿ[17]

ಭಾರತ ಉಪಖಂಡದ ಭೂಮಿಯನ್ನು ವೈಜ್ಞಾನಿಕವಾಗಿ ಮತ್ತು ಕ್ರಮಬದ್ಧವಾಗಿ ಅಳೆಯುವುದರ ಜೊತೆಗೆ ನಕ್ಷೆಯನ್ನು ಬಿಡಿಸುವ ದೃಷ್ಟಿಯಿಂದ ನಡೆದ ಮಹತ್ವಾಕಾಂಕ್ಷಿ ಯೋಜನೆಯೇ ದಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ. ಈ ಸರ್ವೆ ಯೋಜನೆಯು ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕಾಲಘಟ್ಟದಲ್ಲಿ ಅಂದರೆ, 1800ರಲ್ಲಿ ಬ್ರಿಟಿಷ್ ಸೇನೆಯ **ಲೆಫ್ಟಿನೆಂಟ್ ಕರ್ನಲ್ ಲ್ಯಾಂಬ್ಟನ್ ನೇತೃತ್ವದಲ್ಲಿ** ಪ್ರಾರಂಭವಾಗುತ್ತದೆ.

ಈ ಲ್ಯಾಂಬ್ಟನ್ ಒಬ್ಬ ಸೈನ್ಯಾಧಿಕಾರಿ ಮಾತ್ರವಲ್ಲದೇ ಒಬ್ಬ ದೂರದೃಷ್ಟಿಯುಳ್ಳ ನುರಿತ ಸರ್ವೆಯರ್ ಆಗಿದ್ದನು.

17 Namma Bengaluru's Connections With The Mapping of India & Determining The Shape of EarthTalk atBangalore International Center (a TERI Initiative) on 13-May-2016 by Udaya Kumar P L https://issuu.com/udayakumarp.l/docs/bangalores_connections_with_gts_of_




ಸಂಪಿಗೆಹಳ್ಳಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ ಬೇಸ್‌ಲೈನ್ ಪಾಯಿಂಟ್
(ಚಿತ್ರದಲ್ಲಿ ಮಧುಸೂದನ ಎಂ.ಎನ್.)

ಈ ಸರ್ವೆಯ ಮೂಲ ಉದ್ದೇಶ ಭಾರತದಲ್ಲಿ ಬ್ರಿಟಿಷರಿಗೆ ಯುದ್ಧಗಳ ಸಂದರ್ಭದಲ್ಲಿ ಭೌಗೋಳಿಕವಾಗಿ ಕೋಟೆ-ಕೊತ್ತಲಗಳು, ಗುಡ್ಡ-ಗಾಡುಗಳು, ನದಿ-ತೊರೆಗಳನ್ನು ಗುರುತಿಸುವಲ್ಲಿ ಆಗುತ್ತಿದ್ದ ಸಮಸ್ಯೆಗಳನ್ನು ತಪ್ಪಿಸುವುದರ ಜೊತೆಗೆ ಮುಖ್ಯವಾಗಿ ಭೂಮಿಯನ್ನು ಕ್ರಮಬದ್ಧವಾಗಿ ಅಳೆದು ಕೊಡುವುದು ಹಾಗೂ ಕ್ರಮಬದ್ಧವಾದ ತೆರಿಗೆಯನ್ನು ವಸೂಲಿ ಮಾಡುವುದಾಗಿತ್ತು. **ಈ ಯೋಜನೆಯು ಬೆಂಗಳೂರಿನಲ್ಲಿ 1800ರ ಅಕ್ಟೋಬರ್-ಡಿಸೆಂಬರ್ ತಿಂಗಳುಗಳ ನಡುವೆ ಕೃಷ್ಣರಾಜಪುರದಿಂದ ಅಗರದ ನಡುವೆ ಒಂದು ಬೇಸ್‌ಲೈನ್ ಅಳೆಯುವ ಮೂಲಕ ಪ್ರಾರಂಭವಾಗುತ್ತದೆ**. ನಂತರ ದೇಶಾದ್ಯಂತ ವಿಸ್ತರಣೆಯಾದ ಈ ಯೋಜನೆಯಿಂದ, ಇಡೀ **ದೇಶದ ನಕ್ಷೆಯನ್ನು ಬಿಡಿಸುವುದರ ಜೊತೆಗೆ ಮೌಂಟ್ ಎವರೆಸ್ಟ್‌ನ ಅಳತೆಯನ್ನು ಮಾಡಲು ಸಾಧ್ಯವಾಯಿತು** ಎಂದರೆ ಈ ಯೋಜನೆಯ ಮಹತ್ವ ತಿಳಿಯುತ್ತದೆ. ಈ ಸರ್ವೆ ಕಾರ್ಯದಲ್ಲಿ ಥಿಯೊಡೊಲೈಟ್ (theodolite) ಹಾಗೂ ಟೆಲಿಸ್ಕೋಪ್ ಪ್ರಮುಖವಾದ ಉಪಕರಣಗಳಾಗಿದ್ದವು.

ದಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆಗೂ ಸಂಪಿಗೆಹಳ್ಳಿಗೂ ಏನು ಸಂಬಂಧ, ಇಲ್ಲಿ ಸಂಪಿಗೆಹಳ್ಳಿಯ ಹೆಸರು ಏಕೆ ಬಂತು ಎಂಬ ಪ್ರಶ್ನೆ ಸಹಜವಾಗಿ ನಮ್ಮಲ್ಲಿ ಮೂಡಬಹುದು. ದಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ ನಡೆದ ಪ್ರದೇಶಗಳಲ್ಲಿ ಬೆಂಗಳೂರು ಪ್ರದೇಶವು ಸೇರಿರುವುದರ ಜೊತೆಗೆ ಇಲ್ಲಿಯೂ ಕೂಡ ಸರ್ವೆಗಾಗಿ ಕೆಲವು ಪ್ರಮುಖ ಗುರುತುಗಳನ್ನು ಮಾಡಿಕೊಂಡಿದ್ದರು. ಅಂತಹ ಗುರುತುಗಳಲ್ಲಿ **ಜಕ್ಕೂರು ಸಮೀಪದ ಸಂಪಿಗೆಹಳ್ಳಿಯ ಒಂದು ಬೃಹತ್ ಗುಡ್ಡವು ಸೇರಿತ್ತು**. ಮೊದಲೇ ತಿಳಿಸಿದಂತೆ ಸರ್ವೆ ಮಾಡಲು ಗುರುತುಗಳು ಬಹಳ ಮುಖ್ಯ. ಆದರೆ ಆ ಗುರುತುಗಳು ಎಷ್ಟೇ ದೂರದಲ್ಲಿದ್ದರೂ ಕಣ್ಣಿಗೆ ಕಾಣುವಂತಿರಬೇಕು. ಆದ್ದರಿಂದ ಟ್ರಿಗ್ನಾಮೆಟ್ರಿಕಲ್ ಸರ್ವೆಯ ಸಂದರ್ಭದಲ್ಲಿ ಇವರು ಎತ್ತರವಾದ ಬೆಟ್ಟ-ಗುಡ್ಡಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅದರಂತೆ ಸಂಪಿಗೆಹಳ್ಳಿಯ ಗುಡ್ಡವು ಸ್ವಾಭಾವಿಕವಾಗಿ ಎತ್ತರವಾದ ಪ್ರದೇಶವಾಗಿದ್ದರಿಂದ, ಇದನ್ನು ಕೂಡ ಪ್ರಮುಖ ಗುರುತನ್ನಾಗಿ ಮಾಡಿಕೊಂಡಿದ್ದರು. **ಇಂದಿಗೂ ಕೂಡ ನಾವು ಈ ಗುರುತನ್ನು ನೋಡಬಹುದಾಗಿದೆ**. ಈ ಗುಡ್ಡದ ಮೇಲೆ ಒಂದು ರೀತಿ ಸೈಜುಗಲ್ಲುಗಳಿಂದ ಮಾಡಿದ ಕೋಟೆಯ ರೀತಿಯ ರಚನೆಯಿದ್ದು, ಇದರ ನಡುವೆ ಸುಮಾರು ಆರು ಅಡಿ ಆಳವಿರುವ ವೃತ್ತಾಕಾರದ ಬಾವಿಯ ರಚನೆಯಿದೆ. ಇದರ ನಡುವೆ ಒಂದು ಲಂಬಾಕಾರದ ಕಲ್ಲನ್ನು ನಿಲ್ಲಿಸಲಾಗಿತ್ತು (ಈಗ ಇರುವುದಿಲ್ಲ). ಈ ಕಲ್ಲಿನ ಕೇಂದ್ರ ಬಿಂದುವೇ ಟ್ರಿಗ್ನಾಮೆಟ್ರಿಕಲ್ ಸರ್ವೆಯ ಕೇಂದ್ರವಾಗಿತ್ತು. ಸಂಪಿಗೆಹಳ್ಳಿಯ ಈ ಗುಡ್ಡ ಇಂದು ಕಲ್ಲು ಗಣಿಗಾರಿಕೆಯ ಕಾರಣದಿಂದಾಗಿ ಬಹುಪಾಲು ಕಣ್ಮರೆಯಾಗಿದ್ದು, **ಟ್ರಿಗ್ನಾಮೆಟ್ರಿಕಲ್ ಸರ್ವೆಯ ಗುರುತಿರುವ ಭಾಗ ಮಾತ್ರ ಉಳಿದಿರುತ್ತದೆ**. ಬೆಂಗಳೂರಿನ ಬಹುಪಾಲು ಗುಡ್ಡಗಳು ಕಲ್ಲು ಗಣಿಗಾರಿಕೆ ಮತ್ತು ನಗರೀಕರಣದ ಕಾರಣದಿಂದಾಗಿಯೇ ಇಂದು ಕಣ್ಮರೆಯಾಗುತ್ತಿದ್ದು, ಅದೇ ರೀತಿ ಸಂಪಿಗೆಹಳ್ಳಿಯ ಗುಡ್ಡವು ಏನಾದರೂ ಕಣ್ಮರೆಯಾದರೆ, ಭಾರತದ ಭೂಮಿಯನ್ನು ವೈಜ್ಞಾನಿಕವಾಗಿ ಅಳತೆ ಮಾಡಲು ಮತ್ತು ನಕ್ಷೆಯನ್ನು ರಚಿಸಲು ಪ್ರಮುಖ ಗುರುತಾಗಿದ್ದ ಐತಿಹಾಸಿಕ ಆಧಾರವೊಂದು ನಾಶವಾಗಲಿದೆ. ಆದ್ದರಿಂದ ಈ ಆಧಾರವನ್ನು ಉಳಿಸಿಕೊಳ್ಳುವುದು ಸಂಪಿಗೆಹಳ್ಳಿ ಸೇರಿದಂತೆ ಬೆಂಗಳೂರಿನ ನಾಗರೀಕರ ಕರ್ತವ್ಯವಾಗಿದೆ.



ಸಂಪಿಗೆಹಳ್ಳಿ ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ ಬೇಸ್‌ಲೈನ್ ಪಾಯಿಂಟ್
(ಚಿತ್ರದಲ್ಲಿ ಉದಯ ಕುಮಾರ್ ಪಿ.ಎಲ್. ಹಾಗೂ ಕಾಮೇಶ್ ರೆಡ್ಡಿ)



ಗ್ರೇಟ್ ಟ್ರಿಗ್ನಾಮೆಟ್ರಿಕಲ್ ಸರ್ವೆ

ಚಿತ್ರಕೃಪೆ : Survey of India, Government of India, Public domain, via Wikimedia Commons


ಐತಿಹಾಸಿಕ ಆಧಾರಗಳು

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿಗಳ ಸ್ಥಳೀಯ ಇತಿಹಾಸ ರಚನೆಯಲ್ಲಿ ಬಹುಮುಖ್ಯ ಪ್ರಾಥಮಿಕ ಆಧಾರಗಳಾದ ಶಾಸನಗಳು, ದೇವಾಲಯಗಳು, ಸ್ಮಾರಕ ಶಿಲ್ಪಗಳು ಹಾಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಮಾಹಿತಿಗಳನ್ನು ಪ್ರಮುಖವಾಗಿ ಬಳಸಿಕೊಳ್ಳುವುದರ ಜೊತೆಗೆ ಇನ್ನಿತರೆ ಪೂರಕ ಮಾಹಿತಿಗಳನ್ನು ನಂಬಲರ್ಹ ಮೂಲಗಳಿಂದ ಪಡೆದುಕೊಳ್ಳಲಾಗಿದೆ.

ಈ ಸಂಚಿಕೆಯಲ್ಲಿ ಬರುವ ಐತಿಹಾಸಿಕ ಆಧಾರಗಳನ್ನು ಕೆಳಕಂಡಂತೆ ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

ಹತ್ತು ಶಾಸನಗಳು


1) ಜಕ್ಕೂರ ಸಾ.ಶ.1342ರ ಹೊಂನಮಾರಯನಾಯ್ಕರ ದಾನ ಶಾಸನ
2) ಜಕ್ಕೂರ ಸಾ.ಶ.ಹತ್ತನೇ ಶತಮಾನದ ಪ್ರಶಸ್ತಿ ಶಾಸನ
3) ಜಕ್ಕೂರ ಸಾ.ಶ.ಹತ್ತನೇ ಶತಮಾನದ ಕಲ್ನಾಡು ಶಾಸನ
4) ಜಕ್ಕೂರ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬದ ಶಾಸನ
5) ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನ
6) ಅಲ್ಲಾಳಸಂದ್ರದ ಸಾ.ಶ.1340ರ ಕಾಮೆಯ ದಂಣ್ನಾಯಕರ ದಾನ ಶಾಸನ
7) ಅಲ್ಲಾಳಸಂದ್ರದ ಸಾ.ಶ.1080ರ ರಾಮದೇವನ ಹಂದಿಬೇಟೆ ಶಾಸನ
8) ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನ
9) ಅಗ್ರಹಾರದ ಸಾ.ಶ.1350ರ ಅರುಳಾಳ್ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧದ ಶಾಸನ
10) ಅಲ್ಲಾಳಸಂದ್ರದ ತಂತ್ರ-ಮಂತ್ರದ ಕಲ್ಲು



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರಿನ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ ಡಿಜಿಟಲ್ ಚಿತ್ರ




ಜಕ್ಕೂರಿನ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಶಾಸನದ ಡಿಜಿಟಲ್ ಚಿತ್ರ



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಶಾಸನದ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಗ್ರಹಾರದ ಸಾ.ಶ.1350ರ ಅರುಳಾಳ್ ಪೆರುಮಾಳ್ ಕಣ್ಣಪ್ಪನ ಶಾಸನದ ಡಿಜಿಟಲ್ ಚಿತ್ರ



ಅಗ್ರಹಾರದ ಸಾ.ಶ.1350ರ ಅರುಳಾಳ್ ಪೆರುಮಾಳ್ ಕಣ್ಣಪ್ಪನ ಶಾಸನದ ಚಿತ್ರ

2.ಸ್ಮಾರಕ ಶಿಲ್ಪಗಳು

1) ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲು
2) ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿಕಲ್ಲು
3) ದಾಸರಹಳ್ಳಿಯ ವೀರನಶಿಲ್ಪ ಮತ್ತು ಭಕ್ತರ ಶಿಲ್ಪಗಳು
4) ಅಗ್ರಹಾರದ ವೀರಗಲ್ಲು
5) ಅಲ್ಲಾಳಸಂದ್ರದ ಹಂದಿಬೇಟೆ ಶಾಸನ



ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲು



ದಾಸರಹಳ್ಳಿಯಲ್ಲಿನ ವೀರ ಮತ್ತು ಭಕ್ತನ ಶಿಲ್ಪ



ಅಗ್ರಹಾರದ ವೀರಗಲ್ಲು



ಅಲ್ಲಾಳಸಂದ್ರದ ತಂತ್ರ-ಮಂತ್ರದ ಕಲ್ಲು

3.ದೇವಾಲಯಗಳು

1) ಜಕ್ಕೂರಿನ ಶೈವ ದೇವಾಲಯ ಮತ್ತು ಅಲ್ಲಾಳನಾಥ ದೇವಾಲಯ
2) ದಾಸರಹಳ್ಳಿಯ ಚೌಡೇಶ್ವರಿ ದೇವಾಲಯ
3) ಭೆಂಟೆಯರಾಯ ದೇವಾಲಯ
4) ಅಗ್ರಹಾರದ ವೇಣುಗೋಪಾಲ ಸ್ವಾಮಿ ದೇವಾಲಯ

ಈ ಮೇಲಿನ ಅಂಶಗಳ ಆಧಾರಿತವಾಗಿ ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಪ್ರದೇಶದ ಸುಮಾರು ಸಾವಿರ ವರ್ಷದ ಇತಿಹಾಸವನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ.



ಅಗ್ರಹಾರದ ವೇಣುಗೋಪಾಲಸ್ವಾಮಿ ದೇವಾಲಯ



ದಾಸರಹಳ್ಳಿಯ ಚೌಡೇಶ್ವರಿ ದೇವಾಲಯ

ಹತ್ತು ಶಾಸನಗಳು

ಶಾಸನಗಳನ್ನು ಮೊದಲು ರಾಜನ ಆಜ್ಞೆಗಳನ್ನು ತಿಳಿಸಲು ಹಾಕಲಾಗುತ್ತಿತ್ತು. ನಂತರ **ಪ್ರಮುಖವಾದಂತ ವಿಷಯಗಳನ್ನು ದಾಖಲಿಸುವ** ಮತ್ತು ಅವುಗಳು ಶಾಶ್ವತವಾಗಿ ಉಳಿಯಲಿ ಎಂಬ ಕಾರಣದಿಂದಾಗಿ ಶಿಲೆಗಳ ಮೇಲೆ ಬರೆಯಲು ಪ್ರಾರಂಭಿಸಿದರು. ಶಾಸನಗಳ ಪ್ರಕಾರಗಳಲ್ಲಿ ದಾನ ನೀಡಿ ಹಾಕಿಸಿರುವ ಶಾಸನಗಳು ಹೆಚ್ಚಾಗಿವೆ. ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿಯಲ್ಲಿ ದೊರೆತಿರುವ ಶಾಸನಗಳು ಹಲವು ವಿಶೇಷತೆಗಳಿಂದ ಕೂಡಿದ್ದು, ಇವುಗಳು ದಾನ, ಪ್ರಶಸ್ತಿ, ವೀರಗಲ್ಲು ಶಾಸನ ಪ್ರಕಾರಗಳಾಗಿವೆ. ಈ ಪ್ರದೇಶದಲ್ಲಿ ದೊರೆತಿರುವ **ಸಾ.ಶ.ಹತ್ತನೇ ಶತಮಾನದಿಂದ-ಹದಿನಾರನೇ ಶತಮಾನ**ದವರೆಗಿನ ಶಾಸನಗಳಲ್ಲಿ, **ನಾಡಸೇನಾಬೋವರಿಗೆ ಗದ್ದೆ-ಬೆದ್ದಲು ನೀಡಿರುವುದು, ಯುದ್ಧ ಮಾಡಿರುವ ವಿಷಯ, ವೀರನು ಹೋರಾಟದಲ್ಲಿ ಮಡಿದಾಗ ಅವನಿಗೆ ಭೂಮಿಯನ್ನು ದಾನ ಮಾಡಿ ಕಲ್ನಾಟು ಹಾಕಿಸಿರುವುದು, ಅಲ್ಲಾಳನಾಥ ದೇವರಿಗೆ ಗರುಡಕಂಬವನ್ನು ಹಾಕಿಸಿರುವುದು ಮತ್ತು ಅಲ್ಲಾಳಸಂದ್ರ ಗ್ರಾಮವನ್ನು ದಾನ ನೀಡಿರುವುದು, ಹಂದಿಬೇಟೆಯ ಹೋರಾಟದಲ್ಲಿ ಗಾಯಗೊಂಡು ಮರಣವನ್ನು ಹೊಂದಿರುವುದನ್ನು** ದಾಖಲಿಸಿರುವುದು, **ಮರಣ ಹೊಂದಿರುವ ವ್ಯಕ್ತಿಗೆ ಶ್ರಾದ್ಧ ಮಾಡಿ ಭೂದಾನ ಮಾಡಿ ಅಗ್ರಹಾರವನ್ನು ನಿರ್ಮಿಸಿರುವುದನ್ನು** ತಿಳಿಸಿರುವುದು, **ಭೆಂಟೆಯರಾಯನ ದೇವರ ಅಂಗರಂಗವೈಭೋಗ ಅಮೃತಪಡಿಗೆ ದಾನ ನೀಡಿರುವುದನ್ನು** ವಿಶೇಷವಾಗಿ ದಾಖಲಿಸುತ್ತವೆ. ಇಂತಹ ವಿಶೇಷತೆಗಳಿಂದ ಕೂಡಿರುವ ಶಾಸನಗಳ ಸಮಗ್ರವಾದ ನಿರೂಪಣೆಯನ್ನು ಮುಂದೆ ಸವಿಸ್ತಾರವಾಗಿ ವಿವರಿಸಲಾಗಿದೆ.

1. ಜಕ್ಕೂರ ಸಾ.ಶ.1342ರ ಹೊಂನಮಾರಯನಾಯ್ಕರ ದಾನ ಶಾಸನ

ಜಕ್ಕೂರು ಗ್ರಾಮದ ಪ್ರಾಚೀನತೆಯನ್ನು ತಿಳಿಸುವ ಐತಿಹಾಸಿಕ ಆಧಾರಗಳಲ್ಲಿ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನವು ಬಹಳ ಪ್ರಮುಖವಾದುದು. ಈ ಶಾಸನವು ಸುಮಾರು 700 ವರ್ಷಗಳ ಹಿಂದಿನ ಜಕ್ಕೂರು ಗ್ರಾಮದ ಸಂಕ್ಷಿಪ್ತ ಇತಿಹಾಸವನ್ನು ತಿಳಿಸುವುದರ ಜೊತೆಗೆ ಕೆಲವು ಐತಿಹಾಸಿಕ ವ್ಯಕ್ತಿಗಳು ಮತ್ತು ಅಂದಿನ ಆಡಳಿತ ವಿಭಾಗಗಳನ್ನು ಪರಿಚಯ ಮಾಡಿಕೊಡುತ್ತದೆ.

ಶಾಸನ ಶೋಧ

ಈ ಶಾಸನವು 1905ರಲ್ಲಿ **ಬಿ.ಎಲ್.ರೈಸ್** ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ-21ರಲ್ಲಿ ಜಕ್ಕೂರು ಗ್ರಾಮದ "ಮಕ್ಕರಿಗನ ಹೊಲದಲ್ಲಿ ನೆಟ್ಟಿರುವ ಕಲ್ಲು" ಎಂದಿದೆ. ಈ ಶಾಸನವನ್ನು ದಾಖಲಿಸಿದ **115 ವರ್ಷಗಳಲ್ಲಿ, ಭೌತಿಕವಾಗಿ ನೋಡಿದವರ ಸಂಖ್ಯೆ ಬೆರಳೆಣಿಕೆಯಷ್ಟಿರಬಹುದು**. ಆದರೆ ಇತ್ತೀಚೆಗೆ ಕೆ.ಆರ್.ನರಸಿಂಹನ್, ಧನಪಾಲ್ ಮಂಚೆನಹಳ್ಳಿ, ಪಿ.ಎಲ್.ಉದಯ ಕುಮಾರ್ ಮತ್ತು ಆರ್.ಯುವರಾಜು ಅವರುಗಳು ಶಾಸನವನ್ನು ನೋಡಿ, ಈ ಶಾಸನದ ಬಗ್ಗೆ ಸ್ಥಳೀಯರಲ್ಲಿ ಜಾಗೃತಿಯನ್ನು ಮೂಡಿಸಿರುತ್ತಾರೆ.

2017ರಲ್ಲಿ ನರಸಿಂಹನ್ ಅವರು 'ಯಲಹಂಕ ನಾಡು ಇತಿಹಾಸದ ನೋಟಗಳು - ಭಾಗ 1' ಪುಸ್ತಕ ರಚಿಸಲು ಯಲಹಂಕದ ಉಲ್ಲೇಖ ಯಾವ ಯಾವ ಶಾಸನಗಳಲ್ಲಿ



ಹೊಂನಮಾರಯನಾಯ್ಕರ ಶಾಸನವು ಮೊದಲು ಇದ್ದ ಸ್ಥಳದ ಚಿತ್ರ. ಚಿತ್ರಕೃಪೆ - ಧನಪಾಲ್ ಮಂಚೇನಹಳ್ಳಿ

ಇದೆ ಎಂಬುದನ್ನು ಹುಡುಕುತ್ತಿರುವ ಸಂದರ್ಭದಲ್ಲಿ, ಜಕ್ಕೂರಿನ ಈ ಶಾಸನದಲ್ಲಿ ಯಲಹಂಕದ ಉಲ್ಲೇಖ ಇರುವುದನ್ನು ಗಮನಿಸುತ್ತಾರೆ. ಈ ಶಾಸನವನ್ನು ನೋಡುವ ದೃಷ್ಟಿಯಿಂದ ಧನಪಾಲ್ ಅವರ ಜೊತೆ ಜಕ್ಕೂರಿಗೆ ಕ್ಷೇತ್ರಕಾರ್ಯಕ್ಕೆ ಬಂದ ಸಂದರ್ಭದಲ್ಲಿ ಶ್ರೀಕಂಠಪ್ಪ, ಶ್ರೀನಿವಾಸ್ ಮೂರ್ತಿ, ರಮೇಶ್, ಮುನಿಗೌಡರು ಕೆ.ವಿ ಭೈರೇಗೌಡ ಕಲಾಮಂದಿರದಲ್ಲಿ ಕುಳಿತಿರುತ್ತಾರೆ. ಆಗ ನರಸಿಂಹನ್ ಅವರು ಇಲ್ಲಿ ಒಂದು ಶಾಸನ ಇರಬೇಕಲ್ವ? ಎಂದು ಕೇಳಿದಾಗ ಮುನಿಗೌಡರು ನಮ್ಮ ಮನೆಯ ಹತ್ತಿರ ಇದೆ ಎಂದು ಹೇಳುತ್ತಾರೆ. ಹಾಗೂ ಎಲ್ಲರೂ ಆ ಶಾಸನದ ಬಳಿ ಹೋದಾಗ ಮುನಿಗೌಡ ತಂದೆ ಆ ಕಲ್ಲು ಹತ್ತಿರ ಹೋಗಬೇಡಿ, **ಅಲ್ಲಿ ನಿಧಿಯಿದೆಯಂತೆ** ಎಂದು ಹೇಳಿದಾಗ ಧನಪಾಲ್ ಮತ್ತು ನರಸಿಂಹನ್ ಅವರು ಆ ಶಾಸನದ ಮಹತ್ವವನ್ನು ತಿಳಿಸಿ, ಶಾಸನ ಕಲ್ಲಿನ ಅಕ್ಷರಗಳ ಮೇಲೆ ಗೋಧಿ ಹಿಟ್ಟನ್ನು ಹಾಕಿ, ಶಾಸನದ ಪಾಠವನ್ನು ಓದುತ್ತಾರೆ. ಹಾಗೂ ಈ ಶಾಸನ ಇಲ್ಲೇ ಇದ್ದರೆ ಹಾಳಾಗುತ್ತದೆ, ಆದ್ದರಿಂದ ಹೇಗಾದರೂ ಮಾಡಿ ಒಂದು ಸುರಕ್ಷಿತ ಸ್ಥಳಕ್ಕೆ ಅಂದರೆ ರಂಗಮಂದಿರದ ಆವರಣಕ್ಕೆ ಸಾಗಿಸಿದರೆ ಒಳ್ಳೆಯದು ಎಂದು ಹೇಳುತ್ತಾರೆ. ಇದಾದ 15 ದಿನಗಳ ಬಳಿಕ ಗ್ರಾಮಸ್ಥರಾದ ಎಸ್.ನಾಗರಾಜ್, ರವಿಗೌಡ, ಶ್ರೀಕಂಠಪ್ಪ, ಶ್ರೀನಿವಾಸ್, ರಮೇಶ್, ಮುನಿಗೌಡ ಮುಂತಾದವರು ನರಸಿಂಹನ್ ಮತ್ತು ಧನಪಾಲ್ ಅವರ ಮಾರ್ಗದರ್ಶನದಲ್ಲಿ ಗ್ರಾಮದ ಜಕ್ಕೂರಿನ **ಕೆ.ವಿ.ಭೈರೇಗೌಡ ಕಲಾಮಂದಿರದ (13°04'44.1"N, 77°36'26.1"E) ಆವರಣದಲ್ಲಿ ಈ ಶಾಸನವನ್ನು ಸಂರಕ್ಷಿಸಿರುತ್ತಾರೆ**.

ಕಾಲ

ಈ ಶಾಸನವು ಭಾರತೀಯ ಕಾಲಮಾನದ ಪ್ರಕಾರ **ಶಕಾಬ್ದ ೧೨೬೫, ಚಿತ್ರಭಾನು ಸಂವತ್ಸರ, ಆಶ್ವೀಜ, ಶು ೫ ಬ್ರ (ಬೃಹಸ್ಪತಿವಾರ-ಗುರುವಾರ)** ಎಂದಿದ್ದು, ಜೂಲಿಯನ್ ಕಾಲಮಾನದ ಪ್ರಕಾರ **ಸಾ.ಶ.05-ಅಕ್ಟೋಬರ್-1342 ಶನಿವಾರ** ಕ್ಕೆ ಸರಿ ಹೊಂದುತ್ತದೆ.

ಶಾಸನ ಕಲ್ಲಿನ ಲಕ್ಷಣ

ಈ ಶಾಸನವನ್ನು **ಸ್ಥಳೀಯವಾಗಿ ದೊರೆಯುವ ಗ್ರಾನೈಟ್** ಕಲ್ಲನ್ನು ಬಳಸಿ ಕೆತ್ತಲಾಗಿದ್ದು, ಬೆಂಗಳೂರು ಪ್ರದೇಶದಲ್ಲಿ ದೊರೆಯುವ ಬಹುಪಾಲು ಶಾಸನಗಳು ಗ್ರಾನೈಟ್ ಕಲ್ಲಿನ ಮೇಲೆ ಬರೆದಿರುವುದೇ ಆಗಿದೆ. ಈ ಶಾಸನ ಕಲ್ಲು 143 ಸೆಂ.ಮೀ ಎತ್ತರ, 72 ಸೆಂ.ಮೀ ಅಗಲ, 17 ಸೆಂ.ಮೀ. ದಪ್ಪವಿದೆ. ಕಲ್ಲಿನ ಮುಂಭಾಗ ಮತ್ತು ಹಿಂಭಾಗ ಎರಡನ್ನೂ ಸೇರಿಸಿ ಒಟ್ಟು 22 ಸಾಲುಗಳಲ್ಲಿ ಶಾಸನವನ್ನು ಕೆತ್ತಲಾಗಿದೆ. ಕಲ್ಲಿನ ಮುಂಭಾಗವನ್ನು ನಯಗೊಳಿಸಿ 14 ಸಾಲುಗಳಲ್ಲಿ ಅಕ್ಷರಗಳನ್ನು ಕೆತ್ತಿದ್ದರೆ, ಹಿಂಭಾಗದಲ್ಲಿ 8 ಸಾಲುಗಳಲ್ಲಿ ಅಕ್ಷರಗಳನ್ನು ಕೆತ್ತಲಾಗಿದೆ. ಹಾಗೂ ಈ ಶಾಸನವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿ ಮೂಡಿ ಬಂದಿರುತ್ತದೆ.

ಕಲ್ಲಿನ ಮೇಲ್ಭಾಗದಲ್ಲಿ **ಸೂರ್ಯ ಚಂದ್ರರ** ಮಧ್ಯೆ **ಬ್ರಾಹ್ಮಿ ಲಿಪಿಯ 'ಓ' ಅಕ್ಷರವನ್ನು ಹೋಲುವಂತಹ ಚಿನ್ಹೆ**ಯಿದೆ. ಸೂರ್ಯ ಮತ್ತು ಚಂದ್ರರು ಸೃಷ್ಟಿಯಲ್ಲಿ ಅಳಿವಿಲ್ಲದವರು. ಹಾಗಾಗಿ ಸೂರ್ಯ ಮತ್ತು ಚಂದ್ರ ಇರುವವರೆಗೂ ಶಾಸನ, ನೀಡುವ ದಾನ ಶಾಶ್ವತವಾಗಿರಬೇಕೆಂಬ ಆಶಯವನ್ನಿಟ್ಟುಕೊಂಡು ಈ ಚಿಹ್ನೆಗಳನ್ನು ಕೆತ್ತಲಾಗಿರುತ್ತದೆ. **ಮಧ್ಯದಲ್ಲಿ ಬ್ರಾಹ್ಮಿ ಲಿಪಿ 'ಓ' ಅಕ್ಷರವನ್ನು ಹೋಲುವ ರೇಖಾಚಿತ್ರವಿದ್ದು, ಇದು 'ಓಂ' ಎಂಬ ಅರ್ಥವನ್ನು ಸೂಚಿಸುತ್ತದೆ**[1].

ಬ್ರಾಹ್ಮಿ ಲಿಪಿಯ ಓ ಅಕ್ಷರವನ್ನು ಹೋಲುವ ಚಿನ್ಹೆಗಳು ಜಕ್ಕೂರ ಶಾಸನವಲ್ಲದೆ ಬೆಂಗಳೂರು ಪ್ರದೇಶದ **ಗಾಣಿಗರಹಳ್ಳಿ**, ಹಾಗೂ **ಕಟಿಗೇನಹಳ್ಳಿ** ಶಾಸನದಲ್ಲಿರುವುದನ್ನು ಕಾಣಬಹುದು.

1 Savita Sharma, Early Indian Symbols, 1990, Page 49


ಬ್ರಾಹ್ಮಿ ಲಿಪಿಯ ಓ ಅಕ್ಷರವನ್ನು ಹೋಲುವ ಅಕ್ಷರವು ಓಂ ಎಂಬರ್ಥವನ್ನು ಸೂಚಿಸುವ ಡಿಜಿಟಲ್ ಚಿತ್ರ

ಜಕ್ಕೂರ ಸಾ.ಶ.1342ರ ಶಾಸನ ಕಲ್ಲಿನ ಮೇಲಿರುವ ಓಂ ಅಕ್ಷರದ ಡಿಜಿಟಲ್ ಚಿತ್ರ	ಗಾಣಿಗರಹಳ್ಳಿಯ ಸಾ.ಶ.1342ರ ಶಾಸನ ಕಲ್ಲಿನ ಮೇಲಿರುವ ಓಂ ಅಕ್ಷರದ ಡಿಜಿಟಲ್ ಚಿತ್ರ	ಕಟಿಗೇನಹಳ್ಳಿಯ ಸಾ.ಶ.1348ರ ಶಾಸನ ಕಲ್ಲಿನ ಮೇಲಿರುವ ಓಂ ಅಕ್ಷರದ ಡಿಜಿಟಲ್ ಚಿತ್ರ
		

ಶಾಸನ ಪಾಠ

	ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-09, ಬೆಂಗಳೂರು ತಾಲೂಕು, ಶಾಸನ ಸಂಖ್ಯೆ - 21	ನಮ್ಮ ತಂಡದ ಪಾಠ
1	ಸ್ವಸ್ತಿ ಶ್ರೀ ಶಕಾಬ್ದ ೧೨೬೫ ನೆಯ	ಸ್ವಸ್ತಿ ಶ್ರೀ ಶಕಾಬ್ದ ೧೨೬೫ ನೆಯ
2	ಚಿತ್ರಭಾನು ಸಂ| ಆಶ್ವೀಜ ಶು೫	ಚಿತ್ರಭಾನು ಸಂ| ಆಶ್ವೀಜ ಶು೫
3	ಬ್ರಿ ಶ್ರೀ ಮತು ಪ್ರತಾಪ ಚಕ್ರವ	**ಬ್ರ** | ಶ್ರೀ ಮತು ಪ್ರತಾಪ **ಚ್ಚ**ಕ್ರವ
4	ರ್ತ್ತಿ ಶ್ರೀ ಹೊಯ್ಸಳ ವೀರಬಲ್ಲಾಳ	ರ್ತ್ತಿ ಶ್ರೀ ಹೊಯ್ಸಳ ವೀರಬಲ್ಲಾಳ
5	ದೇವರಸರು ಉಣ್ಣಾಮಲೆ ಪಟ್ಟಣ	ದೇವರಸರು ಉಣ್ಣಾಮಲೆ ಪಟ್ಟಣ
6	ದಲು ಪ್ರಿಥ್ವೀರಾಜ್ಯಂಗೆಯ್ಯುತ್ತಿರ	**ದಂ ಪೃಥ್ವಿ**ರಾಜ್ಯಂಗೆಯ್ಯುತ್ತಿರ
7	ಲು ಶ್ರೀ ಮನುಮಹಾ ಎಲಹಕ್ಕನಾಡ	ಲು ಶ್ರೀ ಮನುಮಹಾ ಎಲಹಕ್ಕನಾಡ
8	ಸಮಸ್ತ ಪ್ರಜೆಗವುಂಡುಗಳೂ .	ಸಮಸ್ತ ಪ್ರಜೆಗವುಂಡುಗಳೂ
9	ಮನುಮಹಾ ಸಾವಂತಾಧಿಪ	ಮನುಮಹಾ ಸಾವಂತಾಧಿಪ
10	ತಿ ಮೀಸೆಯರ ಗಂಡ ಚಿಕ್ಕಬಯಿ	ತಿ ಮೀಸೆಯರ ಗಂಡ ಚಿಕ್ಕಬಯಿ
11	ರಯನಾಯ್ಕನ ಮಗ ಹೊನ್ನಮಾರಯ	ರಯನಾಯ್ಕನ ಮಗ **ಹೊಂನ**ಮಾರಯ
12	ನಾಯ್ಕನೂ ನಾಡಸೇನಬೊವ ಅಲಾಳರಿಗೆ	ನಾಯ್ಕನೂ ನಾಡಸೇನಬೊವ ಅ**ಲ್ಲಾ**ಳರಿಗೆ
13	ಶಿಲಾಶಾಸನವ ಮಾಡಿಕೊಟ್ಟ ಕ್ರಮ	ಶಿಲಾಶಾಸನವ ಮಾಡಿಕೊಟ್ಟ ಕ್ರಮ
14	ವೆಂತೆಂದಡೆ ಯೀ ನಾಡೊಳಗಣ	ವೆಂತೆಂದಡೆ ಯಿ ನಾಡೊಳಗಣ
	ಹಿಂಭಾಗ	
15	ಜಕ್ಕೂರ ಗದ್ದೆ ಬೆದ್ದಲು ..	ಜಕ್ಕೂರ ಗದ್ದೆ ಬೆದ್ದಲು ..
16	ಪಗೆಮಾಳ ವೊಳಗಾದ ಚ	ಪಗೆಮಾಳ ವೊಳಗಾದ ಚ
17	ತುಸ್ಸೀಮೆ ಏನುಳ್ಳದನು ಸ	ತು **ಸೀ**ಮೆ ಏನುಳ್ಳದ**ನೂ** ಸ
18	ರ್ವ್ವಮಾನ್ಯದ ಕೊಡಗಿಯಾ	**ರ್ವ**ಮಾನ್ಯದ ಕೊಡಗಿಯಾ
19	ಗಿ ಚಂದ್ರಾದಿತ್ಯರುಳ್ಳಂ	ಗಿ ಚಂದ್ರಾದಿತ್ಯರುಳ್ಳಂ**ನ**
20	ಬರಸಲುವಂತಾಗಿ ಶಿಲಾ	ಬರ ಸಲುವಂತಾಗಿ ಶಿಲಾ
21	ಶಾಸನವ ಮಾಡಿಕೊಟ್ಟರು	ಶಾಸನವ ಮಾಡಿಕೊ**ಟ**ರು
22	ಮಂಗಳ ಮಹಾಶ್ರೀ	ಮಂಗಳ ಮ**ಹ**ಶ್ರೀ

ಮೇಲಿನ ಶಾಸನ ಪಾಠದ ಪ್ರತೀ ಸಾಲಿನಲ್ಲಿ ನೀಡಿರುವ ಅಂಕಿ-ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ. ಓದಲು ಅನುಕೂಲವಾಗಲೆಂದು 1,2,3,4 ...22 ಹೀಗೆ ಸಾಲುಗಳಿಗೆ ಸಂಖ್ಯೆ ಕೊಡಲಾಗಿದೆ. ಹಾಗೂ ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಜಾಗ ಬಿಟ್ಟು ಬರೆಯಲಾಗಿದೆ. ಈ ಶಾಸನವನ್ನು 3ಡಿ ಸ್ಕ್ಯಾನಿಂಗ್ ಮುಖಾಂತರದ ಮರು ಓದಿನಿಂದಾಗಿ 15 ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದರೆ ಶಾಸನದ ಪಾಠ ಮತ್ತು ಅರ್ಥದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಮೂಲ ಪಾಠದಲ್ಲಿ ವ್ಯತ್ಯಾಸವಿರುವುದನ್ನು ದಪ್ಪ (BOLD) ಅಕ್ಷರಗಳಲ್ಲಿ ನೀಡಲಾಗಿದೆ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರಿನ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ ಮುಂಭಾಗದ ಡಿಜಿಟಲ್ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರಿನ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ ಹಿಂಭಾಗದ ಡಿಜಿಟಲ್ ಚಿತ್ರ

ಸಾರಾಂಶ

ಮಹಾಸಾಮಂತ ಚಿಕ್ಕಬಯಿರಯನಾಯ್ಕನ ಮಗನಾದ ಹೊಂನಮಾರಯನಾಯ್ಕನು ನಾಡಸೇನಬೋವನಾದ ಅಲ್ಲಾಳರಿಗೆ ಜಕ್ಕೂರು ಗ್ರಾಮಕ್ಕೆ ಸೇರಿದ ಚತುಸ್ಸೀಮೆ ಒಳಗಿನ ಗದ್ದೆ, ಬೆದ್ದಲನ್ನು ತೆರಿಗೆಯಿಂದ ವಿನಾಯಿತಿ ನೀಡಿ ದಾನ ನೀಡಿದ್ದು, ಇದು ಸೂರ್ಯ ಚಂದ್ರರು ಇರುವವರೆಗೂ ಪಾಲನೆಯಾಗಬೇಕು ಎಂದಿದೆ.

ಈ ಶಾಸನವನ್ನು ಹಾಕಿಸಿದ ಸಮಯದಲ್ಲಿ ಜಕ್ಕೂರು ಗ್ರಾಮವು ಹೊಯ್ಸಳ ರಾಜ್ಯಕ್ಕೆ ಸೇರಿದ್ದು, ರಾಜನಾದ ವೀರಬಲ್ಲಾಳನು ಉಣ್ಣಾಮಲೆ ಪಟ್ಟಣವನ್ನು (ಇಂದಿನ ತಿರುವಣ್ಣಾಮಲೈ) ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿರುತ್ತಾನೆ.

ಶಾಸನದ ಅನುವಾದ

ಸ್ವಸ್ತಿ ಶ್ರೀ - ಶಾಸನದ ಆರಂಭದಲ್ಲಿ ಸ್ವಸ್ತಿಶ್ರೀ ಎಂದಿರುವುದು ಶುಭಸೂಚಕ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಅರ್ಥವನ್ನು ನೀಡುವ ಪದ.

ಶಕಾಬ್ದ - ಶಕವರ್ಷವನ್ನು ತಿಳಿಸುವ ಕಾಲ. ಶಕ ವರ್ಷವು ಸುಮಾರು ಸಾ.ಶ.78ರಲ್ಲಿ ಶುರುವಾಗಿದೆ.

೧೨೬೪ ನೆಯ - ಶಾಸನ ಹಾಕಿಸಿರುವ ವರ್ಷ. ಈ ಶಾಸನದಲ್ಲಿನ ಕಾಲ ಸಾ.ಶ.1342ಕ್ಕೆ ಸರಿ ಹೊಂದುತ್ತದೆ.

ಚಿತ್ರಭಾನು ಸಂ - ಭಾರತೀಯ ಕಾಲಮಾನದ ಪ್ರಕಾರ 60 ಸಂವತ್ಸರಗಳಿದ್ದು ಅದರಲ್ಲಿ ಚಿತ್ರಭಾನು ಸಂವತ್ಸರವು ಒಂದು. ಸಂ| ಎಂದರೆ ಸಂವತ್ಸರ ಎಂದರ್ಥ.

ಆಶ್ವೀಜ - ಶಾಸನ ಹಾಕಿಸಿರುವ ತಿಂಗಳು ಅಂದರೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳು.

ಶು೫ - ಶು ಎಂದರೆ ಶುಕ್ಲ ಪಕ್ಷವನ್ನು ಸೂಚಿಸುತ್ತದೆ ಹಾಗೂ ಐದು ಎಂದರೆ ಶುಕ್ಲ ಪಕ್ಷದ ಐದನೇ (ಪಂಚಮಿ) ತಿಥಿ. ಒಂದು ಮಾಸದಲ್ಲಿ ಶುಕ್ಲ/ಶುದ್ಧ ಹಾಗೂ ಕೃಷ್ಣ/ಬಹುಳ ಎಂಬ ಎರಡು ಪಕ್ಷಗಳಿರುತ್ತವೆ. ಶುಕ್ಲ ಪಕ್ಷ ಎಂದರೆ ಅಮಾವಾಸ್ಯೆಯಿಂದ ಪೂರ್ಣಿಮೆಯವರೆಗೆ. ಬಹುಳ/ಕೃಷ್ಣ ಪಕ್ಷ ಎಂದರೆ ಪೂರ್ಣಿಮೆಯಿಂದ ಅಮಾವಾಸ್ಯೆಯವರೆಗೆ.

ಬ್ರ | - ಬೃ ಎಂದರೆ ಬ್ರಹಸ್ಪತಿವಾರ ಎಂದರ್ಥ. ಅಂದರೆ ಗುರುವಾರ.

ಶ್ರೀ ಮತು ಪ್ರತಾಪ ಚ್ಚಕ್ರವರ್ತ್ತಿ - ಪರಾಕ್ರಮಿಯಾದ ಅರಸ.

ಶ್ರೀ ಹೊಯ್ಸಳ - ರಾಜಮನೆತನದ ಹೆಸರು (ಹೊಯ್ಸಳ ರಾಜವಂಶ).

ವೀರಬಲ್ಲಾಳದೇವರಸರು - ಶಾಸನ ಹಾಕಿಸಿದಾಗ ಆಳ್ವಿಕೆ ಮಾಡುತ್ತಿದ್ದ ರಾಜ. ಹೊಯ್ಸಳ ರಾಜವಂಶದ ಮೂರನೇ ನರಸಿಂಹನ ಮಗನಾದ ಮೂರನೇ ವೀರಬಲ್ಲಾಳನು ಸಾ.ಶ. 1291-1342ರವರೆಗೆ ಆಳ್ವಿಕೆ ಮಾಡಿದ ದೊರೆ.

ಉಣ್ಣಾಮಲೆ ಪಟ್ಟಣ - ಈ ಶಾಸನ ಹಾಕಿಸಿದ ಕಾಲದಲ್ಲಿ ಉಣ್ಣಾಮಲೆ ಪಟ್ಟಣವು ಹೊಯ್ಸಳರ ರಾಜಧಾನಿಯಾಗಿರುತ್ತದೆ. ಪ್ರಸ್ತುತ ಉಣ್ಣಾಮಲೆ ಪಟ್ಟಣವು ತಮಿಳುನಾಡಿನಲ್ಲಿರುವ ಇವತ್ತಿನ ತಿರುವಣ್ಣಾಮಲೈ ಪಟ್ಟಣವಾಗಿದೆ.

ಪ್ರಥ್ವಿರಾಜ್ಯಂಗೆಯ್ಯುತ್ತಿರಲು - ಸಾಮ್ರಾಜ್ಯವನ್ನು ಆಳುತ್ತಿರುವಾಗ.

ಶ್ರೀ ಮನುಮಹಾ ಎಲಹ್ಕನಾಡ - ಇಂದಿನ ಎಲಹಂಕವು ಸಾ.ಶ.1342ರಲ್ಲಿ ಒಂದು ಆಡಳಿತ ಘಟಕವಾದ ನಾಡಾಗಿತ್ತು.

ಸಮಸ್ತ - ಎಲ್ಲಾ

ಶಾಸನದಲ್ಲಿರುವ 'ಎಲಹ್ಕ'



ಪ್ರಜೆಗವುಂಡುಗಳೂ - ಆಡಳಿತದ ಮುಖ್ಯಸ್ಥರು / ವಿವಿಧ ಗ್ರಾಮಗಳ ಮುಖ್ಯಸ್ಥರು.

ಮನುಮಹಾ ಸಾವಂತಾಧಿಪತಿ - ಸಾಮಂತ ಅಧಿಕಾರಿಗಳಲ್ಲಿ ಶ್ರೇಷ್ಟನಾದವನು

ಮೀಸೆಯರ ಗಂಡ - ಚಿಕ್ಕಬಯಿರಯನಾಯ್ಕನ ಬಿರುದು. ಅಂದರೆ ಮೀಸೆಯನ್ನು ತಿರುವಿಕೊಂಡು ಮೆರೆಯುವ ಶತ್ರುಗಳನ್ನು ಮಟ್ಟಹಾಕುವವನು ಎಂದರ್ಥ.

ಚಿಕ್ಕಬಯಿರಯನಾಯ್ಕನ ಮಗ - ಇವನು ವೀರಬಲ್ಲಾಳನ ಕಾಲದಲ್ಲಿ ಪ್ರಸಿದ್ಧ ಆಡಳಿತ ಅಧಿಕಾರಿ.

ಹೊಂನಮಾರಯನಾಯ್ಕನೂ - ದಾನ ನೀಡಿರುವ ವ್ಯಕ್ತಿಯ ಹೆಸರು ಚಿಕ್ಕಬಯಿರಯನಾಯ್ಕನ ಮಗ

ನಾಡಸೇನಬೊವ - ಹಳ್ಳಿಗಳಲ್ಲಿ ತೆರಿಗೆ ವಸೂಲಿ ಮಾಡುವ ಕಾರ್ಯ ಮಾಡುತ್ತಿದ್ದವನು.

ಅಲ್ಲಾಳರಿಗೆ - ಹಳ್ಳಿಗಳಲ್ಲಿ ತೆರಿಗೆ ವಸೂಲಿ ಮಾಡುವ ಕಾರ್ಯ ಮಾಡುತ್ತಿದ್ದ ಅಧಿಕಾರಿಯ ಹೆಸರು.


ಶಿಲಾಶಾಸನವ ಮಾಡಿಕೊಟ್ಟ - ದಾನ ನೀಡಿರುವ ಮಾಹಿತಿಯನ್ನು ಕಲ್ಲಿನ ಮೇಲೆ ಕೊರೆದು ನೀಡಿರುವುದು.

ಕ್ರಮವೆಂತೆಂದಡೆ - ಕ್ರಮ ಯಾವುದೆಂದರೆ/ ಕ್ರಮವೆಂದರೆ

ಯಿ ನಾಡೊಳಗಣ - ಈ ನಾಡಿನೊಳಗೆ ಇರುವಂತಹ

ಜಕ್ಕೂರ - ಇಂದಿನ ಜಕ್ಕೂರು ಬಡಾವಣೆ

ಶಾಸನದಲ್ಲಿರುವ 'ಜಕ್ಕೂರ'



ಗದ್ದೆ - ನೀರಾವರಿ ಭೂಮಿ.
ಬೆದ್ದಲು - ಮಳೆಯಾಶ್ರಿತ ಭೂಮಿ/ ಮಳೆಯ ನೀರಿನಿಂದ ವ್ಯವಸಾಯ ಮಾಡುವ ಭೂಮಿ.
ಪಗೆಮಾಳ - ಪಾಳು ಭೂಮಿ, ಗೋಮಾಳ (?)
ವೊಳಗಾದ - ಒಳಗೊಳ್ಳುವಂತಹ/ಒಳಗಾದ
ಚತುಸ್ಸೀಮೆ - ನಾಲ್ಕು ದಿಕ್ಕಿನ ಮೇರೆ/ಎಲ್ಲೆ/ಗಡಿ
ಏನುಳ್ಳದನೂ - ಏನಿದ್ದರೂ

ಶಾಸನದಲ್ಲಿರುವ 'ಏನುಳ್ಳ'



ಸರ್ವಮಾನ್ಯದ - ಎಲ್ಲಾ ವಿಧವಾದ ತೆರಿಗೆಗಳಿಂದ ಮುಕ್ತವಾಗಿ
ಕೊಡಗಿಯಾಗಿ - ಉಂಬಳಿಯಾಗಿ, ದಾನವಾಗಿ
ಚಂದ್ರಾದಿತ್ಯರುಳ್ಳಂನಬರ - ಚಂದ್ರ ಸೂರ್ಯರು ಇರುವವರೆಗೂ/ಶಾಶ್ವತವಾಗಿ
ಸಲುವಂತಾಗಿ - ಸಲ್ಲಬೇಕೆಂದು
ಶಿಲಾ ಶಾಸನವ - ಕಲ್ಲಿನ ಮೇಲೆ ಮಾಹಿತಿ, ಕಲ್ಲನ್ನು ಶಾಸನ ಕಲ್ಲು ಎನ್ನುತ್ತಾರೆ.
ಮಾಡಿಕೊಟರು - ಮಾಹಿತಿಯನ್ನು ಕಲ್ಲಿನ ಮೇಲೆ ಕೆತ್ತಿ ಕೊಟ್ಟರು.
ಮಂಗಳ ಮಹಶ್ರೀ - ಮಂಗಳವಾಗಲಿ/ ಶುಭವಾಗಲಿ

ಶಾಸನದ ವಿವರಣೆ

ಜಕ್ಕೂರಿನ ಈ ಶಾಸನವು ಒಂದು ದಾನ ಶಾಸನವಾಗಿದ್ದು, ಬಹುತೇಕ ಶಾಸನಗಳಲ್ಲಿ ಕಾಣುವ ಸೂರ್ಯ, ಚಂದ್ರರನ್ನು ಇಲ್ಲಿಯೂ ಬಿಡಿಸಲಾಗಿದ್ದು, ಇದು ಸೂರ್ಯಚಂದ್ರರು ಇರುವವರೆಗೂ ಇರುತ್ತದೆ ಎಂಬ ಅರ್ಥಕೊಡುತ್ತದೆ. ಶಾಸನ ಪಾಠದ ಕೊನೆಯಲ್ಲಿಯೂ ಚಂದ್ರಾದಿತ್ಯರುಳ್ಳಂ ಎಂದು ದಾಖಲಿಸಿರುವುದು ಗಮನಾರ್ಹವಾಗಿದೆ. **ಸೂರ್ಯಚಂದ್ರರ ರೇಖಾಚಿತ್ರದ ಜೊತೆಗೆ ಬ್ರಾಹ್ಮಿ ಲಿಪಿಯ 'ಓ' ಅಕ್ಷರವಿದ್ದು ಇದು 'ಓಂ' ಅರ್ಥವನ್ನು ಸೂಚಿಸುತ್ತದೆ.** ಇವುಗಳು ಮಂಗಳವಾಗಲಿ ಎಂಬ ಶುಭಸೂಚಕ ವಿಷಯಗಳನ್ನು ಸೂಚಿಸುತ್ತವೆ.

ಶಾಸನ ಪಾಠವು ಸ್ವಸ್ತಿಶ್ರೀ ಎಂಬ ಪದದಿಂದ ಪ್ರಾರಂಭವಾಗಿದ್ದು ಇದು ಶುಭವಾಗಲಿ ಎಂಬ ಆಶಯ ಹೊಂದಿದೆ. ಶಕವರ್ಷ, ಚಿತ್ರಭಾನು ಸಂವತ್ಸರ ಹಾಗೂ ಆಶ್ವೀಜ ಮಾಸದ ಉಲ್ಲೇಖಗಳನ್ನು ನೀಡಿದೆ. ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿ ಇದ್ದಂತಹ ವರ್ಷ, ಸಂವತ್ಸರ, ಮಾಸಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಉಲ್ಲೇಖ ಮಾಡಿಕೊಂಡು ಬಂದಿರುವುದರಿಂದ ನಮ್ಮ ಪೂರ್ವಜರು ಹೇಗೆ ವರ್ಷ, ತಿಂಗಳುಗಳನ್ನು ಬಳಸುತ್ತಿದ್ದರು ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಇಂದಿಗೂ ಅವುಗಳನ್ನು ನಾವು ಬಳಸುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ **ಧಾರ್ಮಿಕ ಸಮಾರಂಭಗಳು ಹಾಗೂ ವಿವಾಹ ಆಮಂತ್ರಣದಲ್ಲಿ** ಇಂದಿಗೂ **ಹೆಚ್ಚಾಗಿ ಶಕವರ್ಷ, ಸಂವತ್ಸರ, ಮಾಸಗಳನ್ನು ಶಾಸನದಲ್ಲಿ ಬಳಸುತ್ತಿರುವ ರೀತಿಯಲ್ಲಿಯೇ ಬಳಸುತ್ತಿರುವುದನ್ನು ಕಾಣಬಹುದು.**

ಶಾಸನದಲ್ಲಿ ಶಕವರ್ಷ ೧೨೬೫ ಎಂದು ಕನ್ನಡ ಅಂಕಿಗಳಲ್ಲಿ ಬರೆಯಲಾಗಿದ್ದು, ಇದು ಜೂಲಿಯನ್ ಕ್ಯಾಲೆಂಡರ್ ನ ಕಾಲಮಾನದ ಪ್ರಕಾರ 06-ಸೆಪ್ಟೆಂಬರ್-1342ಕ್ಕೆ ಹೊಂದಾಣಿಕೆಯಾಗುತ್ತದೆ.

ಸಾಮಾನ್ಯವಾಗಿ ಅಧೀನ ರಾಜರು ಹಾಗೂ ಅಧಿಕಾರಿಗಳು ತಮ್ಮ ರಾಜನ ಹೆಸರುಗಳನ್ನು ವಿಶೇಷವಾಗಿ ದಾನ ನೀಡುವ ಸಂದರ್ಭದಲ್ಲಿ ಅವರನ್ನು **ಹೊಗಳುವುದು** ಸಾಮಾನ್ಯ, ಈ ಶಾಸನದಲ್ಲಿಯೂ ಸಹ ಶಾಸನವನ್ನು ಹಾಕಿಸಿದ ಹೊಂನಮಾರಯನಾಯ್ಕನು, ತಾನೂ ಎಲಹಕ್ಕ (ಯಲಹಂಕ) ನಾಡ ಮಹಾಸಾಮಂತಾಧಿಪತಿ **ಮೀಸೆಯರಗಂಡ** ಚಿಕ್ಕಬಯಿರಯನಾಯ್ಕ ಅವರ ಮಗ ಎಂದು, ಜೊತೆಗೆ ಹೊಯ್ಸಳ ವೀರಬಲ್ಲಾಳನು ಉಣ್ಣಾಮಲೆಪಟ್ಟಣನ್ನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಇದ್ದವನು ಎಂದು ಹೇಳಿದ್ದಾನೆ. ಇಲ್ಲಿ ಚಿಕ್ಕಬಯಿರಯನಾಯ್ಕರು[2] ಮಹಾ **ಸಾಮಂತಾಧಿಪತಿ ಆಗುವುದಕ್ಕೂ ಮೊದಲು ಮಹಾಪಸಾಯಿತ[3] ಆಗಿದ್ದ ಹಾಗೂ ಅದಕ್ಕೂ ಮೊದಲು ಹೊಯ್ಸಳವೀರ ಬಲ್ಲಾಳನ ಮನೆಯಕ್ಕಟಿಗ[4] ಆಗಿದ್ದರು** ಎಂದು ಶಾಸನದಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಚಿಕ್ಕಬಯಿರಯನಾಯ್ಕರು ಹೇಗೆ ಹಂತಹಂತವಾಗಿ ಉನ್ನತ ಪದೋನ್ನತಿ ಪಡೆದರು ಎಂಬುದನ್ನು ಇಲ್ಲಿ ಗಮನಿಸಬಹುದು.

2 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-24, ಗಾಣಿಗರಹಳ್ಳಿ, 1905.

3 ಮಹಾಪಸಾಯಿತ ಎಂದರೆ ಅರಸನಿಗೆ ಆಪ್ತನಾದ ಅಧಿಕಾರಿ, ಅರಮನೆಯ ಉಸ್ತುವಾರಿ ನೋಡಿಕೊಳ್ಳುವವನು, ಮಾನ ಸನ್ಮಾನ ಉಡುಗೊರೆಗಳ ವಿತರಣೆ ಇತ್ಯಾದಿಗಳ ಮೇಲ್ವಿಚಾರಕ.

4 ಯಕ್ಕಟಿಗರು/ಎಕ್ಕಟಿಗರು ಎಂದರೆ ಇವರು ರಾಜರ ವಿಶಿಷ್ಟವಾದ ಅಂಗರಕ್ಷಕ ವೀರರಾಗಿದ್ದರು.

ಈ ಶಾಸನವನ್ನು ಹಾಕಿಸಿರುವ ಮುಖ್ಯ ಉದ್ದೇಶ ನಾಡಸೇನಾಬೊವ ಅಲ್ಲಾಳರಿಗೆ ದಾನ ನೀಡಿರುವುದಾಗಿದೆ. ಅಲ್ಲಾಳರಿಗೆ ಜಕ್ಕೂರ ಗದ್ದೆಬೆದ್ದಲು ಪ್ರದೇಶವನ್ನು ಕೊಡುಗೆಯಾಗಿ ನೀಡಲಾಗುತ್ತದೆ, ಆದರೆ ಯಾವ ಕಾರಣಕ್ಕೆ ಕೊಡುಗೆ ನೀಡಲಾಗಿದೆ ಎಂಬುದನ್ನು ಉಲ್ಲೇಖಿಸಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯ ಜಕ್ಕೂರು ಸ್ಥಳದ ಉಲ್ಲೇಖ. ಸಾ.ಶ.1342ರಲ್ಲಿಯೇ ಜಕ್ಕೂರು ಎಂಬ ಹೆಸರಿನ ಗ್ರಾಮವಿತ್ತು ಎಂಬುದು ಈ ಶಾಸನದಿಂದ ತಿಳಿಯುತ್ತದೆ.

ಗದ್ದೆ ಬೆದ್ದಲು ಪದದ ಉಲ್ಲೇಖವನ್ನು ಗಮನಿಸಿದಾಗ ಗದ್ದೆ ಕೇವಲ ನೀರಾವರಿ ಅಥವಾ ಕೆರೆ ಪ್ರದೇಶದಲ್ಲಿ ಕಂಡುಬರುತ್ತದೆ. ಜಕ್ಕೂರು ಪ್ರದೇಶದಲ್ಲಿ ಪ್ರಸ್ತುತವು ಒಂದು ವಿಶಾಲವಾದ ಕೆರೆ ಇರುವುದನ್ನು ನೋಡಿದರೆ ಹಾಗೂ **ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ ಪೆರಿಯ ಏರಿ** ಎಂದು ದಾಖಲಿಸಿರುವುದನ್ನು ಗಮನಿಸಿದಾಗ ಅಗ್ರಹಾರದಲ್ಲಿ ಯಾವುದೇ ದೊಡ್ಡಕೆರೆಗಳು ಇಲ್ಲ, ಅಗ್ರಹಾರದಿಂದ ಜಕ್ಕೂರು ಕೆರೆ ಸುಮಾರು ಒಂದು ಕಿ.ಮೀ. ದೂರದಲ್ಲಿದ್ದು, ಇಲ್ಲಿ ದೊಡ್ಡದಾದ ಕೆರೆ ಇರುವುದರಿಂದ ಇದೇ ಆ ಪೆರಿಯಕೆರೆ ಆಗಿತ್ತು ಎಂಬುದನ್ನು ಊಹಿಸಬಹುದು. ಇದರಿಂದ **ಜಕ್ಕೂರಿನ ಕೆರೆಯು ನೂರಾರು ವರ್ಷಗಳಿಂದ ಸಾವಿರಾರು ಎಕರೆ ಭೂಪ್ರದೇಶಕ್ಕೆ ನೀರುಣಿಸುತ್ತಿತ್ತು ಎಂದು ಊಹಿಸಬಹುದು**. ಈ ಕೆರೆಯಿಂದ ಹಲವಾರು ಪ್ರಾಣಿ ಮತ್ತು ಸಸ್ಯಸಂಕುಲಗಳು ತಮ್ಮ ಸಂತತಿಯನ್ನು ಮುಂದುವರಿಸಿಕೊಂಡು ಬೆಳೆಸಿಕೊಂಡು ಬಂದಿವೆ. **ಜಕ್ಕೂರಿನ ಜನತೆಯು ಒಂದೆಡೆ ನೆಲೆನಿಂತು ಬಹು ದೀರ್ಘ ಕಾಲದವರೆಗೆ ಜೀವಿಸಲು ಈ ಕೆರೆ ಜೀವನಾಡಿ ಆಗಿತ್ತು ಎಂದು ಹೇಳಬಹುದು**.

ಹೊನ್ನಮಾರಯನಾಯ್ಕರು ನಾಡಸೇನಾಬೊವ ಅಲ್ಲಾಳರಿಗೆ ನೀಡಿದ ದಾನವು ಸೂರ್ಯಚಂದ್ರರು ಇರುವವರೆಗೆ ಇರಬೇಕು ಎಂದು ದಾಖಲಿಸಿ ಕೊನೆಯಲ್ಲಿ ಮಂಗಳಮಹಾಶ್ರೀ ಎಂಬ ಪದದೊಂದಿಗೆ ಶಾಸನವು ಮುಕ್ತಾಯವಾಗುತ್ತದೆ.

ಮಹತ್ವ

ಈ ಶಾಸನವು ಜಕ್ಕೂರು ಬಡಾವಣೆಯ ಭೂಪ್ರದೇಶ, ಕೆರೆ, ನೀರಾವರಿ ವ್ಯವಸ್ಥೆ, ಆಡಳಿತ ವಿಭಾಗ ಹಾಗೂ ಈ ಬಡಾವಣೆಯ ಸುಮಾರು 700 ವರ್ಷದ ಹಿಂದಿನ ಆರ್ಥಿಕ, ರಾಜಕೀಯ ಆಡಳಿತವನ್ನು ತಿಳಿಸುವ ಮಹತ್ವದ ಶಾಸನವಾಗಿದೆ.

i) ಈ ಶಾಸನದಲ್ಲಿ ಜಕ್ಕೂರು ಗ್ರಾಮದ ಉಲ್ಲೇಖವಿದೆ. ಇದರಿಂದ ಜಕ್ಕೂರು **ಒಂದು ಐತಿಹಾಸಿಕ ಪುರಾತನ ಗ್ರಾಮವೆಂದು ತಿಳಿದುಬರುತ್ತದೆ**.

ii) ಈ ಶಾಸನವು ಜಕ್ಕೂರು ಪ್ರದೇಶದ ಗದ್ದೆ, ಬೆದ್ದಲು ಮುಂತಾದವನ್ನು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಆದ್ದರಿಂದ ಜಕ್ಕೂರಿನ ಗದ್ದೆಗಳಲ್ಲಿ ವ್ಯವಸಾಯ ಮಾಡಲು ನೀರಾವರಿ **ಮೂಲವಾಗಿ ಕೆರೆಯಿತ್ತು ಎಂಬುದನ್ನು ಈ ಶಾಸನದ ಮೂಲಕ ಗುರುತಿಸಬಹುದು**. ಈ ಪ್ರಾಚೀನ ಕೆರೆಯು ಸುಮಾರು 15ರಿಂದ 20 ತಲೆಮಾರುಗಳ ಜನರನ್ನು ಪೋಷಿಸದೆ ಎಂದರೆ ತಪ್ಪಾಗಲಾರದು.

iii) ಹೊಯ್ಸಳ ಮೂರನೇ ವೀರಬಲ್ಲಾಳನು ಸಾ.ಶ.1342ರ ಸಮಯದಲ್ಲಿ **ಉಣ್ಣಾಮಲೆ/ ತಿರುವಣ್ಣಾಮಲೈ ಅನ್ನು ರಾಜಧಾನಿ**ಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದನು ಎಂಬುದು ತಿಳಿಯುತ್ತದೆ.

ಭಾಷೆ


ಅಂದಿನ ಜನರು ಸಾಮಾನ್ಯವಾಗಿ ಆಡು ಭಾಷೆಯಾಗಿ ಬಳಸುತಿದ್ದ, ಕನ್ನಡ ಭಾಷೆಯಲ್ಲಿ ಈ ಶಾಸನವನ್ನು ಬರೆಯಲಾಗಿದೆ. ಇದರ ಲಿಪಿಯನ್ನು ಸುಂದರವಾಗಿ ಸಾಲುಗಳು ಹಾಗೂ ಅಕ್ಷರಗಳ ನಡುವೆ ಗೊಂದಲವಿಲ್ಲದಂತೆ ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಕೆತ್ತಲಾಗಿದ್ದು, ಇದನ್ನು ಗಮನಿಸಿದಾಗ ಲಿಪಿಕಾರನು ಭಾಷೆ ಹಾಗೂ ಲಿಪಿ ಕೆತ್ತನೆಯಲ್ಲಿ ಹೆಚ್ಚಿನ ಪಾಂಡಿತ್ಯ ಪಡೆದವನಿರಬಹುದು ಎಂದು ಹೇಳಬಹುದು.

ಲಿಪಿ


ಶಾಸನದ ಅಕ್ಷರಗಳು ಸುಂದರವಾಗಿ ಕೆತ್ತಲ್ಪಟ್ಟಿರುವುದನ್ನು ಗಮನಿಸಬಹುದು. ಈ ಶಾಸನದಲ್ಲಿನ ಬರುವ ಕೆಲವು ಅಕ್ಷರಗಳು ಭಿನ್ನ ಸ್ವರೂಪದಲ್ಲಿ ಕಾಣಿಸಿಕೊಂಡಿವೆ

i) ವ ಮತ್ತು ಮ ಅಕ್ಷರಗಳು ಎರಡು ರೂಪದಲ್ಲಿ ಮೂಡಿ ಬಂದಿವೆ.

ಶಾಸನದಲ್ಲಿರುವ 'ವ' ಅಕ್ಷರದ ವಿವಿಧ ರೂಪ




ಶಾಸನದಲ್ಲಿರುವ 'ಮ' ಅಕ್ಷರದ ವಿವಿಧ ರೂಪ



ii) ಎ ಕಾರವನ್ನು ತಲೆಕಟ್ಟಿನಿಂದ ಶುರುಮಾಡಿ ಸುತ್ತಿರುವ ರೀತಿಯಲ್ಲಿದೆ.

ಗೆ




iii) ಎ, ಏ ಮತ್ತು ದ ಅಕ್ಷರಗಳನ್ನು ಅಲ್ಪಪ್ರಾಣ-ಮಹಾಪ್ರಾಣ ಎಂಬುದು ವಾಕ್ಯದ ಅರ್ಥ ಅನ್ವಯಿಸಿ ಓದಿಕೊಳ್ಳಬೇಕಾಗಿದೆ ಮತ್ತು ಮಹಾಪ್ರಾಣಗಳಿಗೆ ಹೊಕ್ಕಳು ಸೀಳಿರುವುದು ಕಂಡು ಬರುವುದಿಲ್ಲ. ಏ (ಏನುಳ್ಳ, ಎಲಹ್ಕ), ಧ (ಸಾವಂತಾಧಿಪತಿ) ಅಕ್ಷರಗಳು.

ಶಾಸನದಲ್ಲಿರುವ 'ಏನುಳ್ಳ'



ಶಾಸನದಲ್ಲಿರುವ 'ಎಲಹ್ಕ'



iv) ಒತ್ತಕ್ಷರಗಳು ಮೂಲ ಅಕ್ಷರಕ್ಕೆ ಹೊಂದಿಕೊಂಡಿರದೆ ಬಿಡಿಯಾಗಿದೆ.

2. ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನ


ಜಕ್ಕೂರಿಗೆ ಸಂಬಂಧಿಸಿದ ಚಾರಿತ್ರಿಕ ಆಧಾರಗಳಲ್ಲಿ ಈ ಪ್ರಶಸ್ತಿ ಶಾಸನವು ಕೂಡ ಪ್ರಮುಖವಾದುದು. ಈ ಪ್ರದೇಶ 10ನೇ ಶತಮಾನದಲ್ಲಿ ಅಂದರೆ ಗಂಗರ ಆಳ್ವಿಕೆಯ ಸಂದರ್ಭದಲ್ಲಿ "**ಗಂಗವಾಡಿ ತೊಂಭತ್ತಾರು ಸಾವಿರ**" ಎಂಬ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿತ್ತು ಎಂಬುದನ್ನು ತಿಳಿಸುತ್ತದೆ. ಹಾಗೂ ಇಬ್ಬರು ಐತಿಹಾಸಿಕ ವ್ಯಕ್ತಿಗಳನ್ನು ಉಲ್ಲೇಖಿಸುತ್ತದೆ.

ಹತ್ತನೇ ಶತಮಾನದ ಕನ್ನಡ ಅಕ್ಷರಗಳನ್ನು ನೋಡಬೇಕೆನಿಸಿದರೆ ಜಕ್ಕೂರಿನವರು ಎಲ್ಲೋ ಹೋಗಿ ನೋಡಬೇಕೆಂದಿಲ್ಲ, ಈ ಶಾಸನ ಕಲ್ಲನ್ನು ನೋಡಿದರೆ ಸಾಕು, ಅಂದು ಬಳಸುತ್ತಿದ್ದ ಕನ್ನಡ ಅಕ್ಷರಗಳನ್ನು ನೋಡಿದಂತಾಗುತ್ತದೆ.


ಶಾಸನದ ಶೋಧ

ಹಿಂದೆ ವಿವರಿಸಲಾಗಿರುವ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನವನ್ನು ಸಂರಕ್ಷಿಸಲು ಸ್ಥಳೀಯರಿಗೆ ತಿಳಿಸಿದ 15 ದಿನಗಳ ನಂತರ, ಕೆ.ಆರ್.ನರಸಿಂಹನ್ ಹಾಗೂ ಧನಪಾಲ್ ಮಂಚೇನಹಳ್ಳಿ ಅವರು ಪುನಃ ಜಕ್ಕೂರಿಗೆ ಬಂದು ಸಂರಕ್ಷಿಸಿದ ಶಾಸನವನ್ನು ನೋಡುತ್ತಿರುವಾಗ, **ಶ್ರೀಕಂಠಪ್ಪ ಅವರು ನಮ್ಮ ತೋಟದ ಜಮೀನಿನಲ್ಲಿ ಯಾವುದೋ ಒಂದು ಕಲ್ಲು ಇದ್ದ ಹಾಗಿದೆ ಬನ್ನಿ** ನೋಡೋಣ ಎಂದು ಕರೆದುಕೊಂಡು ಹೋದಾಗ, ಜಮೀನಿನಲ್ಲಿ ಒಂದು ಶಾಸನ ಮತ್ತು ಒಂದು ಆತ್ಮ ಬಲಿದಾನದ ಸ್ಮಾರಕ ಶಿಲ್ಪ ಇವೆರಡೂ ಕೂಡ ಮಣ್ಣಲ್ಲಿ ಮುಚ್ಚಿ ಹೋಗಿದ್ದು, ಸ್ವಲ್ಪ ಸ್ವಲ್ಪ ಭಾಗ ಮಾತ್ರ ಕಾಣುತ್ತಿತ್ತು. ನಂತರ ಮಣ್ಣಿನಲ್ಲಿ ಹೂತು ಹೋಗಿದ್ದ ಕಲ್ಲನ್ನು ಹೊರ ತೆಗೆದಾಗ, ಕಲ್ಲಿನ ಮೇಲಿದ್ದ ಅಕ್ಷರಗಳು ಗೋಚರಿಸಿದವು. ಈ ಶಾಸನದ ಒಂದು ಭಾಗ ಒಡೆದು ಹೋಗಿದ್ದು, ಆ ಭಾಗವನ್ನು ಹುಡುಕಾಡಿದರು ಸಿಗಲಿಲ್ಲ. ನಂತರ ಸ್ಥಳೀಯರಾದ ಶ್ರೀಕಂಠಪ್ಪ, ರವಿಗೌಡ, ನಾಗರಾಜಪ್ಪ, ಶ್ರೀನಿವಾಸ್ ಮುಂತಾದವರ ಸಹಕಾರದಿಂದ ಸಮೀಪದ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ (13°04'44.1"N 77°36'26.1"E) ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ ಪಕ್ಕದಲ್ಲೇ ಈ ಶಾಸನ ಹಾಗೂ ಆತ್ಮಬಲಿದಾನ ಕಲ್ಲುಗಳನ್ನು ಸಂರಕ್ಷಿಸಲಾಯಿತು. ಈ ಶಾಸನದಲ್ಲಿರುವ ಪಠ್ಯವನ್ನು ಕುರಿತು ನರಸಿಂಹನ್ ಅವರು ವಿವರಣೆ ಸಹಿತವಾಗಿ ಇತಿಹಾಸ ಅಕಾದೆಮಿಯ 2018ರ ಸಮ್ಮೇಳನದಲ್ಲಿ ಲೇಖನವನ್ನು ಮಂಡಿಸಿರುತ್ತಾರೆ[1].

1 ಕೆ.ಆರ್.ನರಸಿಂಹನ್, ಅಪ್ರಕಟಿತ ಆತ್ಮಾರ್ಪಣೆ ಶಿಲ್ಪಗಳು ಮತ್ತು ಹೊಸ ಶೋಧ, ಇತಿಹಾಸ ದರ್ಶನ ಸಂಪುಟ-33, 2018, ಪುಟಸಂಖ್ಯೆ 43-45.



ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನದ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನದ ಡಿಜಿಟಲ್ ಚಿತ್ರ.

ಶಾಸನದ ಪಾಠ

	ಇತಿಹಾಸ ದರ್ಶನ ಸಂಪುಟ-33	ನಮ್ಮ ತಂಡದ ಪಾಠ
1	. ಳ್ಗಂಗವಾಡಿತೊಂಭತ್ತಾರುಸಾಯಿ	..**ಮ**.**ದ** **ಗಾ**ಳ್ಗಂಗವಾಡಿ ತೊಂಭ**ತ್ತು**ಱುಸಾಯಿ
2	ರಮನೇಕ ಛತ್ರಚ್ಛಾಯೆಯೊಳರಸುಗೆಯ್ಯು	ರಮನೇಕ ಛತ್ರಚ್ಛಾಯೆಯೊಳರಸುಗೆಯ್ಯು
3	ತ್ತಿರೆ ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತ ಶ್ರೀಮತ್	ತ್ತಿರೆ ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತ ಶ್ರೀ ಮತ್
4	ನವಲಕ್ಕದಹಳಾಧಿಪತಿಯಪ್ಪ ಬಲ್ಲವ	ನವಲಕ್ಕದಹಳಾಧಿಪತಿಯಪ್ಪ ಬಲ್ಲವ
5	**ಪ**ತಿರಾಯಂ ಗೊಬೆಟ್ಟದ ಬಿರುದಸೆದೇವನ ಕಾಳಗ	ತಿರಾಯಂ ಗೊಬೆಟ್ಟದ ಬಿರುದಸೆದೇವನ ಕಾ**ಳೆ**ಗ

1) ಮೇಲಿನ ಶಾಸನ ಪಾಠದ ಅಂಕಿ-ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ. ಓದಲು ಅನುಕೂಲವಾಗಲೆಂದು 1,2,3.. ಹೀಗೆ ಸಾಲುಗಳಿಗೆ ಸಂಖ್ಯೆ ಕೊಡಲಾಗಿದೆ.
2) ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಹಾಗೂ ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಜಾಗ ಬಿಟ್ಟು ಬರೆಯಲಾಗಿದೆ.
3) ಈ ಶಾಸನವನ್ನು 3ಡಿ ಸ್ಕ್ಯಾನಿಂಗ್ ಮುಖಾಂತರ ಮರು ಓದಲಾಗಿದ್ದು, ಇದರಲ್ಲಿ ಏಳು ವ್ಯತ್ಯಾಸಗಳು ಕಂಡುಬಂದಿದ್ದು, ಹೊಸದಾಗಿ ಮೂರು ಅಕ್ಷರಗಳನ್ನು ಓದಲಾಗಿದೆ. ಹಾಗೂ ಅಲ್ಪಪ್ರಾಣದ ಬದಲು ಮಹಾಪ್ರಾಣ ಸೇರಿಸಿರುವುದು, ಎ ಕಾರದಲ್ಲಿನ ವ್ಯತ್ಯಾಸಗಳನ್ನು ಬಿಟ್ಟರೆ ಮತ್ತೇನು ವ್ಯತ್ಯಾಸವಿಲ್ಲ. ಆದರೆ ಪಾಠದಲ್ಲಾಗಲಿ, ಅರ್ಥದಲ್ಲಾಗಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ಮೂಲ ಪಾಠದಲ್ಲಿ ವ್ಯತ್ಯಾಸವಿರುವುದನ್ನು ದಪ್ಪ (BOLD) ಅಕ್ಷರಗಳಲ್ಲಿ ನೀಡಲಾಗಿದೆ.

ಶಾಸನದ ಕಾಲ

ಈ ಶಾಸನದ ಪಠ್ಯದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಆದರೆ ಇದರಲ್ಲಿ ಬರೆದಿರುವ "ಗಂಗವಾಡಿ ತೊಂಭತ್ತಾರು ಸಾವಿರ" ಎಂಬ ಪದಗಳು ಗಂಗರ ಭೌಗೋಳಿಕ ಪ್ರದೇಶವನ್ನು ಸೂಚಿಸುತ್ತದೆ. ಹಾಗೂ ಶಾಸನ ಕಲ್ಲಿನ ಮೇಲೆ ಬರೆದಿರುವ **ಭಾಷೆ ಹಾಗೂ ಲಿಪಿಯ ಆಧಾರ**ದ ಮೇಲೆ ಈ ಶಾಸನವು **ಸುಮಾರು ಹತ್ತನೇ ಶತಮಾನ**ದ್ದೆಂದು ಗುರುತಿಸಬಹುದಾಗಿದೆ.

ಕಲ್ಲಿನ ಲಕ್ಷಣ

ಈ ಶಾಸನವನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಲಾಗಿದ್ದು, 72 ಸೆಂ.ಮೀ. ಎತ್ತರ, 108 ಸೆಂ.ಮೀ. ಅಗಲ, 15 ಸೆಂ.ಮೀ. ದಪ್ಪವಿದ್ದು, **ಕಲ್ಲಿನ ಮೇಲ್ಭಾಗ ಒಡೆದು ಹೋಗಿರುತ್ತದೆ**. ಹಾಗೂ ತುಂಡಾದ ಕಲ್ಲು ಇದುವರೆಗೂ ದೊರೆತಿರುವುದಿಲ್ಲ. ಶಾಸನವನ್ನು ಕೆತ್ತುವುದಕ್ಕೂ ಮುಂಚೆ ಮುಂಭಾಗವನ್ನು ನಯಗೊಳಿಸಿ ನಂತರ ಅಕ್ಷರಗಳನ್ನು ಕೆತ್ತಲಾಗಿದ್ದು, ಹಿಂಭಾಗವನ್ನು ಯಾವುದೇ ರೀತಿಯಲ್ಲಿ ನಯಗೊಳಿಸದೆ ಹಾಗೆಯೇ ಬಿಟ್ಟಿದ್ದಾರೆ. ಕಲ್ಲಿನ ಮೇಲೆ ಹಳೆಗನ್ನಡ ಭಾಷೆ ಮತ್ತು ಲಿಪಿಯಲ್ಲಿ ಸುಂದರವಾಗಿ ಕೆತ್ತಿರುವ ಐದು ಸಾಲುಗಳ ಶಾಸನವಿದ್ದು, ಇದರಲ್ಲಿನ ಅಕ್ಷರಗಳು ದುಂಡಾಗಿರುವುದನ್ನು ಕಾಣಬಹುದು.

ಶಾಸನದ ಸಾರಾಂಶ

ಈ ಶಾಸನವು ನವಲಕ್ಕದಹಳಾಧಿಪತಿಯಾದ ಬಲ್ಲವತಿರಾಯನಿಗೂ ಗೊಬೆಟ್ಟದ ಬಿರುದಸೆದೇವನಿಗೂ ಕಾಳಗವಾಗಿರುವ ಮಾಹಿತಿ ನೀಡುತ್ತದೆ. ಹಾಗೂ ಆ ಕಾಲಘಟ್ಟದಲ್ಲಿ ಜಕ್ಕೂರು ಗ್ರಾಮವು ಗಂಗವಾಡಿ ತೊಂಭತ್ತಾರು ಸಾವಿರ ಭೂಪ್ರದೇಶಕ್ಕೆ ಸೇರಿತ್ತು.

ಶಾಸನದ ಅನುವಾದ

. . . ಮ . ದ ಗಾಳ್ಗಂಗವಾಡಿ ತೊಂಭತ್ತಱುಸಾಯಿರ - ಗಂಗವಾಡಿ 96,000 ಎಂಬುದು ಗಂಗರ ರಾಜವಂಶರ ಆಳ್ವಿಕೆಗೆ ಒಳಪಟ್ಟ ಪ್ರದೇಶ.

ಮನೇಕ ಛತ್ರಚ್ಛಾಯೆಯೊಳರಸುಗೆಯ್ಯುತ್ತಿರೆ - ಏಕ ಚಕ್ರಾಧಿಪತ್ಯದ ಅಡಿಯಲ್ಲಿ ಆಳ್ವಿಕೆ ಮಾಡುತ್ತಿರುವಾಗ

ಸ್ವಸ್ತಿ - ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಪದ

ಸಮಸ್ತ ಪ್ರಸಸ್ತಿ ಸಹಿತ - ಎಲ್ಲಾ ಪ್ರಶಸ್ತಿ/ಬಿರುದುಗಳನ್ನು ಹೊಂದಿರುವ

ಶ್ರೀ ಮತ್ - ವ್ಯಕ್ತಿಯ ಹೆಸರು ಹೇಳುವ ಮುನ್ನ ಬಳಸುವ ಗೌರವಸೂಚಕ ಪದ

ನವಲಕ್ಕದಹಳಾಧಿಪತಿಯಪ್ಪ - ಯಾವುದೋ ಒಂದು ಪ್ರದೇಶದ ಅಧಿಪತಿ/ಅಧಿಕಾರಿ. (ಎಲಹಂಕದ ಪ್ರಾಚೀನ ಹೆಸರು ನವಲಕ್ಕ ಇರಬಹುದೇ ಎಂದು ಊಹಿಸಬಹುದು)

ಬಲ್ಲವತಿರಾಯಂ - ಅಧಿಕಾರಿ/ಸೈನ್ಯದ ಅಧಿಕಾರಿ (ನವಲಕ್ಕ ನಾಡಿನ ಧಳಪತಿ)

ಗೊಬೆಟ್ಟದ - ಪ್ರದೇಶದ ಹೆಸರು

ಬಿರುದಸೆದೇವನ - ಅಧಿಕಾರಿಯ ಹೆಸರು

ಕಾಳೆಗ - ಯುದ್ಧ

ಮಹತ್ವ

i) ಜಕ್ಕೂರು ಪ್ರದೇಶವು ಸುಮಾರು **ಸಾವಿರ ವರ್ಷದ ಪುರಾತನ ಇತಿಹಾಸ** ಹೊಂದಿದೆ ಎಂಬುದಕ್ಕೆ ಈ ಶಾಸನವು ಲಿಖಿತ ದಾಖಲೆಯಾಗಿದೆ.

ii) ಬಲ್ಲವತಿರಾಯ ಮತ್ತು ಬಿರುದಸೆದೇವ **ಈ ಇಬ್ಬರ ನಡುವೆ ಯುದ್ಧ ನಡೆಯಿತು** ಎಂಬುದನ್ನು ಈ ಶಾಸನವು ತಿಳಿಸುತ್ತದೆ. ಆದರೆ ಯಾಕೆ ಯುದ್ಧ ನಡೆಯಿತು ಎಂಬುದು ನಿಖರವಾಗಿ ತಿಳಿದುಬಂದಿಲ್ಲ. ಬಹುಶಃ **ಗೊಬೆಟ್ಟದ ಬಿರುದಸೆದೇವನು ಜಕ್ಕೂರ ಮೇಲೆ ದಾಳಿಗೆ ಬಂದಂತಹ ಸಂದರ್ಭದಲ್ಲಿ ಬಲ್ಲವತಿರಾಯನು ಪ್ರತಿದಾಳಿ ನಡೆಸಿರಬೇಕು**.

iii) ಈ ಶಾಸನ ಹಾಕಿಸುವ ಸಮಯದಲ್ಲಿ ಜಕ್ಕೂರು, ಗಂಗರ ಸಾಮ್ರಾಜ್ಯದ "ಗಂಗವಾಡಿ ತೊಂಭತ್ತಾರು ಸಾವಿರ" ಎಂಬ ಭೂಪ್ರದೇಶದ ವ್ಯಾಪ್ತಿಗೆ ಒಳಪಟ್ಟಿತ್ತು.



ಭಾಷೆ ಮತ್ತು ಲಿಪಿ

ಈ ಶಾಸನವನ್ನು ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯಲ್ಲಿ, ಸ್ಪಷ್ಟವಾಗಿ ದುಂಡಾಗಿ ಕಾಣುವಂತೆ ಕೆತ್ತಲಾಗಿದೆ. ಹಾಗೂ ಶಾಸನದ ಭಾಷೆ ಮತ್ತು ಪಠ್ಯದಲ್ಲಿ ಗೊಂದಲ ಮೂಡಿಸದೆ ಎರಡು ಸೈನ್ಯಗಳ ನಡುವೆ ಕಾಳಗ ನಡೆದಿದೆ ಎಂಬುದನ್ನು ಶಾಸನಕಾರ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾನೆ.

i) ಶಾಸನದ ಅಕ್ಷಗಳನ್ನು ಗಮನಿಸಿದಾಗ ಒತ್ತಕ್ಷರಗಳು ಮೂಲ ಅಕ್ಷರಕ್ಕೆ ಹೊಂದಿಕೊಂಡಿವೆ (ಅಂಟಿಕೊಂಡಿವೆ) ಹಾಗೂ '**ಕ**' ಅಕ್ಷರಕ್ಕೆ '**ಕ್ಕ**' ಒತ್ತಕ್ಷರವನ್ನು ಬರೆಯಲು ಮೂಲ ಅಕ್ಷರದ ಮಧ್ಯೆ ಒಂದು ಗೆರೆ ಎಳೆಯುವ ಮೂಲಕ ಒತ್ತಕ್ಷರವನ್ನು ತೋರಿಸಲಾಗಿದೆ. ಉದಾ ಕ್ಕ, ಚ್ಚಾ




ii) **ಎ** ಕಾರ ಬೆಳವಣಿಗೆಯಾಗುತ್ತಿರುವುದನ್ನು ಕಾಣಬಹುದು. ಹಾಗೂ ಎ ಕಾರವನ್ನು ಎರಡು ರೀತಿ (ರೂಪ) ಯಲ್ಲಿಯೂ ಕಾಣಬಹುದು. ಉದಾ- ಗೊಬೆಟ್ಟ, ಕಾಳೆಗ

ಗೆ	ಬೆ
	

iii) ಅಕ್ಷರಗಳ **ತಲೆಕಟ್ಟುಗಳು** ಅರ್ಧಚಂದ್ರಾಕಾರದಂತಿದೆ

ಸ	ರ
	

iv) ಈ ಶಾಸನದಲ್ಲಿ **ದ** ಅಲ್ಪಪ್ರಾಣ ಮತ್ತು ಮಹಾಪ್ರಾಣ ಅಕ್ಷರಗಳ ವ್ಯತ್ಯಾಸ ಸ್ಪಷ್ಟವಾಗಿ ಗುರುತಿಸಬಹುದು. ಉದಾ: ಬಿರು**ದ**ಸೆ ದೇವ, ನವಲಕ್ಕದಹಳಾ**ಧಿ**ಪತಿ

ಅಲ್ಪಪ್ರಾಣ ಅಕ್ಷರ 'ದ'	ಮಹಾಪ್ರಾಣ ಅಕ್ಷರ 'ಧಿ'
	

v) **ಉ** ಕಾರದ ಬೆಳವಣಿಗೆ ಸ್ಪಷ್ಟವಾಗಿದೆ. ಉದಾ- ಬಿರುದೆಸೆ, ಯೊಳರಸುಗೆಯ್ಯುತ್ತಿರೆ

ರು


vi) **ಟ** ಅಕ್ಷರಕ್ಕೆ ತಲೆಕಟ್ಟು ಇರುವುದಿಲ್ಲ ಅದನ್ನು ಸ್ಪಷ್ಟವಾಗಿ ಗುರ್ತಿಸಬಹುದು. ಉದಾ- ಗೊಬೆಟ್ಟ

ಟ್ಟ


vii) **ರ, ಯ, ಸ, ಗ, ಬ, ಕ, ತ, ನ,** ಲ.. ಅಕ್ಷರಗಳು ಇಂದಿನ ಕನ್ನಡ ಅಕ್ಷರಗಳ ಪೂರ್ಣರೂಪ ಪಡೆದಿರುವುದನ್ನು ಕಾಣಬಹುದು.

viii) **ಭ,ಥ,ದ,ಮ,ಹ,ಳ** ಅಕ್ಷರಗಳು ಬೆಳವಣಿಗೆ ಹಂತ ಕಾಣುತ್ತಿವೆ.

viii) ಈ ಶಾಸನದಲ್ಲಿರುವ **'ಮ' ಅಕ್ಷರದ ವಿವಿಧ ರೂಪ**.

ಮ	ಮ
	

3. ಜಕ್ಕೂರ ಸಾ.ಶ. ಸು. 10ನೇ ಶತಮಾನದ ಕಲ್ನಾಡು ಶಾಸನ

ಜಕ್ಕೂರಿಗೆ **ಸಾವಿರ ವರ್ಷದ ಇತಿಹಾಸವಿದೆ** ಎಂಬುದನ್ನು ಈ ಶಾಸನದಿಂದ ತಿಳಿಯಬಹುದು. ಈ ಬಡಾವಣೆಯ ಸಂಜಪಯ್ಯ ಎಂಬುವನು ಊರಿನ ಹಿತ ಬಯಸಿ ತನ್ನ ಪ್ರಾಣ ನೀಡಿದ್ದು ಅವನ ಕುಟುಂಬದವರಿಗೆ ದಾನ ನೀಡಿ ಶಾಸನ ಕಲ್ಲು ಹಾಕಿಸಿದ್ದು ಅದನ್ನು ಕಲ್ನಾಡು ಎಂದು ಕರೆದಿದೆ. ಅಂದರೆ **ಯುದ್ಧದಲ್ಲಿ ಊರಿನ ಪರವಾಗಿ ಹೋರಾಡಿರುವುದು ಅಥವಾ ಊರಿಗೆ ಒಳ್ಳೆಯದಾಗಲೆಂದು ದುಷ್ಟಶಕ್ತಿಗಳಿಂದ ಊರನ್ನು ರಕ್ಷಿಸಲು ಮರಣ ಹೊಂದಿದ ವೀರ**ರ ಕುಟುಂಬ ಜೀವನ ನಿರ್ವಹಣೆಗೆ ತೊಂದರೆಯಾಗಬಾರದೆಂದು ದತ್ತಿಗಳನ್ನು ಬಿಡಲಾಗುತ್ತಿತ್ತು ಇದನ್ನು ಕಲ್ನಾಟು/ಕಲ್ನಾಡು ಎಂದು ಕರೆಯಲಾಗುತ್ತದೆ.

ಸಾವಿರ ವರ್ಷದ ಕನ್ನಡ ಅಕ್ಷರಗಳನ್ನು ನೋಡಬೇಕೆನಿಸಿದರೆ ಜಕ್ಕೂರಿನವರು ಎಲ್ಲೋ ಹೋಗಿ ನೋಡಬೇಕೆಂದಿಲ್ಲ, ಈ ಶಾಸನ ಕಲ್ಲನ್ನು ನೋಡಿದರೆ ಸಾಕು, ಅಂದು ಬಳಸುತ್ತಿದ್ದ ಕನ್ನಡ ಅಕ್ಷರಗಳನ್ನು ನೋಡಿದಂತಾಗುತ್ತದೆ.

ಶಾಸನದ ಶೋಧ

ಶಾಸನ ಸಂಶೋಧಕರಾದ ಕೆ.ಆರ್.ನರಸಿಂಹನ್ ಮತ್ತು ಪಿ.ಎಲ್.ಉದಯ ಕುಮಾರ್ ಅವರು ಅಲ್ಲಾಳಸಂದ್ರ ಶಾಸನದಲ್ಲಿ ಉಲ್ಲೇಖವಾಗಿರುವ ಜಕ್ಕೂರ ಅಲ್ಲಾಳನಾಥ ದೇವಾಲಯವು ಜಕ್ಕೂರಿನಲ್ಲಿ ಯಾವ ಸ್ಥಳದಲ್ಲಿರಬಹುದು ಎಂದು ಹುಡುಕುವ ದೃಷ್ಟಿಯಿಂದ ಜಕ್ಕೂರಿಗೆ ಬರುತ್ತಾರೆ (23-ಡಿಸೆಂಬರ್-2017). ಆ ಸಂದರ್ಭದಲ್ಲಿ ಜಕ್ಕೂರಿನ ನಿವಾಸಿಯಾದ ನಾಗರಾಜಪ್ಪ ಅವರು ಸಹ ಇವರ ಜೊತೆ ಸೇರಿಕೊಳ್ಳುತ್ತಾರೆ. ಈ ಮೂರು ಜನ ಶಾಸನವನ್ನು ಹುಡುಕುತ್ತಿದ್ದಾಗ, ಜಕ್ಕೂರು ಬಡಾವಣೆಯ ನಿವೇಶನವೊಂದರ **ಕಾಂಪೌಂಡ್ ಒಳಗೆ ಹೋದಾಗ ಅಲ್ಲಿ ತುಂಡಾದ ಕಲ್ಲಿನ ಮೇಲೆ ಲಿಪಿಯುಳ್ಳ ಶಾಸನ ದೊರೆಯುತ್ತದೆ**. ಜೊತೆಗೆ ಒಂದು ಪಾಣಿಪೀಠ, ಶೈವ ದ್ವಾರಪಾಲಕರ ಶಿಲ್ಪಗಳು ಮತ್ತು ನಾಶವಾದ ದೇವಾಲಯದ ಕಂಬಗಳು ಕಾಣಿಸುತ್ತವೆ. ನಂತರ ಇವರು ಅಲ್ಲಿನ ಶಾಸನ ಕಲ್ಲಿಗೆ ಹಿಟ್ಟನ್ನು ಹಚ್ಚಿ ಛಾಯಾ ಚಿತ್ರಗಳನ್ನು ತೆಗೆದುಕೊಂಡು ಬರುತ್ತಾರೆ. ಇಂದಿಗೂ ಕೂಡ ಈ ಶಾಸನ ಕಲ್ಲು ಮತ್ತು ಇನ್ನಿತರ ಅವಶೇಷಗಳು ಇದೇ ಸ್ಥಳದಲ್ಲಿದ್ದು (13°04'45.9"N 77°36'34.6"E), ಇವುಗಳನ್ನು ಸದ್ಯದಲ್ಲೆ ಸ್ಥಳಾಂತರಿಸಿ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಸಂರಕ್ಷಿಸುವ ಕಾರ್ಯವನ್ನು ಸ್ಥಳೀಯರು ಮಾಡಲಿದ್ದಾರೆ

ಶಾಸನದ ಪಾಠ ಮತ್ತು ವಿವರಗಳನ್ನು ನರಸಿಂಹನ್ ಅವರು ಪ್ರಕಟಿಸಿದ್ದಾರೆ[1].

1 ಕೆ.ಆರ್.ನರಸಿಂಹನ್, ಬೆಂಗಳೂರಿನ ಜಕ್ಕೂರು ಹಾಗೂ ನಾಗವಾರದ ಅಪ್ರಕಟಿತ ಶಾಸನಗಳು, ಅಕ್ಷರಮೇರು (ಪಿ.ವಿ.ಕೃಷ್ಣಮೂರ್ತಿ ಅವರ ಅಭಿನಂದನ ಗ್ರಂಥ), 2020, ಪುಟಸಂಖ್ಯೆ-409.



ಜಕ್ಕೂರು ಬಡಾವಣೆಯ ನಿವೇಶನವೊಂದರಲ್ಲಿರುವ ಸಾ.ಶ.ಸು.10ನೇ ಶತಮಾನದ ಕಲ್ನಾಡು ಶಾಸನದ ಚಿತ್ರ.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರ ಸಾ.ಶ. ಸು.10ನೇ ಶತಮಾನದ ಕಲ್ನಾಡು ಶಾಸನದ ಡಿಜಿಟಲ್ ಚಿತ್ರ

ಶಾಸನದ ಪಾಠ

	ಅಕ್ಷರಮೇರು(ಪಿ.ವಿ.ಕೃಷ್ಣಮೂರ್ತಿಯವರ ಅಭಿನಂದನ ಗ್ರಂಥ)	ನಮ್ಮ ತಂಡದ ಪಾಠ
1	.... ಮ್ಮಕಿಲಿಗ ಸ	..... ಮ್ಮ**ಕ**ಲಿಗ ಸ
2	.... ಣ್ಣನಾಳೆ ಜಕ್ಕಿಯೂರ	....**ಣ್ನನಾಡ** ಜಕ್ಕಿಯೂ
3	... ಸಲಿಸಿ.. ಜಿಷಯ್ಯನುಂ	..... ಸ**ಲಗುವ ಸಂಜಪ**ಯ್ಯನುಂ
4	.... ವಡೆದವಂ ಕವಿಲೆಬಾರ	.....**ಮಟೆ**ದವಂ ಕವಿಲೆ ಬಾರ
5	[ಣಾಸಿಯನ] ಳಿದಂ ಇ ಕಲ್ನಾಟಕೊಬ್ಬರ್	.....**ಟೆ**ದಂ ಇ ಕಲ್ನಾ**ಡು ಗುದುರಾ**
6	... ಸೆನ್ದಕ ಮಾಲೆಗೊಟ್ಟ[ರ್]	.......**ನೆ**ನ್ದಕಮಾಲೆಗೊಟ್ಟ

1) ಮೇಲಿನ ಶಾಸನ ಪಾಠದ ಅಂಕಿ-ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ. ಓದಲು ಅನುಕೂಲವಾಗಲೆಂದು 1,2,3.. ಹೀಗೆ ಸಾಲುಗಳಿಗೆ ಸಂಖ್ಯೆ ಕೊಡಲಾಗಿದೆ. 2) ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಹಾಗೂ ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಜಾಗ ಬಿಟ್ಟು ಬರೆಯಲಾಗಿದೆ.3) 17 ವ್ಯತ್ಯಾಸಗಳನ್ನು ಕಾಣಬಹುದು.

ಶಾಸನದ ಕಾಲ ಮತ್ತು ಭಾಷೆ

ಈ ಶಾಸನವು ಸುಮಾರು **10ನೇ ಶತಮಾನ**ಕ್ಕೆ ಸೇರಿದ್ದು, ಹಳೆಗನ್ನಡ ಭಾಷೆ ಮತ್ತು ಲಿಪಿಯಲ್ಲಿದೆ.

ಕಲ್ಲಿನ ಲಕ್ಷಣ

ಈ ಶಾಸನವನ್ನು ಕೆತ್ತಲಾಗಿರುವ ಕಲ್ಲು ಗ್ರಾನೈಟ್ ಶಿಲಾ ಮಾದರಿಯದ್ದಾಗಿದ್ದು, 75 ಸೆಂ.ಮೀ. ಎತ್ತರ ಮತ್ತು 75 ಸೆಂ.ಮೀ. ಅಗಲ, 15 ಸೆಂ.ಮೀ. ದಪ್ಪವನ್ನು ಹೊಂದಿದೆ. ಕಲ್ಲಿನ ಎಡ ಮೇಲ್ಭಾಗದ ಮೂಲೆಯು ಒಡೆದು ಹೋಗಿದ್ದು, ಉಳಿದಂತೆ ಆರು ಸಾಲುಗಳ ಬರವಣಿಗೆಯನ್ನು ಗುರುತಿಸಬಹುದು.

ಪಾಠದ ಸಾರಾಂಶ

ಸಣ್ಣನಾಡ ಜಕ್ಕಿಯೂರಿನ ಸಂಜಪಯ್ಯನಿಗೆ ಕಲ್ನಾಡು ಕೊಟ್ಟಿದ್ದು, ಇದನ್ನು ಅಳಿದವನು ಕವಿಲೆಯನ್ನು ವಾರಣಾಸಿಯಲ್ಲಿ ಕೊಂದಂತೆ ಎಂಬ ಶಾಪಾಶಯವನ್ನು ಶಾಸನವು ದಾಖಲಿಸಿದೆ. ಶಾಸನ ಅಸ್ಪಷ್ಟವಾಗಿರುವುದರಿಂದ ಪೂರ್ಣ ಸಾರಾಂಶವನ್ನು ತಿಳಿಯಲು ಸಾಧ್ಯವಾಗುವುದಿಲ್ಲ.
(ಶಾಪಾಷಯದ ಬಗ್ಗೆ ಶಾಸನದ ಮಹತ್ವದ ಭಾಗದಲ್ಲಿ ವಿವರಿಸಲಾಗಿದೆ)

ಶಾಸನದ ಅನುವಾದ

ಈ ಶಾಸನ ಹೆಚ್ಚು ತೃಟಿತವಾಗಿರುವುದರಿಂದ ಅರ್ಥ ಬರುವ ಪದಗಳನ್ನು ಮಾತ್ರ ಬಿಡಿಸಿ ಅರ್ಥ ನೀಡಲಾಗಿದೆ.

..... **ಮ್ಮಕಲಿಗ ಸ** - ಶಾಸನ ಕಲ್ಲು ಒಡೆದಿರುವುದರಿಂದ ಅಸ್ಪಷ್ಟ ಪದಕ್ಕೆ ಅರ್ಥ ನೀಡಲು ಸಾಧ್ಯವಾಗಿಲ್ಲ


ಶಾಸನದಲ್ಲಿರುವ ಮ್ಮಕಲಿಗ



.... **ಣ್ನನಾಡ** - ನಾಡಿನ ಹೆಸರು(ಬಹುಶಃ ಸಣ್ಣನಾಡು)

ಜಕ್ಕಿಯೂ - ಪ್ರದೇಶದ ಹೆಸರು(ಜಕ್ಕಿಯೂರ- ಇದರ ಬಗ್ಗೆ ಸ್ಥಳನಾಮದ ಭಾಗದಲ್ಲಿ ವಿವರವಾಗಿ ನೀಡಲಾಗಿದೆ)

ಶಾಸನದಲ್ಲಿರುವ ಜಕ್ಕಿಯೂ



..... **ಸಲಗುವ** - ಅಸ್ಪಷ್ಟ ಪದವಾಗಿದ್ದು ಅರ್ಥ ನೀಡಲು ಸಾಧ್ಯವಾಗಿಲ್ಲ

ಸಂಜಪಯ್ಯನುಂ - ವ್ಯಕ್ತಿಯ ಹೆಸರು. ಬಹುಶಃ ದಾನ ಪಡೆದ ವ್ಯಕ್ತಿಯಿರಬಹುದು.

ಶಾಸನದಲ್ಲಿರುವ ಸಂಜಪಯ್ಯ



..... **ಮಟಿದವಂ** - ಅಳಿದವರು, ನಾಶಮಾಡಿದವರು

ಕವಿಲೆ - ಕವಿಲೆ ಎಂದರೆ ಹಸು/ಕಂದು ವರ್ಣದ **ಹಸುವನ್ನು ವಾರಣಾಸಿಯ ಗಂಗಾ ತೀರದಲ್ಲಿ ಕೊಂದ ಪಾಪ ಬರುತ್ತದೆ ಎಂದಿದೆ**. ಗರುಡ ಪುರಾಣದ ಪ್ರಕಾರ ಇಂತಹ ಪಾಪ ಮಾಡಿದವರು ಮುಂದಿನ ಜನ್ಮದಲ್ಲಿ ಗೂನು ಬೆನ್ನಿನವನಾಗಿ ಹುಟ್ಟುವರು ಎಂಬ ಶಾಪವಿದೆ.

ಶಾಸನದಲ್ಲಿರುವ ಕವಿಲೆ



ಬಾರ - ಬಾರ (ಣಾಸಿ)

ಶಾಸನದಲ್ಲಿರುವ ಬಾರ




.....**ಟಿದಂ** - ಅಳಿದವನು

ಇ - ಇದೊಂದು

ಕಲ್ನಾಡು - **ಕಲ್ನಾಡು** ಎಂಬ ಪದವು **ಕಲ್ಲನ್ನು ನೆಡು** ಅಂದರೆ **ಶಾಸನ ಕಲ್ಲನ್ನು ನೆಟ್ಟರು** ಎಂದರ್ಥವಿದೆ. ದಾನವಾಗಿ ಕೊಟ್ಟ ಭೂಮಿಯ ಗಡಿಯನ್ನು ಸೂಚಿಸಲು ಅಥವಾ ನೀಡಿರುವ ದಾನದ ದೃಢೀಕರಣಕ್ಕೂ ಇವುಗಳನ್ನು ಸ್ಥಾಪಿಸುತ್ತಿದ್ದರು

ಶಾಸನದಲ್ಲಿರುವ ಇ ಕಲ್ನಾಡು



ಗುದುರಾ - ಅಸ್ಪಷ್ಟ ಪದವಾಗಿದ್ದು ಅರ್ಥ ನೀಡಲು ಸಾಧ್ಯವಾಗಿಲ್ಲ

. . . . ನೆನ್ದಕಮಾಲೆ - ಅಸ್ಪಷ್ಟ ಪದವಾಗಿದ್ದು ಅರ್ಥ ನೀಡಲು ಸಾಧ್ಯವಾಗಿಲ್ಲ
ಗೊಟ್ಟ - ಕೊಟ್ಟರು

ಮಹತ್ವ

i) ಈ ಶಾಸನದಲ್ಲಿ **ಜಕ್ಕಿಯೂ** ಎಂಬ ಪದವು ಗ್ರಾಮದ ಹೆಸರು ಅಥವಾ ಯಾವುದಾದರೂ ದೇವರ (ಯಕ್ಷಿ) ಹೆಸರು ಸೂಚಿಸುತ್ತಿರಬಹುದು. ಇದುವರೆಗೂ ದೊರೆತಿರುವ ಶಾಸನಗಳಲ್ಲಿ ಜಕ್ಕೂರು ಗ್ರಾಮದ ಹೆಸರಿರುವ ಅತೀ ಪುರಾತನ ಶಾಸನವಾಗಿದೆ.

ಇವತ್ತಿನ ಬೆಂಗಳೂರಿನ ಐತಿಹಾಸಿಕ ಶಾಸನೋಕ್ತ ಊರುಗಳಲ್ಲಿ ಜಕ್ಕೂರು ಸಹ ಒಂದು.

ii) ಬೆಂಗಳೂರಿನ ಶಾಸನಗಳಲ್ಲಿ ಕಲ್ನಾಡು ಎಂಬ ಶಬ್ದವು ಬಹಳ ಅಪರೂಪವಾಗಿ ಕಂಡು ಬರುತ್ತದೆ. ಆದ್ದರಿಂದ ಈ ಪದವನ್ನು ಉಲ್ಲೇಖಿಸುವ ಈ **ಶಾಸನ ಜಕ್ಕೂರಿನಲ್ಲಿ ಕಂಡುಬಂದಿರುವುದು ವಿಶೇಷ**.

iii) ..ಣ್ಣ ನಾಡ ಎಂದು ಕೆತ್ತಿರುವುದನ್ನು ಗಮನಿಸಿದರೆ ಬಹುಶಃ ಇದು **ಸಣ್ಣೆನಾಡಿನ** (ಸಂಣ್ಣನಾಡು) ಉಲ್ಲೇಖ ಇರಬಹುದು. ಏಕೆಂದರೆ 11ನೇ ಶತಮಾನದ ಪಕ್ಕದ ಗ್ರಾಮ ಅಲ್ಲಾಳಸಂದ್ರ[2] ಹಾಗೂ ಸಮಕಾಲೀನ ಬೇರೆ ಬೇರೆ ಶಾಸನಗಳಲ್ಲಿ ಸಣ್ಣೆನಾಡಿನ ಉಲ್ಲೇಖ ಸಿಗುತ್ತದೆ.

ಸಣ್ಣೆನಾಡಿನ ಬಗ್ಗೆ **ಪುಟ ಸಂಖ್ಯೆ 168**ರಲ್ಲಿ ಚರ್ಚಿಸಲಾಗಿದೆ

---

2 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-32,ಅಲ್ಲಾಳಸಂದ್ರ, 1905.

4. ಜಕ್ಕೂರ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬದ ಶಾಸನ

ಜಕ್ಕೂರಿನ ಸುಮಾರು 600 ವರ್ಷದ ಪುರಾತನವಾದ ಅಲ್ಲಾಳನಾಥ ದೇವಾಲಯ, ಇಂದು ಹೇಳ ಹೆಸರಿಲ್ಲದಂತೆ ಆಗಿರುವುದು ದುರಂತವೇ ಸರಿ. ಇಲ್ಲಿ ದೇವಾಲಯವಿತ್ತು ಎಂಬುದಕ್ಕೆ ಇದೇ ಬಡಾವಣೆಯಲ್ಲಿ ಇತ್ತೀಚೆಗೆ ಪತ್ತೆಯಾದ ಈ ಕಂಬ ಶಾಸನದಿಂದ ತಿಳಿಯಬಹುದು ಹಾಗೂ ಈ ದೇವಾಲಯದ ಹಲವು ಪೂಜೆಗೆ ಅಲ್ಲಾಳಸಂದ್ರ ಗ್ರಾಮವನ್ನೇ ದಾನ ನೀಡಿರುವುದನ್ನು ಗಮನಿಸಿದರೆ ಈ ದೇವಾಲಯ ಒಂದು ಮುಖ್ಯವಾದ ಪವಿತ್ರ ಸ್ಥಾನವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಹಾಗಾಗಿ ಈ ಕಂಬ ಶಾಸನ ದೊರೆತಿರುವುದರಿಂದ ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯವಿತ್ತೆಂದು ಖಚಿತವಾಗುತ್ತದೆ. ಮುಖ್ಯವಾಗಿ ಈ ಅಲ್ಲಾಳನಾಥ ದೇವಾಲಯಕ್ಕೆ ಸಂಬಂಧಿಸಿದ ಕುರುಹುಗಳು ಸಿಗುತ್ತಿರುವುದು ಸಮಾಧಾನಕರ ವಿಷಯವಾಗಿದೆ.

ಇದೇ ತರಹ ಕಂಬದ(ಗರುಡ) ಶಾಸನವನ್ನು ಯಲಹಂಕದ ಗೋಪಾಲಕೃಷ್ಣ (ವೇಣುಗೋಪಾಲ) ದೇವಾಲಯ, ಕಿತ್ತಗನೂರು ಗೋಪಾಲಸ್ವಾಮಿ ದೇವಾಲಯ ಹಾಗೂ ವಾಗಟದ ವರದರಾಜ ದೇವಾಲಯದ ಗರುಡಕಂಬದ ಮೇಲೂ ಸಹ ಶಾಸನಗಳನ್ನು ಕಾಣಬಹುದು.

ಶಾಸನ ಶೋಧ

ಡಿಸೆಂಬರ್ 2021ರಲ್ಲಿ ಜಕ್ಕೂರಿನ ಕೆ.ವಿ.ಭೈರೇಗೌಡ ವೃತ್ತದಿಂದ ಜಕ್ಕೂರು ಕೆರೆಗೆ ಹೋಗುವ ರಸ್ತೆಯ ಬಲ ಭಾಗದಲ್ಲಿ ಹೊಸ ಮಳಿಗೆಗಳನ್ನು ನಿರ್ಮಿಸುವ ಉದ್ದೇಶದಿಂದ, ನಿವೇಶನವನ್ನು ಸ್ವಚ್ಛಗೊಳಿಸುವ ಸಮಯದಲ್ಲಿ ಆಂಜನೇಯ ಶಿಲ್ಪವಿರುವ ಕಂಬದ ತುಂಡೊಂದು ದೊರೆಯುತ್ತದೆ. ಆಗ ಅಲ್ಲಿನ ಸ್ಥಳೀಯರು, ಶಾಸನ ಸಂಶೋಧಕರಾದ ಕೆ.ಆರ್.ನರಸಿಂಹನ್ ಹಾಗೂ ಧನಪಾಲ್ ಅವರಿಗೆ ಇದರ ಬಗ್ಗೆ ಮಾಹಿತಿ ತಿಳಿಸಿದರು. ನಂತರ ಇವರು ಸ್ಥಳಕ್ಕೆ ಭೇಟಿ ನೀಡಿದಾಗ, ಇದು ಗರುಡಗಂಬ/ದೀಪಸ್ಥಂಭದ ಭಾಗ ಎಂಬುದು ತಿಳಿದು ಬರುತ್ತದೆ. ಹಾಗೇ ಈ ತುಂಡು ಕಲ್ಲನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವಾಗ ಈ ಕಲ್ಲಿನ ಒಂದು ಭಾಗದಲ್ಲಿ ಅಕ್ಷರಗಳು ಗೋಚರಿಸುತ್ತವೆ. ಈ ಅಕ್ಷರಗಳನ್ನು ಓದಿದಾಗ, ಇದು ಅಲ್ಲಾಳನಾಥ ದೇವರಿಗೆ ಸಂಬಂಧಿಸಿದ ಕಂಬ ಎಂಬುದು ತಿಳಿದುಬರುತ್ತದೆ. ನಂತರ ಈ ಕಂಬದ ತುಂಡನ್ನು ತೆಗೆದುಕೊಂಡು ಬಂದು ಕೆ.ವಿ.ಭೈರೇಗೌಡ







ಜಕ್ಕೂರ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬ ಶಾಸನದ ಚಿತ್ರ.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬ ಶಾಸನದ ಡಿಜಿಟಲ್ ಚಿತ್ರ

ವೃತ್ತದ ಆಂಜನೇಯ ದೇವಾಲಯದ (13°04'45.3"N 77°36'27.4"E) ಆವರಣದಲ್ಲಿ ಸಂರಕ್ಷಿಸಿಡಲಾಗಿದೆ. ಪಠ್ಯಕ್ಕೆ ಸಂಬಂಧಿಸಿದಂತೆ, ನರಸಿಂಹನ್ ಅವರ ಲೇಖನವು ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸಾರಾಂಗದ 'ಶಾಸನ ಅಧ್ಯಯನ' ಜನವರಿ-2022ರ ಸಂಚಿಕೆಯಲ್ಲಿ ಪ್ರಕಟವಾಗಲಿದೆ.

ಕಾಲ

ಈ ಶಾಸನದಲ್ಲಿ ಭಾರತೀಯ ಕಾಲಮಾನ **ಶಕ ೧೩೫(೪) ಪರಿಧಾವಿ ಸಂವತ್ಸರದ ಚೈತ್ರ ಶು ೧೦** ಎಂದಿದ್ದು, ಇಂದಿನ ಜೂಲಿಯನ್ ಕಾಲಮಾನದ ಪ್ರಕಾರ **ಸಾ.ಶ.1432 ಏಪ್ರಿಲ್ 10ಕ್ಕೆ** ಸರಿ ಹೊಂದುತ್ತದೆ ಹಾಗೂ ಶಾಸನ ಹಾಕಿಸಿದ ಅಂದಿನ ದಿನ ಗುರುವಾರವಾಗಿತ್ತು.

ಕಲ್ಲಿನ ಲಕ್ಷಣ

62 ಸೆಂ.ಮೀ ಎತ್ತರ, 33 ಸೆಂ.ಮೀ ಅಗಲ ಮತ್ತು 17 ಸೆಂ. ಮೀ ದಪ್ಪವನ್ನು ಹೊಂದಿರುವ ಈ ಕಲ್ಲು, ಗ್ರಾನೈಟ್ ಶಿಲಾ ಮಾದರಿಯದ್ದಾಗಿದ್ದು, ಕಲ್ಲಿನ **ಹಿಂಭಾಗ ಒಡೆದು ಚಕ್ಕೆ ಎದ್ದಿರುವುದು ಕಂಡುಬರುತ್ತದೆ**. ಕಲ್ಲಿನ ಬಲ ಭಾಗದಲ್ಲಿ ಒಂಭತ್ತು ಸಾಲುಗಳಲ್ಲಿ ಶಾಸನವನ್ನು ಕೆತ್ತಲಾಗಿದ್ದು, ಎಡ ಭಾಗದಲ್ಲಿ ವಿಷ್ಣು ಚಕ್ರದ ಉಬ್ಬುಶಿಲ್ಪವಿದೆ ಹಾಗೂ ಮುಂಭಾಗದಲ್ಲಿ ಅಂಜನಿ ಮುದ್ರೆಯಲ್ಲಿ ಕೈಮುಗಿದು ನಿಂತಿರುವ ಆಂಜನೇಯನ ಶಿಲ್ಪವಿದೆ. ಆಂಜನೇಯ ಶಿಲ್ಪವಿರುವ ಈ ಕಂಬವು ವೈಷ್ಣವ ದೇವಾಲಯಕ್ಕೆ ಸಂಬಂಧಿಸಿದ್ದು, ಚಕ್ರವು ವಿಷ್ಣುವಿನ ಸುದರ್ಶನ ಚಕ್ರ ಎಂದು ಹೇಳಬಹುದು.

ಸಾರಾಂಶ

ಈ ಶಾಸನವು ಸಾ.ಶ.1432ರಲ್ಲಿ ಅಲ್ಲಾಳನಾಥ ದೇವರಿಗೆ ಗರುಡಕಂಬ ಅಥವಾ ದೀಪಮಾಲೆ ಕಂಬವನ್ನು ಸಮರ್ಪಿಸಿದ ಮಾಹಿತಿ ನೀಡುತ್ತದೆ. ಶಾಸನದ ಅಕ್ಷರಗಳು ಅಲ್ಲಲ್ಲಿ ಸವೆದು ಹೋಗಿರುವುದರಿಂದ ಪೂರ್ಣವಾಗಿ ಸಾರಾಂಶವನ್ನು ಗ್ರಹಿಸಲು ಆಗುವುದಿಲ್ಲ.

ಅನುವಾದ

[ಜ]ಯಾಭ್ಯುದಯ - ಜಯವು ಹೆಚ್ಚಾಗಲಿ

ರುಷ ೧೩೫ (೪) - ರುಷ ಎಂದರೆ ಶಕವರುಷ ಎಂದರ್ಥ.

ಶಾಸನದಲ್ಲಿರುವ ಷ ೧೩೫



[ಪ] ರಿದಾವಿ ಸಂ - ಪರಿಧಾವಿ - ಭಾರತೀಯ ಕಾಲಮಾನದ ಪ್ರಕಾರ 60 ಸಂವತ್ಸರಗಳಿದ್ದು ಅದರಲ್ಲಿ ಪರಿಧಾವಿ ಸಂವತ್ಸರವು ಒಂದು. ಸಂ| ಎಂದರೆ ಸಂವತ್ಸರ ಎಂದರ್ಥ.

	ನಮ್ಮ ತಂಡದ ಪಾಠ
1	[ಜ]ಯಾಭ್ಯುದ
2	[ಯ ವ] ರುಷ ೧೩೫
3	(೪) [ಪ] ರಿದಾವಿ ಸಂ
4	[ಚ] ಯಿತ್ರ ಸು ೧೦
5	ಅಲ್ಲಾಳನಾತ
6	. ಕ . ಸಮುದ್ರ
7	ಂಮಿಸಿತ್ತ
8	.. ಸೆ ಉ(ವೆ)
9	.. ಕಂಬ

1) ಮೇಲಿನ ಶಾಸನ ಪಾಠದ ಅಂಕಿ-ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ. ಓದಲು ಅನುಕೂಲವಾಗಲೆಂದು 1,2,3.. ಹೀಗೆ ಸಾಲುಗಳಿಗೆ ಸಂಖ್ಯೆ ಕೊಡಲಾಗಿದೆ. 2) ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಹಾಗೂ ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಜಾಗ ಬಿಟ್ಟು ಬರೆಯಲಾಗಿದೆ.

[ಚ] ಯಿತ್ರ -ಚೈತ್ರ- ಶಾಸನ ಹಾಕಿಸಿರುವ ತಿಂಗಳು ಅಂದರೆ, ಇಂದಿನ ಮಾರ್ಚ್-ಏಪ್ರಿಲ್ ತಿಂಗಳು
ಸು ೧೦ - ಸು ಎಂದರೆ ಶುಕ್ಲ ಪಕ್ಷವನ್ನು ಸೂಚಿಸುತ್ತದೆ ಹಾಗೂ ೧೦ ಎಂದರೆ ಶುಕ್ಲ ಪಕ್ಷದ ಹತ್ತನೇ ದಿನ (ದಶಮಿ). ಒಂದು ಮಾಸದಲ್ಲಿ ಶುಕ್ಲ/ಶುದ್ಧ ಹಾಗೂ ಕೃಷ್ಣ/ಬಹುಳ ಎಂಬ ಎರಡು ಪಕ್ಷಗಳಿರುತ್ತವೆ. ಶುಕ್ಲ ಪಕ್ಷ ಎಂದರೆ ಅಮಾವಾಸ್ಯೆಯಿಂದ ಪೂರ್ಣಿಮೆಯವರೆಗೆ. ಬಹುಳ/ಕೃಷ್ಣ ಪಕ್ಷ ಎಂದರೆ ಪೂರ್ಣಿಮೆಯಿಂದ ಅಮಾವಾಸ್ಯೆಯವರೆಗೆ.
ಅಲ್ಲಾಳನಾಥ - ದೇವರ ಹೆಸರು. ಅಲ್ಲಾಳನಾಥ ದೇವರನ್ನು ವರದರಾಜ ಎಂಬ ಹೆಸರಿನಿಂದಲೂ ಸಾಮಾನ್ಯವಾಗಿ ಕರೆಯಲಾಗುತ್ತದೆ.

ಶಾಸನದಲ್ಲಿರುವ ಅಲ್ಲಾಳನಾತ



. . .ಕ ಸಮುದ್ರ - ಪ್ರದೇಶದ ಹೆಸರು. ಆದರೆ ಈ ಶಾಸನ ಸವೆದು ಹೋಗಿರುವುದರಿಂದ ಈ ಪ್ರದೇಶ ಯಾವುದೆಂಬುದು ಅಸ್ಪಷ್ಟವಾಗಿದೆ.

ಶಾಸನದಲ್ಲಿರುವ ಕ ಸಮುದ್ರ



೦ಮಿಸಿತ್ತ - -
ಸೆ ಉ(ವೆ) - ಸೇವೆ
ಕಂಬ - ಕಲ್ಲಿನ ಕಂಬ.

ಶಾಸನದಲ್ಲಿರುವ ಕಂಬ



ಮಹತ್ವ

i) ಜಕ್ಕೂರಿನಲ್ಲಿ ಇದುವರೆಗೂ ದೊರೆತಿದ್ದ ಯಾವುದೇ ಶಾಸನಗಳಲ್ಲಿ ಅಲ್ಲಾಳನಾಥ ದೇವಾಲಯದ ಉಲ್ಲೇಖ ಕಂಡು ಬಂದಿರಲಿಲ್ಲ. ಆದರೆ ಈ ಶಾಸನವು ಅಲ್ಲಾಳನಾಥ ಎಂಬ ಹೆಸರನ್ನು ಉಲ್ಲೇಖಿಸುವುದರಿಂದ, ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯವಿತ್ತು ಎಂದು ಸ್ಪಷ್ಟವಾಗಿ ಹೇಳಬಹುದು.

(ಅಲ್ಲಾಳನಾಥ ದೇವರ ಬಗ್ಗೆ **ಪುಟ ಸಂಖ್ಯೆ 101**ರಲ್ಲಿ ವಿವರಿಸಲಾಗಿದೆ.)

ii) ಈ ಕಂಬ ಶಾಸನದ ಆಧಾರದಲ್ಲಿ ನೋಡುವುದಾರೆ, ಅಲ್ಲಾಳನಾಥ ದೇವಾಲಯವನ್ನು ಬಹುಶಃ **ಈ ಕಂಬ ಹಾಕಿಸಿದ ವರ್ಷದಲ್ಲಿ ಅಥವಾ ದೇವಾಲಯ ನಿರ್ಮಾಣವಾದ ನಂತರ ಅಥವಾ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದಾಗ ಹಾಕಿಸಿರಬಹುದು**.

iii) ಶಾಸನದ ಆರನೇ ಸಾಲಿನ ತೃಟಿತ/ಸವೆದಿರುವ ಭಾಗದಲ್ಲಿ .ಕ.ಸಮುದ್ರ ಎಂಬ ಪದದ ಉಲ್ಲೇಖವಿದ್ದು, **ಬಹುಶಃ ಈ ಸಮುದ್ರ ಪದವು ಸಕನ ಸಮುದ್ರ ಅಥವಾ ಶಿವನ ಸಮುದ್ರದ ಹೆಸರನ್ನು ಉಲ್ಲೇಖಿಸಿರಬಹುದು. ಹಾಗೂ ಜಕ್ಕೂರು ಪ್ರದೇಶವು ಶಿವನಸಮುದ್ರ ಎಂಬ ಆಡಳಿತ ವಿಭಾಗಕ್ಕೆ ಸೇರಿದ್ದಿರಬಹುದು ಎಂದು ಊಹಿಸಬಹುದು**.

ಶಿವನ ಸಮುದ್ರದ ಬಗ್ಗೆ **ಪುಟ ಸಂಖ್ಯೆ 167**ರಲ್ಲಿ ಚರ್ಚಿಸಲಾಗಿದೆ. ಸಕನ ಸಮುದ್ರದ ಉಲ್ಲೇಖವು ಸಮೀಪದ ಹಾಗೂ ಸಮಕಾಲಿನ ಸಾ.ಶ.1431ರ ಕೋಡಿಗೆಹಳ್ಳಿ ಶಾಸನದಲ್ಲಿ ಬಂದಿದ್ದು, ಇದರ ಮಾಹಿತಿಯನ್ನು ಮುಂದೆ ಬರಲಿರುವ ಸಂಚಿಕೆಯಲ್ಲಿ ನೋಡಬಹುದು[1]

ಭಾಷೆ ಮತ್ತು ಲಿಪಿ

ಈ ಶಾಸನವು ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯಲ್ಲಿದ್ದು, ಈ ಲಿಪಿಯು ಸುಮಾರು ಹದಿನೈದನೇ ಶತಮಾನದ ಲಿಪಿಗೆ ಹೋಲಿಕೆಯಾಗುತ್ತದೆ.

---

1 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-127, ಕೊಡಿಗೇಹಳ್ಳಿ, 1905

5. ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನ

ಅಲ್ಲಾಳಸಂದ್ರಕ್ಕೆ ಸಂಬಂಧಿಸಿದಂತೆ ದಾಖಲಾದ ಮೂರು ಶಾಸನಗಳಲ್ಲಿ ಇಂದು ಉಳಿದಿರುವ ಈ ಏಕೈಕ ಶಾಸನದಿಂದ (ಇನ್ನೆರಡು ಶಾಸನಗಳು ಕಣ್ಮರೆಯಾಗಿವೆ) ಅಲ್ಲಾಳಸಂದ್ರದ ಕೆರೆಯು, ಸುಮಾರು 500 ವರ್ಷದಷ್ಟು ಪುರಾತನವಾದುದು ಎಂದು ತಿಳಿಯುವುದಷ್ಟೇ ಅಲ್ಲದೇ ಈ ಪ್ರದೇಶಕ್ಕೆ ಹಲವು ಭಾಷೆ ಮಾತನಾಡುವ ಜನರು ವಲಸೆ ಬರುತ್ತಿದ್ದರೆಂದು ತಿಳಿಯಬಹುದು. ಮುಖ್ಯವಾಗಿ ಈ ಶಾಸನವು ಜಕ್ಕೂರಿನ ಅಲ್ಲಾಳನಾಥ ದೇವರಿಗೆ ಇಡೀ ಅಲ್ಲಾಳಸಂದ್ರ ಗ್ರಾಮವನ್ನೇ ದಾನ ನೀಡಿರುವ ವಿಚಾರಗಳನ್ನು ಉಲ್ಲೇಖಿಸುವುದರಿಂದ, ಜಕ್ಕೂರು ಮತ್ತು ಅಲ್ಲಾಳಸಂದ್ರ ಗ್ರಾಮಗಳ ನಡುವೆ ಉತ್ತಮವಾದ ಸಾಂಸ್ಕೃತಿಕ ಸಂಬಂಧವಿತ್ತೆಂದು ತಿಳಿದುಬರುತ್ತದೆ.

ಈ ಮೊದಲು ಈ ಶಾಸನದ ಮುಂಭಾಗದ ಪಾಠ ಮಾತ್ರ ಓದಲಾಗಿತ್ತು **ಹಿಂಭಾಗದಲ್ಲಿದ್ದ ಶಾಪಾಷಯದ ಭಾಗವನ್ನು ಓದಿರಲಿಲ್ಲ, ಅದನ್ನು ಈ ಸಂಚಿಕೆಯಲ್ಲಿ ಓದಿ ಪ್ರಕಟಿಸಲಾಗುತ್ತಿದೆ**.

ಶಾಸನದ ಶೋಧ

ಈ ಶಾಸನವನ್ನು 1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ-30ರಲ್ಲಿ, ಅಲ್ಲಾಳಸಂದ್ರ ಗ್ರಾಮದ ಊರುಬಾಗಿಲ ಬಳಿ ಉತ್ತರ ಕಡೆ ನೆಟ್ಟಿರುವ ಕಲ್ಲು ಎಂದಿದೆ. ಈ ಶಾಸನವು ದಾಖಲಾದ 115 ವರ್ಷಗಳಲ್ಲಿ ಶಾಸನವನ್ನು ನೋಡಿದವರು ಬೆರಳೆಣಿಕೆಯಷ್ಟಿರಬಹುದು. ಇತ್ತೀಚೆಗೆ ಆರ್.ಯುವರಾಜು, ಎಂ.ಜಿ.ಭೈರಪ್ಪ, ಪಿ.ಎಲ್.ಉದಯ ಕುಮಾರ್, ಕೆ.ಆರ್ ನರಸಿಂಹನ್, ಧನಪಾಲ್ ಮಂಚೇನಹಳ್ಳಿ, ಅವರುಗಳು ಶಾಸನವನ್ನು ನೋಡಿ ಸ್ಥಳೀಯರಿಗೆ ಶಾಸನದ ಮಾಹಿತಿ ತಿಳಿಸಿರುತ್ತಾರೆ.

ಶಾಸನದ ಕಾಲ

ಶಾಸನದಲ್ಲಿ ಭಾರತೀಯ ಕಾಲಮಾನ **ಶಕವರುಷ 1462 ಕ್ರೋಧಿ ಸಂವತ್ಸರದ ಮಾರ್ಗಶಿರ ಶು5** ಎಂದಿದ್ದು, ಇಂದಿನ ಜೂಲಿಯನ್ ಕಾಲಮಾನದ ಪ್ರಕಾರ **ಸಾ.ಶ.1544 ನವೆಂಬರ್ 19 ಬುಧವಾರಕ್ಕೆ ಸರಿಹೊಂದುತ್ತದೆ**.


ಶಾಸನ ಕಲ್ಲಿನ ಲಕ್ಷಣ

ಈ ಶಾಸನವು 133 ಸೆಂ.ಮೀ ಎತ್ತರ, 67 ಸೆಂ.ಮೀ. ಅಗಲ, 13 ಸೆಂ.ಮೀ. ದಪ್ಪವಿದ್ದು, ಆಯತಾಕಾರದ ಗ್ರಾನೈಟ್ ಶಿಲಾ ಮಾದರಿಯದಾಗಿದೆ. ಕಲ್ಲಿನ ಮುಂಭಾಗ ಮತ್ತು ಹಿಂಭಾಗದಲ್ಲಿ ಎರಡೂ ಕಡೆ ಶಾಸನ ಕೆತ್ತಲಾಗಿದೆ. ಆದರೆ ಕಲ್ಲಿನ ಮುಂಭಾಗವನ್ನು ನಯಗೊಳಿಸಿ ಅಕ್ಷರಗಳನ್ನು ಕೆತ್ತಿದ್ದರೆ, ಹಿಂಭಾಗವನ್ನು ನಯಗೊಳಿಸದೇ ಹಾಗೆಯೇ ಕೆತ್ತಿರುವುದನ್ನು ನೋಡಬಹುದು. ಕಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ರೇಖಾಚಿತ್ರವಿದ್ದು, ಇವುಗಳ ನಡುವೆ ಬೆಂಕಿ ಜ್ವಾಲೆಯನ್ನು ಹೊರ ಹೊಮ್ಮಿಸುತ್ತಿರುವ ರೀತಿಯಲ್ಲಿ **14ದಳ (ಕಡ್ಡಿ) ಗಳಿರುವ ಸುದರ್ಶನ ಚಕ್ರದ ರಚನೆಯಿದೆ**. ಈ ಶಾಸನ ಕಲ್ಲಿನ ಮುಂಭಾಗದಲ್ಲಿ **19 ಸಾಲುಗಳು ಮತ್ತು ಹಿಂಭಾಗದಲ್ಲಿ ಆರು ಸಾಲುಗಳ ಶಾಸನವಿದ್ದು**, ಸಾಲುಗಳನ್ನು ಗುರುತಿಸಲು ಹಾಗೂ ನೇರವಾಗಿ ಬರೆಯಲು ಲಿಪಿಕಾರ'o' ಯನ್ನು ಪ್ರತಿ ಸಾಲಿನ ಮೊದಲಿಗೆ ಬಳಸಿಕೊಂಡಿರುವುದನ್ನು ಗಮನಿಸಬಹುದು.

ಅಲ್ಲಾಳಸಂದ್ರ ಶಾಸನ ಕಲ್ಲಿನ ಮೇಲಿರುವ 14 ದಳಗಳಿರುವ (spokes) ಸುದರ್ಶನ ಚಕ್ರವನ್ನು ನೋಡಿದಾಗ ಕೆಲವೊಂದು ಅಂಶಗಳು ಗಮನಕ್ಕೆ ಬರುತ್ತವೆ. ಪಾಂಚರಾತ್ರದ ಪ್ರಕಾರ ಸುದರ್ಶನ ಚಕ್ರದಲ್ಲಿ ನಾಲ್ಕು, ಎಂಟು, ಹದಿನಾರು, ಮೂವತ್ತೆರಡು. ದಳಗಳಿರಬೇಕೆಂದು ತಿಳಿಸುತ್ತದೆ. ಆದರೆ ಈ ಶಾಸನದಲ್ಲಿ 14 ದಳಗಳ ಸುದರ್ಶನ ಚಕ್ರದ ರಚನೆ ಇರುವುದರಿಂದ, ಬಹುಶಃ ಈ ಶಾಸನವನ್ನು ಸಾಂಪ್ರದಾಯಿಕ ಶಿಲ್ಪಶಾಸ್ತ್ರದ ಕಲೆ ಹೆಚ್ಚಿನ ಮಟ್ಟದಲ್ಲಿ ತಿಳಿದಿಲ್ಲದ ಲಿಪಿಕಾರನು ಕೆತ್ತಿರಬಹುದು ಎಂದು ತಿಳಿಯುತ್ತದೆ. ಹಾಗೆಯೇ ಬೆಂಗಳೂರು ಪ್ರದೇಶದಲ್ಲಿ ಸಿಗುವ ಕೆಲವು ಶಾಸನಗಳಲ್ಲಿ ಸುದರ್ಶನ ಚಕ್ರದ ರಚನೆಯಿದೆ. ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿ, ತಿಂಡ್ಲು, ಅಲ್ಲಾಳಸಂದ್ರ ಗ್ರಾಮಗಳಲ್ಲಿ ಸಿಗುವ ಶಾಸನ ಕಲ್ಲಿನ ಮೇಲೆ ಶಂಖ, ಚಕ್ರಗಳಿರುವುದನ್ನು ಕಾಣಬಹುದು. ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿ ಶಾಸನ ಕಲ್ಲಿನ ಮೇಲಿರುವ ಶಂಖ ಮತ್ತು ಚಕ್ರ ಚಿತ್ರಗಳೂ ಸಹ ಶಿಲ್ಪಶಾಸ್ತ್ರ ಬಲ್ಲ ಶಿಲ್ಪಿ ಕೆತ್ತಿಲ್ಲವೆಂದು ಸೂಚಿಸುತ್ತದೆ. ತಿಂಡ್ಲು ಗ್ರಾಮದಲ್ಲಿ ಶಾಸನ ರಹಿತ ಕಲ್ಲಿನ ಮೇಲೆ ಶಂಖ, ಚಕ್ರಗಳಿದ್ದು ಇದನ್ನು ಪೂಜೆ ಮಾಡಲು ಬಳಸಲು ಶಾಸ್ತ್ರೋಕ್ತವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಹಾಗೂ



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನದ ಚಿತ್ರ.



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನದ ಡಿಜಿಟಲ್ ಚಿತ್ರ

	ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ-30	ನಮ್ಮ ತಂಡದ ಪಾಠ
1	ಸ್ವಸ್ತಿ ಶ್ರೀ ಜಯಾಭ್ಯುದಯ ಸಾಲಿವಾಹನ ಸ	0 **ಶ್ವ**ಸ್ತಿ ಶ್ರೀ **ವಿ**ಜಯಾ**ಭ್ಯುದ**ದಯ ಸಾಲಿವಾಹನ ಸ
2	ಕ ವರುಷ ೧೪೬೨ ನೆಯ ಕ್ರೋಧಿ ಸಂವತ್ಸರದ	0 ಕ ವರುಷ ೧೪೬೨ ನೆಯ ಕ್ರೋ**ದಿ** ಸಂವತ್ಸರದ
3	ಮಾರ್ಗ್ಗಸಿರ ಶುಖಲು ಶ್ರೀ ಮಂನುಮಹಾ	0 ಮಾರ್ಗ್ಗಸಿರ ಶುಖಲು ಶ್ರೀ ಮಂ**ನ್ಸ** ಮ**ಹ**
4	ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ	0 ರಾ**ಜದಿ**ರಾಜ ರಾಜಪರಮೇಶ್ವರ ಶ್ರೀ ವೀರ
5	ಪ್ರತಾಪ ಶ್ರೀವೀರ ಸದಾಸಿವರಾಯರು ಪ್ರಿ	0 ಪ್ರ**ಥಾ**ಪ ಶ್ರೀ ವೀರಸದಾಸಿವ **ಮಾಹಾರ**ಯರು ಪ್ರಿ
6	ಥ್ವೀರಾಜ್ಯಂಗೆಉತ್ತುಂಯಿರಲು ಶ್ರೀ	0 ಥ್ವಿರಾಜ್ಯಂಗೆಉ**ತಂ**ಯಿರಲು ಶ್ರೀ
7	ಮಂನ್‌ಮಹಾಮಂಡಲೇಶ್ವರ ಶ್ರೀ	0 ಮಂನ್‌ಮ**ಹ**ಮಂಡಲೇಶ್ವರ ಶ್ರೀ
8	ಮರಾಟೆಯ ವಿಟಲೇಶ್ವರದೇವ ಮಹಾ	0 ಮರಾಟೆಯ ವಿಟಲೇಶ್ವರದೇವ ಮಹಾ
9	ಅರಸುಗಳ ಕಾರ್ಯಕೆಕರ್ತ್ತರಾದ ರಾ	0 ಅರಸುಗಳ ಕಾರ್ಯಕೆಕರ್ತ್ತರಾದ ರಾ
10	ಚುರನರಸಿಂಹಯಗಳು ಜೆಕ್ಕೂರ ಅಲ್ಲಾ	0 ಚುರನರ**ಸಪ**ಯಗಳು **ಜಕು**ರ ಅಲ್ಲಾ
11	ಳನಾಥದೇವರ ಆಮ್ರುತಪಡಿ ನೈವೇ	0 ಳನಾಥ ದೇವರ **ಅ**ಮ್ರುತಪಡಿ ನೈ**ವೆ**
12	ದ್ಯಕೆ ಎಲಕನಾಡ ಸಿವನಸಮು	0 ದ್ಯ**ಕ್ಕೆ** ಎಲಕನಾಡ ಸಿವನಸಮು
13	ದ್ರಾದ ಸೀಮೆವೊಳಗಣ ಅಲ್ಲಾಳ	0 ದ್ರಾದ ಸೀಮೆವೊಳಗಣ ಅ**ಲಾ**ಳ
14	ಸಂದ್ರ ಗ್ರಾಮವನು ವಿಠಲೇಶ್ವರ ಅರಸುಗ	0 ಸಂ**ದ್ರಾ,** ಗ್ರಾಮವನು ವಿ**ಟ**ಲೇಶ್ವರ ಅರಸುಗ
15	ಳಿಗೆ ಪುಣ್ಯವಾಗಬೇಕುಯಂದು ಸ	0 ಳಿಗೆ ಪುಣ್ಯವಾ**ಗಾ**ಬೇಕು **ಯೆಂ**ದು ಸ
16	ಮರ್ಪಿಸಿದೆವು ಆ ಗ್ರಾಮಕೆ ಸಲುವ	0 ಮರ್ಪಿಸಿದೆ **ಉ ಅ** ಗ್ರಾಮಕೆ ಸಲುವ
17	ಚತುಸೀಮೆವೊಳಗಾದ ಕೆರೆಕುಂಟೆ	0 ಚತುಸೀಮೆ ವೊ**ಳಾಗ**ದ ಕೆ**ಱೆ**ಕುಂಟೆ
18	ಗದೆ ಬೆಜಲು ಗುಡೆಗುಯಲು ತೋಟ	0 ಗದೆ ಬೆಜಲು ಗುಡೆಗುಯಲು ತೋಟ
19	ತುಡುಗ ಕಾಡಾರಂಬ ನೀರಾರಂಬ ಸ	... **ಕೆ** ಕಾಡಾರಂಬ ನಿರಾರಂಬ
20	**ಕಲಸಕಲ ಸುವರ್ಣಾದಾಯುಂಟಾದ**	**ಮುಂದೆ ಮೂರು ಸಾಲು ಕಲ್ಲು ಒಡೆದಿರುವುದರಿಂದ ಸಿಕ್ಕಿಲ್ಲ**
21	**ಅಷ್ಟಭೋಗ ತೇಜಸ್ವಾಂಮ್ಯವನು ಸಮ**	
22	**ರ್ಪಿಸಿದೆಉ ಯೀ ಧರ್ಮ ಸಾಧನ ...**	
(ಕಲ್ಲಿನ ಹಿಂಭಾಗ)		
23		**0 ಶ್ವದತ್ತ ದ್ವಿಗುಣಂ ಪುಣ್ಯಂ ಪರ**
24		**0 ದತ್ತನು ಪಾಲನಂ ಪರದತ್ತಪ**
25		**0 ಹಾರೆಣ ಸ್ವದತ್ತ ನಿಷ್ಪಲಂಬವೆತು**
26		**0 ಯಿ ದರ್ಮಕೆ ತಪಿದರೆ ಗಂಗೆಯ**
27		**0 ಲಿ ಕಪಿಲೆರ ಕೊಂದ ಪಾಪಕೆ ಹೊ**
28		**0 ವರು**

ದೊಮ್ಮಲೂರಿನ ಚೊಕ್ಕನಾಥಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಶಾಸನದ ಮೇಲಿನ ಸುದರ್ಶನ ಚಕ್ರವು ಸಹ ಉತ್ತಮ ಶಿಲ್ಪಶಾಸ್ತ್ರದ ಲಕ್ಷಣ ಹೊಂದಿದೆ. ಇದರಿಂದ ತಿಳಿಯುವುದೇನೆಂದರೆ ಪೂಜೆ ಮಾಡಲು ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ಮಾತ್ರ ಶಾಸ್ತ್ರೋಕ್ತವಾಗಿ ಚಿತ್ರಿಸಿದ್ದು ಹಾಗೂ ಉತ್ತಮ ಲಿಪಿ ಪಂಡಿತರು ಶಾಸನ ಕೆತ್ತಿರುತ್ತಾರೆ ಹಾಗೂ ಸಾಮಾನ್ಯ ಪ್ರದೇಶಗಳಲ್ಲಿ ಸ್ಥಳೀಯ ಲಿಪಿಕಾರರೇ ಕೆತ್ತಿರುತ್ತಾರೆ ಎಂದು ತಿಳಿಯಬಹುದು.

ಶಾಸನದ ಸಾರಾಂಶ

ಕಾರ್ಯಕರ್ತರಾದ ರಾಚುರ (ರಾಯಚೂರ) ನರಸಪಯರು, ಮಹಾಮಂಡಳೇಶ್ವರರಾದ ಮರಾಟೆಯ ವಿಟಲೇಶ್ವರದೇವ ಮಹಾ ಅರಸುಗಳಿಗೆ ಪುಣ್ಯವಾಗಲಿ ಎಂದು ಜಕ್ಕೂರಿನ ಅಲ್ಲಾಳನಾಥ ದೇವರಿಗೆ ಅಲ್ಲಾಳಸಂದ್ರ ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿರುವ ಉಲ್ಲೇಖವಿದೆ. ಈ ಸಮಯದಲ್ಲಿ ಕರ್ನಾಟಕ ಸಾಮ್ರಾಜ್ಯದ ಸದಾಶಿವರಾಯನು ರಾಜನಾಗಿರುತ್ತಾನೆ.

ಶಾಸನದ ಅನುವಾದ


ಶಾಸನದ ಪಾಠವನ್ನು ಸರಳವಾಗಿ ಅರ್ಥೈಸುವ ಕಾರಣದಿಂದ ಶಾಸನ ಪಾಠವನ್ನು ದಪ್ಪಕ್ಷರಗಳಲ್ಲಿ ತೋರಿಸಿದ್ದು, ಇದನ್ನು ವಾಕ್ಯಗಳಾಗಿ ಬಿಡಿಸಿ ಅವುಗಳ ಅರ್ಥವನ್ನು ಕೊಡಲಾಗಿದೆ. ಶಾಸನದಲ್ಲಿ ಒಂದೊಂದು ಸಾಲುಗಳನ್ನು ಗುರುತಿಸಲು '0' ನೀಡಿರುವುದನ್ನು ಕಾಣಬಹುದು.

0 - ಸಾಲುಗಳನ್ನು ಗುರುತಿಸಲು ವೃತ್ತಾಕಾರದ (0) ಚಿಹ್ನೆಯನ್ನು ಬಳಸಲಾಗಿದೆ.


ಶ್ವಸ್ತಿ ಶ್ರೀ - ಸ್ವಸ್ತಿಶ್ರೀ, ಶುಭವಾಗಲಿ ಎಂಬ ಮಂಗಳಸೂಚಕ ಪದ

ವಿಜಯಾಭ್ಯುದಯ ಸಾಲಿವಾಹನ ಸಕ ವರುಷ ೧೪೬೨ ನೆಯ ಕ್ರೋಧಿ ಸಂವತ್ಸರದ - ಭಾರತೀಯ ಕಾಲಗಣನೆಯ ಪ್ರಕಾರ ಶಾಸನ ಹಾಕಿಸಿರುವ ವರ್ಷ 1462. ಇದನ್ನು ಪ್ರಸ್ತುತ ಕಾಲಮಾನಕ್ಕೆ ಹೊಂದಿಸಲು ಅಂದರೆ 1462ಕ್ಕೆ 78ನ್ನು ಸೇರಿಸಿದರೆ 1540 ಬರುತ್ತದೆ. ಇದು ಜೂಲಿಯನ್ ಕಾಲಮಾನದ ಪ್ರಕಾರ ಶಾಸನ ಹಾಕಿಸಿರುವ ವರ್ಷವಾಗಿದೆ.

ಶಾಸನದಲ್ಲಿರುವ ವಿಜಯಾಭ್ಯುದಯ




ಶಾಸನದಲ್ಲಿರುವ ಸಾಲಿವಾಹನ



ಶಾಸನದಲ್ಲಿರುವ ಕ್ರೋಧಿ



ಶಾಸನದಲ್ಲಿರುವ ಸಂವತ್ಸರದ




ಮಾರ್ಗ್ಗಸಿರ - ಶಾಸನ ಹಾಕಿಸಿರುವ ಮಾಸ/ತಿಂಗಳು ಅಂದರೆ ಇಂದಿನ ನವೆಂಬರ್-ಡಿಸೆಂಬರ್ ತಿಂಗಳು.

ಶಾಸನದಲ್ಲಿರುವ ಮಾರ್ಗ್ಗಸಿರ



ಶುಹಿಲು - ಶು ಎಂದರೆ ಶುಕ್ಲ ಪಕ್ಷವನ್ನು ಸೂಚಿಸುತ್ತದೆ ಹಾಗೂ 5 ಎಂದರೆ ಶುಕ್ಲ ಪಕ್ಷದ ಐದನೇ ದಿನ (ಪಂಚಮಿ) ಎಂದರ್ಥ. ಒಂದು ಮಾಸದಲ್ಲಿ ಎರಡು ಪಕ್ಷಗಳಿದ್ದು ಅಂದರೆ ಶುಕ್ಲ/ಶುದ್ಧ ಪಕ್ಷ ಎಂದರೆ ಅಮವಾಸ್ಯೆಯಿಂದ ಹುಣ್ಣಿಮೆಯವರೆಗೆ, ಬಹುಳ/ಕೃಷ್ಣ ಪಕ್ಷ ಎಂದರೆ ಪೂರ್ಣಿಮೆಯಿಂದ ಅಮವಾಸ್ಯೆಯವರೆಗೆ.

ಶಾಸನದಲ್ಲಿರುವ ಶುಹಿ



ಶ್ರೀ ಮಂನ್ನ ಮಹರಾಜದಿರಾಜ ರಾಜಪರಮೆಶ್ವರ - ರಾಜನ ಹೆಸರು ಹೇಳುವ ಮೊದಲು ಅವನಿಗೆ ಹೊಗಳುವ ಪದ. ರಾಜನು ಪರಮೇಶ್ವರ (ಶಿವನಿಗೆ/ದೇವರ ಸಮಾನ) ನಾಗಿದ್ದಾನೆ.

ಶ್ರೀ ವಿರಪ್ರಥಾಪ ವೀರಸದಾಸಿವಮಾಹಾರಯರು - ಕರ್ನಾಟಕ ಸಾಮ್ರಾಜ್ಯ (ವಿಜಯನಗರ ಸಾಮ್ರಾಜ್ಯ)ದ ರಾಜ ಸದಾಶಿವರಾಯರು (ಕಾಲ - 1543-70)

ಪ್ರಿಥ್ವಿರಾಜ್ಯಂಗೆಉತಂಯಿರಲು - ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ

ಶ್ರೀಮಂನ್‌ಮಹಮಂಡಲೇಶ್ವರ - ರಾಜನ ಅಧೀನ ಆಡಳಿತಗಾರ, ಸಾಮಂತ.

ಶ್ರೀಮರಾಟೆಯ ವಿಟಲೇಶ್ವರದೇವ ಮಹಾಅರಸುಗಳ - ಮರಾಟೆ ಎಂಬುದು ಭಾಷೆ ಅಥವಾ ಪ್ರದೇಶವನ್ನು ಸೂಚಿಸುತ್ತದೆ. ಮರಾಟೆಯ ವಿಟಲೇಶ್ವರ ಎಂಬ ಅಧಿಕಾರಿ


ಶಾಸನದಲ್ಲಿರುವ ಮರಾಟೆಯ



ಕಾರ್ಯಕೆಕರ್ತ್ತರಾದ - ಕಾರ್ಯದರ್ಶಿ, ಪಾರುಪತ್ಯಗಾರ.

ರಾಚುರನರಸಪಯಗಳು - ರಾಚುರ (ರಾಯಚೂರ) ನರಸಪ್ಪಯ್ಯರು, ರಾಚುರು ಎಂಬುದು ಇಂದಿನ ರಾಯಚೂರು ಪ್ರದೇಶ. ನರಸಪಯ ಎಂಬುವರು ಕಾರ್ಯಕರ್ತರಾದವರು.

ಶಾಸನದಲ್ಲಿರುವ ನರಸಪಯ




ಜಕುರ - ಇಂದಿನ ಜಕ್ಕೂರು ಬಡಾವಣೆಯ ಹೆಸರು

ಶಾಸನದಲ್ಲಿರುವ ಜಕುರ



ಅಲ್ಲಾಳನಾಥ ದೇವರ - ಇಂದಿನ ಜಕ್ಕೂರು ಬಡಾವಣೆಯಲ್ಲಿದ್ದಂತಹ ಅಲ್ಲಾಳನಾಥ ದೇವರು.

ಶಾಸನದಲ್ಲಿರುವ ಅಲ್ಲಾಳನಾಥ



ಅಮ್ರುತಪಡಿ - ದೇವರಿಗೆ ಸಲ್ಲುವ ನೇವೇದ್ಯ


ಶಾಸನದಲ್ಲಿರುವ ಅಮ್ರುತಪಡಿ



ನೈವೇದ್ಯಕೆ - ದೇವರಿಗೆ ಅರ್ಪಿಸುವ ವಿಶೇಷವಾಗಿ ತಯಾರಾದ ಆಹಾರ ಪದಾರ್ಥ

ಎಲಕನಾಡ - ಇಂದಿನ ಎಲಹಂಕ ಪ್ರದೇಶ

ಶಾಸನದಲ್ಲಿರುವ ಎಲಕನಾಡ



ಸಿವನಸಮುದ್ರಾದ ಸೀಮೆವೊಳಗಣ - ಇಂದಿನ ಹೆಸರಘಟ್ಟ. ಇದೊಂದು ಸೀಮೆಯಾಗಿತ್ತು. ಸೀಮೆಯೆಂದರೆ ನಿರ್ಧಿಷ್ಟ ಗ್ರಾಮಗಳನ್ನು ಒಳಗೊಂಡಿರುವ ಪ್ರದೇಶ.

ಅಲಾಳಸಂದ್ರಾ, ಗ್ರಾಮವನು - ಇಂದಿನ ಅಲ್ಲಾಳಸಂದ್ರ ಗ್ರಾಮವನ್ನು

ಶಾಸನದಲ್ಲಿರುವ ಅಲಾಳಸಂದ್ರಾ,



ವಿಟಲೇಶ್ವರ ಅರಸುಗಳಿಗೆ - ಅಧಿಕಾರಿಯ ಹೆಸರು, ಮಹಾಮಂಡಲೇಶ್ವರನಾಗಿದ್ದ ವಿಟಲೇಶ್ವರ.

ಪುಣ್ಯವಾಗಾಬೇಕು ಯೆಂದು ಸಮರ್ಪಿಸಿದೆಉ - ಪುಣ್ಯವಾಗಬೇಕೆಂದು/ ಒಳಿತಾಗಲಿ ಎಂದು ನರಸಪಯ ನೀಡಿದೆವು

ಅ ಗ್ರಾಮಕೆ ಸಲುವ- ಆ ಗ್ರಾಮಕ್ಕೆ ಅಂದರೆ ಅಲ್ಲಾಳಸಂದ್ರ ಗ್ರಾಮಕ್ಕೆ ಸಲ್ಲುವಂತಹ

ಚತುಸೀಮೆ ವೊಳಾಗದ - ನಾಲ್ಕು ದಿಕ್ಕಿಗೆ ಒಳಗೆ/ನಾಲ್ಕು ಕಡೆಗಳ ಮೇರೆ.

ಕೆಱೆ - ಕೆರೆ, ಕೆರೆ ನೀರಿನ ಬಳಕೆಯ ಮೇಲಿನ ತೆರಿಗೆ ಹಾಗೂ ಮೀನು ಸಾಕಾಣಿಕೆ ಇತರೆ ಕಾರ್ಯ ಮಾಡಿದರೆ ಅದರ ಮೇಲೆ ತೆರಿಗೆ.

ಕುಂಟೆ - ಚಿಕ್ಕ ಚಿಕ್ಕ ನೀರಿನ ಕಟ್ಟೆಗಳ ಮೇಲಿನ ತೆರಿಗೆ. ಒಕ್ಕಲುತನದ ಭೂಮಿಯ ಅಳತೆ, ಮೂಲತಃ ನಿರ್ಧಿಷ್ಟ ಅವಧಿಯಲ್ಲಿ ಕುಂಟೆಯಿಂದ ಹರಗಲು ಸಾಧ್ಯವಾಗುವಷ್ಟು ಭೂಮಿಯು ಒಂದು ಅಳತೆಯಾಗಿ ಪರಿಗಣಿಸಿತು.

ಗದೆ - ಗದ್ದೆ, ನೀರಾವರಿ ಭೂಮಿ

ಬೆಜಲು - ಮಳೆಯಾಶ್ರಿತ ಭೂಮಿ/ ಮಳೆ ನೀರಿನಿಂದ ಬೆಳೆಯುವ ಹೊಲ.

ಗುಡೆ - ಕಾಳು/ಧಾನ್ಯದ ರಾಶಿ

ಗುಯಲು - ಒಂದು ಬಗೆಯ ಭೂಮಿ. ಪಾಳು ಭೂಮಿ

ತೋಟ - ನೀರಾವರಿಯಿಂದ ತೆಂಗು,ಅಡಿಕೆ, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುವ ನೆಲ

ತುಡಕೆ - ಭೂಮಿಯ ಚಿಕ್ಕ ಭಾಗ ಅಥವಾ ಹೂದೋಟದ ಮೇಲಿನ ತೆರಿಗೆಯಾಗಿದೆ.

ಕಾಡಾರಂಬ - ಮಳೆ ಅವಲಂಬಿಸಿರುವ ಸಾಗುವಳಿ ಭೂಮಿ ಅಥವಾ ನೀರಾವರಿ ಸೌಕರ್ಯವಿಲ್ಲದ ಒಕ್ಕಲುತನದ ಭೂಮಿಯ ಮೇಲಿನ ತೆರಿಗೆ.

ನಿರಾರಂಬ - ನೀರಾವರಿ ಭೂಮಿ, ನೀರಾವರಿ ಭೂಮಿಯ ಮೇಲಿನ ತೆರಿಗೆ.

(ಮುಂದಿನ ಮೂರು ಸಾಲುಗಳು ಕಲ್ಲು ಒಡೆದಿರುವುದರಿಂದ ಶಾಸನ ಪಾಠ ಸಿಕ್ಕಿಲ್ಲ. ಆದರೆ 1905ರಲ್ಲಿ ದಾಖಲಾಗಿರುವುದನ್ನು ಓದಿನ ಅನುಕೂಲಕ್ಕಾಗಿ ಇಲ್ಲಿ ಕೊಟ್ಟಿದೆ)

ಸಕಲಸಕಲ ಸುವರ್ಣಾದಾಯುಂಟಾದ - ಸಕಲ ಸುವರ್ಣಾದಾಯ, ಸಕಲ ಭತ್ತಾದಾಯ, ಹಣರೂಪದ ಆದಾಯ.

ಅಷ್ಟಭೋಗ - ಎಂಟು ಬಗೆಯ ಭೂಮಿಯ ಒಡೆತನದ ಅಧಿಕಾರಗಳು. ಎಂಟು ರೀತಿಯ ಭೋಗಗಳು- ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಅಗಾಮಿ, ಸಿದ್ಧ, ಸಾಧ್ಯ

ತೇಜಸ್ವಾಂಮ್ಯವನು - ಎಂಟು ಬಗೆಯ ಭೂಮಿಯ ಒಡೆತನದ ಸಂಪೂರ್ಣ ಅಧಿಕಾರ

ಸಮರ್ಪ್ಪಿಸಿದೆಉ - ಸಮರ್ಪಿಸಲಾಗಿದೆ

ಯೀ ಧರ್ಮ ಸಾಧನ... - ಇದೊಂದು ಧರ್ಮ ಶಾಸನ

ಶ್ವದತ್ತ ದ್ವಿಗುಣಂ ಪುಣ್ಯಂ ಪರದತ್ತನುಪಾಲನಂ ಪರದತ್ತಪಹಾರ್ರೇಣ ಸ್ವದತ್ತ ನಿಷ್ಪಲಂಬವೆತು - ಸ್ವದತ್ತ ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ ಪರದತ್ತಾಪಹಾರೇಣ ಸ್ವದತ್ತ ನಿಷ್ಫಲಂಭವೇತು- (ಈ ಶಾಪಾಷಯದ ಸಾಲು ಸಂಸ್ಕೃತದಲ್ಲಿದೆ) ತಾನು ನೀಡಿದ್ದಕ್ಕಿಂತ ಬೇರೆಯವರು ನೀಡಿದ್ದನ್ನು ಕಾಪಾಡಿದರೆ ಎರಡರಷ್ಟು ಪುಣ್ಯ ಬರುತ್ತದೆ, ಬೇರೆಯವರ ದಾನವನ್ನು ಅಪಹರಿಸಿದರೆ ತಾನು ನೀಡಿದ ದಾನ ನಿಷ್ಫಲವಾಗುತ್ತದೆ ಎಂಬರ್ಥ ಬರುತ್ತದೆ. ಇದು **ಅನುಸ್ತುಪ್ ಚಂದಸ್ಸಿನಲ್ಲಿ** ಬರುತ್ತದೆ.


ಯಿ ಧರ್ಮಕೆ ತಪಿದರೆ ಗಂಗೆಯಲಿ ಕಪಿಲೆರ ಕೊಂದ ಪಾಪಕೆ ಹೊವರು - (ಈ ಶಾಪಾಷಯದ ಸಾಲು **ಕನ್ನಡದಲ್ಲಿದೆ**) ದಾನವನ್ನು ಕೆಡಿಸಿದವರಿಗೆ ಶಿಕ್ಷೆ. ಕಾಶಿಯಲ್ಲಿ ಕಪಿಲೆ (ಕಂದು ಬಣ್ಣದ ಹಸು) ಕೊಂದ ಪಾಪ. ಗರುಡ ಪುರಾಣದ ಪ್ರಕಾರ ಈ ಪಾಪ ಮಾಡಿದವರಿಗೆ ಮುಂದಿನ ಜನ್ಮದಲ್ಲಿ ಗೂನು/ಬಾಗಿದ ಬೆನ್ನಿನವನಾಗಿ ಹುಟ್ಟುವ ಶಿಕ್ಷೆಯನ್ನು ಹೇಳಿದೆ.

ಭಾಷೆ ಮತ್ತು ಲಿಪಿ

ಈ ಶಾಸನದ ಲಿಪಿಕಾರ/ಶಾಸನ ಕರ್ತನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸರಳ ಭಾಷೆಯನ್ನು ಬಳಸಿ ಶಾಸನ ಕೆತ್ತಿದ್ದಾನೆ.

ಅಕ್ಷರಗಳ ವ್ಯತ್ಯಾಸ- 'ನ್' ಅಕ್ಷರವನ್ನು ಈ ಶಾಸನದಲ್ಲಿ ಇಂದು ತಲೆಕಟ್ಟನ್ನು ತಿರುವಿ ಬರೆಯುವಂತೆ ಬರೆದಿದ್ದು, ಇದು ಸುಮಾರು 8-9ನೇ ಶತಮಾನದ ಕಾಲದ ಶಾಸನದಲ್ಲಿ ಚಿಕ್ಕದಾಗಿ (ತಲೆಕಟ್ಟು ಇಲ್ಲದೆ) 'ನ' ಅಕ್ಷರ ಬರೆದರೆ ಅದನ್ನು'ನ್' ಎಂದು ಓದಿಕೊಳ್ಳುವ ರೂಢಿಯಿತ್ತು

ಶಾಸನದಲ್ಲಿರುವ 'ಮಂನ್'



ಕೆಲವು ಅಕ್ಷರಗಳನ್ನು ಅಲ್ಪಪ್ರಾಣ, ಮಹಾಪ್ರಾಣ ಅಕ್ಷರಗಳೆಂದು ವಾಕ್ಯವನ್ನು ಅನ್ವಯಿಸಿ ಓದಿಕೊಳ್ಳಬೇಕಾಗಿದೆ. ಉದಾ - **ದ,ಧ**.

ಶಾಸನದ ಮಹತ್ವ

i) ಮರಾಟೆ (ಮರಾಠಿ ಭಾಷೆ), ರಾಚುರ (ರಾಯಚೂರು- ಪ್ರದೇಶ/ಸ್ಥಳ) ಮುಂತಾದ ಪ್ರದೇಶಗಳ ಉಲ್ಲೇಖವಿದ್ದು ಇದು **ಭಾಷೆ ಮತ್ತು ಸಂಸ್ಕೃತಿಯ ಪಸರಿಸುವಿಕೆಯ ಬಗ್ಗೆ ತಿಳಿಸುತ್ತದೆ.**

ii) ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯವಿತ್ತು ಎಂಬುದನ್ನು ಈ ಶಾಸನವು ತಿಳಿಸುತ್ತದೆ. ಆದರೆ **ಇಂದು ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯವಿಲ್ಲ.**

iii) ಈ ಶಾಸನದಲ್ಲಿ ಅಲ್ಲಾಳಸಂದ್ರ, ಜಕ್ಕೂರು, ಸಿವನಸಮುದ್ರ(ಹೆಸರುಘಟ್ಟ), ರಾಚುರು(ರಾಯಚೂರು), ಎಲಹಂಕ ಊರುಗಳ ಉಲ್ಲೇಖವಿದ್ದು, ಇದರಿಂದ ಈ ಪ್ರದೇಶಗಳ ನಡುವೆ ಸಾಂಸ್ಕೃತಿಕ ಸಂಬಂಧ ಇತ್ತೆಂದು ತಿಳಿದುಬರುತ್ತದೆ.

iv) ಈ ಶಾಸನದಲ್ಲಿ **ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆ**ಯಲ್ಲಿ ಎರಡು ಶಾಪಾಷಯವನ್ನು ಬರೆದಿದೆ. ಗ್ರಾಮಸ್ಥರು/ಸ್ಥಳೀಯರಿಗೆ ಕನ್ನಡ ಭಾಷೆಯನ್ನು, ಪಂಡಿತರಿಗಾಗಿ ಸಂಸ್ಕೃತ ಭಾಷೆಯನ್ನು ಬಳಸಿದ್ದಾರೆ.

v) ಈ ಶಾಸನವು **ಅಂದಿನ ಅಲ್ಲಾಳಸಂದ್ರ ಪ್ರದೇಶದ ಆರ್ಥಿಕ ವ್ಯವಸ್ಥೆ, ತೆರಿಗೆಗಳನ್ನು ತಿಳಿಯಲು ಅತ್ಯಂತ ಉಪಯುಕ್ತ ಸಾಧನವಾಗಿದೆ.**

vi) ಈ ಶಾಸನದ ಮೂಲಕ ಅಲ್ಲಾಳಸಂದ್ರದ ಕೆರೆಯು ಸುಮಾರು 500 ವರ್ಷ ಹಳೆಯದು ಎಂಬುದು ತಿಳಿಯುತ್ತದೆ

6. ಅಲ್ಲಾಳಸಂದ್ರದ ಸಾ.ಶ.1340ರ ಕಾಮೆಯ ದಂಣ್ನಾಯಕರ ದಾನ ಶಾಸನ

ಅಲ್ಲಾಳಸಂದ್ರದ ಸುಮಾರು 700 ವರ್ಷದ ಹಿಂದಿನ ಈ ಶಾಸನವು ಹಾರಮರವೂರ ಕೋಟೆ ಹಾಗೂ ಅಲ್ಲಿನ ಕೆರೆಗೆ ಆಧಾರ ಒದಗಿಸುತ್ತದೆ. ಹಾರಮರವೂರ ಎಂಬುದು ಬಹುಶಃ ಇಂದಿನ ಅಲ್ಲಾಳಸಂದ್ರವೇ ಆಗಿರಬಹುದು. ಈ ಶಾಸನವು ಗದ್ದೆ ಬೆದಲನ್ನು ಉಲ್ಲೇಖಿಸುವುದರಿಂದ ಅಲ್ಲಾಳಸಂದ್ರದ ಕೆರೆಯು ಸುಮಾರು 700 ವರ್ಷಗಳ ಹಿಂದಿನದ್ದು ಎಂಬುದು ತಿಳಿಯುತ್ತದೆ. ಮತ್ತು ಈ ಶಾಸನವು ನಾಡಸೇನಬೋವ (ತೆರಿಗೆ ವಸೂಲಿಗಾರ) ಎಂಬ ಪದವನ್ನು ಉಲ್ಲೇಖಿಸುವುದರಿಂದ ಸುಮಾರು 650 ವರ್ಷಗಳ ಹಿಂದೆಯೇ ಇಲ್ಲಿನ ಜನರು ತೆರಿಗೆಯನ್ನು ಕಟ್ಟುತ್ತಿದ್ದರು ಹಾಗೂ ಈ ತೆರಿಗೆಯನ್ನು ವಸೂಲಿ ಮಾಡಲು ಒಬ್ಬ ವ್ಯಕ್ತಿಯೂ ಇದ್ದನು ಎಂಬುದನ್ನು ಈ ಶಾಸನ ತಿಳಿಸುತ್ತದೆ.

ಬೆಂಗಳೂರು ನಗರದಲ್ಲಿ ಈ ಮೊದಲು ಪತ್ತೆಯಾಗಿದ್ದ ಸುಮಾರು 175 ಶಾಸನಗಳಲ್ಲಿ ಇಂದು ಉಳಿದಿರುವುದು ಕೇವಲ 110 ಶಾಸನಗಳು ಮಾತ್ರ. ಉಳಿದ 65 ಶಾಸನಗಳು ತಿಳುವಳಿಕೆಯ ಕೊರತೆ, ನಿರಾಸಕ್ತಿ ಮತ್ತು ನಗರೀಕರಣದ ಪರಿಣಾಮವಾಗಿ ಕಳೆದ ಕೆಲವು ದಶಕಗಳಲ್ಲಿ ಸುಮಾರು 40% ರಷ್ಟು ಶಾಸನಗಳು ನಾಶವಾಗಿವೆ. ಹೀಗೆ ನಾಶವಾಗಿರುವ ಶಾಸನಗಳಲ್ಲಿ **ಅಲ್ಲಾಳಸಂದ್ರದ ಸಾ.ಶ.1340ರ ಕಾಮೆಯ ದಂಣ್ನಾಯಕರ ದಾನ ಶಾಸನವೂ ಒಂದು.**

ಶಾಸನದ ಶೋಧ

ಈ ಶಾಸನವನ್ನು 1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-31ರಲ್ಲಿ ಅಲ್ಲಾಳಸಂದ್ರ ಗ್ರಾಮಕ್ಕೆ ದಕ್ಷಿಣ ಕಡೆ ದಿಣ್ಣೆಯಲ್ಲಿ ಬಿದ್ದಿರುವ ಕಲ್ಲಿನಲ್ಲಿ ಎಂದು ದಾಖಲಾಗಿದ್ದು, **ಪ್ರಸ್ತುತ ಈ ಶಾಸನವು ಕಾಣೆಯಾಗಿದೆ.**

ಕಾಲ

ಶಾಸನದಲ್ಲಿ ಭಾರತೀಯ ಕಾಲಮಾನ **ಶಕಾಬ್ದ ೧೨೬೩ನೆಯ ವಿಕ್ರಮ ಸಂ ಕಾರ್ತ್ತಿಕ ಬ ೫ ಬೃ** ಎಂದಿದ್ದು, ಇದು ಜೂಲಿಯನ್ ಕಾಲಮಾನದ **ಪ್ರಕಾರ 10 ನವೆಂಬರ್ 1340 ಗುರುವಾರಕ್ಕೆ** ಸರಿಹೊಂದುತ್ತದೆ.

ಸಾರಾಂಶ

ಕಾಮೆಯ ದಂಡನಾಯ್ಕರ ಮಕ್ಕಳಾದ ಕಾಮೆಯ ದಂಣ್ನಾಯಕರು ಯಲಹಂಕ ನಾಡಸೇನಬೋವ ಅಲ್ಲಾಳರಿಗೆ ಹಾರಮರವೂರ ಕೋಟೆಯ ಪೂರ್ಬ್ಬಮರ್ಯಾದೆಯಾಗಿ ಸರ್ವಮಾನ್ಯದ ಕೊಡಗಿಯಾಗಿ ಕೊಟ್ಟಿದ್ದು, ಈ ಸಮಯದಲ್ಲಿ ಹೊಯ್ಸಳ ರಾಜವಂಶದ ಮೂರನೇ ವೀರಬಲ್ಲಾಳನು ಉಂಣಮಲೆ ಪಟ್ಟಣದಿಂದ ಆಳ್ವಿಕೆ ನಡೆಸುತ್ತಿರುತ್ತಾನೆ.

ಶಾಸನದ ಪಾಠ	
	ಎ.ಕ 09 ಬೆಂ-31 ಅದೇ ಗ್ರಾಮಕ್ಕೆ ದಕ್ಷಿಣಕಡೆ ದಿಂಣೆಯಲ್ಲಿ ಬಿದ್ದಿರುವ ಕಲ್ಲಿನಲ್ಲಿ
	(ಮುಂಭಾಗ)
1	ಸ್ವಸ್ತಿ ಶ್ರೀ ಶಕಾಬ್ದ ೧೨೬೩ನೆಯ
2	ವಿಕ್ರಮ ಸಂ ಕಾರ್ತ್ತಿಕ ಬ ೫ ಬ್ರಿ ದಂದು
3	ಶ್ರೀಮತು ಪ್ರತಾಪ ಚಕ್ರವರ್ತಿ ಶ್ರೀ
4	ಹೊಯ್ಸಳ ವಿರಬಲ್ಲಾಳ ದೆವರಸರು
5	ಉಂಣಮಲೆ ಪಟ್ಟಣದಲಿ ಪ್ರಿಥ್ವೀರಾಜ್ಯಂ
6	ಗೆಯುತ್ತಿರಲು ಶ್ರೀಮನುಮಹಾ ಪ್ರ
7	ಧಾನಂ ಕಾಮೆಯ ದಂಡನಾಯ್ಕರ ಮಕ್ಕ
8	ಳು ಕಾಮೆಯ ದಂಣ್ನಾಯಕರು ಯಲ
9	ಯಕನಾಡಸೇನಬೋವ ಅಲ್ಲಾಳರಿಗೆ
10	ಶಿಲಾಶಾಸನವ ಮಾಡಿಕೊಟ್ಟ ಕ್ರಮವೆಂ
11	ತೆಂದಡೆ ಹಾರಮರವೂರ ಕೋಟೆ
12	ಯ ಪೂರ್ಬ್ಬಮೆರ್ಯಾದೆಯ ಚತು
13	ಸೀಮೆ ಗದ್ದೆ ಬೆದ್ದಲು ಸೀಮೆ ಸಾಮ್ಯ
	(ಹಿಂಭಾಗ)
14	ವನುಳ್ಳದನುಳ್ಳದನು ಸರ್ವಮಾನ್ಯದ ಕೊ

15	ಡಗೆ ಆಗಿ ಚಂದ್ರಾದಿತ್ಯರುಳ್ಳಂ
16	ಬರಂಸಲುವಂತಾಗಿ ಶಿಲಾಶಾಸನ
17	ವ ಮಾಡಿಕೊಟ್ಟೆವು ಮಂಗಳ
18	ಮಹಾಶ್ರೀ ಶ್ರೀ

ಶಾಸನದ ಅನುವಾದ

ಸ್ವಸ್ತಿ ಶ್ರೀ - ಶುಭಸೂಚಕ, ಎಲ್ಲರಿಗೂ ಒಳ್ಳೆಯದಾಗಲಿ. (ಯಾವುದೇ ವಿಷಯವನ್ನು ಬರೆಯುವಾಗ ಶುಭವಾಗಲಿ/ ಶುಭ ಸಂಕೇತವನ್ನು ಬಳಸುವ ಹಾಗೇ. ಕಾಗದ ಅಥವಾ ಪುಸ್ತಕ ಬರೆಯುವಾಗ ಮೊದಲು ಓಂ/ಸ್ವಸ್ತಿಕ್ ಚಿಹ್ನೆಯನ್ನು ಬರೆಯುವ ಹಾಗೆ ಶಾಸನದಲ್ಲಿ ವಿಷಯ ಹೇಳುವ ಮೊದಲು ಸ್ವಸ್ತಿಶ್ರೀಯನ್ನು ಬರೆಯಲಾಗಿದೆ. ಕೆಲವೊಂದು ಶಾಸನದಲ್ಲಿ ದೇವರ ಶ್ಲೋಕ ಇರುತ್ತದೆ.)

ಶಕಾಬ್ದ - ಶಕವರ್ಷವನ್ನು ತಿಳಿಸುವ.

೧೨೬೩ನೆಯ - ಶಾಸನ ಹಾಕಿಸಿರುವ ವರ್ಷ.

ವಿಕ್ರಮ ಸಂ - ಭಾರತೀಯ ಕಾಲಮಾನದ ಪ್ರಕಾರ 60 ಸಂವತ್ಸರಗಳಿದ್ದು, ಅದರಲ್ಲಿ ವಿಕ್ರಮ ಸಂವತ್ಸರವು ಒಂದು. ಸಂ| ಎಂದರೆ ಸಂವತ್ಸರ ಎಂದರ್ಥ.

ಕಾರ್ತಿಕ - ಶಾಸನ ಹಾಕಿಸಿರುವ ತಿಂಗಳು ಅಂದರೆ ಅಕ್ಟೋಬರ್-ನವೆಂಬರ್ ತಿಂಗಳು.

ಬ ೫ - ಬ ಎಂದರೆ ಬಹುಳ/ಕೃಷ್ಣ ಪಕ್ಷವನ್ನು ಸೂಚಿಸುತ್ತದೆ ಹಾಗೂ ಐದು ಎಂದರೆ ಕೃಷ್ಣ ಪಕ್ಷದ 5ನೇ (ಪಂಚಮಿ) ತಿಥಿ.

ಬ್ರಿ ದಂದು - ಬ್ರಿ ಎಂದರೆ ಬೃಹಸ್ಪತಿವಾರ ಎಂದರ್ಥ. ಅಂದರೆ ಗುರುವಾರ.

ಶ್ರೀಮತು ಪ್ರತಾಪ ಚಕ್ರವರ್ತಿ - ರಾಜನಾಗಿರುವವನು ಚಕ್ರವರ್ತಿಯಾಗಿರುತ್ತಾನೆ ಎಂದು ಹೊಗಳಿ ಕರೆಯುವ ಹೆಸರು.

ಶ್ರೀ ಹೊಯ್ಸಳ - ರಾಜಮನೆತನದ ಹೆಸರು.

ವಿರಬಲ್ಲಾಳ ದೇವರಸರು - ಶಾಸನ ಹಾಕಿಸಿದಾಗ ಆಳ್ವಿಕೆ ಮಾಡುತ್ತಿದ್ದ ರಾಜ. ಹೊಯ್ಸಳ ರಾಜವಂಶದ ಮೂರನೇ ನರಸಿಂಹನ ಮಗನಾದ ಮೂರನೇ ವೀರಬಲ್ಲಾಳನು ಸಾ.ಶ.1291-1342ರವರೆಗೆ ಆಳ್ವಿಕೆ ಮಾಡಿದ ಪ್ರಸಿದ್ಧ ದೊರೆ.

ಉಂಣಮಲೆ ಪಟ್ಟಣದಲಿ - ಪ್ರಸ್ತುತ ತಮಿಳುನಾಡಿನಲ್ಲಿರುವ, ಇಂದಿನ ತಿರುವಣ್ಣಾಮಲೈ ಪಟ್ಟಣ. ವೀರ ಬಲ್ಲಾಳನ ರಾಜಧಾನಿ.

ಪ್ರಿಥ್ವೀರಾಜ್ಯಂಗೆಯುತ್ತಿರಲು - ಪ್ರಿಥ್ವಿ-ಭೂಮಿ, ಸಾಮ್ರಾಜ್ಯವನ್ನು ಆಳುತ್ತಿರುವಾಗ.

ಶ್ರೀಮನುಮಹಾ ಪ್ರಧಾನಂ - ಅಧಿಕಾರ/ಆಡಳಿತದಲ್ಲಿ ಉನ್ನತ ಸ್ಥಾನದಲ್ಲಿರುವವ/ಮಂತ್ರಿ.

ಕಾಮೆಯ ದಂಡನಾಯ್ಕರ - ಅಧಿಕಾರಿಯ ಹೆಸರು, ದಂಡನಾಯಕ ಎಂಬುದು ಸೈನ್ಯದ ಉನ್ನತ ಅಧಿಕಾರಿಯನ್ನು ಸೂಚಿಸುತ್ತದೆ.

ಮಕ್ಕಳು ಕಾಮೆಯ ದಂಣ್ಣಾಯಕರು - ಕಾಮೆಯ ದಂಡನಾಯ್ಕರ ಮಕ್ಕಳಾದ ಕಾಮೆಯ ದಂಣ್ಣಾಯಕರು, ದಂಣ್ಣಾಯಕ ಎಂಬುದು ಸೈನ್ಯದ ಉನ್ನತ ಅಧಿಕಾರಿಯನ್ನು ಸೂಚಿಸುತ್ತದೆ **(ದಾನ ನೀಡಿರುವವನ ಹೆಸರು).**

ಯಲಯಕ - ಯಲಯಕ ಎಂಬುದು ಪ್ರದೇಶದ ಹೆಸರು ಇಂದಿನ ಎಲಹಂಕ ಪ್ರದೇಶವನ್ನು **ಯಲಹಕ**, **ಯಕಹಂಕ**, **ಎಲಹಕ್ಕ** ಇತ್ಯಾದಿ ಹೆಸರುಗಳಾಗಿ ಕರೆಯುತ್ತಿದ್ದರು.

ನಾಡಸೇನಬೋವ ಅಲ್ಲಾಳರಿಗೆ - ನಾಡಸೇನಬೋವನಾಗಿ ಕಾರ್ಯನಿರ್ವಹಿಸುತ್ತಿದ್ದವನು (ದಾನ ಪಡೆದಿರುವ ವ್ಯಕ್ತಿಯ ಹೆಸರು).

ಹಳ್ಳಿಗಳಲ್ಲಿ ತೆರಿಗೆ ವಸೂಲಿ ಮಾಡುವ ಕಾರ್ಯ ಮಾಡುತ್ತಿದ್ದವನು

ಶಿಲಾಶಾಸನವ ಮಾಡಿಕೊಟ್ಟ - ದಾನ ನೀಡಿರುವ ಮಾಹಿತಿಯನ್ನು ಕಲ್ಲಿನ ಮೇಲೆ ಕೊರೆದು ನೀಡಿರುವುದು.

ಕ್ರಮವೆಂತೆಂದಡೆ - ಕ್ರಮವೇನೆಂದರೆ.

ಹಾರಮರವೂರ ಕೋಟೆಯ - ಇದೊಂದು ಪ್ರದೇಶದ ಕೋಟೆಯನ್ನು ಉಲ್ಲೇಖಿಸುತ್ತಿದ್ದು, ನಿಖರವಾಗಿ ಯಾವ ಪ್ರದೇಶವೆಂದು ಗುರುತಿಸಲು ಸಾಧ್ಯವಾಗಿಲ್ಲ. ಇಂದಿನ ಹೊರಮಾವು ಎಂಬುದು ಹಲವರ ಊಹೆ.

ಪೂರ್ಬ್ಬಮೆರ್ಯಾದೆಯ - ಮೊದಲಿನಿಂದ ನಡೆದು ಬಂದ ನಿಯಮಾವಳಿ[1].

ಚತುಸೀಮೆ - ನಾಲ್ಕು ದಿಕ್ಕಿನ ಎಲ್ಲೆ/ಗಡಿ

ಗದ್ದೆ - ನೀರಾವರಿ ಭೂಮಿ.

ಬೆದ್ದಲು - ಮಳೆಯಾಶ್ರಿತ ಭೂಮಿ/ ಮಳೆ ನೀರಿನಿಂದ ಬೆಳೆಯುವ ಭೂಮಿ.

ಸೀಮೆಸಾಮ್ಯವನುಳ್ಳದನುಳ್ಳದನು - ನಾಲ್ಕು ದಿಕ್ಕಿನಲ್ಲಿ ಬರುವ/ಉತ್ಪತ್ತಿಯಾಗುವ ಎಲ್ಲವನ್ನೂ.

ಸರ್ವಮಾನ್ಯದ ಕೊಡಗೆ ಆಗಿ - ಎಲ್ಲಾ ವಿಧವಾದ ತೆರಿಗೆಗಳಿಂದ ಮುಕ್ತವಾಗಿ ಮಾಡುವುದು.

ಚಂದ್ರಾದಿತ್ಯರುಳ್ಳಂಬರಂ - ಚಂದ್ರ ಸೂರ್ಯರು ಇರುವವರೆಗೂ.

ಸಲುವಂತಾಗಿ - ಸಲಬೇಕೆಂದು.

ಶಿಲಾಶಾಸನವ ಮಾಡಿಕೊಟ್ಟೆವು - ಶಿಲಾಶಾಸನವನ್ನು ಮಾಡಿಸಿಕೊಟ್ಟರು.

ಮಂಗಳ ಮಹಾಶ್ರೀ ಶ್ರೀ - ಮಂಗಳವಾಗಲಿ/ಶುಭವಾಗಲಿ.

ಶಾಸನದ ಮಹತ್ವ

i) ಈ ಶಾಸನವು ಹಾರಮರವೂರ ಕೋಟೆ ಎಂದಿದ್ದು ಪ್ರಸ್ತುತ ಇದು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ನಮ್ಮ ಅಭಿಪ್ರಾಯ ಬಹುಶಃ ಅಲ್ಲಾಳಸಂದ್ರವೇ ಹಾರಮರವೂರಕೋಟೆ ಆಗಿರಬಹುದು. ಇಂದಿನ

1 ಶ್ರೀನಿವಾಸ ರಿತ್ತಿ, *ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ*, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2000, ಪುಟಸಂಖ್ಯೆ-16.

ಹೊರಮಾವು ಪ್ರದೇಶವನ್ನು ಹಲವರು ಹಾರಮರವೂರ ಕೋಟೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ii) ಅಲ್ಲಾಳಸಂದ್ರದಲ್ಲಿನ ಸುಮಾರು 700 ವರ್ಷ ಪ್ರಾಚೀನವಾದ ಕೆರೆಯ ಉಲ್ಲೇಖವನ್ನು ಮೊಟ್ಟ ಮೊದಲ ಬಾರಿಗೆ ಈ ಶಾಸನದಲ್ಲಿ ಕಾಣಬಹುದು.

iii) ತೆರಿಗೆಗಳನ್ನು ಸಂಗ್ರಹಿಸಲು ಮತ್ತು ಲೆಕ್ಕಪತ್ರವನ್ನು ನೋಡಿಕೊಳ್ಳಲು ನಾಡಸೇನಬೋವ ಎಂಬ ಅಧಿಕಾರಿಗಳಿದ್ದರು ಎಂದು ಈ ಶಾಸನದ ಮೂಲಕ ತಿಳಿಯಬಹುದು. ಈ ಶಾಸನ ಹಾಕಿಸಿದ ಸಮಯದಲ್ಲಿ ಅಲ್ಲಾಳನು ಯಲಹಂಕ ನಾಡಿನ ನಾಡಸೇನಬೋವನಾಗಿದ್ದನು.

7. ಅಲ್ಲಾಳಸಂದ್ರದ ಸಾ.ಶ.1080ರ ರಾಮದೇವನ ಹಂದಿಬೇಟೆ ಶಾಸನ

ಈ ಶಾಸನವು ರಾಮದೇವ ಎಂಬುವವನು ಹಂದಿಬೇಟೆಯ ಸಂದರ್ಭದಲ್ಲಿ ವೀರಮರಣ ಹೊಂದಿದ ವಿಷಯವನ್ನು ತಿಳಿಸುತ್ತದೆ.

ಮನುಷ್ಯನು ಕಾಡಂಚಿನಲ್ಲಿ ಹಾಗೂ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ವ್ಯವಸಾಯ ಚಟುವಟಿಕೆಗಳನ್ನು ಮಾಡುತ್ತಿರುವಾಗ ಆಗಾಗ್ಗೆ ಕಾಡು ಪ್ರಾಣಿಗಳು ಈತನಿಗೆ ಮತ್ತು ಬೆಳೆಗಳಿಗೆ ಯಾವುದೇ ಮುನ್ಸೂಚನೆ ಇಲ್ಲದೇ ಹಾನಿ ಮಾಡುತ್ತಿದ್ದವು. ಅಂತಹ ಪ್ರಾಣಿಗಳಲ್ಲಿ ಹಂದಿಗಳು ಪ್ರಮುಖವಾದವು. ಕೆಲವು ರಾಜರು ಬೆಳೆಗಳಿಗೆ ಹಾನಿ ಮಾಡುವ ಈ ಹಂದಿಗಳನ್ನು ಬೇಟೆಯಾಡುತ್ತಿದ್ದರೂ ಸಹ ಇದು ಎಲ್ಲಾ ಸಂದರ್ಭಗಳಲ್ಲಿಯೂ ಸಾಧ್ಯವಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಸ್ಥಳೀಯರೇ ಈ ಕಾಡುಮೃಗಗಳು ಅಥವಾ ಹಂದಿಗಳ ಹಾವಳಿಯ ವಿರುದ್ಧ ಹೋರಾಡುವ ಸಂದರ್ಭ ಒದಗಿ ಬರುತ್ತದೆ. **ಇಂತಹ ಸಮಯದಲ್ಲಿ ಅವರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಗ್ರಾಮದ ಜನರು ಹಾಗೂ ಬೆಳೆಗಳನ್ನು ರಕ್ಷಿಸಲು ಹೋರಾಡುತ್ತಾರೆ**. ಇಂತಹ ಸಂದರ್ಭದಲ್ಲಿ ಅವನು ಬದುಕಲೂಬಹುದು ಅಥವಾ ಸಾಯಲೂಬಹುದು. ಹೀಗೆ ಗ್ರಾಮದ ಹಿತಕ್ಕಾಗಿ ಹೋರಾಡಿ ತನ್ನ ಪ್ರಾಣವನ್ನು ತ್ಯಾಗ ಮಾಡಿದ ವ್ಯಕ್ತಿಯನ್ನು ವೀರನೆಂದು ಭಾವಿಸಿ, ಅವನಿಗೆ ಕೃತಜ್ಞತೆಯನ್ನು ಸಲ್ಲಿಸಲು ವೀರಗಲ್ಲನ್ನು ಸ್ಥಾಪಿಸಲಾಗುತ್ತದೆ. ಈ ರೀತಿಯಾಗಿ ರಾಮದೇವನು ಹಂದಿಯ ಬೇಟೆಗೆ ಹೋಗಿ ದೊಡ್ಡ ಹಂದಿಯೊಂದಿಗೆ ಹೋರಾಡಿ ಅದನ್ನು ಕೊಲ್ಲುತ್ತಾನೆ ಹಾಗೂ ಆ ಹಂದಿಯ ದಾಳಿಯಿಂದ ಆದ ಗಾಯಗಳಿಂದ ಅವನೂ ಸಹ ಸಾಯುತ್ತಾನೆ. ಈ ರೀತಿಯ ಶಾಸನವು ಅಲ್ಲಾಳಸಂದ್ರ ಗ್ರಾಮದಲ್ಲಿ ದಾಖಲಾಗಿದೆ.

ಶಾಸನದ ಶೋಧ

ಈ ಶಾಸನವನ್ನು 1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-31ರಲ್ಲಿ, **ಅಲ್ಲಾಳಸಂದ್ರ ಗ್ರಾಮಕ್ಕೆ ಆಗ್ನೇಯ ಕೆಂಪಾಪುರದ ಮುನಿಯಪ್ಪನ ಪಾಳು ಜಮೀನಿನಲ್ಲಿರುವ ಕಲ್ಲು** ಎಂದು ದಾಖಲಾಗಿದ್ದು, **ಸದ್ಯಕ್ಕೆ ಈ ಶಾಸನ ಪತ್ತೆಯಾಗಿಲ್ಲ.** ಈ ಶಾಸನ ದಾಖಲಾಗಿರುವ ಜಮೀನು ಈಗ GKVK ಆವರಣದಲ್ಲಿರುವುದರಿಂದ ಒಮ್ಮೆ ಹುಡುಕಾಡಿದರೆ ಸಿಗಬಹುದು. ಈ ವೀರಗಲ್ಲು ಶಾಸನವು ದೊರೆತಿದ್ದರೆ ಶಿಲ್ಪದ ವಿವರಣೆಯನ್ನು ತಿಳಿಯಲು ಸಹಾಯಕವಾಗುತ್ತಿತ್ತು.

ಕಾಲ

ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವಿರುವುದಿಲ್ಲ, ಶಾಸನದಲ್ಲಿ ಬಂದಿರುವ **ರಾಜನಾದ ಚೋಳರ ದೊರೆ ಕುಲೋತ್ತುಂಗ ಚೋಳನ ಆಳ್ವಿಕೆಯ ಅವಧಿಯ ಆಧಾರದಲ್ಲಿ ಸಾ.ಶ.1080 ಎಂದು ರೈಸ್ ಅವರು ನಿಗದಿಪಡಿಸಿದ್ದಾರೆ**.

ಸಾರಾಂಶ

ರಾಮದೇವನು ಬೇಟೆಗೆ ಹೋಗಿ ಹಿರಿಯ ಹಂದಿ ತಾಗಿ ಕೊಂದು ಸ್ವರ್ಗಸ್ಥನಾದನು. ಈ ರಾಮದೇವನು ಸಂಬ್ಬುನಾಡನ್ನು ಆಳ್ವಿಕೆ ಮಾಡುತ್ತಿದ್ದ ಕಾಡೆಯನಾಯಕನ ಬಂಟನಾದ ಮುಮ್ಮಡಿ ಸೆಟ್ಟಿಯ ಮಗನಾದ ಹಾಗೂ ಗೂಳಿಯಣ್ಣನ ತಮ್ಮನಾಗಿರುತ್ತಾನೆ.

ಆ ಸಂದರ್ಭದಲ್ಲಿ ಚೋಳರ ದೊರೆ ಕುಲೋತ್ತುಂಗ ಚೋಳ ರಾಜನಾಗಿದ್ದನು

ಶಾಸನದ ಪಾಠ	
	ಎಪಿಗ್ರಾಫಿಯ ಕರ್ನಾಟಿಕ ಸಂಪುಟ 09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ 32
1	ಸ್ವಸ್ತಿ ಶ್ರೀ ಮಂನ್ಮಕುಲಥುಂಫ ಚೋಳ ಸಂಬ್ಬುನಾಡಾಳ್ವ
2	ಕಾಡೆಯನಾಯಕನ ಭಂಠನು ಮುಮ್ಮಡಿ ಸೆಟ್ಟಿಯ ಮಘನು
3	ಗೂಳಿಯಣನ ಥಮ್ಮನು ರಾಮದೇವನು ಬೇಟೆಗೆ ಹೊರವಟ್ಟು
4	ಹಿರಿಯ ಹಂದಿಗೆ ಬೇಂಟೆಯಲು ಬಿಟ್ಟಡೆ ತಾಗಿ ಕೊ
5	ನ್ದು ದ್ರಹ.. ಹ.. ಬಾಧೆಯುಂ.. ನು

ಶಾಸನದ ಅನುವಾದ

ಸ್ವಸ್ತಿ - ಎಲ್ಲರಿಗೂ ಒಳ್ಳೆಯದಾಗಲಿ.

ಶ್ರೀ ಮಂನ್ಮ - ವ್ಯಕ್ತಿಯ ಹೆಸರು ಹೇಳುವ ಮುನ್ನ ಬಳಸುವ ಗೌರವಸೂಚಕ ಪದ.

ಕುಲಥುಂಫ ಚೋಳ - ಇವನು ಚೋಳ ಅರಸರಲ್ಲಿ ಪ್ರಮುಖ ದೊರೆಯಾಗಿದ್ದು ಸಾ.ಶ.1070-1122 ರವರೆಗೆ ಆಳ್ವಿಕೆ ಮಾಡಿದ್ದು, ಬೆಂಗಳೂರು ಪ್ರದೇಶದ

ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದಲ್ಲಿ ಮುಕ್ತೇಶ್ವರ ದೇವಾಲಯವನ್ನು ಕಟ್ಟಿಸಿದವನಾಗಿದ್ದಾನೆ.

ಸಂಣುಮ್ಮನಾಡಾಳ್ವ - ಸಣ್ಣೆನಾಡನ್ನು ಸಂಣುಮ್ಮನಾಡು ಎಂದು ಕರೆದಿದ್ದು, ಇದೊಂದು ಆಡಳಿತ ವಿಭಾಗವಾಗಿತ್ತು.

ಕಾಡೆಯನಾಯಕನ - ಸಂಣ್ಣೆನಾಡನ್ನು ಆಳ್ವಿಕೆ ಮಾಡುತ್ತಿದ್ದ ಅಧಿಕಾರಿಯ ಹೆಸರು.

ಭಂಠನು - ಸೈನಿಕ; ಸಹಾಯಕ.

ಮುಮ್ಮಡಿ ಸೆಟ್ಟಿಯ - ಕಾಡೆಯನಾಯಕನ ಭಂಟನಾಗಿದ್ದವನು.

ಮಘನು - ಮುಮ್ಮಡಿ ಸೆಟ್ಟಿಯ ಮಗನು.

ಗೂಳಿಯಣನ ಥಮ್ಮನು - ಗೂಳಿಯಣ್ಣನ ತಮ್ಮನು.

ರಾಮದೇವನು - ವೀರಮರಣ ಹೊಂದಿದ ವೀರನ ಹೆಸರು ರಾಮದೇವ.

ಬೇಟೆಗೆ ಹೊರವಟ್ಟು - ಬೇಟೆಗೆ ಹೋದಾಗ.

ಹಿರಿಯ - ಹಿರಿದಾದ, ದೊಡ್ಡದಾದ.

ಹಂದಿಗೆ ಬೇಂಟೆಯಲು - ಹಂದಿಯ ಬೇಟೆಯಲ್ಲಿ.

ಬಿಟ್ಟಡೆ - ಬಿಟ್ಟಾಗ.

ತಾಗಿ - ಮುಟ್ಟುವುದು (ಮುಟ್ಟಿ).

ಕೊನ್ದು - ಕೊಂದಾಗ.

ದ್ರೆಹ . . ಹ . . ಬಾಧೆಯುಂ . . ನು - ಮರಣ ಹೊಂದಿ ಸ್ವರ್ಗಕ್ಕೆ ಹೋದ/ದೇಹ ತ್ಯಾಗ ಮಾಡಿದ.

ಭಾಷೆ

ಈ ಶಾಸನವು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿದ್ದು, ಶಾಸನಕಾರ ಸ್ವಲ್ಪ ಕ್ಲಿಷ್ಟಕರವಾಗಿ ಪದಗಳನ್ನು ಬಳಸಿದ್ದಾನೆ.

ಮಹತ್ವ

i) **ಶಾಸನೋಕ್ತ ಹಂದಿಬೇಟೆ ವೀರಗಲ್ಲುಗಳು ಅತ್ಯಂತ ಅಪರೂಪದಾಗಿದ್ದು,** ಇದು ಬೆಂಗಳೂರು ಪ್ರದೇಶದಲ್ಲಿ ದೊರೆತಿರುವ ಪ್ರಾಚೀನ ಹಂದಿಬೇಟೆ ಶಾಸನವಾಗಿದೆ.

ii) ಚೋಳರ ಕಾಲಘಟ್ಟದಲ್ಲಿ ತಮಿಳು ಭಾಷೆಯಲ್ಲಿ ಮಾತ್ರ ಶಾಸನಗಳನ್ನು ಹಾಕಿಸಿರುತ್ತಾರೆ ಎಂದು ಜನಸಾಮಾನ್ಯರು ತಿಳಿದುಕೊಂಡಿರುತ್ತಾರೆ. ಆದರೆ ಚೋಳರ ಕಾಲದಲ್ಲಿ ಕನ್ನಡದಲ್ಲಿಯೂ ಶಾಸನಗಳನ್ನು ಹಾಕಿಸುತ್ತಿದ್ದರು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

iii) ಅಲ್ಲಾಳಸಂದ್ರ ಗ್ರಾಮವು **ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವಂತೆ ಕಾಣುತ್ತದೆ**.



ದೇವನಹಳ್ಳಿ ತಾಲ್ಲೂಕಿನ ಸಾದೇನಹಳ್ಳಿಯ ಹಂದಿಬೇಟೆ ವೀರಗಲ್ಲು (ಮಾದರಿ ಚಿತ್ರ)

8. ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನ

ದಾಸರಹಳ್ಳಿಯಲ್ಲಿರುವ ಸುಮಾರು 500 ವರ್ಷದ ಹಳೆಯ ಶಾಸನವು ಚೌಡೇಶ್ವರಿ ದೇವಾಲಯದ ಮುಂದಿದ್ದು, ಈ ಪ್ರದೇಶದ ಜನರ ಜೀವನಾಡಿಯಾಗಿದ್ದ ಕೆರೆಯ ಬಗ್ಗೆ, ಭಂಟೆಯರಾಯ ದೇವಾಲಯದ ಬಗ್ಗೆ, ಚೊಕ್ಕನಹಳ್ಳಿ ಗ್ರಾಮದ ಬಗ್ಗೆ ಹಾಗೂ ಅನೇಕ ತೆರಿಗೆಗಳನ್ನು ದಾಖಲಿಸಿದೆ. ಈ ಪ್ರದೇಶದಲ್ಲಿ ಮಗ್ಗಗಳಿದ್ದು, ಬಟ್ಟೆ ತಯಾರಿಸುವ ನೆಯ್ಗೆ/ನೇಕಾರ ಜನರು ಇದ್ದರು ಎಂದು ತಿಳಿಯಲು ಈ ಶಾಸನ ಆಧಾರವಾಗಿದೆ.

ಶಾಸನದ ಶೋಧ


ಈ ಶಾಸನವನ್ನು 1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-57ರಲ್ಲಿ ದಾಸರಹಳ್ಳಿಯ ಚೌಡೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ನೆಟ್ಟಿರುವ ಕಲ್ಲು ಎಂದು ದಾಖಲಾಗಿದೆ. **ದಾಖಲಾಗಿ 115 ವರ್ಷಗಳಾದರೂ ಶಾಸನವನ್ನು ಅದೇ ರೀತಿಯಲ್ಲಿಯೇ ಸ್ಥಳೀಯರು ಸಂರಕ್ಷಿಸಿಕೊಂಡು ಬಂದಿರುತ್ತಾರೆ** (GPS 13°03'15.0"N 77°36'54.5"E).

ಶಾಸನದ ಕಾಲ

ಶಾಸನದಲ್ಲಿನ ಶಾಲಿವಾಹನ **ಶಕ ವರುಷ 1453ನೆಯ ಖರ ಸಂವತ್ಸರದ, ಮಾಘ, ಶು ಏಕಾದಶಿ** ಎಂದು ಹೇಳುತ್ತಿರುವ ದಿನಾಂಕವು ಜೂಲಿಯನ್ ಕಾಲಮಾನದ ಪ್ರಕಾರ **ಸಾ.ಶ. 17 ಫೆಬ್ರವರಿ 1532, ಶನಿವಾರಕ್ಕೆ ಸರಿಹೊಂದುತ್ತದೆ**.



ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನದ ಚಿತ್ರ.



3ಡಿ ಡಿಜಿಟಲ್ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನದ ಡಿಜಿಟಲ್ ಚಿತ್ರ

	ಎಪಿಗ್ರಾಫಿಯ ಕರ್ನಾಟಿಕ ಸಂಪುಟ 09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ 57	ನಮ್ಮ ತಂಡದ ಪಾಠ
1	ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ	o ಶುಭಮಸ್ತು ಸ್ವಸ್ತಿ ಶ್ರೀ ವಿಜಯಾತಭುದಯ
2	ಶಾಲಿವಾಹನ ಶಕ ವರುಷ ೧೪೧೨ ನೆಯ ಖರ	o ಶಾಲಿವಾಹನ ಶಕ ವರುಷ ೧೪(೫)೩ ನೆಯ ಖರ
3	ಸಂವತ್ ಸರದ ಮಾಗ ಸು ಏಕಾದಶಿಯಲು ಶ್ರೀ ಮನು	ಸಂವತ್ ಸರದ ಮಾಘ ಶು ಏಕಾದಸಿಯಲು ಶ್ರೀ ಮನ್
4	ಮಹಾ ರಾಜಾಧಿರಾಜ ರಾಜಪರಮೇಶ್ವ	o ಮಹಾರಾಜಾದಿರಾಜ ರಾಜಾಪರಮೇಶ
5	ರ ಆರಿರಾಯ ವಿಬಾಡ ಭಾಸೆಗೆ ತಪ್ಪುವ	ರ ಆರಿರಾಯ ವಿಭಾಡ ಭಾಷರೆ ತಪ್ಪುವ ರಾಯ
6	ರಾಯರ ಗಂಡ ಶ್ರೀ ವೀರ ಪ್ರತಾಪ ಶ್ರೀ ಅಚುತರಾಯ	o ರಾ ಗಂಡ ಶ್ರೀವೀರ ಪತಾಪ ಶ್ರೀ ಅಚುತರಾಯ
7	ಮಹಾರಾಯರು ಪ್ರಿಥ್ವೀರಾಜ್ಯಂಗೈಉತಿರ	o ಮಹರಾಯರು ಪೃಥ್ವಿ ರಾಜ್ಯಂಗೈಉತ್ತಿರ
8	ಲು ಅಚ್ಯುತರಾಯ ಮಹಾರಾಯರು ಕೆಂಪ	ಲು ಅಚ್ಚುತರಾಯ ಮಹರಾಯರು ಕೆಂಪ
9	ದೇವರಸ.... ಲೆಗೆ ನಾಯಕತನಕೆ ಪಾಲಿ	ದೇವರಸ ಆಂಣನವರಿಗೆ ನಾಯಕತನಕೆ ಪಾಲಿಸಿ
10	ಸಿದ ಎಲಹಕ ರಾಜ್ಯಕೆ ಸಲುವ ಸಿವನಸಮುದ್ರ	o ದ ಎಲಹಕ ರಾಜ್ಯಕೆ ಸಲುವ ಸಿವನಸಮುದ್ರ
11	ದ ಸೀಮೆ ಒಳಗಣ ಚೊಕ್ಕನಹಳ್ಳಿ ಎಂಬ ಗ್ರಾ	o ದ ಸೀಮೆ ವೊಳಗಣ ಚೊಕ್ಕನಹಳಿ ಎಂಬ ಗ್ರಾ
12	ಮವಂನು ನಂಮ [ಸ್ವಾ]ಮಿ ಅಚ್ಯುತರಾಯರಿಗೆ ಧರ್ಮ	o ಮವಂನೂ ನಂಮ ಸಾಮಿ ಆಚ್ಯುತರಾಯರಿಗೆ ದರ್ಮ್ಮ
13	ವಾಗಬೇಕೆಂದು ಪರುಚೆಯದೇವರ ಭೆ..	o ವಗಬೇಕೆಂದು ಪರುಚೆಯ ದೇವರ ಭೆಂಟೆ
14	ಯೀರಯನ ದೇವಸ್ಥಾನಕೆ ಅಂಗರಂಗ ವೈಭೋ	o ಯರಾಯನ ದೇವಸ್ತಾನಕ್ಕೆ ಆಂಗರಂಗ ವೈಭೋ
15	ಗಕ್ಕು......	o ಗಕಂ ಆಮೃತಪಡಿ.......
16	(ಮುಂದೆ ಕಾಣುವದಿಲ್ಲ.)	o ಯನವರು ಕೆಂಪದೇವರಸ ಆಂಣನ
17		o ವರಿಗೆ ದರ್ಮವಾಗಿ........
18		. ಟ್ಟಿ.... ಯಲೆನಾಯಕರು
19		.... ರಿಗೆ.. ವ.
20		....
21		o ಕ್ಷೇತ್ರ, ಗದ್ದೆ ಬೆಜಲು ತೋಟ ತುಡಕೆ ಆಣೆ
22		o ಆಚುಕಟು ಕಾಡರಂಭ ನೀರಾರಂಬ ಮ
23		o ನೆದೆಙ ಮಗ್ಗದೆಙ ಸುಂಕ ಸ್ವರ್ಣಆದಯ
24		ನಿದಿ ನಿಕ್ಷೇಪ ಜಲ ಪಷಣ ಅಕ್ಷೀಣಿ ಆಗಾ
25		ಮಿ ಸಿದ್ಧಸಾದ್ಯಂಗಳೆಂಬ ಅಷ್ಟಬೋ[ಗ]
		(ಶಾಸನದ ಮುಂದಿನ ಭಾಗದ ಕಲ್ಲು ಭೂಮಿಯಲ್ಲಿ ಹೂತು ಹೋಗಿದೆ)

	ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ-13	ನಮ್ಮ ತಂಡದ ಪಾಠ
1	ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ	o ಶುಭಮಸ್ತು ಸ್ವಸ್ತಿ ಶ್ರೀ ವಿಜಯಾತಭುದಯ
2	ಶಾಲಿವಾಹನ ಶಕ ವರುಷ ೧೪೫೩ ನೆಯ ಖರ	o ಶಾಲಿವಾಹನ ಶಕ ವರುಷ ೧೪(೫)೩ ನೆಯ ಖರ
3	ಸಂವತ್ಸರದ ಮಾಗಸು ಏಕಾದಶಿಯಲು ಶ್ರೀ ಮನು	ಸಂವತ್ ಸರದ ಮಾಘ ಶು ಏಕಾದಸಿಯಲು ಶ್ರೀ ಮನ್
4	ಮಹಾರಾಜಾಧಿರಾಜ ರಾಜಪರಮೇಶ್ವ	o ಮಹಾರಾಜಾದಿರಾಜ ರಾಜಾಪರಮೇಶ
5	ರ ಅರಿರಾಯ ವಿಭಾಡ ಭಾಸೆಗೆ ತಪ್ಪುವ	ರ ಆರಿರಾಯ ವಿಭಾಡ ಭಾಷರೆ ತಪ್ಪುವ ರಾಯ
6	ರಾಯರ ಗಂಡ ಶ್ರೀವೀರಪ್ರತಾಪ ಶ್ರೀ ಅಚುತರಾಯ	o ರಾ ಗಂಡ ಶ್ರೀವೀರ ಪತಾಪ ಶ್ರೀ ಅಚುತರಾಯ
7	ಮಹಾರಾಯರು ಪೃಥ್ವೀರಾಜ್ಯಂಗೈಉತಿರ	o ಮಹರಾಯರು ಪೃಥ್ವಿ ರಾಜ್ಯಂಗೈಉತ್ತಿರ
8	ಲು ಅಚ್ಯುತರಾಯ ಮಹಾರಾಯರು ಕೆಂಪ	ಲು ಅಚ್ಚುತರಾಯ ಮಹರಾಯರು ಕೆಂಪ
9	ದೇವರಸಗೌಡರಿಗೆ ನಾಯಕತನಕೆ ಪಾಲಿಸಿ	ದೇವರಸ ಆಂಣನವರಿಗೆ ನಾಯಕತನಕೆ ಪಾಲಿಸಿ
10	ದ ಎಲಹಕ ರಾಜ್ಯಕೆ ಸಲುವ ಸಿವನಸಮುದ್ರ	o ದ ಎಲಹಕ ರಾಜ್ಯಕೆ ಸಲುವ ಸಿವನಸಮುದ್ರ
11	ದ ಸೀಮೆ ಒಳಗಣ ಚೊಕ್ಕನಹಳ್ಳಿ ಎಂಬ ಗ್ರಾ	o ದ ಸೀಮೆ ವೊಳಗಣ ಚೊಕ್ಕನಹಳಿ ಎಂಬ ಗ್ರಾ
12	ಮವಂನು ನಂಮ ಸ್ವಾಮಿ ಅಚ್ಯುತರಾಯರಿಗೆ ಧರ್ಮ	o ಮವಂನೂ ನಂಮ ಸಾಮಿ ಆಚ್ಯುತರಾಯರಿಗೆ ದರ್ಮ್ಮ
13	ವಾಗಬೇಕೆಂದು ಕೆಂಪದೇವರಸಗೌಡರು ಬ	o ವಗಬೇಕೆಂದು ಪರುಚೆಯ ದೇವರ ಭೆಂಟೆ
14	ಯಿರವನ ದೇವಸ್ಥಾನಕೆ ಅಂಗರಂಗ ವೈಭೋ	o ಯರಾಯನ ದೇವಸ್ತಾನಕ್ಕೆ ಆಂಗರಂಗ ವೈಭೋ
15	ಗಕ್ಕು.....	o ಗಕಂ ಆಮ್ರುತಪಡಿ.......
16	(ಮುಂದಿನ ಅಕ್ಷರಗಳು ತ್ರುಟಿತವಾಗಿವೆ)	o ಯನವರು ಕೆಂಪದೇವರಸ ಆಂಣನ
17		o ವರಿಗೆ ದರ್ಮವಾಗಿ.........
18		. ಟ್ಟಿ.... ಯಲೆನಾಯಕರು
19		.... ರಿಗೆ.. ವ.
20		....
21		o ಕ್ಷೇತ್ರ ಗದ್ದೆ ಬೆಜಲು ತೋಟ ತುಡಕೆ ಆಣೆ
22		o ಆಚುಕಟು ಕಾಡರಂಭ ನೀರಾರಂಬ ಮ
23		o ನೆದೆಙ ಮಗ್ಗದೆಙ ಸುಂಕ ಸ್ವರ್ಣಆದಯ
24		ನಿದಿ ನಿಕ್ಷೇಪ ಜಲ ಪಷಣ ಅಕ್ಷೀಣಿ ಆಗಾ
25		ಮಿ ಸಿದ್ದ ಸಾದ್ಯಂಗಳೆಂಬ ಅಷ್ಟಬೋ[ಗ]
		(ಶಾಸನದ ಮುಂದಿನ ಭಾಗದ ಕಲ್ಲು ಭೂಮಿಯಲ್ಲಿ ಹೂತು ಹೋಗಿದೆ)

ಕಲ್ಲಿನ ಲಕ್ಷಣ

ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲನ್ನು ಬಳಸಿ ಶಾಸನವನ್ನು ಕೆತ್ತಲಾಗಿದೆ. ಈ ಕಲ್ಲು 207 ಸೆಂ.ಮೀ ಎತ್ತರ, 75 ಸೆಂ.ಮೀ ಅಗಲ, 6 ಸೆಂ.ಮೀ ದಪ್ಪವಿದ್ದು, ಶಿಲ್ಪಿಯು ಕಲ್ಲಿನ ಮುಂಭಾಗವನ್ನು ನಯಗೊಳಿಸಿಕೊಂಡು ಅಕ್ಷರಗಳನ್ನು ಕೆತ್ತಿದ್ದಾನೆ. ಈ ಶಾಸನ ಕಲ್ಲಿನಲ್ಲಿ 25 ಸಾಲುಗಳಿರುವುದನ್ನು ಕಾಣಬಹುದು.

ಶಾಸನದ ಸಾರಾಂಶ

..ಯಲೆನಾಯಕರು (ಶಾಸನ ಕೆಲವು ಕಡೆ ಅಕ್ಷರಗಳು ತೃಟಿತಗೊಂಡಿರುವುದರಿಂದ **ದಾನ ನೀಡಿದ ವ್ಯಕ್ತಿಯ ಹೆಸರು ಅಪೂರ್ಣವಾಗಿದೆ**) **ಕೆಂಪದೇವರಸಅಂಣ** ಹಾಗೂ ಅಚ್ಯುತರಾಯರಿಗೆ ಧರ್ಮವಾಗಲಿ ಎಂದು ಎಲಹಂಕ ರಾಜ್ಯಕ್ಕೆ ಸಲ್ಲುವ ಸಿವನಸಮುದ್ರದ ಸೀಮೆಯೊಳಗಿನ ಚೊಕ್ಕನಹಳ್ಳಿ ಎಂಬ ಗ್ರಾಮವನ್ನು ಭೆಂಟೆಯರಾಯ (ಬೇಟೆಯರಾಯ) ದೇವಸ್ಥಾನದ ಅಂಗರಂಗ ವೈಭೋಗ ಅಮೃತಪಡಿಗೆ ಅನೇಕ ತೆರಿಗೆಗಳನ್ನು ಬಿಟ್ಟುಕೊಡುವ ಮೂಲಕ ದಾನ ನೀಡಿರುವುದನ್ನು ದಾಖಲಿಸುತ್ತದೆ.

ಈ ಸಮಯದಲ್ಲಿ ಕರ್ನಾಟಕ ಸಾಮ್ರಾಜ್ಯದ ಅರಸ ಅಚ್ಯುತರಾಯರು ಆಳ್ವಿಕೆ ಮಾಡುತ್ತಿರುತ್ತಾರೆ.

(ಅಂಗ ರಂಗ ವೈಭೋಗ, ಅಮ್ರುತಪಡಿ ಹಾಗೂ ತೆರಿಗೆಗಳ ಬಗ್ಗೆ **ಪುಟ ಸಂಖ್ಯೆ 170**ರಲ್ಲಿ ವಿವರಿಸಲಾಗಿದೆ)

ಶಾಸನದ ಅನುವಾದ

೦ - ಸಾಲುಗಳನ್ನು ಗುರುತಿಸಲು ವೃತ್ತಾಕಾರದ (೦) ಚಿಹ್ನೆಯನ್ನು ಬಳಸಲಾಗಿದೆ. ಬಹುಭಾಗ ಸಾಲುಗಳಿಗೆ ಈ (೦) ಚಿನ್ಹೆಯನ್ನು ಕಾಣಬಹುದು.


ಶುಭಮಸ್ತು - ಶುಭಂ-ಅಸ್ತು, ಶುಭಮಸ್ತು (ಸಂಸ್ಕೃತ ಪದ) ಶುಭವಾಗಲಿ.

ಸ್ವಸ್ತಿ ಶ್ರೀ - ಶುಭವಾಗಲಿ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಅರ್ಥ ನೀಡುವ ಪದ.

ವಿಜಯಾತಭುದಯ - ವಿಜಯಾಭ್ಯುದಯ ಅಂದರೆ ವಿಜಯವು ಹೆಚ್ಚಾಗಲಿ.

ಶಾಲಿವಾಹನ ಶಕ ವರುಷ ೧೪(೫)೩ ನೆಯ ಖರ ಸಂವತ್ ಸರದ ಮಾಘ ಶು ಏಕಾದಸಿಯಲು - ಇದು ಶಾಸನ ಹಾಕಿಸಿರುವ ವರ್ಷ, ತಿಂಗಳು ಹಾಗೂ ದಿನ. ಇದು ಇಂದಿನ ಜೂಲಿಯನ್ ಕ್ಯಾಲೆಂಡರ್ ಪ್ರಕಾರ 1532 ಫೆಬ್ರವರಿ 17ರ ಶನಿವಾರ ಕ್ಕೆ ಸರಿ ಹೊಂದುತ್ತದೆ.

ಶಕ ವರುಷ



೧೪(೫)೩ ನೆಯ



ಶ್ರೀ ಮನ್ ಮಹಾರಾಜಾದಿರಾಜ ರಾಜಾಪರಮೇಶರ ಆರಿರಾಯ ವಿಭಾಡ ಭಾಷರೆ ತಪ್ಪುವ ರಾಯರಾ ಗಂಡ ಶ್ರೀವೀರ ಪತಾಪ - ಈ ಶಾಸನವನ್ನು ಹಾಕಿಸಿದ ಸಂದರ್ಭದಲ್ಲಿ ಆ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದ ರಾಜನಿಗಿದ್ದ ಬಿರುದುಗಳು. ರಾಜನ ಹೆಸರನ್ನು ಉಲ್ಲೇಖಿಸುವುದಕ್ಕೂ ಮೊದಲು ಆತನ ಬಿರುದುಗಳನ್ನು ಸಾಮಾನ್ಯವಾಗಿ ಶಾಸನಗಳಲ್ಲಿ ನಮೂದಿಸುತ್ತಿದ್ದರು.

ಶ್ರೀಮನ್ ಮಹಾರಾಜಾದಿರಾಜ - ಮಹಾರಾಜರಿಗೆ ರಾಜನಾದವನು.

ರಾಜಾಪರಮೇಶರ - ರಾಜರಲ್ಲಿ ಪರಮೇಶ್ವರ (ಶಿವ) ನಂತಿರುವವನು.

ಆರಿರಾಯ ವಿಭಾಡ - ಅರಿ- ಶತ್ರು, ರಾಯ-ಅರಸ, ವಿಭಾಡ-ನಾಶಪಡಿಸುವವನು ಎಂಬರ್ಥವಿದೆ. ಅರಿರಾಯ ವಿಭಾಡ ಎಂಬುದು ಶಕ್ತಿಶಾಲಿ, ಪರಾಕ್ರಮಶಾಲಿಯಾದ ಅರಸರ ನಾಶಮಾಡುವವ ಎಂದರ್ಥ.

ಭಾಷರೆ ತಪ್ಪುವ ರಾಯರಾ ಗಂಡ - ಆಡಿದ ಮಾತಿಗೆ/ ಕೊಟ್ಟ ಮಾತಿಗೆ ತಪ್ಪುವವರ ಅರಸರ ಅಧಿಪತಿ, ಕೊಟ್ಟ ಮಾತಿಗೆ ತಪ್ಪುವವರನ್ನು ಮಟ್ಟ ಹಾಕುವವನು.

ಶ್ರೀವೀರ ಪತಾಪ - ಪರಾಕ್ರಮಶಾಲಿಯಾದವನು.

ಶ್ರೀ ಅಚುತರಾಯ ಮಹಾರಾಯರು - ಶಾಸನ ಹಾಕಿಸುವ ಸಮಯದಲ್ಲಿ ಆಳ್ವಿಕೆ ಮಾಡುತ್ತಿದ್ದ ಕರ್ನಾಟಕ ಸಾಮ್ರಾಜ್ಯದ ರಾಜನ ಹೆಸರು. ಕರ್ನಾಟ/ಕರ್ನಾಟಕ ಸಾಮ್ರಾಜ್ಯವು ವಿಜಯನಗರ ಸಾಮ್ರಾಜ್ಯವೆಂದು ಪ್ರಸಿದ್ಧವಾಗಿದೆ.

ಅಚುತರಾಯ



ಪೃಥ್ವಿರಾಜ್ಯಂಗೈಉತ್ತಿರಲು - ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದ ಸಂದರ್ಭ.

ಅಚ್ಚುತರಾಯ ಮಹರಾಯರು - ವಿಜಯನಗರ ಸಾಮ್ರಾಜ್ಯದ ಅರಸ ಅಚ್ಯುತರಾಯ.

ಕೆಂಪದೇವರಸ ಆಂಣನವರಿಗೆ ನಾಯಕತನಕೆ ಪಾಲಿಸಿದ - ಕೆಂಪದೇವರಸ ಅಣ್ಣನವರಿಗೆ ನಾಯಕತನಕ್ಕೆ ಪಾಲಿಸಿರುವ.

ಕೆಂಪದೇವರಸಆಂಣ



ಎಲಹಕ ರಾಜ್ಯಕೆ ಸಲುವ - ಇಂದಿನ ಬೆಂಗಳೂರಿನ ಯಲಹಂಕ ಪ್ರದೇಶ. ಯಲಹಂಕ ಒಂದು ಆಡಳಿತ ವಿಭಾಗದ ರಾಜ್ಯವಾಗಿದ್ದರ ಸೂಚನೆ.

ಸಿವನಸಮುದ್ರದ ಸೀಮೆ ವೊಳಗಣ - ಸಿವನಸಮುದ್ರ, ಬೆಂಗಳೂರು ಸಮೀಪದ ಇಂದಿನ ಹೆಸರಘಟ್ಟವಾಗಿದೆ. 1532ರಲ್ಲಿ ಇದೊಂದು ಸೀಮೆಯೆಂದು ಕರೆಯಲ್ಪಡುವ ಆಡಳಿತ ಘಟಕವಾಗಿತ್ತು.

ಸಿವನಸಮುದ್ರ



ಚೊಕ್ಕನಹಳಿ ಎಂಬ ಗ್ರಾಮವಂನೂ - ಚೊಕ್ಕನಹಳ್ಳಿ ಎಂಬ ಗ್ರಾಮವನ್ನು (ಚೊಕ್ಕನಹಳ್ಳಿ ಎಂಬುದು ದಾಸರಹಳ್ಳಿಯಿಂದ 3 ಕಿ.ಮೀ. ದೂರದಲ್ಲಿರುವ ಇಂದಿನ ಚೊಕ್ಕನಹಳ್ಳಿ ಗ್ರಾಮ).

ಚೊಕ್ಕನಹಳಿ




ನಂಮ ಸಾಮಿ - ನಮ್ಮನ್ನಾಳುವ ಸ್ವಾಮಿ/ರಾಜ (ಇಲ್ಲಿ ಸ್ವಾಮಿ ಎಂಬ ಪದವು ನಮ್ಮ ನಾಯಕ).

ಆಚ್ಯುತರಾಯರಿಗೆ ಧರ್ಮ್ಮ ವಗಬೇಕೆಂದು - ಅಚ್ಯುತರಾಯರಿಗೆ ಒಳ್ಳೆಯದಾಗಬೇಕೆಂದು (ಶಾಸನ ಹಾಕಿಸಿದ ಸಂದರ್ಭದಲ್ಲಿ ಆಳ್ವಿಕೆ ಮಾಡುತ್ತಿದ್ದ ವಿಜಯನಗರ/ಕರ್ನಾಟಕ ಸಾಮ್ರಾಜ್ಯದ ಅರಸ).

ಪರುಚೆಯ ದೇವರ - ವ್ಯಕ್ತಿ/ಪ್ರದೇಶ/ದೇವರ ಹೆಸರು ಎಂಬುದು ಖಚಿತವಿಲ್ಲ.

ಭೆಂಟೆಯರಾಯನ ದೇವಸ್ತಾನಕ್ಕೆ - ಬೇಟೆರಾಯ ದೇವಾಲಯಕ್ಕೆ (ಬೇಟೆರಾಯ ಎಂಬುದು ವಿಷ್ಣುವಿನ ಹೆಸರು)

ಭೆಂಟೆಯರಾಯನ



ಆಂಗರಂಗ ವೈಭೋಗಕಂ - ದೇವರಿಗೆ ಅರ್ಪಿಸುವ ಮತ್ತು ದೇವರ ಮುಂದೆ ನಡೆಯುವ ಸಾಂಸ್ಕೃತಿಕ ಕಾರ್ಯಗಳು.

ಅಮೃತಪಡಿ - ದೇವರಿಗೆ ಸಲ್ಲುವ ನೈವೇದ್ಯ

...... ಯನವರು - ವ್ಯಕ್ತಿಯ ಹೆಸರು (ಅಸ್ಪಷ್ಟವಾಗಿದೆ)

ಕೆಂಪದೇವರಸ ಆಂಣನವರಿಗೆ - ಅಧಿಕಾರಿಯ ಹೆಸರು (ಕೆಂಪದೇವರಸ ಆಂಣನವರ ಬಗ್ಗೆ **ಪುಟ ಸಂಖ್ಯೆ 73**ರಲ್ಲಿ ಚರ್ಚಿಸಲಾಗಿದೆ)

ದರ್ಮವಾಗಿ - ಒಳ್ಳೆಯದಾಗಲಿ

.ಯಲೆನಾಯಕರು - ದಾನ ನೀಡಿರುವ ವ್ಯಕ್ತಿಯ ಹೆಸರು (ವ್ಯಕ್ತಿಯ ಹೆಸರು ಅಸ್ಪಷ್ಟವಾಗಿದೆ)

ಕ್ಷೇತ್ರ - ಹೊಲ/ ಕೃಷಿ ಭೂಮಿ

ಗದ್ದೆ - ನೀರಾವರಿ ಭೂಮಿ

ಬೆಜಲು - ಮಳೆಯಾಶ್ರಿತ ಭೂಮಿ/ಮಳೆ ನೀರಿನಿಂದ ಬೆಳೆಯುವ ಹೊಲ.

ತೋಟ - ನೀರಾವರಿಯಿಂದ ತೆಂಗು,ಅಡಿಕೆ, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುವ ನೆಲ

ತುಡಕೆ - ಭೂಮಿಯ ಚಿಕ್ಕ ಭಾಗ ಅಥವಾ ಹೂದೋಟದ ಮೇಲಿನ ತೆರಿಗೆಯಾಗಿದೆ[1].

ಆಣೆ - ಆಣೆಕಟ್ಟು.

ಆಚುಕಟು - ಕೆರೆ ಅಥವಾ ನದಿಯ ನೀರಾವರಿ ಪ್ರದೇಶದಲ್ಲಿರುವ ಭೂಮಿ.

ಕಾಡರಂಭ - ಮಳೆ ಅವಲಂಬಿಸಿರುವ ಸಾಗುವಳಿ ಭೂಮಿ ಅಥವಾ ನೀರಾವರಿ ಸೌಕರ್ಯವಿಲ್ಲದ ಒಕ್ಕಲುತನದ ಭೂಮಿಯ ಮೇಲಿನ ತೆರಿಗೆ[2].

ನೀರಾರಂಬ - ನೀರಾವರಿ ಭೂಮಿ.

ಮನೆದೆಱ - ಮನೆಗಳ ಮೇಲೆ ಹಾಕುವ ತೆರಿಗೆ.

ಮಗ್ಗದೆಱ - ನೆಯ್ಗೆಯ ಮಗ್ಗಗಳ ಮೇಲಿನ ತೆರಿಗೆ.

ಸುಂಕ - ತೆರಿಗೆ, ಸರಕುಗಳ ತಯಾರಿಕೆ, ಮಾರಾಟ, ಆಮದು, ರಫ್ತು ಇತ್ಯಾದಿಗಳಿಂದ ಸರಕಾರಕ್ಕೆ ಸಲ್ಲಿಸಬೇಕಾದ ತೆರಿಗೆ

ಆದಯ - ವರಮಾನ, ಲಾಭ, ಹುಟ್ಟುವಳಿ

1 ಶ್ರೀನಿವಾಸ ರಿತ್ತಿ, 2000, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು. ಪುಟ ಸಂಖ್ಯೆ 71

2 ಶ್ರೀನಿವಾಸ ರಿತ್ತಿ, 2000, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು. ಪುಟ ಸಂಖ್ಯೆ 42, 65

ನಿದಿ - ಸಂಪತ್ತು, ಐಶ್ವರ್ಯ, ಹುದುಗಿಟ್ಟ ಧನ, ನಿಯತ ಕಾರಣಕ್ಕಾಗಿ ಮೀಸಲಾಗಿಡುವ ಹಣ.

ನಿಕ್ಷೇಪ - ಠೇವಣಿ, ಹುದುಗಿಟ್ಟ ಹಣ, ಗುಪ್ತ ಧನ[3]. (ಯಾರಾದರೂ ಮರೆಮಾಡಿದ ಅಥವಾ ಸಂಗ್ರಹಿಸಿರುವ ನಿಧಿ)

ಜಲ - ನೀರು.

ಪಾಷಣ - ಕಲ್ಲು, ಶಿಲೆ[4]

ಅಕ್ಷೀಣಿ - ಶಾಶ್ವತ ಲಾಭ/ ಶಾಶ್ವತವಾದ ಪ್ರಯೋಜನಕ್ಕಾಗಿ,

ಆಗಾಮಿ - ಭವಿಷ್ಯದ ಅನುಕೂಲ/ಲಾಭಕ್ಕಾಗಿ/ ಪ್ರಯೋಜನಕ್ಕಾಗಿ

ಸಿದ್ದ - ಸಾಗುವಳಿ ಭೂಮಿಯಿಂದ ಬರುವ ಆದಾಯ,

ಸಾದ್ಯಂಗಳೆಂಬ - ಪ್ರಸ್ತುತ ಆದಾಯ ಹಾಗೂ ಭವಿಷ್ಯದಲ್ಲಿ ಗಳಿಸಬಹುದಾದ ಆದಾಯ[5]

ಅಷ್ಟಭೋ[ಗ] - ಎಂಟು ರೀತಿಯ ಭೂಮಿಯ ಒಡೆತನದ ಅಧಿಕಾರಗಳು, ಎಂಟು ಬಗೆಯ ಭೂಮಿಯ ಒಡೆತನಗಳೆಂದರೆ- ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಆಗಾಮಿ, ಸಿದ್ಧ, ಸಾಧ್ಯ

ಶಾಸನದ ಮಹತ್ವ

i) ಈ ಶಾಸನದಲ್ಲಿ ಉಲ್ಲೇಖವಾದ **ಕೆರೆಗೆ ಸುಮಾರು 500 ವರ್ಷಗಳ ಹಿಂದಿನ ಇತಿಹಾಸವಿದ್ದು, ಇಂದು ದಾಸರಹಳ್ಳಿ-ರಾಚೇನಹಳ್ಳಿ ಕೆರೆ ಎಂದು ಕರೆಯಲಾಗುತ್ತದೆ**. ಕೆರೆಯ ಪಕ್ಕದಲ್ಲಿರುವ ಆಯಾಯ ಗ್ರಾಮದವರು ತಮ್ಮ ಊರಿನ ಕೆರೆಯೆಂದು ಕರೆದುಕೊಳ್ಳುವುದು ವಾಡಿಕೆ.

iii) ಈ ಶಾಸನದಲ್ಲಿ **ಚೊಕ್ಕನಹಳ್ಳಿ** ಗ್ರಾಮದ ಉಲ್ಲೇಖವಿದೆ. ಆದುದರಿಂದ ಸಮೀಪದ **ಚೊಕ್ಕನಹಳ್ಳಿಗೂ ಸಹ ಸುಮಾರು 500 ವರ್ಷದ ಇತಿಹಾಸವಿದೆ** ಎಂದು ತಿಳಿಯುತ್ತದೆ.

ಚೊಕ್ಕನಹಳ್ಳಿ ಗ್ರಾಮದ ಹೆಸರನ್ನು ಈ ಮೊದಲು ಭಿನ್ನವಾಗಿ ಅರ್ಥೈಸಲಾಗಿತ್ತು. ಇದರ ಬಗ್ಗೆ ಸಂಕ್ಷಿಪ್ತವಾಗಿ "**3ಡಿ ಸ್ಕ್ಯಾನಿಂಗ್ ಮೂಲಕ ಮರು ಓದಿನಿಂದ ಕಂಡುಬಂದ ವಿಶೇಷ ಅಂಶಗಳು**" ಎಂಬ ಭಾಗದಲ್ಲಿ ಚರ್ಚಿಸಲಾಗಿದೆ.

ii) ಈ ಶಾಸನದಲ್ಲಿ **ಭೆಂಟೆಯರಾಯ ದೇವರ** ಪ್ರಸ್ತಾಪವಿದ್ದು, ಈ ಪ್ರದೇಶದಲ್ಲಿ ಬೇಟೆರಾಯನ ದೇವಾಲಯವಿತ್ತು ಎಂದು ಹೇಳಬಹುದು. ಬಹುಶಃ ಸಮೀಪದ **ಬ್ಯಾಟರಾಯನಪುರಕ್ಕೆ ಈ ಬೇಟೆರಾಯ ಹೆಸರೇ ಆಧಾರವಾಗಿರಬಹುದು**.

ಈ ಶಾಸನದಲ್ಲಿ ಉಲ್ಲೇಖವಾದ ಭೆಂಟೆಯರಾಯ ದೇವಾಲಯವು ಯಾವುದಿರಬಹುದೆಂದು ಗುರುತಿಸುವ ಪ್ರಯತ್ನ ಮಾಡಲಾಗುತ್ತಿದೆ. (**ಭೆಂಟೆಯರಾಯನ ದೇವಾಲಯದ ಬಗ್ಗೆ ಪುಟ ಸಂಖ್ಯೆ 106ರಲ್ಲಿ ಚರ್ಚಿಸಲಾಗಿದೆ**).

ಈ ಭೆಂಟೆಯರಾಯ ದೇವರ ಹೆಸರನ್ನು ಈ ಹಿಂದೆ ಬೇರೆ ಹೆಸರಿನಿಂದ ಓದಲಾಗಿತ್ತು. ಇದರ ಬಗ್ಗೆ ಸಂಕ್ಷಿಪ್ತವಾಗಿ "**3ಡಿ ಸ್ಕ್ಯಾನಿಂಗ್ ಮೂಲಕ ಮರು ಓದಿನಿಂದ ಕಂಡುಬಂದ ವಿಶೇಷ ಅಂಶಗಳು**" ಎಂಬ ಭಾಗದಲ್ಲಿ ಚರ್ಚಿಸಲಾಗಿದೆ.

iii) ನಾಡು, ಮಹಾನಾಡು ಎಂದು ಎಲಹಂಕವನ್ನು ಕರೆಯುತ್ತಿದ್ದು, ಈ ಶಾಸನದಲ್ಲಿ ಮೊದಲ ಬಾರಿಗೆ ಎಲಹಂಕ ರಾಜ್ಯ ಎಂಬ ಪ್ರಸ್ತಾಪವನ್ನು ಕಾಣಬಹುದು.

iv) ಈ ಶಾಸನವು ಹಲವು ಕೃಷಿ ತೆರಿಗೆಗಳ ಜೊತೆಗೆ **ಮಗ್ಗದೆರೆ** ಹಾಗೂ **ಮನೆದೆರೆ** (ಮನೆತೆರಿಗೆ/ಮನೆ ಕಂದಾಯ) ಹಾಗೂ **ಸುಂಕ**, **ಸುವರ್ಣಾದಾಯದ** (ನಗದು ಹಣ ರೂಪದ ತೆರಿಗೆ) ಬಗ್ಗೆ ದಾಖಲಿಸಿರುವುದು ವಿಶೇಷ. ಇದರಿಂದ ಅಂದಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಹಲವು ತೆರಿಗೆಗಳನ್ನು ತಿಳಿಯಲು ಸಹಾಯಕವಾಗುತ್ತದೆ.

ಶಾಸನದ ಭಾಷೆ ಮತ್ತು ಲಿಪಿ

ಈ ಶಾಸನವನ್ನು 489 ವರ್ಷಗಳ ಹಿಂದಿನ ಕಾಲದ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಕೆತ್ತಲಾಗಿದೆ.

1)ಹ ಅಕ್ಷರ ಇಂದಿನ ಪೂರ್ಣರೂಪದಂತೆ 1532ರಲ್ಲೇ ಪಡೆದಿರುವುದು ವಿಶೇಷ.

2)ಮಹಾಪ್ರಾಣ ಭ ಅಕ್ಷರ ಬೆಳವಣಿಗೆ ಆಗಿಲ್ಲ ಎಂಬುದಕ್ಕೆ ಬ ಮತ್ತು ಭ ಅಕ್ಷರಗಳಿಗೆ ಸ್ಪಷ್ಟವಾಗಿ ವ್ಯತ್ಯಾಸ ಗುರ್ತಿಸಬಹುದು. ಆದರೆ ದ, ಧ ಅಕ್ಷರಗಳಿಗೆ ವ್ಯತ್ಯಾಸ ಗುರ್ತಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ವ್ಯಾಕರಣ/ವಾಕ್ಯವನ್ನು ಅನ್ವಯಿಸಿ ಓದಿಕೊಳ್ಳಬೇಕು

3) ತ್ (ಸಂವತ್), ನ್ (ಶ್ರೀಮನ್) ಅರ್ಧ ಅಕ್ಷರ (ಮೂಲವ್ಯಂಜನ)ಗಳ ರೂಪ ಸ್ಪಷ್ಟವಾಗಿದೆ.

4) ಕೆಲವು ಪದಗಳನ್ನು ವ್ಯಾಕರಣಬದ್ಧವಾಗಿಲ್ಲ. ಉದಾಹರಣೆಗೆ ವಿಜಯಾತಭುದಯ - ವಿಜಯಾಭ್ಯುದಯ, ಆಂಗರಂಗ - ಅಂಗರಂಗ, ಆಮ್ರುತಪಡಿ - ಅಮ್ರುತಪಡಿ, ಆಚುತರಾಯ - ಅಚ್ಯುತರಾಯ, ಆಂಣ - ಅಂಣ, ಭಾಷರೆ ತಪ್ಪುವ - ಭಾಷೆಗೆ ತಪ್ಪುವ, ಪರಮೆಶರ - ಪರಮೇಶ್ವರ

5) ಹಾಗೆಯೇ ಕೆಲವು ಪದಗಳನ್ನು ವ್ಯಾಕರಣ ದೃಷ್ಟಿಯಿಂದ ಓದಿಕೊಳ್ಳಬೇಕು. ಉದಾಹರಣೆಗೆ ರಾಜಾದಿರಾಜ - ರಾಜಾಧಿರಾಜ, ನಿದಿ - ನಿಧಿ, ಸಿದ್ದ ಸಾದ್ಯ - ಸಿದ್ಧ ಸಾಧ್ಯ, ಸಿವನಸಮುದ್ರ - ಶಿವನಸಮುದ್ರ.

3 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1970, ಪುಟಸಂಖ್ಯೆ-4547.

4 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1970, ಪುಟಸಂಖ್ಯೆ-5564.

5 D.C sircar, Indian Epigraphical Glossary, 1966, page no 310-311

6) ದೀರ್ಘ ಸ್ವರದ ಬದಲಾಗಿ ಹೃಸ್ವಸ್ವರವನ್ನು ಬಳಸಲಾಗಿದೆ. ಉದಾಹರಣೆಗೆ ನಿಕ್ಷೆಪ - ನಿಕ್ಷೇಪ, ಅಕ್ಷಿಣಿ - ಅಕ್ಷೀಣಿ, ದೆವರು - ದೇವರು, ಪರಮೆಶ್ವರ - ಪರಮೇಶ್ವರ, ವೈಭೊಗ - ವೈಭೋಗ.

3ಡಿ ಸ್ಕ್ಯಾನಿಂಗ್ ಮೂಲಕ ಮರು ಓದಿನಿಂದ ಕಂಡುಬಂದ ವಿಶೇಷ ಅಂಶಗಳು

i) ಈ ಮೊದಲು ಶಾಸನದ 15 ಸಾಲುಗಳು ಮಾತ್ರ ದಾಖಲಾಗಿದ್ದು[6], ನಮ್ಮ 3ಡಿ ಸ್ಕ್ಯಾನಿಂಗ್ ಮೂಲಕ ಹೊಸದಾಗಿ 10 ಸಾಲುಗಳನ್ನು ದಾಖಲಿಸಲಾಗಿದೆ. ಇದರಲ್ಲಿ **ತೆರಿಗೆಗಳ ಉಲ್ಲೇಖ ಹಾಗೂ ದಾನ ನೀಡಿದ ವ್ಯಕ್ತಿಯ ಅಪೂರ್ಣ ಹೆಸರು ಸಿಕ್ಕಿರುವುದು ವಿಶೇಷ.**

ಈ ಮೊದಲು ಕೆಂಪದೇವರಸಗೌಡರೇ ದಾನಿ ಎಂದು ಕರೆಯಲಾಗಿದೆ[7]. ಆದರೆ ಇದರಲ್ಲಿ ಕೆಂಪದೇವರಸ ಅಂಣನವರಿಗೆ ಧರ್ಮವಾಗಬೇಕೆಂದು ಬರೆದಿದ್ದು, ಸ್ಪಷ್ಟವಾಗಿ ದಾನ ನೀಡಿದ ವ್ಯಕ್ತಿಯ ಹೆಸರು ಬೇರೆ ಎಂದು ಗುರುತಿಸಬಹುದು

ii) ಈ ಮೊದಲು ಶಾಸನದಲ್ಲಿ ಬಂದಿರುವ ಚೊಕ್ಕನಹಳ್ಳಿಯನ್ನು, ತಪ್ಪಾಗಿ ಚೊಕ್ಕನಾಥಪುರ ಎಂದು ನಮೂದಿಸಿ, ಇದನ್ನು ಇಂದಿನ ದೊಮ್ಮಲೂರು ಎಂದು ಹೇಳಿದ್ದಾರೆ[8]. ಆದರೆ ಚೊಕ್ಕನಹಳ್ಳಿ ಗ್ರಾಮವು ದಾಸರಹಳ್ಳಿಯಿಂದ ಮೂರು ಕಿ.ಮೀ. ದೂರದಲ್ಲಿಯೇ ಕಂಡುಬರುತ್ತದೆ. ಆದ್ದರಿಂದ **ಈ ಗ್ರಾಮವೇ ಶಾಸನೋಕ್ತ ಚೊಕ್ಕನಹಳ್ಳಿಯಾಗಿದೆಯೇ ಹೊರತು ದೊಮ್ಮಲೂರು** ಅಲ್ಲ ಎಂದು ಹೇಳಬಹುದು.

ii) ಈ ಶಾಸನದಲ್ಲಿ ಸ್ಪಷ್ಟವಾಗಿ ಗುರುತಿಸಿರುವ ಪರುಚೆಯ ದೇವರ ಭೆಂಟೆಯರಾಯನ ದೇವಸ್ಥಾನಕ್ಕೆ ಎಂಬ ವಾಕ್ಯವನ್ನು ಹಿಂದಿನ ಓದಿನಲ್ಲಿ ತಪ್ಪಾಗಿ ಓದಿದ್ದಾರೆ.

ಈ ಶಾಸನದ 13-14ನೇ ಸಾಲಿನಲ್ಲಿ ರೈಸ್ ಅವರು "ಪರುಚೆಯದೇವರ ಭೆ . . . ಯೀರಯನ ದೇವಸ್ಥಾನಕೆ" ಎಂದು ಓದಿದರೆ, ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ-13ರಲ್ಲಿ ಇದನ್ನು "ಕೆಂಪದೇವರಸಗೌಡರು ಬಯಿರವನ ದೇವಸ್ಥಾನಕೆ" ಎಂದು ಓದಲಾಗಿದೆ. ಆದರೆ ನಮ್ಮ 3ಡಿ ಡಿಜಿಟಲ್ ಸ್ಕ್ಯಾನಿಂಗ್ ಮೂಲಕ ಮರುಓದಿನಿಂದಾಗಿ "**ಪರುಚೆಯ ದೇವರ ಭೆಂಟೆಯರಾಯನ ದೇವಸ್ಥಾನಕ್ಕೆ"** ಎಂಬ ಪಾಠ ಸಿಕ್ಕಿದ್ದು, ಇಲ್ಲಿ ಕೆಂಪದೇವರಸಗೌಡರು **ಬಯಿರವನ** ಎಂಬ ಪದಗಳು ಸಿಕ್ಕಿರುವುದಿಲ್ಲ.

iii) **ಈ ಶಾಸನವು ಕೆಂಪದೇವರಸಅಂಣ ಎಂಬುವ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ. ಈ ಮೊದಲು ಈ ವ್ಯಕ್ತಿಯ ಹೆಸರನ್ನು ತಪ್ಪಾಗಿ ಓದಲಾಗಿದೆ.** ಈ ಶಾಸನವನ್ನು ಮೊದಲಿಗೆ ಬಿ.ಎಲ್.ರೈಸ್ ಅವರು[9] "ಕೆಂಪದೇವರಸ ...ಲೆಗೆ" ಎಂದು ಓದುವ ಮೂಲಕ ದಾಖಲು ಮಾಡಿರುತ್ತಾರೆ. ಆದರೆ ಎಂ.ಜಮುನ ಹಾಗೂ ಮತ್ತಿತರರು[10] ದಾಸರಹಳ್ಳಿ ಶಾಸನದಲ್ಲಿನ 8-9ನೇ ಸಾಲಿನಲ್ಲಿ ಕೆಂಪದೇವರಸ ನಂತರದ ಅಕ್ಷರಗಳ ತೃಟಿತವಾದ/ಸವೆದ ಭಾಗವನ್ನು ಕೆಂಪದೇವರಸಗೌಡ ಎಂದು ಓದಿರುತ್ತಾರೆ. ಇಲ್ಲಿ ಕೆಂಪದೇವರಸ ನಂತರದ ಅಕ್ಷರಗಳ ತೃಟಿತವಾದ/ಸವೆತವಾಗಿರುವ ಅಕ್ಷರಗಳನ್ನು (ರೈಸ್ ಅವರು ಖಾಲಿ ಬಿಟ್ಟಿದ್ದಾರೆ) ಗೌಡ ಎಂದು ಓದಿಕೊಂಡು, ಇದು ಯಲಹಂಕನಾಡ ಪ್ರಭು ಕೆಂಪೇಗೌಡನ ಶಾಸನ ಎಂದು ಹೇಳಿರುತ್ತಾರೆ. ಆದರೆ **ನಮ್ಮ 3D Scanning ನಲ್ಲಿ ಕೆಂಪದೇವರಸಅಂಣ ಎಂದು ಸ್ಪಷ್ಟವಾಗಿ ಗುರುತಿಸಲಾಗಿದೆ**. ಹಾಗಾಗಿ ಕೆಂಪೇಗೌಡ ಎಂದು ಈ ಶಾಸನದಲ್ಲಿ ಇರುವುದಿಲ್ಲವಾದ್ದರಿಂದ, ಇದು ಕೆಂಪೇಗೌಡರ ಮೂಲ ಶಾಸನ ಎಂದು ಹೇಳಲು ಬರುವುದಿಲ್ಲ. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ-13ನ್ನು ಹಲವು ಗ್ರಂಥಗಳಲ್ಲಿ ಮೂಲ ದಾಖಲೆಯಾಗಿ ಬಳಸಿಕೊಂಡಿದ್ದು, ಕೆಂಪೇಗೌಡರನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನ ಎಂದು ಹೇಳಿರುತ್ತಾರೆ[11]. ಆದ್ದರಿಂದ **ಈ ಶಾಸನವನ್ನು ಆಧಾರವಾಗಿಟ್ಟುಕೊಂಡು ಬರೆದ ಲೇಖನ ಮತ್ತು ಗ್ರಂಥಗಳನ್ನು ವಿಮರ್ಶಿಸಿ ಹೆಚ್ಚಿನ ಅಧ್ಯಯನ ಮಾಡುವ ಅವಶ್ಯಕತೆ ಇದೆ**.

6 ಬಿ.ಎಲ್.ರೈಸ್, ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09ರಲ್ಲಿ ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-57

7 ಎಂ.ಜಮುನ (ಪ್ರ. ಸಂ.), ಎಂ. ಜಿ.ಮಂಜುನಾಥ (ಸಂ.), ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, ಬೆಂ.ವಿ.ವಿ, 2006, ಪುಟ ಸಂಖ್ಯೆ - 26-27

8 ಎಂ.ಜಮುನ (ಪ್ರ. ಸಂ.), ಎಂ. ಜಿ.ಮಂಜುನಾಥ (ಸಂ.), ಯಲಹಂಕ ನಾಡ ಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, ಬೆಂ.ವಿ.ವಿ, 2006, ಪುಟ ಸಂಖ್ಯೆ - xxxviii

9 ಬಿ.ಎಲ್.ರೈಸ್, ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 09, ಬೆಂಗಳೂರು ತಾಲೂಕು, ಶಾಸನ ಸಂಖ್ಯೆ 57ರಲ್ಲಿ- 8-9 ನೇ ಸಾಲು.

10 ಎಂ.ಜಮುನ (ಪ್ರ. ಸಂ.), ಎಂ. ಜಿ.ಮಂಜುನಾಥ (ಸಂ.), ಯಲಹಂಕ ನಾಡಪ್ರಭುಗಳು ಶಾಸನ ಸಂಪುಟ, ಶಾಸನ ಸಂಖ್ಯೆ-13ರಲ್ಲಿ ಪ್ರಕಟವಾಗಿದೆ.

11 ಎಂ.ಜಮುನ (ಪ್ರ.ಸಂ), ಎಂ.ಜಿ.ಮಂಜುನಾಥ (ಸಂ), ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, 2006, ಪುಟಸಂಖ್ಯೆ - xxxviii.

9. ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧದ ಶಾಸನ

ಅರುಳಾಳ ಪೆರುಮಾಳ್ ಕಣ್ಣಪ್ಪನು ಸುಮಾರು 700 ವರ್ಷದ ಹಿಂದೆ ಅರುಳಾಳಮೂರ್ತಿ ಅಗ್ರಹಾರ ಎಂಬ ಈ ಊರನ್ನು ನಿರ್ಮಿಸಿದನು. ಈತನು ತಮ್ಮ ಪೂರ್ವಜರೊಬ್ಬರ ಶ್ರಾದ್ಧದ ವಿಧಿ-ವಿಧಾನವನ್ನು ನೆರವೇರಿಸಿ ವಿದ್ಯಾದಾನಕ್ಕಾಗಿ ಈ ಅಗ್ರಹಾರವನ್ನು ಸ್ಥಾಪಿಸಿದ್ದಾನೆ. ಸಾಮಾನ್ಯವಾಗಿ ಶ್ರಾದ್ಧವನ್ನು ಸೂತಕದ ವಾತಾವರಣದಲ್ಲಿ ನೆರವೇರಿಸಿದರೆ ಇಲ್ಲಿ ಅರುಳಾಳ ಪೆರುಮಾಳ ಕಣ್ಣಪ್ಪನು ಹೊಸ ವಿದ್ಯಾಕೇಂದ್ರವೊಂದನ್ನು (ಅಗ್ರಹಾರ) ಸ್ಥಾಪಿಸಿ ಮಾದರಿಯಾಗಿದ್ದಾನೆ. ಅಷ್ಟೇ ಅಲ್ಲದೆ ಈ ಶಾಸನವನ್ನು ದಾನ ನೀಡಿದ ದಿನ ಉತ್ತರಾಯಣ ಪುಣ್ಯಕಾಲ ಎಂದಿರುವುದರಿಂದ ಈ ಪ್ರದೇಶದ ಜನರಿಗೆ ಖಗೋಳ ಆಧಾರಿತ ಪುಣ್ಯದಿನಗಳ ಪರಿಚಯವಿತ್ತು ಎಂದು ತಿಳಿಯುತ್ತದೆ.

ಶಾಸನದ ಶೋಧ

1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-39a ರಲ್ಲಿ ಅಗ್ರಹಾರ ಗ್ರಾಮದಲ್ಲಿ ಎಂದು ದಾಖಲಾಗಿದೆ. ದಾಖಲಾದ 115 ವರ್ಷಗಳಲ್ಲಿ ಶಾಸನವನ್ನು ನೋಡಿದವರು ಬೆರಳೆಣಿಕೆಯಷ್ಟಿರಬಹುದು. ಅದರಲ್ಲಿ ಇತ್ತೀಚೆಗೆ ಕೆ.ಆರ್. ನರಸಿಂಹನ್, ಧನಪಾಲ್ ಮಂಚೆನಹಳ್ಳಿ, ಪಿ.ಎಲ್.ಉದಯ ಕುಮಾರ್, ಆರ್. ಯುವರಾಜು ಅವರುಗಳು ಶಾಸನವನ್ನು ನೋಡಿ ಸ್ಥಳೀಯರಿಗೆ ಶಾಸನದ ಮಾಹಿತಿ ತಿಳಿಸಿರುತ್ತಾರೆ.

ಸುಮಾರು 4-5 ವರ್ಷಗಳ ಹಿಂದೆ ನರಸಿಂಹನ್ ಮತ್ತು ಧನಪಾಲ್ ಅವರುಗಳು ಅಗ್ರಹಾರಕ್ಕೆ ಬಂದು ದೇವಾಲಯದ ಮುಂದೆ ರಸ್ತೆ ಪಕ್ಕದಲ್ಲಿನ ಶಾಸನವನ್ನು ನೋಡುವಾಗಲೇ ಒಡೆದು ಎರಡು ಹೋಳಾಗಿದ್ದ ಶಾಸನವನ್ನು ಒಂದರ ಮೇಲೆ ಒಂದು ಕೂರಿಸಲಾಗಿತ್ತು. ನರಸಿಂಹನ್ ಅವರು ಅಲ್ಲೇ ಇದ್ದ ಸ್ಥಳೀಯರನ್ನು ಕರೆದು ಶಾಸನವು ಹೇಗೆ ಒಡೆದು ಹೋಯಿತು ಎಂದು ಕೇಳಿದಾಗ ಹತ್ತು ವರ್ಷಗಳ ಹಿಂದೆ ರೋಡ್ ರೋಲರ್‌ನಿಂದಾಗಿ ಶಾಸನವು ಒಡೆದು ಎರಡು ಭಾಗಗಳಾಗಿದ್ದನ್ನು ಗೋಡೆಗೆ ಒರಗಿಸಿ ಒಂದರ ಮೇಲೆ ಒಂದು ಜೋಡಿಸಿ ಇಟ್ಟಿದ್ದೇವೆ ಎಂದು ಸ್ಥಳೀಯರು ಹೇಳಿದ್ದರು. ಅದೇ ಸಮಯದಲ್ಲಿ ರಸ್ತೆ ಕೆಲಸ ಸಹ ಶುರುವಾಗಿತ್ತು. ಇದನ್ನು ಕಂಡ ನರಸಿಂಹನ್ ಅವರುಗಳು ಅಲ್ಲಿದ್ದ ಸ್ಥಳೀಯರಿಗೆ ಹೇಳಿ ಶಾಸನವನ್ನು ವೇಣುಗೋಪಾಲ ದೇವಸ್ಥಾನದ ಹಿಂದಕ್ಕೆ ಇಡಿಸಿದ್ದರು.

ಕಾಲ

ಶಾಸನದಲ್ಲಿನ **ಶಕಾಬ್ಧ 1271ನೆಯ ವಿರೋಧಿ ಸಂವತ್ಸರ, ಮಕರ ಮಾಸ, ಶುಕ್ಲಪಕ್ಷ ಪಂಚಮಿ, ಉತ್ತರಾ ನಕ್ಷತ್ರದ ದಿನ** ಎಂದು ಹೇಳುತ್ತಿರುವ ದಿನಾಂಕವು ಜೂಲಿಯನ್ ಕಾಲಮಾನದ ಪ್ರಕಾರ (ಇಂದಿನ ಕ್ಯಾಲೆಂಡರ್ ಪ್ರಕಾರ) **ಸಾ.ಶ.13 ಜನವರಿ 1350 ಬುಧವಾರಕ್ಕೆ ಸರಿಹೊಂದುತ್ತದೆ.**

ಕಲ್ಲಿನ ಲಕ್ಷಣ


ಈ ಶಾಸನದ ಕಲ್ಲು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲಿನ ಪ್ರಕಾರವಾಗಿದ್ದು, ಈ ಕಲ್ಲಿನ ಎರಡೂ ಭಾಗವನ್ನೂ ನಯಗೊಳಿಸಿ ಸುಂದರವಾಗಿ ತಮಿಳು ಭಾಷೆ ಮತ್ತು ತಮಿಳು ಹಾಗೂ ಗ್ರಂಥ ಲಿಪಿಯಲ್ಲಿ ಶಾಸನವನ್ನು ಕೆತ್ತಲಾಗಿದೆ. ಕಲ್ಲಿನ ಮುಂಭಾಗದಲ್ಲಿ ಸೂರ್ಯ ಚಂದ್ರರ ರೇಖಾಚಿತ್ರ ಕಾಣಬಹುದು. ನೀಡಿರುವ ದಾನವು ಆ ಸೂರ್ಯ ಚಂದ್ರರು ಇರುವವರೆಗೂ ಶಾಶ್ವತವಾಗಿರಲಿ ಎಂಬ ಆಶಯವಾಗಿರುತ್ತದೆ. ಮುಂಭಾಗದಲ್ಲಿ 12 ಸಾಲುಗಳು ಹಾಗೂ ಹಿಂಭಾಗದಲ್ಲಿ 11 ಸಾಲುಗಳಿದ್ದು, ಈ ಶಾಸನ ಕಲ್ಲು 153 ಸೆಂ.ಮೀ ಎತ್ತರ, 101 ಸೆಂ.ಮೀ ಅಗಲ ಮತ್ತು 10 ಸೆಂ.ಮೀ ದಪ್ಪವಿದೆ.

ಸಾರಂಶ

ಅರುಳಾಳ ಪೆರುಮಾಳ್ ಕಣ್ಣಪ್ಪನು ತನಗೆ ಕೊಡುಗೆಯಾಗಿ ಬಂದ ಭೂಮಿಯಾದ ಚಮ್ಪಾತ್ತೈಪ್ಪಳ್ಳಿ (ಸಂಪಿಗೆಹಳ್ಳಿ) ಜಮೀನಿನಲ್ಲಿ ಅಗ್ರಹಾರವನ್ನು ನಿರ್ಮಿಸಿ, ಅದಕ್ಕೆ ಅರುಳಾಳಮೂರ್ತಿ ಅಗ್ರಹಾರ ಎಂದು ನಾಮಕರಣ ಮಾಡಿ ಅದನ್ನು 11 ಜನ ವಿಭಿನ್ನ ಗೊತ್ರದ ಬ್ರಾಹ್ಮಣರಿಗೆ ಶ್ರಾದ್ಧಕ್ಕಾಗಿ ದಾನ ನೀಡಿದನು. ಈ ದಾನದಲ್ಲಿ ವಿಳಾಙ್ಗುಟ್ಟೈ ಎಂಬ ಕೆರೆ ಮತ್ತು ಇತರ ಹೊಲ, ಗದ್ದೆ ಭೂಮಿಗಳು ಸೇರಿದ್ದವು. ಮಹಾ ಸಾಮಂತಾಧಿಪತಿಯಾದ ಮಯಿಲೆಯನಾಯಕ ಮತ್ತು ಇಳೈಪಾಕ್ಕನಾಡಿನವರ (ಎಲಹಕ್ಕ ನಾಡಗೌಡರ) ಸಮ್ಮುಖದಲ್ಲಿ ದಾನ ನೀಡಿದನು. ಆ ಸಂದರ್ಭದಲ್ಲಿ ಕರ್ನಾಟಕ ಸಾಮ್ರಾಜ್ಯದ ಅರಸ ಇಮ್ಮಡಿ ಹರಿಯಪ್ಪ ಒಡೆಯ ರಾಜ್ಯವಾಳುತ್ತಿದ್ದನು.



ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ ಶಾಸನವನ್ನು ಸಂರಕ್ಷಣೆ ಮಾಡಿರುವ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧ ಶಾಸನದ ಮುಂಭಾಗದ ಡಿಜಿಟಲ್ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧ ಶಾಸನದ ಹಿಂಭಾಗದ ಡಿಜಿಟಲ್ ಚಿತ್ರ

	ಕನ್ನಡ ಲಿಪ್ಯಂತರಣ	ತಂಡದ ಪಾಠ (ತಮಿಳು-ಗ್ರಂಥ)[1]
1	ಸ್ವಸ್ತಿ ಶ್ರೀಃ ಶಕಾಬ್ದಮ್ 1271ನ್ ಮೇಲ್	ஷுஷுி ஶ்ரீ:ஶகாஷு கதூஉாஎயக ன் மேல்
2	ಶೆಲ್ಲಾ ನಿನ್ ಱ ವಿರೋಧಿ ಸಂವತ್ಸರತ್ತು ಮಕರ ನಾ	செல்லா நின்ற விரொதி ஸ০வுஸாரத்து ஜகூர நா
3	ಯಱ್ ಱು ಪೂರ್ವಪಕ್ಷತ್ತು ಪ್ಪಞ್ಚಮಿಯುಂ ಪೆಱ್ ಱ ಉತ್ತಿರಟ್ಟಾ	யற்று வூவவூ வக்ஷத்து ப்பஞ்சமியும் பெற்ற உத்திரட்டா
4	ದಿ ನಾಳ್ ಸ್ವಸ್ತಿಶ್ರೀಃ ಅರಿರಾಜವಿಭಾಡನ್ ಭಾಷ್ಯೆ	தி நாள் ஸ்வஸ்தி ஸ்ரீ: அரிராஜ விபாடன் பாஷை
5	ಕ್ಕು ತ್ತಪ್ಪುವ ರಾಯರ್ ಗಣ್ಡನ್ ಶ್ರೀ ಇಮ್ಮಡಿ ಹರಿ	க்கு த்தப்புவ ராயர் ஹண்ணு ஶ்ரீ இம்மடி ஹரி
6	ಯಪ್ಪ ಉಡೈಯಾರ್ ಪೃಥ್ವಿರಾಜ್ಯಮ್ ಪಣ್ಣಿಯರುಳಾ	யப்ப உடையார் வுூயிவி ராஜு பண்ணியருளா
7	ನಿಱ್ ಗ ಸ್ವಸ್ತಿಶ್ರೀಃ ಮನ್‌ಮಹಾ ಸಾಮನ್ತಾಧಿಪತಿ ಮ	நிற்க ஷுஷுி ஶ்ரீ:மன் மஹா ஸாஜதாயிவதி ம
8	ಯಿಲಯ ನಾಯಕ್ಕರುಮ್ ಇಲೈಪ್ಪಾಕ್ಕ ನಾಟ್ಟವರುಮ್ [ಇ]	யிலய னாயக்கரும் இலைப்பாக்க நாட்டவரும்
9	ಸಂವತ್ತಶರತ್ತುವಾಯ್ ಅರುಳಾಳ ಪ್ಪೆರುಮಾಳ್	ஸ০வக்த்தசரத்து வாய் அருளாளப் பெருமாள்
10	ಕಣ್ಣಪ್ಪನೇನ ಎನ್ ಕುಡಙ್ಗೈಯಾ	கண்ணப்பநேன் என் குடங்கையா
11	ನ್ ನಿಲತ್ತಿಲ್ ಚಮ್ಪಾತ್ತೈಪ್ಪಳ್ಳಿಯಾನ	ன் நிலத்தில் சம்பாத்தைப்பள்ளி யான

1 ಸಂಸ್ಕೃತ ಪದಗಳನ್ನು ಬರೆಯಲು ತಮಿಳು ಲಿಪಿಯಲ್ಲಿ ಅಕ್ಷರಗಳ ಕೊರತೆ ಇರುವುದರಿಂದ ಪಂಡಿತರು ಸಂಸ್ಕೃತ ಪದಗಳಿಗಾಗಿಯೇ ವಿಶೇಷ ಲಿಪಿಯನ್ನು ಬಳಸಿರುವುದನ್ನು ಗ್ರಂಥ ಲಿಪಿ ಎಂದು ಕರೆಯಲಾಗಿದೆ.

12	ಅರುಳಾಳಗ ಮೂರ್ದಿಯ ಕರತ್ತುಕ್ಕು ಅಡೈತ್ತ ನಿಲಮ್	அருளாளக மூர்த்தியகரத்துக்கு அடைத்த நிலம்
ಹಿಂಭಾಗ (பின் பக்கம்)		
13	ವಿಳಾಙ್ಗುಟ್ಟೈಯುಮ್ ಪೆರಿಯೇ**ರಿ**	விளாங்குட்டையும் பெரியேரி
14	ಪಳ್ಳತ್ತುಕ್ಕು ಕಿೞಕ್ಕುಮ್ ಕೊಮ್‌ಪಿಲಿ ಎ**ಲ್ಲೈ**	பள்ளத்துக்கு கிழக்கும் கொம்பிலி எல்லை
15	ಕ್ಕು ತ್ತೆಱ್ ಕು ತ್ತತ್ತಳೈ ಶಿವರನ್ ಪಳ್ಳಿಕ್ಕು ಮೇಱ್	க்கு த்தெற்கு தத்தளை சிவரன் பள்ளிக்கு மேற்
16	ಕು ಇದುಕ್ಕು ಉಳ್ ಉಳ್ಳ ಸಕಲಪ್ರಾಪ್ತಿಯುಮ್ ಮೇ	கு இதுக்கு உள் உள்ள ஸகூ@ வ்ராஷ்தியும் மே
17	ಲ್ ನೋಕ್ಕಿನ ಮರಮುಮ್ ಕೀಣೋಕ್ಕಿನ ಕಿಣಱುಮ್ ನಞ್ ಜೆಯ್ ಪು	ல் நோக்கின மரமும் கீணோகின கிணறும் நஞ்சை பு
18	ಞ್ ಶೈ ನಾಱ್ ಪಾಲೆಲ್ಲೈಯುಮ್ ನಾನಾ ಗೋತ್ರೈಕಾದಶ	ஞ்சை நாற்பாலெல்லையும் நாநா ஹொசெுகாஉஶ
19	ಬ್ರಾಹ್ಮಣಱ್ ಕ್ಕು ಶ್ರಾದ್ಧಂಗ ಧಮ್ಮದಾನ ಪ್ರಮಾಣಮ್	ஸ்ராஹ்ணற்க்கு ஶ்ராஙாஂഗ யஜூஉாந வ்ரஉாண௸
20	ಪಣ್ಣಿ ಕ್ಕುಡಿತ್ತೇನ್ ಇದಕ್ಕು ಇಲಙ್ಗಣಮ್ ಶೆಯ್ದ	பண்ணிக் குடுத்தேன் இதுக்கு இலங்கணம் செய்த
21	ವನ್ ಗೆಂಗೈಕ್ಕರೈಯಿಱ್ ಕುರಾಲ್ ಪಶುವೈ ಕ್ಕೊ	வன் ഗെംഗൈ கரையில் குரால் பசுவை க்கொ
22	ನ್ ಱಾನ್ ಪಾವತ್ತೆ ಪುಗಕ್ಕಡವನ್ ಶು	ன்றான் பாவத்தே புகக்கடவன் ஶு
23	ಭಮಸ್ತು	ஸுஉஷ்து

	ಎಪಿಗ್ರಾಫಿಯ ಕರ್ನಾಟಿಕ ಸಂಪುಟ 09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ 39a	ತಂಡದ ಪಾಠ (ತಮಿಳು-ಗ್ರಂಥ)[1]
1	**ಶಾಸನದ ಮುಂಭಾಗದ ಪಾಠವನ್ನು ದಾಖಲಿಸಿರುವುದಿಲ್ಲ**	ஸ்வஸ்தி ஶ்ரீ:ஶகாப்த்3 கதூஉாளயிக ன் மேல்
2		செல்லா நின்ற வி ரொ தி ஸம்வ்த்ஸர த்து ஐகூர நா
3		யற்று வூவவூ வக்ஷத்து ப்பஞ்சமியும் பெற்ற உத்திரட்டா
4		தி நாள் ஸ்வஸ்தி ஸ்ரீ: அரிராஜ விபாடன் பாஷை
5		க்குத்தப்புவ ராயர் ஹ்ஜ்ஞுநு ஶ்ரீ இம்மடி ஹரி
6		யப்ப உடையார் ப்ருயிவி ராஜ்ய3 பண்ணியருளா
7		நிற்க ஸ்வஸ்தி ஶ்ரீ:மன் மஹா ஸாஐதாயிவதி ம
8		யிலய னாயக்கரும் இலைப்பாக்க நாட்டவரும்
9		ஸம்வக்த்தசரத்து வாய் அருளாளப் பெருமாள்
10		கண்ணப்பநேன் என் குடங்கையா
11		ன நிலத்தில் சம்பாத்தைப்பள்ளி யான
12		அருளாளக மூர்தியகரத்துக்கு அடைத்த நிலம்

1 ಸಂಸ್ಕೃತ ಪದಗಳನ್ನು ಬರೆಯಲು ತಮಿಳು ಲಿಪಿಯಲ್ಲಿ ಅಕ್ಷರಗಳ ಕೊರತೆ ಇರುವುದರಿಂದ ಪಂಡಿತರು ಸಂಸ್ಕೃತ ಪದಗಳಿಗಾಗಿಯೇ ವಿಶೇಷ ಲಿಪಿಯನ್ನು ಬಳಸಿರುವುದನ್ನು ಗ್ರಂಥ ಲಿಪಿ ಎಂದು ಕರೆಯಲಾಗಿದೆ.

ಹಿಂಭಾಗ (பின் பக்கம்)		
	....	
13	விளாங்குட்டையும் பெரியே.	விளாங்குட்டையும் பெரியேரி
14	பள்ளத்துக்கு கிழக்கும் கொம்பிலி .ல்.	பள்ளத்துக்கு கிழக்கும் கொம்பிலி எல்லை
15	க்குத் தெற்கு தத்தளை சிவரன் பள்ளிக்கு மேற்	க்குத் தெற்கு தத்தளை சிவரன் பள்ளிக்கு மேற்
16	கு இதுக்கு உள் உள்ள ஸகூ ஸ்ராஹ்தியும் மே	கு இதுக்கு உள் உள்ள ஸகூ ஸ்ராஹ்தியும் மே
17	ல் நோக்கின மரமும் கீணோகின கிணறும் நஞ்சை பு	ல் நோக்கின மரமும் கீணோகின கிணறும் நஞ்சை பு
18	ஞ்சை நாற்பாலெல்லையும் நாநா ஹொஹெ்சுகூாஉஶ	ஞ்சை நாற்பாலெல்லையும் நாநா ஹொஹெ்சுகூாஉஶ
19	ஸ்ராஹண ற்க்கு ஶாஊாஂஶ யஜூஉாந ஸ்ரஉாண?	ஸ்ராஹண ற்க்கு ஶாஊாஂஶ யஜூஉாந ஸ்ரஉாண?
20	பண்ணிக் குடுத்தேன் இதுக்கு இலங்கணம் செய்த	பண்ணிக் குடுத்தேன் இதுக்கு இலங்கணம் செய்த
21	வன் ஹெஂஹெ கரையில் குரால் பசுவைக் கொ	வன் ஹெஂஹெ கரையில் குரால் பசுவைக் கொ
22	ன்றான் பாவத்தே புகக்கடவன் ஶ ு	ன்றான் பாவத்தே புகக்கடவன் ஶ ு
23	ஹஉஷ்து	ஹஉஷ்து

ಶಾಸನದ ಅನುವಾದ

ಈ ಶಾಸನವು ತಮಿಳು ಮತ್ತು ಗ್ರಂಥ ಲಿಪಿ ಹಾಗೂ ತಮಿಳು ಭಾಷೆಯಲ್ಲಿ ಇರುವುದರಿಂದ ಸ್ಥಳೀಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಶಾಸನ ಪಾಠ ಮತ್ತು ಅನುವಾದವನ್ನು ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಹಾಗೂ ತಮಿಳು-ಗ್ರಂಥ ಲಿಪಿಯಲ್ಲಿಯೂ ಶಾಸನದ ಪದಗಳನ್ನು ಬಿಡಿಸಿ ನೀಡಲಾಗಿದೆ.

ಸ್ವಸ್ತಿ ಸ್ರೀ: **ಸ್ವಸ್ತಿ ಶ್ರೀಃ** - ಶಾಸನದ ಆರಂಭದಲ್ಲಿ ಸ್ವಸ್ತಿಶ್ರೀ ಎಂದಿರುವುದು ಶುಭಸೂಚಕ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಪದ.

ஶகாப்தூ **ಶಕಾಬ್ತಮ್** - ಶಕವರ್ಷವನ್ನು ತಿಳಿಸುವ ಕಾಲ. ಶಕ ವರ್ಷವು ಸುಮಾರು ಸಾ.ಶ.78ರಲ್ಲಿ ಶುರುವಾಗಿದೆ.

கதூஉாளயக ன் மேல் செல்லா நின்ற **1271ನ್ ಮೇಲ್ ಶೆಲ್ಲಾ ನಿನ್ ಱ** - ಭಾರತೀಯ ಕಾಲಗಣನೆಯ ಪ್ರಕಾರ ಶಾಸನ ಹಾಕಿಸಿರುವ ವರ್ಷ 1271 ಇದನ್ನು ಪ್ರಸ್ತುತ ಕಾಲಕ್ಕೆ ಹೊಂದಿಸಲು 78ನ್ನು ಸೇರಿಸಿದರೆ 1350 ಬರುತ್ತದೆ. ಇದು ಶಾಸನ ಹಾಕಿಸಿರುವ ವರ್ಷವಾಗಿದೆ

விரொ தி ஸம்வஸ்ஸர த்து **ವಿರೋಧಿ ಸಂವತ್ಸರತ್ತು**- ವಿರೋಧಿ ಸಂವತ್ಸರದ.

ஶகா நயற்று **ಮಕರ ನಾಯಱ್ ಱು** - ಮಕರ ಮಾಸದ ಭಾನುವಾರ.

பூர்வபக்ஷத்து **ಪೂರ್ವಪಕ್ಷತ್ತು** - ಶುಕ್ಲ ಪಕ್ಷದ. ಒಂದು ಮಾಸದಲ್ಲಿ ಶುಕ್ಲ/ಶುದ್ಧ/ಪೂರ್ವ ಹಾಗೂ ಕೃಷ್ಣ/ಬಹುಳ ಎಂಬ ಎರಡು ಪಕ್ಷಗಳಿರುತ್ತವೆ. ಶುಕ್ಲ ಪಕ್ಷ ಎಂದರೆ ಅಮಾವಾಸ್ಯೆಯಿಂದ ಪೂರ್ಣಿಮೆಯವರೆಗೆ. ಬಹುಳ/ಕೃಷ್ಣ ಪಕ್ಷ ಎಂದರೆ ಪೂರ್ಣಿಮೆಯಿಂದ ಅಮಾವಾಸ್ಯೆಯವರೆಗೆ .

ப்பஞ்சமியும் **ಪ್ಪಞ್ಚಮಿಯುಂ** - ಪಂಚಮಿಯ (5) ತಿಥಿ பெற்ற உத்திரட்டா தி நாள் **ಪೆಱ್ ಱ ಉತ್ತಿರಟ್ಟಾದಿ ನಾಳ್** - ಉತ್ತರ ಭಾದ್ರಪದ ನಕ್ಷತ್ರದ ದಿನ.

ஸ்வஸ்தி ஸ்ரீ: **ಸ್ವಸ್ತಿ ಶ್ರೀಃ** - ಎಲ್ಲರಿಗೂ ಒಳ್ಳೆಯದಾಗಲಿ .

அரிராஜ விஹாடந் க்குத்தப்புவ ராயர் கண்டந் **ಅರಿರಾಜವಿಭಾಡನ್ ಭಾಷೈಕ್ಕು ತ್ತಪ್ಪುವ ರಾಯರ್ ಗಣ್ಡನ್** - ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ.

ஸ்ரீ இம்மடி ஹரி யப்ப உடையார் **ಶ್ರೀ ಇಮ್ಮಡಿ ಹರಿಯಪ್ಪ ಉಡೈಯಾರ್** - ಶ್ರೀ ಇಮ್ಮಡಿ ಹರಿಯಪ್ಪ ಒಡೆಯರ್.

ப்ருதிவி ராஜ்யூ பண்ணியருளாநிற்க **ಪೃಥ್ವಿರಾಜ್ಯಮ್ ಪಣ್ಣಿಯರುಳಾನಿಱ್ ಗ** - ಪೃಥ್ವಿಯನ್ನು ಆಳುತ್ತಿರುವ ಕಾಲದಲ್ಲಿ.

ஸ்தி ஸ்ரீ: **ಸ್ವಸ್ತಿಶ್ರೀಃ** - ಒಳ್ಳೆಯದಾಗಲಿ/ಶುಭವಾಗಲಿ.

மன் மஹா ஸாமந்தாதிபதி மயிலய னாயக்கரும் **ಮನ್‌ಮಹಾ ಸಾಮನ್ತಾಧಿಪತಿ ಮಯಿಲಯ ನಾಯಕ್ಕರುಮ್** - ಶ್ರೀ ಮನ್ ಮಹಾ ಸಾಮಂತಾಧಿಪತಿಯಾದ ಮಯಿಲೆಯನಾಯಕರು.

இலைப்பாக்க நாட்டவரும் **ಇಲೈಪ್ಪಾಕ್ಕ ನಾಟ್ಟವರುಮ್** - ಇಲೈಪಾಕನಾಡಿನ (ಯಲಹಂಕನಾಡು) ನಾಡಪ್ರಭುಗಳು/ನಾಡಗೌಡರು

ஸம்வக்த்தசரத்து **ಸಂವತ್ತಶರತ್ತುವಾಯ್ -** ಈ ವರ್ಷ

அருளாளப் பெருமாள் கண்ணப்பநேன் **ಅರುಳಾಳ ಪ್ಪೆರುಮಾಳ್ ಕಣ್ಣಪ್ಪನೇನ** - ಅರುಳಾಳ್ ಪೆರುಮಾಳ್ ಕಣ್ಣಪ್ಪನ್ ಆದ.




என் குடங்கையா ன நிலத்தில் சம்பாத்தைப்பள்ளி யான **ಎನ್ ಕುಡಙ್ಗೈ ಗೈಯಾನ್ ನಿಲತ್ತಿಲ್ ಚಮ್ಪಾತ್ತೈಪ್ಪಳ್ಳಿಯಾನ** - ತನಗೆ ಕೊಡುಗೆಯಾಗಿ ಬಂದ ಜಮೀನಿನಲ್ಲಿ ಸಂಪಿಗೆಹಳ್ಳಿಯಲ್ಲಿನ



அருளாளக மூர்தியகரத்துக்கு அடைத்த நிலம் **ಅರುಳಾಳಗ ಮೂರ್ದಿಯ ಕರತ್ತುಕ್ಕು ಅಡೈತ್ತ ನಿಲಮ್** - ಆ ಅರುಳಾಳ್ ಮೂರ್ತಿ ಅಗ್ರಹಾರ ಸಲುವಾಗಿ

ಯ ಕರತ್ತುಕ್ಕು



விளாங்குட்டையும் **ವಿಳಾಙ್ಗುಟ್ಟೈಯುಮ್** - ವಿಳಾ (ವಿಳ್ಳನ/ಬಿಳ್ಳನ ?) ಕೊಂಪೆ.

பெரியேரி பள்ளத்துக்கு கிழக்கும் **ಪೆರಿಯೇರಿ ಪಳ್ಳತ್ತುಕ್ಕು ಕಿಳಕ್ಕುಮ್** - ದೊಡ್ಡ ಕೆರೆಯ ಹಳ್ಳದ ಕೆಳಗೆ.

ಪೆರಿಯೇರಿ



கொம்பிலி எல்லை க்குத் தெற்கு **ಕೊಮ್‌ಬಿಲಿ ಎಲ್ಲೈ ಕ್ಕುತ್ತೆ ಱ್ ಕು** -ಕೊಮ್‌ಬಿಲಿ ಗಡಿಯ ದಕ್ಷಿಣಕ್ಕೆ

ಕೊಮ್‌ಬಿಲಿ



தத்தளை சிவரன் பள்ளிக்கு **ತ್ತತ್ತಳೈ ಶಿವರನ್ಪಳ್ಳಿಕ್ಕು**- ದಕ್ಷಿಣಕ್ಕೆ (ತಟ್ಟಲೈ) ಶಿವರನ್ ಪಳ್ಳಿಗೆ.

ಶಿವರನ್



மேற் கு இதுக்கு உள் உள்ள ஸகல ப்ராப்தியும் **ಮೇಱ್ ಕು ಇದುಕ್ಕು ಉಳ್ ಉಳ್ಳ ಸಕಲಪ್ರಾಪ್ತಿಯುಮ್** - ಇದರ ಒಳಗಿರುವ ಸಕಲ ಎಲ್ಲಾ ಪ್ರಾಪ್ತಿಯನ್ನು.

மேல் நோக்கின மரமும் **ಮೇಲ್ ನೋಕ್ಕಿನ ಮರಮುಮ್** - ಮೇಲಿರುವ ಮರಗಳು

கீணோகின கிணறும் **ಕೀಣೋಕ್ಕಿನ ಕಿಣಱುಮ್** - ನೆಲದ ಕೆಳಗೆ ಇರುವ ಬಾವಿಗಳು.

நஞ்சை பு ஞ்சை **ನಞ್ ಜೆಯ್ ಪು ಞ್ ಶೈ** - ನಂಜೈ ಪುಂಜೈ - ಗದ್ದೆ ಬೆದ್ದಲು

நாற்பாலெல்லையும் **ನಾಱ್ ಪಾಲೆಲ್ಲೈಯುಮ್** - ನಾಲ್ಕು ಕಡೆ ಇರುವ ಎಲ್ಲವನ್ನು.

நாநா ஹொத்ரைகாதஶ ப்ராஹ்மண றக்கு **ನಾನಾ ಗೋತ್ರೈಕಾದಶ ಬ್ರಾಹ್ಮಣಱ್ ಕ್ಕು** - ನಾನಾ ಗೋತ್ರದ ೧೧ ಬ್ರಾಹ್ಮಣರಿಗೆ.

ಬ್ರಾಹ್ಮಣ



ஶ்ராத்தாங்க தர்மதாந **ಶ್ರಾದ್ಧಾಂಗ ಧರ್ಮ್ಮದಾನ** - ಶ್ರಾದ್ಧಾ ಧರ್ಮ ದಾನ.

ப்ராமாணம் பண்ணிக் குடுத்தேன் **ಮಾಣಮ್ ಪಣ್ಣಿ ಕ್ಕುಡಿತ್ತೇನ್** - ಬ್ರಾಹ್ಮಣರಿಗೆ ಪ್ರಮಾಣವನ್ನು ಮಾಡಿ ಕೊಟ್ಟಿರುತ್ತೇನೆ.

இதுக்கு இலங்கணம் செய்த வன் **ದಕ್ಕು ಇಲಙ್ಗಣಮ್ ಶೆಯ್ದವನ್** - ಇದಕ್ಕೆ ತೊಂದರೆಯನ್ನು ನೀಡಿದವರು.

கெங்கை கரையில் **ಗೆಂಗೈಕ್ಕರೈಯಿಱ್** - ಗಂಗೆಯ ದಡದಲ್ಲಿ.

குரால் பசுவைக் கொன்றான் **ಕುರಾಲ್ ಪಶುವೈ ಕ್ಕೊ ನ್ ಱಾನ್** - ಹಸುಗಳನ್ನು ಕೊಂದ.

பாவத்தே புகக்கடவன் **ಪಾವತ್ತೆ ಪುಗಕ್ಕಡವನ್** - ಪಾಪವನ್ನು ಹೊಂದುವನು.

ஶுபமஸ்து **ಶುಭಮಸ್ತು** - ಶುಭಮಸ್ತು.

ಶಾಸನದ ಮಹತ್ವ

i) ಈ ಶಾಸನವು, ಅಗ್ರಹಾರ ಊರನ್ನು ಸಾ.ಶ.1350ರಲ್ಲಿ ಅಂದರೆ ಸುಮಾರು 700 ವರ್ಷದ ಹಿಂದೆ ಅರುಳಾಳ ಪೆರುಮಾಳ್ ಕಣ್ಣಪ್ಪನು ನಿರ್ಮಿಸಿದನು ಎಂದು ತಿಳಿಸುತ್ತದೆ.

ii) ಈ ಶಾಸನವು ಮರಣದ ತರುವಾಯ ಧಾರ್ಮಿಕ ವಿಧಿ-ವಿಧಾನಗಳ ಪ್ರಕಾರ ಮಾಡುವ **ಶ್ರಾದ್ಧವನ್ನು ಉಲ್ಲೇಖಿಸಿರುವ ವಿಶೇಷ ಶಾಸನವಾಗಿದೆ**.

iii) ಸಾಮಾನ್ಯವಾಗಿ ಮೂರು ಜನ ಬ್ರಾಹ್ಮಣರಿಗೆ ದಾನಕೊಡುವುದನ್ನು ಶಾಸನಗಳು ತಿಳಿಸುತ್ತವೆ. ಆದರೆ ಈ ಶಾಸನದ ಮೂಲಕ ಹನ್ನೊಂದು ಜನ ನಾನಾ ಗೋತ್ರದ ಬ್ರಾಹ್ಮಣರಿಗೆ ದಾನ ನೀಡಿರುವುದು ವಿಶೇಷ.

iv) ಈ ಪ್ರದೇಶದಲ್ಲಿ ಜನರು ಆಚರಿಸುತ್ತಿದ್ದ ಆಚರಣೆಗಳಿಗೆ ಇದೊಂದು ಐತಿಹಾಸಿಕ ದಾಖಲೆ ಎಂದು ಹೇಳಬಹುದು.

v) ಈ ಶಾಸನದಲ್ಲಿ ವಿಶೇಷವಾಗಿ ಅಗ್ರಹಾರ ಗ್ರಾಮದ ಜೊತೆಗೆ ಪಕ್ಕದಲ್ಲಿನ **ಶಿವನಪಲ್ಲಿ (ಶಿವನಹಳ್ಳಿ), ಚಂಪಾತ್ತೈಪಳ್ಳಿ (ಸಂಪಿಗೆಹಳ್ಳಿ)ಯ ಮೊದಲ ಉಲ್ಲೇಖವಿದ್ದು** ಈ ಗ್ರಾಮಗಳು ಸಹ ಸುಮಾರು 700 ವರ್ಷಗಳಷ್ಟು ಹಳೆಯದಾದ ಗ್ರಾಮಗಳಾಗಿವೆ. ಅಗ್ರಹಾರ ನಿರ್ಮಾಣಕ್ಕೂ ಮೊದಲೇ ಶಿವನಹಳ್ಳಿ ಮತ್ತು ಸಂಪಿಗೆಹಳ್ಳಿ ಗ್ರಾಮಗಳಿದ್ದವು.

vi) ಈ ಶಾಸನದಲ್ಲಿನ ಉಲ್ಲೇಖವಾಗಿರುವ ಪೆರಿಯ ಏರಿಯು ಬಹುಶಃ **ಜಕ್ಕೂರ ಕೆರೆಯಾಗಿರಬೇಕು**. ಏಕೆಂದರೆ ಅಗ್ರಹಾರ ಸಮೀಪದಲ್ಲಿ ದೊಡ್ಡಕೆರೆಯೆಂದರೆ ಅದು ಜಕ್ಕೂರಿನ ಕೆರೆಯೇ ಆಗಿದೆ.

ಶಾಸನದ ಭಾಷೆ ಮತ್ತು ಲಿಪಿ

ಈ ಶಾಸನವು ತಮಿಳು-ಗ್ರಂಥ ಲಿಪಿ ಮತ್ತು ತಮಿಳು ಭಾಷೆಯಲ್ಲಿದೆ.

10. ಅಲ್ಲಾಳಸಂದ್ರದ ತಂತ್ರ-ಮಂತ್ರದ ಕಲ್ಲು

ಅಲ್ಲಾಳಸಂದ್ರ ಬಡಾವಣೆಯಲ್ಲಿ ಸಾ.ಶ.1544ರ ರಾಚುರ ನರಸಪಯರ ಶಾಸನದ ಪಕ್ಕದಲ್ಲಿ ಸಂರಕ್ಷಣೆ ಮಾಡಿರುವ ಈ ಕಲ್ಲು ವಿಶೇಷವಾಗಿದೆ. ಇದನ್ನು ತಂತ್ರ-ಮಂತ್ರದಕಲ್ಲು ಎಂದು ಕರೆಯಬಹುದು. ಗ್ರಾಮಕ್ಕೆ ತೊಂದರೆಯುಂಟಾದಾಗ, ರೋಗ ರುಜಿನಗಳು ಆವರಿಸಿದಾಗ, ದುಷ್ಟ ಶಕ್ತಿಗಳಿಂದ ರಕ್ಷಣೆ ಮಾಡಿಕೊಳ್ಳಲು ತಂತ್ರವಾದಿ/ಮಂತ್ರವಾದಿಗಳನ್ನು ಕರೆಸಿ ಗ್ರಾಮಸ್ಥರು ಹಲವು ಯಜ್ಞ-ಯಾಗಗಳನ್ನು ಮಾಡಿ ಕಲ್ಲಿನ ಮೇಲೆ ಇಂತಹ ಮಂತ್ರಾಕ್ಷರಗಳನ್ನು, ತಂತ್ರದ ಗೊಂಬೆಯಂತಹ ಚಿತ್ರಗಳನ್ನು ಬಿಡಿಸಿ ಕಲ್ಲನ್ನು ನೆಡುತ್ತಿದ್ದರು. ಹಾಗೆಯೇ ಅಲ್ಲಾಳಸಂದ್ರದಲ್ಲೂ ಸಹ ಇಂತಹ ಅನಿಷ್ಟ ಪೀಡೆ ಬಂದಿದ್ದಾಗ ಈ ಕಲ್ಲನ್ನು ನಿಲ್ಲಿಸಿರಬಹುದು.


ಈ ತಂತ್ರ-ಮಂತ್ರದ ಕಲ್ಲು ಗ್ರಾನೈಟ್ ಶಿಲಾ ಮಾದರಿಯದಾಗಿದ್ದು, 114 ಸೆಂ.ಮೀ ಎತ್ತರ, 58 ಸೆಂ. ಮೀ ಅಗಲ ಹಾಗೂ 10 ಸೆಂ.ಮೀ ದಪ್ಪವಿದೆ. ಕಲ್ಲಿನ ಮೇಲ್ಭಾಗದಲ್ಲಿ ಚಂದ್ರ ಮತ್ತು ಸೂರ್ಯರ ರೇಖಾಚಿತ್ರವಿದೆ. 11 ಸಾಲುಗಳ ಕನ್ನಡ, ತಮಿಳು ಹಾಗೂ ಗ್ರಂಥ ಲಿಪಿಯನ್ನು ಒಳಗೊಂಡಿದ್ದು, ಮಧ್ಯದಲ್ಲಿ ಯಾವುದೋ ಒಂದು ಗೊಂಬೆಯ ಆಕಾರದ ಚಿತ್ರವಿದೆ, ಈ ಚಿತ್ರ ಯಾವುದೆಂದು ಅರ್ಥೈಸಲು ಸಾಧ್ಯವಾಗಿಲ್ಲ. ಲಿಪಿ ದೃಷ್ಟಿಯಿಂದ ಈ ಕಲ್ಲಿನ ಮೇಲಿನ ಅಕ್ಷರಗಳನ್ನು **ತಮಿಳು-ಗ್ರಂಥ ಅಕ್ಷರಗಳು 15-16ನೇ ಶತಮಾನಕ್ಕೆ ಹೋಲಿಕೆಯಾದರೆ, ಕನ್ನಡ ಅಕ್ಷರಗಳು 18-19ನೇ ಶತಮಾನದ್ದೆಂದು ತಜ್ಞರ ಅಭಿಪ್ರಾಯದ ಮೇರೆಗೆ ಊಹಿಸಲಾಗಿದೆ.**

ಈ ಕಲ್ಲಿನಲ್ಲಿರುವ ಮೊದಲೆರಡು ಸಾಲಿನಲ್ಲಿ 'ಅಳಾಲಸಮುದ್ರ' ಎಂಬ ಹೆಸರನ್ನು ಮಾತ್ರ ಗುರುತಿಸಲು ಸಾಧ್ಯವಾಗಿದ್ದು, ಮುಂದಿನ ಸಾಲುಗಳ ಅಕ್ಷರಗಳನ್ನು ಗುರುತಿಸಿದ್ದರೂ ಅದರ ಅರ್ಥವನ್ನು ವ್ಯಾಖ್ಯಾನಿಸಲು ಸಾಧ್ಯವಾಗಿಲ್ಲ. ಆದುದರಿಂದ ಇದೊಂದು ವಿಶೇಷವಾದ ಕಲ್ಲಾಗಿದ್ದು ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನ ಮಾಡುವ ಅವಶ್ಯಕತೆಯಿದೆ.

ಇಂದು ಇವುಗಳನ್ನು ಸ್ಥಳೀಯರು ಭಕ್ತಿಭಾವದಿಂದ ಪೂಜಿಸುವ ರೂಢಿಯಿದೆ. ಹಾಗೂ ಇವುಗಳು ಸ್ಥಳೀಯರಿಗೆ ದೇವರ ಕಲ್ಲುಗಳಾಗಿದ್ದು, ಗ್ರಾಮದಲ್ಲಿ ಹಸುಗಳು ಸರಿಯಾಗಿ ಹಾಲು ಕೊಡದಿದ್ದಾಗ ಅಥವಾ ಹಸುಗಳಿಗೆ ರೋಗರುಜಿನ ಕಾಡಿದಾಗ, ಮಕ್ಕಳಿಗೆ ಅಮ್ಮ ಎಂದು ಕರೆಯುವ ಚರ್ಮದ ತೊಂದರೆಯುಂಟಾದಾಗ ಜನರು ಈ ಕಲ್ಲಿನ ಮೇಲೆ ಹಾಲು, ಅನ್ನದ ಪಿಂಡವನ್ನಿಟ್ಟು ಪೂಜಿಸುವ ಪದ್ಧತಿಯನ್ನು ಇಂದಿಗೂ ನೋಡಬಹುದು.

ತಂತ್ರ-ಮಂತ್ರ ಕಲ್ಲಿನ ಮೇಲಿನ ಅಕ್ಷರಗಳು

	ಕನ್ನಡ, ತಮಿಳು ಮತ್ತು ಗ್ರಂಥಾಕ್ಷರಗಳು	ಕನ್ನಡದಲ್ಲಿ ಲಿಪ್ಯಂತರ
1	ആளலஸமு	ಆಳಲ ಸಮು
2	ദ്ര வு யா(?) ஶை ഭ லா	ದ್ರ ವು ಯಾಶೈ ಭ ಲಾ
3	ம ഫ(?) ந் ന്രി த நா ரீ பே	ಮಫನ್ ನ್ರಿ ಥನಾರೀ ಪೇ
4	ர ശ്രീ(?) யூ . வ .ஐய	ರ ಶ್ರೀ ಯೂವ ಐಯ
5	റി പി க ல மா ஶ ல	ರಿಪಿ ಕ ಳ/ಲಮಾಶಲ
6	க ലിரநாகி ய கி(?)	ಕಲಿರನಾಕಿಯ ಕಿ
7	ந ദി/വി து വി/ദി கெ ல	ನ ದಿ/ವಿ ತುವಿ/ದಿಗೆ ಲ
8	ஶ பி வி .	ಷ/ಶಭಿವಿ .
9	யி சி ரு	ಯಿಛಿರು
10	മ ലി ച/ആ(ச) .(ம) ന ந து ദി	ಮ . ಲಿ ಚ/ಆ .(ಮ) ನ ನದು ದಿ
11	വി ய நா ..തീ(தீ) . തി(தி) ..	ವಿಯ ನಾ ..ತೀ . ತಿ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಲ್ಲಾಳಸಂದ್ರದ ತಂತ್ರ-ಮಂತ್ರದ ಕಲ್ಲಿನ ಡಿಜಿಟಲ್ ಚಿತ್ರ

ಇತರೆ ಐತಿಹಾಸಿಕ ಮಾಹಿತಿಗಳು

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿಯಲ್ಲಿ ಶಾಸನಗಳನ್ನು ಹೊರತು ಪಡಿಸಿ ಇನ್ನೂ ಹಲವಾರು ಐತಿಹಾಸಿಕ ಆಧಾರಗಳನ್ನು ಒಳಗೊಂಡಿರುವ ಅವಶೇಷಗಳು ದೊರೆತಿವೆ. ಈ ಅವಶೇಷಗಳು ಲಿಖಿತ ದಾಖಲೆಗಳಾದ ಶಾಸನಗಳಷ್ಟೇ ಪ್ರಮುಖವಾಗಿದ್ದು, ಸ್ಥಳೀಯ ಇತಿಹಾಸವನ್ನು ಸಮಗ್ರವಾಗಿಸಲು ಮತ್ತು ವಿಭಿನ್ನ ಆಯಾಮಗಳಲ್ಲಿ ನಿರೂಪಿಸಲು ಇವುಗಳ ಕೊಡುಗೆ ಅಪಾರವಾದುದು. ಆ ಐತಿಹಾಸಿಕ ಕುರುಹು ಅಥವಾ ಅವಶೇಷಗಳೆಂದರೆ ಸ್ಮಾರಕ ಶಿಲ್ಪಗಳು ಮತ್ತು ದೇವಾಲಯಗಳು.

ಸ್ಮಾರಕಶಿಲ್ಪಗಳು

ಸ್ಮಾರಕ ಶಿಲ್ಪಗಳು ಅಂದಿನ ಜನರ ಶೌರ್ಯ, ವೀರತ್ವ, ತ್ಯಾಗ, ಆಚರಣೆ, ನಂಬಿಕೆಗಳ ಪ್ರತೀಕವಾಗಿದ್ದು, ಇವು ಅಂದಿನ ಜನರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಯಲು ಉಪಯುಕ್ತವಾಗಿವೆ. ಈ ಸ್ಮಾರಕ ಶಿಲ್ಪಗಳಲ್ಲಿ ಅನೇಕ ಬಗೆಗಳಿದ್ದು, ಅವುಗಳಲ್ಲಿ ದಂಪತಿಗಳ ಸ್ಮಾರಕಶಿಲ್ಪ, ವೀರನ ವಿಗ್ರಹ ಮತ್ತು ಭಕ್ತರ ಶಿಲ್ಪಗಳು ವಿಶೇಷವಾಗಿವೆ ಹಾಗೂ ಶಾಸನ ರಹಿತವಾಗಿವೆ. ಈ ಸ್ಮಾರಕ ಶಿಲ್ಪಗಳ ಮೇಲೆ ಮಾಹಿತಿಯನ್ನು ಕೆತ್ತಿಲ್ಲದೆ ಹೋದರೂ, ಹಲವಾರು ಅಂಶಗಳನ್ನು ಶಿಲ್ಪಗಳಿಂದಲೇ ತಿಳಿಯಬಹುದಾಗಿದೆ.

ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲು

ಜಕ್ಕೂರಿನ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಸಂರಕ್ಷಿಸಿರುವ ಸ್ಮಾರಕಶಿಲ್ಪವು ಸುಮಾರು ಹತ್ತನೇ ಶತಮಾನದ ಕಾಲದ್ದಾಗಿದ್ದು, ಜಕ್ಕೂರು ಬಡಾವಣೆಯ ಸಾಮಾಜಿಕ, ಧಾರ್ಮಿಕ ಆಚರಣೆಗಳನ್ನು ತಿಳಿಯಲು ಸಹಾಯಕವಾಗಿದೆ.

ಯುದ್ಧಗಳಲ್ಲಿ, ಗ್ರಾಮಗಳ ಗಡಿ **ವಿವಾದಗಳಿಗೆ ಸಂಬಂಧಿಸಿದ ಕಾಳಗಗಳಲ್ಲಿ**, ಗ್ರಾಮವನ್ನು **ಕಳ್ಳರಿಂದ ರಕ್ಷಿಸಲು**, **ಗೋವುಗಳನ್ನು ರಕ್ಷಿಸಲು** ಹಾಗೂ **ಮಹಿಳೆಯರನ್ನು ರಕ್ಷಿಸಲು** ಇನ್ನೂ ಮುಂತಾದ ಕಾರಣಗಳಿಗೆ ಹೋರಾಡಿ ವೀರರು ಪ್ರಾಣ ಬಿಡುತ್ತಿದ್ದರು. ಆಗ ಅವರ ನೆನಪಿನಾರ್ಥವಾಗಿ ವೀರನ ಸಂಬಂಧಿಕರು, ಗ್ರಾಮದ ಮುಖಂಡರು ಅಥವಾ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಪ್ರತಿನಿಧಿಗಳು ವೀರಗಲ್ಲುಗಳನ್ನು ಹಾಕಿಸುತ್ತಿದ್ದರು. ಅದೇ ರೀತಿ ಕೆಲವೊಂದು ಸಂದರ್ಭಗಳಲ್ಲಿ ತಮಗೆ **ಮೋಕ್ಷ ಪ್ರಾಪ್ತಿಯಾಗಲಿ**, **ಗ್ರಾಮಕ್ಕೆ ಹಾಗೂ ಸಮಾಜಕ್ಕೆ ಒಳ್ಳೆಯದಾಗಲಿ**, **ಯುದ್ಧದಲ್ಲಿ ಜಯಸಿಗಲಿ**, **ರಾಜನಿಗೆ ಒಳ್ಳೆಯದಾಗಲಿ** ಎಂಬ ಭಾವನೆಯಿಂದ ಜನರು **ತಮ್ಮ ಪ್ರಾಣವನ್ನು ತಾವೇ ಸ್ವಯಿಚ್ಛೆಯಿಂದ ಕೊಡುವ ಪದ್ಧತಿಯೂ ರೂಢಿಯಲ್ಲಿತ್ತು**. ಕೆಲವು ಸಂದರ್ಭಗಳಲ್ಲಿ ವೀರನ ಮರಣದ ನಂತರ ಅವನ ಪತ್ನಿ/ಪತ್ನಿಯರು ಕೂಡ ಪ್ರಾಣ ತ್ಯಾಗ ಮಾಡುತ್ತಿದ್ದರು. ಹೀಗೆ ಆತ್ಮಾರ್ಪಣೆ ಮಾಡಿಕೊಂಡು ಮರಣ ಹೊಂದಿದವರ ನೆನಪಿಗಾಗಿ ಹಾಕಿಸುವ ಕಲ್ಲುಗಳನ್ನು **ಆತ್ಮ ಬಲಿದಾನದ ವೀರಗಲ್ಲು** ಎನ್ನುತ್ತಾರೆ. ಈಗ ಜಕ್ಕೂರಿನ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಸಂರಕ್ಷಣೆಯಾಗಿರುವ **ಹತ್ತನೇ ಶತಮಾನದ ದಂಪತಿಗಳ ಸ್ಮಾರಕ** ಶಿಲ್ಪವು ಸಹ



ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲು ಮೊದಲು ಇದ್ದ ಸ್ಥಳ



ಜಕ್ಕೂರಿನ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿರುವ ದಂಪತಿಗಳ ಸ್ಮಾರಕ ಕಲ್ಲು

ಒಬ್ಬ ವೀರ ಹಾಗೂ ಆತನ ಪತ್ನಿಗೆ ಸಂಬಂಧಿಸಿದ್ದಾಗಿದ್ದು, ಈ ಆತ್ಮಬಲಿದಾನ ಶಿಲ್ಪದ ಪ್ರಕಾರ ಇವರಿಬ್ಬರೂ ತಮ್ಮ ಪ್ರಾಣವನ್ನು ಅರ್ಪಿಸಿರುತ್ತಾರೆ. ಆದರೆ ಈ ಸ್ಮಾರಕ ಶಿಲ್ಪ ನಿರ್ಮಾಣ ಮಾಡಲು ಸಂಬಂಧಿಸಿದ ವಿಚಾರವನ್ನು ಅಕ್ಷರ ರೂಪದಲ್ಲಿ ಕೆತ್ತಿಲ್ಲದಿರುವುದರಿಂದ, **ಯಾವ ಕಾರಣಕ್ಕೆ ವೀರ ಮರಣ ಹೊಂದಿದ್ದಾನೆ ಎಂಬುದರ ಬಗ್ಗೆ ತಿಳಿಯಲು ಆಗುವುದಿಲ್ಲ.**

ಆತ್ಮಬಲಿದಾನವೆಂಬುದು ಸ್ವಪ್ರೇರಣೆಯಿಂದ ನೀಡುವುದಾಗಿದ್ದು, ಇಂದಿನ **ಆತ್ಮಹತ್ಯೆ ಎಂಬುದಕ್ಕೆ ಹೋಲಿಸುವುದು ಸರಿಯಲ್ಲ.** ಅಂದು ಯಾವುದಾದರು ಒಳ್ಳೆಯ ಕಾರ್ಯವಾಗಬೇಕಾದರೆ ಫಲಾಫಲಗಳನ್ನು ಬಯಸದೇ ಬಲಿದಾನ ನೀಡುತ್ತಿದ್ದರು. ಬಹಳಷ್ಟು ಸಂದರ್ಭದಲ್ಲಿ ತಮ್ಮ ಅಭಿಲಾಷೆ ಈಡೇರಿಕೆಗಾಗಿ ಹರಕೆಯನ್ನು ಕಟ್ಟಿಕೊಂಡಿದ್ದು, ಅದು ಪೂರೈಸಿದಾಗ ಹರಕೆಯನ್ನು ಆತ್ಮಬಲಿದಾನದ ಮೂಲಕ ಸಲ್ಲಿಸುತ್ತಿದ್ದರು.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲಿನ ಡಿಜಿಟಲ್ ಚಿತ್ರ

ಆದ್ದರಿಂದ **ಆತ್ಮ ಬಲಿದಾನವೆಂಬುದು ಪವಿತ್ರವಾದ ಸ್ವಹಿತಾಸಕ್ತಿಯನ್ನು ಮೀರಿದ ಬಲಿದಾನ**ವಾಗಿದೆ ಎಂದು ಹೇಳಬೇಕಾಗುತ್ತದೆ. ಹೀಗಾಗಿ ಜಕ್ಕೂರು ಪ್ರದೇಶದಲ್ಲಿ ಸಿಕ್ಕಿರುವ ಈ ದಂಪತಿಗಳ ಸ್ಮಾರಕ ಶಿಲ್ಪವು, ಸತಿ-ಪತಿಗಳಿಬ್ಬರು ಮರಣವನ್ನು ಹೊಂದಿರುವುದನ್ನು ತಿಳಿಸಿದರೂ ಕೂಡ, ಯಾವ ಕಾರಣಕ್ಕಾಗಿ ಬಲಿದಾನಗೈದರು ಎಂದು ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಧಾರ್ಮಿಕ ಬಲಿದಾನವೆಂದು ಹೇಳಲು, ಬೇರೆ ಆತ್ಮ ಬಲಿದಾನದ ಶಿಲ್ಪಗಳನ್ನು ಗಮನಿಸಿದಾಗ ಬೇರೆಯವರು ಚಾಕುವಿನಿಂದ ಚುಚ್ಚುತ್ತಿರುವಂತೆ, ಮಚ್ಚಿನಿಂದ ಕತ್ತರಿಸುತ್ತಿರುವಂತೆ ಅಥವಾ ಅವರೇ ಸ್ವಯಂ ಪ್ರೇರಣೆಯಿಂದ ಕತ್ತನ್ನು ಕಡಿದುಕೊಳ್ಳುತ್ತಿರುವ ಹಾಗೆ ಅಥವಾ ಹೊಟ್ಟೆಗೆ ತಿವಿದು ಕೊಳ್ಳುತ್ತಿರುವ ರೀತಿ ಶಿಲ್ಪದಲ್ಲಿ ಸಾಮಾನ್ಯವಾಗಿ ತೋರಿಸುತ್ತಾರೆ. ಆದರೆ ಈ ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ರೀತಿಯ ಯಾವುದೇ ಲಕ್ಷಣಗಳು ಕಂಡುಬರುತ್ತಿಲ್ಲ. ಆದ್ದರಿಂದ **ಈ ಸ್ಮಾರಕ ಶಿಲ್ಪವನ್ನು ನಿರ್ಮಿಸಿರುವುದಕ್ಕೆ ಸಂಬಂಧಿಸಿದಂತೆ ನಿಖರವಾದ ಕಾರಣವನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ.**

ಈ ವೀರಗಲ್ಲು **151 ಸೆಂ.ಮೀ. ಎತ್ತರ, 124 ಸೆಂ.ಮೀ. ಅಗಲ** ಹಾಗೂ **15 ಸೆಂ.ಮೀ. ದಪ್ಪವಿದೆ.** ಇಲ್ಲಿ **ಮೂರು ಹಂತ**ಗಳಲ್ಲಿ ಶಿಲ್ಪಗಳನ್ನು ಕೆತ್ತಲಾಗಿದೆ. **ಕೆಳಹಂತ**ದಲ್ಲಿ ಸೇವಕನು ಎಡಗೈಯಲ್ಲಿ ಕತ್ತಿ, ಬಲಗೈಯಲ್ಲಿ ಶೃಂಗರಿಸಿದ ಕುದುರೆಯ ಕೊರಳಿಗೆ ಕಟ್ಟಿರುವ ಹಗ್ಗವನ್ನು ಹಿಡಿದಿದ್ದಾನೆ. **ಮಧ್ಯದ ಹಂತ**ದಲ್ಲಿ ಪುರುಷ-ಸ್ತ್ರೀ / ಸತಿ-ಪತಿಗಳಿಬ್ಬರು ಪದ್ಮಾಸನದಲ್ಲಿ ಕುಳಿತಿದ್ದಾರೆ. ಪುರುಷನು ತನ್ನೆರಡು ಕೈಗಳನ್ನು ಎದೆಯ ಭಾಗದಲ್ಲಿ ಧ್ಯಾನಭಂಗಿಯಲ್ಲಿ ಹಿಡಿದಿದ್ದು, ಕಿವಿಗೆ ಕರ್ಣಕುಂಡಲಗಳು, ಕುತ್ತಿಗೆಗೆ ಎರಡು ಎಳೆಯ ಕೊರಳ ಹಾರ, ಕೈಕಡಗ, ಕಾಲ್ಕಡಗ ಹಾಕಿಕೊಂಡಿದ್ದಾನೆ. ತಲೆಯ ಕೂದಲನ್ನು ಎಡಕ್ಕೆ ಬಿಗಿದು ವೀರ ಮುಡಿ ಕಟ್ಟಿದ್ದಾನೆ. ಈ ರೀತಿಯ ವೀರಮುಡಿ ವೀರನ ವೀರತನದ ಸಂಕೇತವಾಗಿದೆ. ಮುಖದಲ್ಲಿ ಸಮರ್ಪಣಾ ಭಾವ ಕಾಣುವಂತಿದೆ. ಮಹಿಳೆಯು ಪುರುಷನ ಬಲಕ್ಕೆ ಕುಳಿತಿದ್ದು ತನ್ನೆರಡು ಕೈಗಳಿಂದ ಹೂವನ್ನು ಪುರುಷನಿಗೆ ಧನ್ಯತೆಯಿಂದ ಕೊಡುತ್ತಿದ್ದಾಳೆ. ಮಹಿಳೆಯು ತನ್ನ ಎಡಕ್ಕೆ ತುರುಬನ್ನು ಕಟ್ಟಿದ್ದು, ಕೊರಳಲ್ಲಿ ಮೂರು ಎಳೆಯ ಸರ, ಕೈಬಳೆ, ಕಾಲ್ಕಡಗ, ಸೀರೆಯಂತಹ ಕೆಳವಸ್ತ್ರ ಧರಿಸಿದ್ದಾಳೆ. ಇಬ್ಬರ ಉಡುಗೆಗಳೂ ಸಹ ವಿಶೇಷವಾಗಿದೆ. ಎರಡು ಶಿಲ್ಪದ ಮಧ್ಯೆ ಪೀಠದ ಮೇಲೆ ಶಂಖ ಮತ್ತು ಮಹಿಳೆಯ ಬಲಭಾಗದಲ್ಲಿ ಕಮಂಡಲವನ್ನು ಇಡಲಾಗಿದೆ. ಶಂಖವು ವಿಷ್ಣುದೇವರ ಪವಿತ್ರ ಪಾಂಚಜನ್ಯವನ್ನು ಸೂಚಿಸುತ್ತದೆ. **ಮೂರನೇ ಹಂತ**ದಲ್ಲಿ/ಮೇಲ್ಭಾಗದಲ್ಲಿ ಸತಿ-ಪತಿಯರಿಬ್ಬರು ಮರಣ ಹೊಂದಿದ್ದು, ಅವರನ್ನು ಸ್ವರ್ಗಕ್ಕೆ ಅಪ್ಸರೆಯರು ಕರೆದುಕೊಂಡು ಹೋಗುತ್ತಿರುವ ಚಿತ್ರವಿದೆ. ಈ ರೀತಿ ಹಂತಗಳನ್ನು ವೀರಗಲ್ಲುಗಳಲ್ಲಿ ತೋರಿಸಿರುವುದನ್ನು ಗಮನಿಸಿದರೆ, ಈ ಹಂತಗಳನ್ನು ತೋರಿಸಲು ಪ್ರಾರಂಭಿಸಿದ ಮೊದ ಮೊದಲ ಪ್ರಯೋಗವಿರಬಹುದು ಎಂದೆನಿಸುತ್ತದೆ. ಬಹುಶಃ ಸತಿ-ಪತಿಯರಿಬ್ಬರು ಗ್ರಾಮದ, ಸಮಾಜದ ಹಿತ ಬಯಸಿ ತಮ್ಮ ಆತ್ಮಾರ್ಪಣೆ ಮಾಡಿಕೊಂಡಿರಬಹುದು ಎಂದು ಊಹಿಸಬಹುದು ಹಾಗೂ ಇದು ಪ್ರಾಣಕ್ಕಿಂತ ಕರ್ತವ್ಯ ನಿಷ್ಠೆಗೆ ಹೆಚ್ಚು ಮಹತ್ವ ನೀಡಿದ್ದರೆಂದು ತಿಳಿಯುತ್ತದೆ. ಆದ್ದರಿಂದ ಈ ಶಿಲ್ಪಗಳ ಆಧಾರದ ಮೇಲೆ ಹೇಳುವುದಾದರೆ **ಜಕ್ಕೂರು ಗ್ರಾಮದಲ್ಲಿಯೂ ತಮ್ಮ ನಾಡಿಗಾಗಿ ಪ್ರಾಣವನ್ನೇ ಅರ್ಪಿಸಿರುವ ವೀರರಿದ್ದರು** ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

ಈ ಸ್ಮಾರಕ ಕಲ್ಲಿನಲ್ಲಿ ಕುದುರೆಯನ್ನು ಸಹ ತೋರಿಸಿರುವುದರಿಂದ ಮರಣ ಹೊಂದಿರುವ ವ್ಯಕ್ತಿ **ಸ್ಥಳೀಯ ನಾಯಕ ಅಥವಾ ಉನ್ನತ ಅಧಿಕಾರಿ**ಯಾಗಿರಬಹುದು. ಸ್ಥಳೀಯ ನಾಯಕ ಅಥವಾ ಉನ್ನತ ಅಧಿಕಾರಿಯಾಗಿರುವುದರಿಂದ ಅವನ ಮರಣವನ್ನು ಈ ರೀತಿ ಸ್ಮಾರಕವನ್ನು ನಿರ್ಮಿಸಿ ಗೌರವ ಸೂಚಿಸಿರಬಹುದು ಎಂದು ಹೇಳಬಹುದು

ಈ ದಂಪತಿಗಳ ಸ್ಮಾರಕ ಶಿಲ್ಪವನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದ ವಿಷಯವನ್ನು ಸಂರಕ್ಷಣೆಯ ಯೋಜನೆ ಮತ್ತು ಪ್ರಚಾರ ವಿಭಾಗದಲ್ಲಿ ತಿಳಿಸಲಾಗಿದೆ.

ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿಕಲ್ಲು

ಜಕ್ಕೂರು ಬಡಾವಣೆಯ ಟೆಲಿಕಾಂ ಲೇಔಟ್ ನಲ್ಲಿರುವ ಮೀರಾ ವಿಜಯಕುಮಾರ್ ಅವರು ತಮ್ಮ ನಿವೇಶನದಲ್ಲಿ ಮನೆ ಕಟ್ಟಿಸಲು 2011ರಲ್ಲಿ ಪಾಯ ತೋಡಿಸುತ್ತಿದ್ದಾಗ, ನಿವೇಶನದ ವಾಯುವ್ಯ ಮೂಲೆಯಲ್ಲಿ ಮುಚ್ಚಿಹೋಗಿರುವ ಬಾವಿಯನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ, ಬಾವಿಯೊಳಗೆ ಒಂದು ಶಿಲ್ಪ ಇರುವುದನ್ನು ಗಮನಿಸುತ್ತಾರೆ. ಕಲ್ಲಿನ ಮೇಲೆ ಕೆತ್ತನೆ ಇರುವುದನ್ನು ಗಮನಿಸಿ, ಆ ಕಲ್ಲನ್ನು ಅಲ್ಲೇ ಪಕ್ಕದಲ್ಲಿದ್ದ ಮರದ ಕೆಳಗೆ ಇರಿಸುತ್ತಾರೆ. ಇತ್ತೀಚೆಗೆ ಡೆಕ್ಕನ್ ಹೆರಾಲ್ಡ್ ನಲ್ಲಿ ಶಾಸನಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನಮ್ಮ ತಂಡದ ಕಾರ್ಯವೈಖರಿಯನ್ನು ಕಂಡು ಮೀರಾ ಅವರು ನಮ್ಮ ಗಮನಕ್ಕೆ ತಂದಾಗ, ನಮ್ಮ ತಂಡವು ಸ್ಥಳಕ್ಕೆ ಭೇಟಿ ನೀಡಿ, ಉಬ್ಬು ಶಿಲ್ಪದ ಮೇಲೆ ಸೀಮೆಂಟ್ ಬಿದ್ದು ಅಸ್ಪಷ್ಟವಾಗಿದ್ದನ್ನು,ಶುಭ್ರಗೊಳಿಸಿ, ನಂತರ 3ಡಿ ಸ್ಕ್ಯಾನಿಂಗ್ ಮೂಲಕ ಡಿಜಿಟಲ್ ಸಂರಕ್ಷಣೆ ಮಾಡಲಾಯಿತು.



ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿಕಲ್ಲು

85 ಸೆಂ.ಮೀ. ಎತ್ತರ, 85 ಸೆಂ.ಮೀ. ಅಗಲ, ಹಾಗೂ **8 ಸೆಂ.ಮೀ. ದಪ್ಪ**ವಿರುವ ಗ್ರಾನೈಟ್ ಕಲ್ಲಿನ ಮೇಲೆ ಈ ಶಿಲ್ಪವನ್ನು ಕೆತ್ತಲಾಗಿದೆ. **ಸುಮಾರು 16ನೇ ಶತಮಾನದ ಕಾಲಮಾನದಾಗಿರುವ** ಈ ಸತಿಗಲ್ಲು ಸಂಪೂರ್ಣವಾಗಿರುವ ರೀತಿ ತೋರುತ್ತಿಲ್ಲ, ಈ ಕಲ್ಲನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಿಲ್ಪಿಯು ಕಲ್ಲಿನ ಮೇಲೆ ಇಬ್ಬರು ವ್ಯಕ್ತಿಗಳ ಶಿಲ್ಪಗಳನ್ನು ಕೆತ್ತಲು, ಕಲ್ಲನ್ನು ಸಿದ್ಧಪಡಿಸಿಕೊಂಡಿರುವಂತೆ ಕಂಡು ಬರುತ್ತದೆಯಾದರೂ ಎಡ ಭಾಗದಲ್ಲಿ ಯಾವುದೇ ಕೆತ್ತನೆಯನ್ನು ಮಾಡದೇ ಬಲ ಭಾಗದಲ್ಲಿ ತನ್ನ ಎರಡು ಕೈಗಳನ್ನು ಜೋಡಿಸಿ ಕೈ ಮುಗಿಯುತ್ತಾ ನಿಂತಿರುವ ಸ್ತ್ರೀ ಶಿಲ್ಪವನ್ನು ಕೆತ್ತಿದ್ದಾನೆ. ಇದೊಂದು ಉಬ್ಬು ಶಿಲ್ಪ ಎಂಬುದು ನಮ್ಮ 3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಚಿತ್ರದಿಂದ ತಿಳಿಯುತ್ತದೆ. ಈ ಶಿಲ್ಪದಲ್ಲಿ ಸ್ತ್ರೀಯು ತುರುಬು, ಆಭರಣ ಮತ್ತು ವಸ್ತ್ರಗಳಿಂದ ಅಲಂಕೃತಳಾಗಿದ್ದು, ಈಕೆಯ ಎಡ ಭಾಗದಲ್ಲಿ ಚಿಕ್ಕ ಶಿಲ್ಪವಿದೆ **ಬಹುಶಃ ಇದು ಆಕೆಯನ್ನು ಹರಸುತ್ತಿರುವ ವ್ಯಕಿಯ ಶಿಲ್ಪವಾಗಿರಬಹುದು ಎಂದು ವೀರಗಲ್ಲು ತಜ್ಞರಾದ ಶೇಷಶಾಸ್ತ್ರಿ ಅವರು ಅಭಿಪ್ರಾಯ ಪಟ್ಟಿದ್ದಾರೆ.**



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿಕಲ್ಲಿನ ಡಿಜಿಟಲ್ ಚಿತ್ರ

ಈ ಸತಿಗಲ್ಲಿನಲ್ಲಿ ವ್ಯಕ್ತಿಯ ತಲೆಯ ಮೇಲೆ ತ್ರಿಕೋನ ರೀತಿಯ ರಚನೆ ಇದ್ದು, ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ರೇಖಾಚಿತ್ರವನ್ನು ಮೂಡಿಸಲಾಗಿದೆ. ಇದನ್ನು ಮರಣ ಹೊಂದಿದವರು ಹಾಗೂ ಇವರ ಸಂಪ್ರದಾಯ, ನಂಬಿಕೆಗಳು ಸೂರ್ಯ ಚಂದ್ರ ಇರುವವರೆಗೂ ಶಾಶ್ವತವಾಗಿ ಉಳಿಯಲಿ ಎಂಬರ್ಥದಲ್ಲಿ ಕೆತ್ತಲಾಗಿರುತ್ತದೆ.

ಈ ಶಿಲ್ಪದಲ್ಲಿನ ಒಂದು ಸಮಸ್ಯೆ ಏನೆಂದರೆ ತ್ರಿಕೋನದ ರೀತಿಯ ರಚನೆಯನ್ನು ಹಾವಿನ ಹೆಡೆ ಎಂದು ತಿಳಿದು ಇದೊಂದು ಹಾವು ಬೇಟೆ ವೀರಗಲ್ಲಾಗಿದ್ದು, ಮಹಿಳೆಯ ಪತಿ ಬೇಟೆಗೆ ಹೋದಂತಹ ಸಮಯದಲ್ಲಿ ಹಾವು ಕಚ್ಚಿ ಸತ್ತಿರುವ ಸಾಧ್ಯತೆಯಿದೆ. ಆದ್ದರಿಂದ ಇದನ್ನು ತಿಳಿದ ಪತ್ನಿಯೂ ಸಹ ಪ್ರಾಣ ತ್ಯಾಗ ಮಾಡಿದ್ದರಿಂದ ಈ ಸತಿ-ಪತಿಗಳಿಬ್ಬರ ನೆನಪಿನಾರ್ಥವಾಗಿ ಈ ವೀರಗಲ್ಲನ್ನು ಹಾಕಿಸಿರಬಹುದು ಎಂಬ ಅಭಿಪ್ರಾಯವಿದೆ. ಆದರೆ ಇದು ಕೇವಲ ಸತಿಗಲ್ಲಾಗಿದ್ದು ಯಾವ ಉದ್ದೇಶದಿಂದ ಈ ಕಲ್ಲನ್ನು ಹಾಕಿಸಲಾಗಿದೆ ಎಂಬುದು ತಿಳಿಯದಾಗಿದೆ.

ಮಹಾಸತಿಗಲ್ಲುಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ, ಅದರಲ್ಲಿ ನಿಂಬೆಹಣ್ಣು

ಹಿಡಿದಿರುವಂತೆ ಶಿಲ್ಪವನ್ನು ಕೆತ್ತಲಾಗಿರುತ್ತದೆ. ಆದರೆ ಈ ಶಿಲ್ಪದಲ್ಲಿ ಸ್ತ್ರೀಯು ಸಮರ್ಪಣಾ ಭಾವದಿಂದ ಕೈ ಮುಗಿದು ನಿಂತಿರುವುದರಿಂದ, ಇದು ಸಹಗಮನವಾಗಿರುವುದರ ಸಂಕೇತವನ್ನು ಸೂಚಿಸುತ್ತದೆ ಎಂದು ಹೇಳಬಹುದು.

ಅಲ್ಲಾಳಸಂದ್ರದ ಹಂದಿಬೇಟೆ ಶಾಸನ

ಹಂದಿ, ಹುಲಿ, ಆನೆ ಬೇಟೆಯ ವೀರಗಲ್ಲುಗಳನ್ನು ಭಾರತದಾದ್ಯಂತ ಹಲವಾರು ಪ್ರದೇಶಗಳಲ್ಲಿ ಕಾಣಬಹುದು. ಹಂದಿಯು ಒಂದು ರೀತಿಯಲ್ಲಿ ರೈತರ ಶತ್ರುವಾಗಿದ್ದು, ರಾತ್ರಿ ಸಮಯದಲ್ಲಿ ಹೊಲಗದ್ದೆಗಳಿಗೆ ನುಗ್ಗಿ ಬೆಳೆಯನ್ನು ತಿಂದು ಹಾಳು ಮಾಡುತ್ತದೆ. ರೈತರ ಹಿತ ಕಾಪಾಡಲು ಮತ್ತು ಕೆಲವರು ಆಹಾರಕ್ಕಾಗಿ ಹಂದಿಯನ್ನು ಬೇಟೆಯಾಡುತ್ತಿದ್ದರು. ಸಾಮಾನ್ಯವಾಗಿ ಹಂದಿ ಬೇಟೆಯಾಡಲು ನಾಯಿಗಳನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಹಾಗೂ ಬೇಟೆಗಾಗಿ ಭರ್ಜಿ ಅಥವಾ ಈಟಿಯನ್ನು ಆಯುಧಗಳಾಗಿ ಬಳಸುತ್ತಿದ್ದರು. ಈ ಎಲ್ಲಾ ಅಂಶಗಳನ್ನು ತೋರಿಸಲು ಹಂದಿ ಬೇಟೆಯ ವೀರಗಲ್ಲುಗಳ ಮೇಲೆ ಹಂದಿ, ನಾಯಿ ಹಾಗೂ ಭರ್ಜಿ ಅಥವಾ ಈಟಿಯ ಶಿಲ್ಪಗಳನ್ನು ಚಿತ್ರಿಸಿರುತ್ತಾರೆ.

ಅಲ್ಲಾಳಸಂದ್ರದ ಹಂದಿ ಬೇಟೆ ಶಾಸನವು ಸಾ.ಶ.1080ರಲ್ಲಿ ಅಲ್ಲಾಳಸಂದ್ರ ಗ್ರಾಮದ ಆಗ್ನೇಯ ಕೆಂಪಾಪುರದ ಮುನಿಯಪ್ಪನ ಪಾಳು ಜಮೀನಿನಲ್ಲಿರುವ ಕಲ್ಲು ಎಂದು ದಾಖಲಾಗಿದೆ. **ಆದರೆ ಈ ಕಲ್ಲು ಇಂದು ಕಣ್ಮರೆಯಾಗಿದೆ.** ಇದು ಸುಮಾರು 5.4 ಅಡಿ ಎತ್ತರ ಹಾಗೂ 4 ಅಡಿ ಅಗಲವಿತ್ತು ಎಂದು ರೈಸ್ ಅವರ ದಾಖಲೆಯಿಂದ ತಿಳಿಯುತ್ತದೆ[1]. ಈ ಕಲ್ಲು ದೊರಕದೆ ಇರುವುದರಿಂದ ಶಿಲ್ಪದ ವಿವರಣೆ ನೀಡಲು ಸಾಧ್ಯವಾಗುತ್ತಿಲ್ಲ. ರಾಮದೇವನು ಹಂದಿ ಬೇಟೆಗೆಂದು ಹೋದಾಗ ದೊಡ್ಡ ಹಂದಿಯ ದಾಳಿಗೆ ತುತ್ತಾಗಿ ಮರಣವನ್ನು ಹೊಂದಿರುವುದು ಈ ಶಾಸನದ ಪ್ರಮುಖ ವಿಷಯ. ಈ ವೀರಗಲ್ಲು ಶಾಸನದ ವಿಶೇಷವೆಂದರೆ ಇದು ಚೋಳರಾಜ ಕುಲೋತುಂಗನ ಆಳ್ವಿಕೆಯಲ್ಲಿ ಕನ್ನಡದಲ್ಲಿ ಹಾಕಿಸಿರುವ ವೀರಗಲ್ಲು. ಬೆಂಗಳೂರು ಜಿಲ್ಲೆಯಲ್ಲಿ ಇದನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಶಾಸನೋಕ್ತ ಕನ್ನಡ ಲಿಪಿಯ ವೀರಗಲ್ಲು ಚೋಳರ ಕಾಲಾವಧಿಯಲ್ಲಿ ಕಂಡುಬರುವುದಿಲ್ಲ. ಹನ್ನೊಂದನೆಯ ಶತಮಾನದ ಪ್ರಾರಂಭದಲ್ಲಿ ಈ ಭಾಗದ ಮೇಲಿನ ತಮ್ಮ ಪ್ರಾಬಲ್ಯವನ್ನು ಗಂಗರು ಕಳೆದುಕೊಂಡಿರುವುದಕ್ಕೆ ಈ ಶಾಸನ ನಿದರ್ಶನವಾಗಿದೆ. ಕುತೂಹಲಕ್ಕೆ ಈ ಶಾಸನ ವೀರಗಲ್ಲಾಗಿದ್ದರೆ, ವೀರಗಲ್ಲಿನ ಶಿಲ್ಪ ಹೇಗಿರಬಹುದು ಎಂಬುದನ್ನು ನೋಡಲು ಸಾಧ್ಯವಾಗದಿರುವುದು ದುರದೃಷ್ಟವೆಂದೆ ಹೇಳಬಹುದು.

ಬೆಂಗಳೂರು ಪ್ರದೇಶದಲ್ಲಿ ದೊರೆತಿರುವ ಹಂದಿ ಬೇಟೆ ಶಾಸನಗಳಲ್ಲಿ ಅಲ್ಲಾಳಸಂದ್ರ ಮಾತ್ರವಲ್ಲದೇ ಅಲ್ಲಾಳಸಂದ್ರ ಪಕ್ಕದಲ್ಲಿನ **ಯಲಹಂಕ**ದಲ್ಲಿ ನಾಯಿಯು ಹಂದಿಯೊಡನೆ ಹೋರಾಡಿ ಮರಣವನ್ನಪ್ಪಿದ್ದರ ಸಲುವಾಗಿ ಅದರ ಮಾಲೀಕ ಒಂದು ವೀರಗಲ್ಲನ್ನು ಹಾಕಿಸಿದ್ದಾನೆ. ಈ ನಾಯಿಯ ಹೆಸರು ಚಾಮುಂಡಿಯಾಗಿದೆ **(ಈ ವೀರಗಲ್ಲು ಕೆರೆಯನ್ನು ಜೀರ್ಣೋದ್ಧಾರ ಮಾಡುವಾಗ ಕಣ್ಮರೆಯಾಗಿದೆ). ಮಣ್ಣೆ, ಬಿಲ್ಲಿನಕೋಟೆ (ನೆಲಮಂಗಲ ತಾಲ್ಲೂಕು), ಚಿಕ್ಕಮದುರೆ, ಅರಳಾಸಂದ್ರ, ಕಂಚಿಗನಾಳ (ದೊಡ್ಡಬಳ್ಳಾಪುರ ತಾಲ್ಲೂಕು), ಸಾದೇನಹಳ್ಳಿ (ದೇವನಹಳ್ಳಿ ತಾಲ್ಲೂಕು), ನೆಲವಾಗಿಲು, ಹಡಕನಹಳ್ಳಿ, ಕಟ್ಟಿಗೆನಹಳ್ಳಿ, ದೊಡ್ಡಹುಲ್ಲೂರು (ಹೊಸಕೋಟೆ ತಾಲ್ಲೂಕು) ಮುಂತಾದ ಪ್ರದೇಶಗಳಲ್ಲಿ ಕಾಣಬಹುದಾಗಿದೆ.**

---

1 B Lewis Rice, *Epigraphia Carnatica Vol 09, Inscriptions in the Bangalore District*, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-32, ಅಲ್ಲಾಳಸಂದ್ರ, 1905.

ದಾಸರಹಳ್ಳಿಯ ಸ್ಮಾರಕಶಿಲ್ಪಗಳು

ದಾಸರಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾ.ಶ. ಒಂಭತ್ತನೇ ಶತಮಾನದಿಂದಲೇ ಹಲವಾರು ಐತಿಹಾಸಿಕ ಮಹತ್ವದ ಆಧಾರಗಳು ದೊರೆತಿದ್ದು, ಅವುಗಳಿಂದ ಸ್ಥಳೀಯ ಜನ-ಜೀವನ, ಸಂಪ್ರದಾಯ, ಆಚರಣೆ, ವೇಷಭೂಷಣ, ಅಂದಿನ ಜನಗಳು ಹೊಂದಿದ್ದ ಸಾಮಾಜಿಕ ಮತ್ತು ಧಾರ್ಮಿಕ ಕಳಕಳಿಯನ್ನು ತಿಳಿಯಬಹುದು. ಈ ಪ್ರದೇಶದಲ್ಲಿ ಹಲವಾರು ಶಾಸನ ರಹಿತ ಸ್ಮಾರಕ ಶಿಲ್ಪಗಳು ದೊರೆತಿದ್ದು, ಇವುಗಳ ಮೇಲೆ ಹೆಚ್ಚಿನ ಅಧ್ಯಯನ ನಡೆದು ಸ್ಥಳೀಯ ಸಂಪ್ರದಾಯ ಮತ್ತು ಇತಿಹಾಸದ ಅನಾವರಣ ಆಗಬೇಕಿದೆ. ದಾಸರಹಳ್ಳಿಯು ಒಂದು ಸಾಂಸ್ಕೃತಿಕವಾಗಿ ಹಿರಿಮೆಯನ್ನು ಹೊಂದಿರುವ ಒಂದು ಗ್ರಾಮ/ಬಡಾವಣೆಯಾಗಿದ್ದು, ಇಲ್ಲಿನ ಚೌಡೇಶ್ವರಿ ದೇವಾಲಯದ ಆವರಣದಲ್ಲಿ ಇಲ್ಲಿನ **ಸ್ಥಳೀಯ ಇತಿಹಾಸವನ್ನು ತಿಳಿಸುವ ಒಂದು ವೀರನ ವಿಗ್ರಹ ಮತ್ತು ಮೂರು ಧಾರ್ಮಿಕ ನಂಬಿಕೆಯ ಭಕ್ತರ ಶಿಲ್ಪಗಳು ಸೇರಿ ಒಟ್ಟು ನಾಲ್ಕು ಸ್ಮಾರಕಶಿಲ್ಪಗಳು ಕಂಡು ಬರುತ್ತವೆ**. ಈ ಶಿಲ್ಪಗಳ ಶೈಲಿ, ಭಂಗಿ, ಉಡುಗೆ-ತೊಡುಗೆ ಇನ್ನೂ ಮುಂತಾದ ಆಧಾರಗಳ ಮೇಲೆ **ಇವುಗಳು ಹದಿನಾರನೇ ಶತಮಾನಕ್ಕೆ ಸೇರಿದವುಗಳೆಂದು ಹೇಳಬಹುದು.** ಈ ಶಿಲ್ಪಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.


ದಾಸರಹಳ್ಳಿಯಲ್ಲಿನ ವೀರನ ಶಿಲ್ಪ

ವೀರಗಲ್ಲುಗಳ ಆರಾಧನೆಯೇ ಒಂದು ಸಂಪ್ರದಾಯ. ವೀರನ ಅಸಾಮಾನ್ಯ ಶೌರ್ಯ ಮತ್ತು ವೀರತ್ವವನ್ನು ದೈವತ್ವಕ್ಕೆ ಏರಿಸಿದಾಗ ಅವನಿಗೆ ವಿಗ್ರಹ, ಗುಡಿಯನ್ನು ನಿರ್ಮಿಸಿ ಪೂಜಿಸಲು ಪ್ರಾರಂಭಿಸಿದರು. ಅದೇ ರೀತಿ ಇಲ್ಲಿಯೂ ಸಹ ವೀರನ ವಿಗ್ರಹ ಸ್ಥಾಪಿಸಿ ಆರಾಧಿಸುತ್ತಿರುವುದನ್ನು ನೋಡಬಹುದು. ವೀರನ ವಿಗ್ರಹ ವೀರಗಲ್ಲುಗಳಲ್ಲಿ ಒಂದು ಪ್ರಭೇದವಾಗಿದೆ. ಈ ವೀರನ ವಿಗ್ರಹದ ಕಲ್ಲಿನ ಆಕಾರವನ್ನು ಸಾಮಾನ್ಯವಾಗಿ ಗಮನಿಸಿದಾಗ ಗಂಗರ ಕಾಲದ ವಿಷ್ಣುದುರ್ಗೆಯನ್ನು ರಚಿಸಲು ಬಳಸಿರುವ ಕಲ್ಲಿನ ಮಾದರಿಯನ್ನು ಹೋಲುವಂತೆ ಮೇಲ್ನೋಟಕ್ಕೆ ಕಂಡುಬರುತ್ತದೆ. ಗಂಗರ ಕಾಲದಲ್ಲಿ ಸ್ಮಾರಕ ಶಿಲ್ಪಗಳ ರಚನೆಗೆ ಸುಟ್ಟ ಕಲ್ಲುಚಪ್ಪಡಿಗಳನ್ನು ಯತೇಚ್ಛವಾಗಿ ಬಳಸಿರುತ್ತಾರೆ. ಮತ್ತು ಕಲ್ಲಿನ ಆಕಾರಕ್ಕೆ ಸರಿಹೊಂದುವಂತೆಯೇ ಉಬ್ಬುಶಿಲ್ಪಗಳ ರಚನೆಯನ್ನು ಮಾಡಿರುತ್ತಾರೆ. ಈ ವೀರಗಲ್ಲಿನಲ್ಲಿಯೂ ಸಹ ಈ ಲಕ್ಷಣಗಳನ್ನು ಕಾಣಬಹುದು. ಆದರೆ ಶಿಲ್ಪದ ಮುಖ, ಕಾಲು, ಕೈ ಭಾಗಗಳು ಬಹುತೇಕ ಒಡೆದು ಹೋಗಿರುವುದರಿಂದ ಸ್ಮಾರಕ ಕಲ್ಲು ಸ್ಥಾಪನೆಯ ಮೂಲ ಉದ್ದೇಶವು ಅಸ್ಪಷ್ಟವಾಗಿದೆ. ಆದರೆ ಇಲ್ಲಿ ವೀರನು ಆಲೀಢ ಭಂಗಿಯಲ್ಲಿ ನಿಂತಿದ್ದು ವೀರಗಚ್ಚೆ ಹಾಕಿದ್ದಾನೆ. ಗಂಗರ ಕಾಲದ ವೀರಗಲ್ಲಿನ ಶಿಲ್ಪದಲ್ಲಿ ವೀರನು ಆಲೀಢ ಭಂಗಿಯಲ್ಲಿ ನಿಂತಾಗ ಅವನ ನಿತಂಭವು ದಪ್ಪವಾಗಿರುವುದರ ಬದಲು ದೇಹಕ್ಕೆ ನೇರವಾಗಿರುತ್ತದೆ ಹಾಗೂ ಬಲಗಾಲು ಸಹ ನೇರವಾಗಿರುತ್ತದೆ. ಆದರೆ ಈ ವೀರಗಲ್ಲು ಶಿಲ್ಪದಲ್ಲಿ ವೀರನ ನಿತಂಭವು ದಪ್ಪವಾಗಿರುವುದರ ಜೊತೆಗೆ ಬಲಗಾಲು ಮುಂಭಾಗಕ್ಕೆ ಚಲಿಸುವಂತಿದೆ. ಈ ಆಧಾರಗಳಿಂದ **ಈ ಸ್ಮಾರಕವು ಸುಮಾರು ಸಾ.ಶ. ಹದಿನಾರನೇ ಶತಮಾನದೆಂದು ಹೇಳಬಹುದು (ವಿಜಯನಗರ ಕಾಲಘಟ್ಟದ್ದು).**

ಇಲ್ಲಿ ವೀರನು ವೀರಮುಡಿಯನ್ನು ಬಲಕ್ಕೆ ಕಟ್ಟಿದ್ದು, ಕಿವಿ, ಕತ್ತು, ಕೈಕಾಲುಗಳಿಗೆ ಆಭರಣಗಳನ್ನು ಧರಿಸಿದ್ದಾನೆ. ಬಲಗೈನಲ್ಲಿ ಬಾಕು ಹಿಡಿದಿದ್ದರೆ, ವೀರನ ಎಡಗೈ ಕಲ್ಲಿನ ಅಂಚಿನವರೆಗೆ ಬಂದಿರುವುದರಿಂದ ಎಡಗೈನಲ್ಲಿ ಯಾವುದೇ ಆಯುಧ ಇರುವುದು ಕಾಣುವುದಿಲ್ಲ. ವೀರನ



ದಾಸರಹಳ್ಳಿಯ ವೀರನ ಶಿಲ್ಪ





3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ವೀರನ ಶಿಲ್ಪದ ಡಿಜಿಟಲ್ ಚಿತ್ರಗಳು

ಎರಡೂ ಕಾಲುಗಳ ನಡುವೆ ಶತ್ರುವಿನ ಉಬ್ಬುಶಿಲ್ಪವನ್ನು ಕೆತ್ತಿದ್ದರೂ ಸಹ ಈ ಶಿಲ್ಪ ಒಡೆದು ಹೋಗಿರುವುದರಿಂದ ಸ್ಪಷ್ಟವಾಗಿ ಕಾಣುವುದಿಲ್ಲ. ಹಾಗೂ ಈ ವೀರಗಲ್ಲನ್ನು ನೆಲದಲ್ಲಿ ಸ್ಥಾಪಿಸಲು ಗೂಟದ ರೀತಿ ರಚನೆ ಮಾಡಿಕೊಳ್ಳಲಾಗಿದೆ. ಈ ಎಲ್ಲಾ ಲಕ್ಷಣಗಳ ಆಧಾರದ ಮೇಲೆ ಬಹುಶಃ ವೀರನು ಯುದ್ಧದಲ್ಲಿ ಹೋರಾಡಿ ವೀರ ಮರಣವನ್ನಪ್ಪಿದ್ದಾನೆ ಎಂದು ತಿಳಿಯಬಹುದು. ಏನೇ ಆದರೂ ಇಲ್ಲಿ ವೀರನ ಶೌರ್ಯವನ್ನು ಸ್ಮರಿಸಿ ಅವನ ವೀರತ್ವ ಇತರರಿಗೆ ಮಾದರಿಯಾಗಬೇಕು ಹಾಗೂ ಅವನ ಕೊಡುಗೆ ಸದಾ ಕಾಲ ಉಳಿಯಬೇಕೆಂಬ ಆಶಯದಿಂದ ಅಂದಿನ ಜನರು ಈ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಉಪಕಾರವನ್ನು ಮಾಡಿದವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಬೇರೆ ಬೇರೆ ಮಾರ್ಗಗಳು ಇದ್ದರು ಸಹ ಶತ ಶತಮಾನಗಳವರೆಗೆ ವೀರನ ಶೌರ್ಯ, ಸಾಹಸ, ವೀರತ್ವವು ಇತರರಿಗೆ ಆದರ್ಶವಾಗಿರಬೇಕೆಂದು ಈ ರೀತಿ ವೀರಗಲ್ಲನ್ನು ಸ್ಥಾಪಿಸಲಾಗಿರುತ್ತದೆ. ಇಂತಹ ಸ್ಮಾರಕಗಳು ಕೇವಲ ಒಂದು ಶಿಲೆಯಾಗಿರದೆ ಅಂದಿನ ಜನರ ಸಂಸ್ಕಾರದ ಕುರುಹುಗಳಾಗಿವೆ. ನಾವುಗಳು ಈ ಸ್ಮಾರಕಗಳನ್ನು ಕೇವಲ ಶಿಲೆಯಾಗಿ ಭಾವಿಸದೆ ಅಂದಿನ ಜನರ ನಂಬಿಕೆ, ಆಚರಣೆಗಳ ಪ್ರತೀಕವೆಂದು ಅವುಗಳನ್ನು ಸೂಕ್ತ ರೀತಿಯಲ್ಲಿ ಸಂರಕ್ಷಿಸಿ ಅವುಗಳ ಮೌಲ್ಯಗಳನ್ನು ಪಾಲಿಸಿ ಮುಂದಿನ ತಲೆಮಾರಿಗೆ ಕೊಂಡೊಯ್ಯಬೇಕಿದೆ.

ಭಕ್ತರ ಶಿಲ್ಪಗಳು

ದಾಸರಹಳ್ಳಿಯ ಚೌಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಮೇಲೆ ತಿಳಿಸಿದ ವೀರನ ಶಿಲ್ಪ ಮಾತ್ರವಲ್ಲದೇ **ಸುಮಾರು ಹದಿನಾರನೇ ಶತಮಾನ**ದ ಕಾಲಘಟ್ಟಕ್ಕೆ ಸೇರಿದ **ಮೂರು ಭಕ್ತರ ಶಿಲ್ಪಗಳು** ಕಂಡುಬರುತ್ತವೆ. ಈ ಶಿಲ್ಪಗಳೂ ಸಹ ಶಾಸನ ರಹಿತವಾಗಿದ್ದು, ದೇವರಿಗೆ ಕೈ ಮುಗಿಯುತ್ತಾ ಕೃತಜ್ಞತೆಯನ್ನು ಸಲ್ಲಿಸುತ್ತಿರುವಂತಿವೆ.

ದಂಪತಿಗಳಿರುವ ಈ ಸ್ಮಾರಕ ಶಿಲ್ಪವು ವಿಶೇಷವಾಗಿದ್ದು, ಪುರುಷನ ಎಡ ಮತ್ತು ಬಲ ಭಾಗದಲ್ಲಿ ಅವನ ಇಬ್ಬರು ಪತ್ನಿಯರಿದ್ದು, ಮೂರು ಜನರೂ ತಮ್ಮ ಕೈ ಮುಗಿಯುತ್ತಾ ಸಮಭಂಗಿಯಲ್ಲಿ ನಿಂತಿದ್ದಾರೆ. ಸರ್ವಾಭರಣ ಭೂಷಿತರಾದ ಇವರುಗಳ ಮುಖದಲ್ಲಿ ಸಮರ್ಪಣಾಭಾವವನ್ನು ಗುರುತಿಸಬಹುದಾಗಿದೆ. ಈ ಸ್ಮಾರಕ ಶಿಲ್ಪದ ಮೇಲೆ ಸೂರ್ಯ-ಚಂದ್ರರ ರೇಖಾ ಚಿತ್ರಗಳಿದ್ದು, ಈ ಸೂರ್ಯ-ಚಂದ್ರರು ಇರುವವರೆಗೂ ಈ ಭಕ್ತರ ಸೇವೆ ಸದಾ ದೇವರಿಗೆ ಸಲ್ಲಿಕೆಯಾಗಲಿ ಎಂಬರ್ಥದಲ್ಲಿ ಕೆತ್ತಲಾಗಿದೆ. **ಮತ್ತೆರಡು ಭಕ್ತರ ಶಿಲ್ಪಗಳು ಒಬ್ಬನೇ ವ್ಯಕ್ತಿಯದ್ದಾಗಿದ್ದು** ಒಂದೇ ರೀತಿಯಲ್ಲಿವೆ. ಹಾಗೂ ಈ ಎರಡೂ ಶಿಲ್ಪಗಳನ್ನು ಸರ್ವಾಭರಣಗಳಿಂದ ಅಲಂಕೃತವಾಗಿ, ಸಮಭಂಗಿಯಲ್ಲಿ ಕೈ ಮುಗಿಯುತ್ತಾ ನಿಂತಿರುವಂತೆ ಕೆತ್ತಲಾಗಿದ್ದು, ತಲೆಯ ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ರೇಖಾ ಚಿತ್ರವನ್ನು ಮೂಡಿಸಲಾಗಿದೆ.

ದೇವರಿಗೆ **ಸದಾ ಕಾಲವು ನಿಷ್ಠೆಯಿಂದ ತಮ್ಮ ಸೇವೆಯು ಇರಲಿ**, ಹಾಗೆ ಆ ದೇವರು ಸದಾ ನಮ್ಮನ್ನು ಹರಸುತ್ತಿರಲಿ ಎಂಬ ಭಾವನೆಯಿಂದ ದೇವಾಲಯಗಳಿಗೆ ಹಲವಾರು ದಾನದತ್ತಿಗಳನ್ನು ನೀಡಿ ಈ ರೀತಿಯ ಶಿಲ್ಪಗಳನ್ನು ಸ್ಥಾಪಿಸಿರುತ್ತಾರೆ. **ಇವರು ಪ್ರಸ್ತುತ ಪೂಜಿಸಲ್ಪಡುತ್ತಿರುವ ಚೌಡೇಶ್ವರಿ ದೇವಾಲಯದ ಭಕ್ತರೋ ಅಥವಾ ಬೇರೆ ಕಡೆಯಿಂದ ತಂದು ಇಲ್ಲಿ ಇರಿಸಿದ್ದಾರೆಯೋ ಎಂಬುದಕ್ಕೆ ಖಚಿತ ಮಾಹಿತಿಯಿಲ್ಲ.**

ಹಲವಾರು ದೇವಾಲಯಗಳಲ್ಲಿ ಈ ರೀತಿಯ ಭಕ್ತರ ಶಿಲ್ಪಗಳನ್ನು ಕಾಣಬಹುದಾಗಿದ್ದು, ರಾಜ-ರಾಣಿಯರ ಶಿಲ್ಪಗಳನ್ನು ದೇವಾಲಯದ ಸುಖನಾಸಿ ಮತ್ತು ನವರಂಗ ಭಾಗದಲ್ಲಿ ಕೆತ್ತಿದ್ದರೆ, ಅಧಿಕಾರಿ ವರ್ಗದವರ ಶಿಲ್ಪಗಳನ್ನು ನವರಂಗದ ಕಂಬಗಳ ಮೇಲೆ ಕೆತ್ತಿರುತ್ತಾರೆ. ಸಾಮಾನ್ಯ ಭಕ್ತರ ಶಿಲ್ಪಗಳನ್ನು ಮೆಟ್ಟಿಲು, ಪ್ರಧಾನ ದ್ವಾರದ ಬಳಿ ದೇವರಿಗೆ ಸಾಷ್ಟಾಂಗ ನಮಸ್ಕರಿಸುತ್ತಿರುವಂತೆ ಕೆತ್ತಿರುತ್ತಾರೆ. ಈ ರೀತಿಯ ಶಿಲ್ಪಗಳನ್ನು ಇಂದು ನಾವು ತುಳಿಯಬಾರದೆಂಬ ಉದ್ದೇಶದಿಂದ ಪಕ್ಕದಿಂದ ಹೋಗುತ್ತೇವೆ. ಆದರೆ ಇವರು, ದೇವರೇ ನಿನ್ನ ಭಕ್ತರ ಪಾದದ ಧೂಳು ನಮ್ಮ ಮೇಲಿರಲಿ ಎಂಬ ಭಾವನೆಯಿಂದ ಈ ರೀತಿ ಸ್ಥಾಪಿಸಿಕೊಂಡಿರುತ್ತಾರೆ.



ದಾಸರಹಳ್ಳಿಯ ಭಕ್ತರ ಶಿಲ್ಪದ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ಭಕ್ತರ ಶಿಲ್ಪದ ಡಿಜಿಟಲ್ ಚಿತ್ರ



ದಾಸರಹಳ್ಳಿಯ ಭಕ್ತನ ಶಿಲ್ಪ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ಭಕ್ತನ ಶಿಲ್ಪದ ಡಿಜಿಟಲ್ ಚಿತ್ರ

ಅಗ್ರಹಾರದ ವೀರಗಲ್ಲು

ಅಗ್ರಹಾರದಲ್ಲಿ ದಾಖಲಾದ ಶಾಸನವು ಒಡೆದು ಎರಡು ತುಂಡಾಗಿ ಬಿದ್ದಿತ್ತು. ಈ ಎರಡು ತುಂಡುಗಳನ್ನು ವೈಜ್ಞಾನಿಕವಾಗಿ ಮರುಜೋಡಿಸುವ ಕಾರ್ಯವನ್ನು 29-ಡಿಸೆಂಬರ್-2021 ರಂದು ಮಾಡುತ್ತಿದ್ದಾಗ, ಸ್ಥಳೀಯ ಗ್ರಾಮಸ್ಥರಾದ ಮುನಿರಾಜು ಅವರು, ಅಲ್ಲೊಂದು ತೋಟದಲ್ಲಿ ಗೊಂಬೆಯ ಚಿತ್ರವಿರುವ ಕಲ್ಲಿದೆ ಎಂಬ ಮಾಹಿತಿ ನೀಡಿದರು. ಅಲ್ಲಿಗೆ ತೆರಳಿ ನೋಡಿದಾಗ ಅದು ವೀರಗಲ್ಲಿನ ಒಂದು ತುಂಡಾದ ಭಾಗವಾಗಿತ್ತು. ಮರು ದಿನ ಶಾಸನದ ಜೋಡಣೆಯ ಕೆಲಸವನ್ನು ಮುಂದುವರೆಸುತ್ತಿದ್ದಾಗ, ಮತ್ತೊಬ್ಬರು ಬಂದು ನಮ್ಮ ಮನೆಯ ಬಳಿ ತುಂಡಾದ ವೀರಗಲ್ಲಿದೆ ಎಂದರು. ಅಲ್ಲಿಗೆ

ಹೋಗಿ ಪರಿಶೀಲಿಸಿದಾಗ ಈ ಕಲ್ಲಿನ ತುಂಡು ಈ ಮೊದಲೇ ಸಿಕ್ಕಿದ್ದ ವೀರಗಲ್ಲಿನ ಭಾಗವಾಗಿತ್ತು. ನಂತರ **ಇವೆರಡೂ ತುಂಡುಗಳನ್ನು ಗ್ರಾಮಸ್ಥರು ತಂದು ಅಗ್ರಹಾರದ ವೇಣುಗೋಪಾಲ ದೇವಾಲಯದ ಬಳಿ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ ತಮಿಳು ಶಾಸನದ ಪಕ್ಕದಲ್ಲಿ ಜೋಡಿಸಿ ಸಂರಕ್ಷಿಸಿರುತ್ತಾರೆ.**

ವೀರನು ಆಲೀಢಾಸನ ಭಂಗಿಯಲ್ಲಿ ನಿಂತಿದ್ದು ಬಲಗೈಯಲ್ಲಿ ಆಯುಧವಿದೆ. ಎಡಗೈಯಲ್ಲಿ ಕತ್ತಿ ಹಿಡಿದಿರುವ, ವೀರನು ವೀರಗಚ್ಚೆ, ಕೊರಳಿಗೆ ಸರ, ಕಾಲ್ಗಡಗ ಧರಿಸಿದ್ದು, ತನ್ನ ತಲೆಯ ಕೂದಲನ್ನು ವೀರಮುಡಿಯಾಗಿ ಎಡಗಡೆ ಕಟ್ಟಿದ್ದಾನೆ. ಕಲ್ಲು ಮೇಲ್ಭಾಗದಲ್ಲಿ ಒಡೆದು ಹೋಗಿದ್ದು, ಎಡಭಾಗದ ಮೂಲೆಯಲ್ಲಿ ಚಾಮರಧಾರಿಣಿಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಕಾಣುವ ಅಸ್ಪಷ್ಟ ಉಬ್ಬುಶಿಲ್ಪವಿದೆ. ಹಾಗೂ ವೀರನ ಮುಂದೆ ಕೆಳಭಾಗದಲ್ಲಿ ವೈರಿಯಂತೆ ಕಾಣುವ ವ್ಯಕ್ತಿಯ ಉಬ್ಬುಶಿಲ್ಪವಿದ್ದು, ವೈರಿಯು ವೀರನ ಸೊಂಟದ ಭಾಗಕ್ಕೆ ಆಯುಧದಿಂದ ತಿವಿಯುತ್ತಿರುವಂತೆ ಶಿಲ್ಪಿಯೂ ಯುದ್ಧದ ತೀವ್ರತೆಯನ್ನು ಮನೋಜ್ಞವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಶಿಲ್ಪದ ಆಧಾರದ ಮೇಲೆ **ಈ ವೀರಗಲ್ಲಿನ ಕಾಲವನ್ನು ಸುಮಾರು ಹದಿನೈದನೇ ಶತಮಾನದ್ದೆಂದು ವೀರಗಲ್ಲು ತಜ್ಞರಾದ ಶೇಷಶಾಸ್ತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ.**



ಅಗ್ರಹಾರದ ವೀರಗಲ್ಲು



ಅಗ್ರಹಾರದ ವೀರಗಲ್ಲಿನ ಒಂದು ತುಂಡು ಇದ್ದ ಸ್ಥಳ

ದೇವಾಲಯಗಳು

ದೇವತೆಗಳನ್ನು ಪೂಜಿಸಲು ನಿರ್ಮಿಸಿರುವ ಆಲಯಗಳೇ ದೇವಾಲಯಗಳು. ಈ ದೇವಾಲಯಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿದ್ದು, ಸಾಮಾಜಿಕ ಮತ್ತು ಧಾರ್ಮಿಕ ಬೆಳವಣಿಗೆಗಳಲ್ಲಿ ಇವುಗಳ ಪಾತ್ರ ಬಹು ದೊಡ್ಡದು. ಬೆಂಗಳೂರು ಪ್ರದೇಶದಲ್ಲಿ ದೇವಾಲಯಗಳ ನಿರ್ಮಾಣದ ಪ್ರಾರಂಭವನ್ನು ಗುರುತಿಸುವುದಾದರೆ, ಮೊದಲಿಗೆ ಶೈವ ಪಂಥದ ದೇವಾಲಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಟ್ಟಿಸುತ್ತಿದ್ದರು. ಇವುಗಳು ವಿಸ್ತಾರದಲ್ಲಿ ದೊಡ್ಡದಾಗಿರದೆ, ಚಿಕ್ಕ ಗುಡಿಗಳಂತಿದ್ದವು. ಹತ್ತನೇ ಶತಮಾನದ ವೇಳೆಗೆ ಇವುಗಳ ವಿಸ್ತೀರ್ಣ ಹೆಚ್ಚಾಯಿತು. ಆದರೆ ಹನ್ನೆರಡನೇ ಶತಮಾನದ ನಂತರ ವೈಷ್ಣವ ದೇವಾಲಯಗಳ ನಿರ್ಮಾಣ ಹೆಚ್ಚಾಗಿರುವುದನ್ನು ಕಾಣಬಹುದು. **ಈ ಸಂಚಿಕೆಯ ಶೀರ್ಷಿಕೆಯಲ್ಲಿ ಉಲ್ಲೇಖಿಸಿರುವ ಸ್ಥಳಗಳಲ್ಲಿ ಶೈವ, ವೈಷ್ಣವ ಮತ್ತು ಶಾಕ್ತ ಪರಂಪರೆಯ ದೇವಾಲಯಗಳನ್ನು ನೋಡಬಹುದಾಗಿದೆ.**

ಜಕ್ಕೂರಿನಲ್ಲಿನ ಶೈವ ದೇವಾಲಯ

ಐತಿಹಾಸಿಕ ಬಡಾವಣೆಯಾದ ಜಕ್ಕೂರಿಗೆ ಸಾವಿರ ವರ್ಷಗಳ ಇತಿಹಾಸವಿರುವುದನ್ನು ಇಲ್ಲಿ ದೊರಕಿರುವ ಶಾಸನಗಳು ರುಜುವಾತು ಪಡಿಸುತ್ತವೆ. ಶಾಸನಗಳಲ್ಲಿಯೇ ಜಕ್ಕೂರ ಅಲ್ಲಾಳನಾಥ ದೇವರಿಗೆ ಹಲವು ದಾನ ನೀಡಿರುವುದನ್ನು ನೋಡಬಹುದು. ಆದರೆ ಇಂದು ಈ ದೇವಾಲಯ ಪತ್ತೆಯಾಗಿಲ್ಲ ಹಾಗೂ ಬೇರೆ ದೇವಾಲಯಗಳ ಅವಶೇಷಗಳ ಬಗ್ಗೆ ಯಾರೂ ಗಮನ ಹರಿಸಿರಲಿಲ್ಲ.

ಇತ್ತೀಚಿಗೆ ಅಂದರೆ **2017ರಲ್ಲಿ ಜಕ್ಕೂರಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದ ಪಿ.ಎಲ್.ಉದಯ ಕುಮಾರ್ ಮತ್ತು ಕೆ.ಆರ್.ನರಸಿಂಹನ್ ಅವರನ್ನು ಗ್ರಾಮಸ್ಥರಾದ ನಾಗರಾಜಪ್ಪ ಅವರು ಒಂದು ಪಾಳು ಗುಡಿಯ ಬಳಿ ಕರೆದುಕೊಂಡು ಹೋದರು**. ಈ ಪಾಳು ಗುಡಿಯು ಒಂದು ಶೈವ ದೇವಾಲಯದ ಅವಶೇಷವಾಗಿದ್ದು, ಈ ಅವಶೇಷಗಳ ಆಧಾರದ ಮೇಲೆ ಈ ಗುಡಿಯು ಸುಮಾರು ಹದಿನೈದನೇ ಶತಮಾನದ್ದೆಂದು ಅಂದಾಜಿಸಿದರು.[2]

ಮತ್ತೊಮ್ಮೆ ನಮ್ಮ ತಂಡವು ಹೆಚ್ಚಿನ ಅಧ್ಯಯನಕ್ಕೆ ಸ್ಥಳಕ್ಕೆ ಭೇಟಿ ನೀಡಿ ದೇವಾಲಯದ ಅವಶೇಷಗಳನ್ನು

2 https://bangaloremirror.indiatimes.com/bangalore/others/what-lies-beneath-a-temple/articleshow/62463559.cms "ಬೆಂಗಳೂರು ಮಿರರ್ ದಿನ ಪತ್ರಿಕೆ, ದಿನಾಂಕ 18 ಜನವರಿ 2022



ಜಕ್ಕೂರಿನಲ್ಲಿನ ನಾಶವಾಗಿರುವ ಶೈವ ದೇವಾಲಯದ ಅವಶೇಷಗಳು

ಕೂಲಂಕುಷವಾಗಿ ಅಧ್ಯಯನ ನಡೆಸಿತು. ಈ ಶೈವ ದೇವಾಲಯವು ಸಂಪೂರ್ಣವಾಗಿ ನಾಶವಾಗಿದ್ದು, ಶೈವ ದ್ವಾರಪಾಲಕ ಇರುವ ಎರಡು ಬಾಗಿಲಿನ ಕಂಬಗಳು ಮತ್ತು ಬಲಭಾಗದಲ್ಲಿ ಭಿತ್ತಿಯಲ್ಲಿನ (ಗೋಡೆ) ಎರಡು ದಪ್ಪ ಕಂಬಗಳನ್ನು ಹೊರತು ಪಡಿಸಿದರೆ, ಬೇರೆ ಯಾವುದೇ ದೇವಾಲಯದ ಇನ್ನಿತರೆ ಭಾಗಗಳು ಕಟ್ಟಡದ ರೀತಿ ಉಳಿದಿಲ್ಲ.

ಈ ದೇವಾಲಯದ ಸುತ್ತಮುತ್ತ ಹಲವಾರು ಕಲ್ಲಿನ ಅವಶೇಷಗಳಿದ್ದು, ಬಹುಶಃ ಇವುಗಳು ದೇವಾಲಯದ ಭಿತ್ತಿ ಹಾಗೂ ಮೇಲ್ಚಾವಣಿಯ ಭಾಗಗಳಾಗಿರಬಹುದು. ಹಾಗಾಗಿ ಈ ಸ್ಥಳದಲ್ಲಿ ಉತ್ಖನನ ಮಾಡಿದಾಗ ಈ ದೇವಾಲಯದ ಸಂಪೂರ್ಣ ಮಾಹಿತಿ ದೊರೆಯಬಹುದು.

ಇನ್ನು ಈ ದೇವಾಲಯ ಈ ಸ್ಥಳದಲ್ಲಿ ಯಾವ ಕಾರಣಕ್ಕಾಗಿ ಕಂಡುಬಂದಿರಬಹುದು ಎಂಬುದನ್ನು ಇಲ್ಲಿ ದೊರೆತಿರುವ ಅವಶೇಷಗಳ ಆಧಾರದ ಮೇಲೆ ಹೇಳುವುದಾದರೆ, ಸಾಮಾನ್ಯವಾಗಿ ಶೈವ ದೇವಾಲಯಗಳನ್ನು ಗ್ರಾಮದಿಂದ ಹೊರಗೆ ಹಾಗೂ ಕೆರೆಯ ಸಮೀಪ ನಿರ್ಮಿಸಲಾಗಿರುತ್ತದೆ. ಅದೇ ರೀತಿ ಜಕ್ಕೂರಿನ ಈ ದೇವಾಲಯವನ್ನು ಸಹ ಕೆರೆಯ ಸಮೀಪದಲ್ಲಿಯೇ ಕಾಣಬಹುದು.

ಉಳಿದಿರುವ ಅವಶೇಷಗಳನ್ನು **ಸೂಕ್ಷ್ಮವಾಗಿ ಗಮನಿಸಿದಾಗ ದೇವಾಲಯವು ಚಿಕ್ಕದಾಗಿದ್ದು, ಗಂಗರ ಕಾಲದ ಪ್ರಾರಂಭದ ದೇವಾಲಯದ ರಚನೆಯನ್ನು ಹೋಲುವ ರೀತಿಯಲ್ಲಿ ಕಂಡುಬರುತ್ತದೆ.** ದ್ವಾರಬಾಗಿಲಿನ ಎತ್ತರ ಕಡಿಮೆ ಇರುವುದರಿಂದ ದೇವಾಲಯದ ಎತ್ತರವು ಸಹ ಕಡಿಮೆ ಇತ್ತೆನ್ನಬಹುದು. ಸಾಮಾನ್ಯವಾಗಿ ದೇವಾಲಯದಲ್ಲಿ ಕಂಡುಬರುವ ಭಾಗಗಳಾದ ಗರ್ಭಗುಡಿ, ಸುಖನಾಸಿ, ನವರಂಗ ಇಲ್ಲಿ ಕಂಡುಬರುವುದಿಲ್ಲ. ದ್ವಾರಪಾಲಕ ಶಿಲ್ಪವಿರುವ ಕಂಬಗಳು ಇರುವುದರಿಂದ ದೇವಾಲಯ ಚಿಕ್ಕದಾದರು ಗರ್ಭಗುಡಿ, ನವರಂಗ ಹೊಂದಿತ್ತು ಎಂದು ಹೇಳಬಹುದು. ದೇವಾಲಯವು ಸಂಪೂರ್ಣ ನಾಶವಾಗಿರುವುದರಿಂದ ಗರ್ಭಗುಡಿಯಲ್ಲಿದ್ದ ಮೂಲ ಮೂರ್ತಿ ಅಥವಾ ಶಿವಲಿಂಗ ನಾಪತ್ತೆಯಾಗಿದ್ದು, ಕೇವಲ ಪಾಣಿವಟ್ಟ (ಪಾಣಿಪೀಠದ ಮೇಲ್ಭಾಗ) ಮಾತ್ರ ಉಳಿದಿದೆ. ಇಲ್ಲಿ ದೊರೆತಿರುವ ಪಾಣಿವಟ್ಟ ಚತುರ್ಭುಜವಾಗಿರುವುದರಿಂದ **ಈ ಪಾಣಿವಟ್ಟದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸುವುದರ ಬದಲು, ಯಾವುದೋ ಮೂರ್ತಿಯನ್ನು ಸ್ಥಾಪಿಸಲು ಮಾಡಿರಬಹುದು.** ಸಾಮಾನ್ಯವಾಗಿ **ಲಿಂಗಗಳನ್ನು ಸ್ಥಾಪಿಸಲು ವೃತ್ತಾಕಾರದ ಪಾಣಿವಟ್ಟ ಇರುವ ಪಾಣಿಪೀಠವನ್ನು ಮಾಡಿಕೊಳ್ಳಲಾಗುತ್ತದೆ.**

ದೇವಾಲಯ ಹೊರಭಾಗದ ರಚನೆಗಳಾದ ಅಧಿಷ್ಠಾನ, ಭಿತ್ತಿ, ಮೇಲ್ಚಾವಣಿಯ ಭಾಗಗಳು ಇಲ್ಲಿ ಉಳಿದಿಲ್ಲ. ದೇವಾಲಯ ಚಿಕ್ಕದಾಗಿರುವುದರಿಂದ ದೇವಾಲಯ ನಿರ್ಮಾಣವಾದ ಕಾಲದ ಆರ್ಥಿಕ ಪರಿಸ್ಥಿತಿ, ಜನಸಂಖ್ಯೆ, ದೇವಾಲಯದ ಆಚರಣೆಗಳು ಸಾಮಾನ್ಯವಾಗಿದ್ದಿರಬಹುದು ಎಂದು ಊಹಿಸಬಹುದು. ಕಾಲಾನಂತರದಲ್ಲಿ ಇವುಗಳಲ್ಲಿ ಹೆಚ್ಚಳವಾದಾಗ ದೇವಾಲಯದ ವಿಸ್ತೀರ್ಣವು ಹೆಚ್ಚಾಗುತ್ತವೆ.

ಈ ದೇವಾಲಯವು ಸಾ.ಶ. ಹತ್ತನೇ ಶತಮಾನಕ್ಕೆ ಸೇರಿರಬಹುದು ಎಂದು ಹೇಳಬಹುದು. ಸಾಮಾನ್ಯವಾಗಿ ಈ ಭಾಗದಲ್ಲಿ ಹೊಯ್ಸಳ ಮತ್ತು ವಿಜಯನಗರ ಕಾಲದ ಆಳ್ವಿಕೆ ಬರುವವರೆಗೂ ವೈಷ್ಣವ ದೇವಾಲಯಗಳು ಕಂಡುಬರುವುದಿಲ್ಲ. ಬಹುಶಃ ಈ ದೇವಾಲಯವು ಹದಿನಾಲ್ಕನೆಯ ಶತಮಾನದವರೆಗೂ ಸುಸ್ಥಿತಿಯಲ್ಲಿದ್ದು, ನಂತರ ಇಲ್ಲಿ ವೈಷ್ಣವ ಪರಂಪರೆ ಪ್ರಾರಂಭವಾದ ಮೇಲೆ ಈ ಶೈವ ದೇವಾಲಯಕ್ಕೆ ಪೂಜಾ ಕೈಂಕರ್ಯಗಳು ಯಾವುದೋ ಕಾರಣಕ್ಕೆ ಕಡಿಮೆಯಾಗುತ್ತಾ ಬಂದು ಕಾಲಕ್ರಮೇಣ ಪೂಜೆಗಳು ನಿಂತು ಹೋಗಿ, ದೇವಾಲಯವು ನಾಶವಾಗಿರಬಹುದು. **ಇದೇ ಸ್ಥಳದಲ್ಲಿ ಹತ್ತನೇ ಶತಮಾನದ ಕಲ್ನಾಡು ಶಾಸನ ದೊರೆತಿದ್ದು ಅದನ್ನು ಇದೇ ಸಂಚಿಕೆಯ ಪುಟ ಸಂಖ್ಯೆ 46 ರಲ್ಲಿ ವಿವರಿಸಲಾಗಿದೆ.**

ಅಲ್ಲಾಳನಾಥ ದೇವಾಲಯ

ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯವಿತ್ತು ಎಂಬುದನ್ನು ಎರಡು ಶಾಸನಗಳು ಉಲ್ಲೇಖಿಸುತ್ತವೆ. ಮೊದಲನೆ ಶಾಸನ ಇದೇ ಗ್ರಾಮದ ಸಾ.ಶ.1432ರ ಕಾಲದ್ದಾಗಿದ್ದು, ಇದು ಅಲ್ಲಾಳನಾಥ ದೇವರ ಸೇವೆಯ ಕಂಬ ಎಂಬ ಮಾಹಿತಿ ನೀಡುತ್ತದೆ. ಈ ಶಾಸನವನ್ನು ಇತ್ತೀಚಿನ ದಿನಗಳಲ್ಲಿ ಕೆ.ಆರ್.ನರಸಿಂಹನ್ ಅವರ ತಂಡ ಶೋಧಿಸಿದ್ದು, ಇದಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಇದೇ ಸಂಚಿಕೆಯ **ಪುಟ ಸಂಖ್ಯೆ - 50** ರಲ್ಲಿ ತಿಳಿಸಲಾಗಿದೆ. ಹಾಗೂ ಮತ್ತೊಂದು ಶಾಸನ ಅಲ್ಲಾಳಸಂದ್ರದಲ್ಲಿದ್ದು ಇದರಲ್ಲಿ ಜಕ್ಕೂರಿನ ಅಲ್ಲಾಳನಾಥ ದೇವರಿಗೆ ಅಮೃತಪಡಿ ನೈವೇದ್ಯಕ್ಕೆ ಅಲ್ಲಾಳಸಂದ್ರ ಗ್ರಾಮವನ್ನು ದಾನ ನೀಡಿರುವುದು ದಾಖಲಾಗಿದೆ[3].

ಈ **ಅಲ್ಲಾಳನಾಥ ದೇವಾಲಯ ಯಾರಿಂದ, ಯಾವಾಗ ನಿರ್ಮಾಣವಾಯಿತು ಎಂಬುದಕ್ಕೆ ಯಾವುದೇ ಪ್ರಾಥಮಿಕ ಆಧಾರಗಳು ಇದುವರೆಗೂ ದೊರೆತಿಲ್ಲ.** ಅಲ್ಲಾಳಸಂದ್ರ ಗ್ರಾಮವನ್ನು ಜಕ್ಕೂರಿನ

3 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-30, ಅಲ್ಲಾಳಸಂದ್ರ, 1905.



ಅಲ್ಲಾಳನಾಥನ ಹೆಸರಿರುವ ಕಂಬ ಶಾಸನ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಆಂಜನೇಯನ ಶಿಲ್ಪವಿರುವ ಡಿಜಿಟಲ್ ಚಿತ್ರ

ಅಲ್ಲಾಳನಾಥ ದೇವರಿಗೆ ದಾನ ನೀಡಿರುವುದನ್ನು ಗಮನಿಸಿದಾಗ[4], ಈ ಕಾಲಕ್ಕೂ **ಮೊದಲೇ ಅಂದರೆ ಅಲ್ಲಾಳಸಂದ್ರದ ಶಾಸನವನ್ನು ಹಾಕಿಸುವುದಕ್ಕೂ ಮುಂಚೆಯೇ ಜಕ್ಕೂರಿನಲ್ಲಿ ಅಲ್ಲಾಳನಾಥ ದೇವಾಲಯ ಸುಸ್ಥಿತಿಯಲ್ಲಿತ್ತು ಎಂದು ತಿಳಿಯುತ್ತದೆ.** ಆದರೆ ಈ ಅಲ್ಲಾಳನಾಥ ದೇವಾಲಯವು ಇಂತಹ ಸ್ಥಳದಲ್ಲಿತ್ತು, ಇವು ಈ ದೇವಾಲಯದ ಭಾಗಗಳು ಎಂದು ತಿಳಿಸುವ ಯಾವೊಂದು ಅವಶೇಷಗಳು ಸಿಗದಂತೆ ನಾಶವಾಗಿರುವುದು ನಿಜಕ್ಕೂ ಬೇಸರದ ಸಂಗತಿ. **ಮುಖ್ಯವಾಗಿ ಯಾವ ಕಾಲದಲ್ಲಿ, ಯಾವ ಕಾರಣಕ್ಕಾಗಿ**

4 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-30, ಅಲ್ಲಾಳಸಂದ್ರ, 1905.



ಜಕ್ಕೂರಿನ ಅಶ್ವತಕಟ್ಟೆ ಬಳಿ ಇರುವ ಗರುಡಕಂಭದ ಒಂದು ಭಾಗ

ಈ ದೇವಾಲಯ ನಾಶವಾಗಿರಬಹುದು ಎಂದು ಹೇಳುವುದು ಕಷ್ಟಕರವಾಗಿದೆ.

ಈ ಅಲ್ಲಾಳನಾಥ ದೇವಾಲಯವನ್ನು ಉಲ್ಲೇಖಿಸುವ ಪ್ರಾಚೀನ ಶಾಸನವೊಂದು ಇತ್ತೀಚಿನ ದಿನಗಳಲ್ಲಿ ದೊರೆತಿರುತ್ತದೆ. ಜಕ್ಕೂರಿನ ಕೆ.ವಿ.ಭೈರೇಗೌಡ ವೃತ್ತದಿಂದ ಜಕ್ಕೂರಿನ ಕೆರೆಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಹೊಸ ಮಳಿಗೆಗಳನ್ನು ನಿರ್ಮಿಸುವ ಸಲುವಾಗಿ ನಿವೇಶನವನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಆಂಜನೇಯನ ಉಬ್ಬುಶಿಲ್ಪವಿರುವ ತುಂಡು ಕಲ್ಲೊಂದು ದೊರೆಯುತ್ತದೆ. ಈ ತುಂಡು ಕಲ್ಲನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಕಲ್ಲಿನ ಒಂದು ಬದಿಯಲ್ಲಿ ಶಾಸನವಿದ್ದು, ಇದರಲ್ಲಿ ಅಲ್ಲಾಳನಾಥ ಕಂಬ ಎಂದು ಬರೆದಿರುವುದು ಗೋಚರಿಸುತ್ತದೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಈ ತುಂಡು ಕಲ್ಲು ಗರುಡಗಂಬ ಅಥವಾ ದೀಪಸ್ತಂಬದ ನಿರ್ಮಾಣಕ್ಕೆ ಸಂಬಂಧಿಸಿದ್ದಿರಬಹುದು. ಬಹುಶ: ಈ ಕಲ್ಲು ಅಲ್ಲಾಳನಾಥ ದೇವಾಲಯದ ಮುಂದೆ ಇದ್ದಂತಹ ಗರುಡಗಂಬದ್ದು ಎಂದು ಹೇಳಲೂಬಹುದು. ಮುಖ್ಯವಾಗಿ ಈ ತುಂಡು ಕಲ್ಲಿನ ಮೇಲೆ ಆಂಜನೇಯನ ಶಿಲ್ಪವಿರುವ ಭಾಗವನ್ನು ಹೊರತುಪಡಿಸಿ ಮೇಲಿನ ಮತ್ತು ಕೆಳಗಿನ ಭಾಗಗಳನ್ನು ಕಬ್ಬಿಣದ ಉಳಿಯಿಂದ ಒಡೆದು ನಾಶ ಮಾಡಿರುವಂತೆ, ಉಳಿಯ ಗುರುತುಗಳನ್ನು ಗಮನಿಸಬಹುದು. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಜಕ್ಕೂರಿನ ಅಲ್ಲಾಳನಾಥ ದೇವಾಲಯವು ಪಾಳು ಬಿದ್ದು ನಾಶವಾಗಿರಬಹುದು ಎಂದು ಊಹಿಸುವುದರ ಜೊತೆಗೆ ಬಹುಶ: ಉದ್ದೇಶಪೂರ್ವಕವಾಗಿಯೇ ಈ ದೇವಾಲಯವನ್ನು ನಾಶ ಮಾಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಈ ಕಂಬದ ತುಂಡನ್ನು ಇಂದು ಕೆ.ವಿ.ಭೈರೇಗೌಡ ವೃತ್ತದ ಬಳಿ ಇರುವ ಆಂಜನೇಯ ದೇವಾಲಯದಲ್ಲಿ ಇರಿಸಲಾಗಿದೆ. **ಇದೇ ಆಂಜನೇಯ ದೇವಾಲಯದ ಬಳಿ ಇರುವ ಅಶ್ವತ್ಥ ಕಟ್ಟೆಯ ಮೇಲೆ ಬೇರೊಂದು ಕಂಬದ ತುಂಡಿದ್ದು, ಅದೂ ಸಹ ಒಡೆದು ಹೋಗಿರುತ್ತದೆ. ಹಾಗೂ ಯಾವ ದೇವಾಲಯದ್ದು ಎಂದು ತಿಳಿಯುವುದಿಲ್ಲ**



ಅಲ್ಲಾಳನಾಥ ದೇವರು
ಚಿತ್ರಕೃಪೆ: ಪ್ರತಿಮ ಕೋಶ

ಅಲ್ಲಾಳನಾಥ ದೇವಾಲಯದ ಬಗ್ಗೆ ಜಕ್ಕೂರು ಮತ್ತು ಅಲ್ಲಾಳಸಂದ್ರ ಶಾಸನಗಳು ಉಲ್ಲೇಖ ಮಾಡಿದರೂ ಸಹ ಈ ದೇವಾಲಯ ಇಂದು ಕಣ್ಮರೆಯಾಗಿರುವುದರ ಜೊತೆಗೆ ಜಕ್ಕೂರಿನ ಶೈವ ದೇವಾಲಯವೂ ಸಹ ನಾಶವಾಗಿರುವುದರಿಂದ ಜಕ್ಕೂರಿನ ದೇವಾಲಯಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ.

ಅಲ್ಲಾಳನಾಥ ದೇವರು

ಅಲ್ಲಾಳಸಂದ್ರ ಮತ್ತು ಜಕ್ಕೂರು ಗ್ರಾಮದ ಶಾಸನಗಳು ಉಲ್ಲೇಖಿಸುವ ಅಲ್ಲಾಳನಾಥ ದೇವಾಲಯ ಮತ್ತು ಮೂಲ ವಿಗ್ರಹ ಪ್ರಸ್ತುತ ಕಂಡುಬರದೇ ಇರುವುದರಿಂದ, **ಈ ಶಿಲ್ಪವು ಯಾವ ರೀತಿ ಇದ್ದಿರಬಹುದು ಎಂಬುದನ್ನು ಬೇರೆ ಪ್ರದೇಶಗಳಲ್ಲಿ ಕಂಡುಬರುವ ಅಲ್ಲಾಳನಾಥ (ವರದರಾಜ) ಮೂರ್ತಿಶಿಲ್ಪದ ಹಿನ್ನೆಲೆಯಲ್ಲಿ (ಐಕನಾಗ್ರಫಿ ಸ್ಟಡಿ) ತಿಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ**. ಅದಕ್ಕೂ ಮುಂಚೆ ಅಲ್ಲಾಳನಾಥ ಹೆಸರಿನ ಹಿನ್ನೆಲೆ ಮತ್ತು ಪರ್ಯಾಯ ಹೆಸರುಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ. ಅಲ್ಲಾಳನಾಥ ಎಂಬ ದೇವರ ಹೆಸರು ದಕ್ಷಿಣ ಭಾರತದಲ್ಲಿ ಸುಮಾರು ಹತ್ತನೇ ಶತಮಾನದ ನಂತರ ಕಂಡುಬರುವ ಜನಪ್ರಿಯವಾದ ಹೆಸರಾಗಿದೆ. ಈ **ಅಲ್ಲಾಳನಾಥ ಎಂಬ ಹೆಸರು ತಮಿಳಿನ ಅರುಳಾಳರ್ (ಅರುಳಾಳ) ಎಂಬ ಹೆಸರಿನ ಮೂಲದಿಂದ ಬಂದಿದ್ದು, ಅರುಳ್ ಎಂದರೆ ವರನೀಡುವವನು ಅಥವಾ ಅನುಗ್ರಹ ನೀಡುವವನು, ಕರುಣೆ ಉಳ್ಳವನು ಎಂದರ್ಥ.** ಇದೇ **ಅರುಳಾಳ** ಪದವು ತಮಿಳಿನಿಂದ **ಕನ್ನಡಕ್ಕೆ ಭಾಷಾಂತರವಾಗುವಾಗ ಅಲ್ಲಾಳ** ಎಂದು ಅಪಭ್ರಂಶವಾಗಿ ಬಂದಿರುತ್ತದೆ. ಇಂದು ಕಂಚಿಯಲ್ಲಿ ಕಂಡುಬರುವ ವರದರಾಜ ದೇವಾಲಯದ ಮೂಲ ಹೆಸರು ಅರುಳಾಳ ಪೆರುಮಾಳ್ ಆಗಿದ್ದು ನಂತರದ

ಕಾಲಘಟ್ಟದಲ್ಲಿ ಈ ಹೆಸರು ಬದಲಾವಣೆಯಾಗಿ ವರದರಾಜ ಆಗಿರುತ್ತದೆ. ಇದೇ ರೀತಿಯಾಗಿ ಹಲವು ಪ್ರದೇಶಗಳಲ್ಲಿ ಅಲ್ಲಾಳನಾಥ ದೇವಾಲಯವು ವರದರಾಜಸ್ವಾಮಿಯಾಗಿ ಬದಲಾವಣೆಯಾಗಿರುವುದನ್ನು ನಾವು ಇಂದಿಗೂ ಗುರುತಿಸಬಹುದು. ಇಂದಿನ ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಕಲ್ಲೂರು ಗ್ರಾಮದ ಸಾ.ಶ.1315ರ ಶಾಸನವು[5] ಅಲ್ಲಾಳನಾಥ ದೇವರನ್ನು ಉಲ್ಲೇಖಿಸುತ್ತದೆ. ಆದರೆ ಇದೇ ಗ್ರಾಮಕ್ಕೆ 10 ಕಿ.ಮೀ. ದೂರದಲ್ಲಿರುವ ಮಾರೇನಹಳ್ಳಿಯ ಸಾ.ಶ.1524ರ ಶಾಸನವು[6] ಇದೇ ಕಲ್ಲೂರಿನ ಅಲ್ಲಾಳನಾಥ ದೇವಾಲಯವನ್ನು ವರದರಾಜ ಸ್ವಾಮಿ ದೇವಾಲಯ ಎಂದು ಕರೆದಿರುತ್ತದೆ. ಇಲ್ಲಿ ಕೇವಲ 209 ವರ್ಷಗಳಲ್ಲೇ ಅಲ್ಲಾಳನಾಥ ದೇವಾಲಯವು ವರದರಾಜನಾಗಿ ಬದಲಾಗಿರುವುದನ್ನು ಈ ಮಾರೇನಹಳ್ಳಿ ಶಾಸನದಿಂದ ಸ್ಪಷ್ಟವಾಗಿ ಗುರುತಿಸಬಹುದು. ಹಾಗೂ ಹಾಸನ ಜಿಲ್ಲೆ ಮತ್ತು ತಾಲೂಕಿನ ಕೊಂಡಜ್ಜಿ ಗ್ರಾಮದ ಒಂದು ದೇವಾಲಯವನ್ನು ಇಂದಿಗೂ ಕೂಡ ಅಲ್ಲಾಳನಾಥ ಮತ್ತು ವರದರಾಜ ಎಂಬ ಎರಡೂ ಹೆಸರಿನಿಂದ ಕರೆಯುವುದನ್ನು ನೋಡಬಹುದು[7]. ಆದ್ದರಿಂದ **ಅಲ್ಲಾಳನಾಥ ಮತ್ತು ವರದರಾಜ ಎಂಬ ಹೆಸರುಗಳು ವಿಷ್ಣುವಿನ ಪರ್ಯಾಯ ಹೆಸರುಗಳಾಗಿದ್ದು** ಯಾವ ಕಾಲದಲ್ಲಿ ಈ ಹೆಸರುಗಳು ಈ ರೀತಿ ಬದಲಾವಣೆಯಾದವು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಆದರೆ ಸಾಮಾನ್ಯವಾಗಿ ಎರಡೂ ವಿಗ್ರಹಗಳ ಹೋಲಿಕೆ ಒಂದೇ ರೀತಿ ಇರುತ್ತದೆ.

ಈ ದೃಷ್ಟಿಯಲ್ಲಿ ನೋಡುವುದಾದರೆ ಅಲ್ಲಾಳನಾಥ ಮೂರ್ತಿಯು ಸಾಮಾನ್ಯವಾಗಿ ಸ್ಥಾನಕ ಭಂಗಿಯಲ್ಲಿ[8] (ನಿಂತಿರುವಂತೆ) ಇರುತ್ತದೆ. ಹಾಗೂ ಬಲ ಹಿಂಬದಿಯ ಕೈಯಲ್ಲಿ ಚಕ್ರವಿದ್ದು (ಸುದರ್ಶನ ಚಕ್ರ), ಬಲ ಮುಂಬದಿಯ ಕೈ ಅಭಯ ಹಸ್ತವಿರುವುದರ ಜೊತೆಗೆ ಪದ್ಮಪುಷ್ಪವಿರುತ್ತದೆ. ಕೆಲವು ಸಂದರ್ಭಗಳಲ್ಲಿ ಇದೇ ಕೈ ಅಭಯ ಹಸ್ತಕ್ಕೆ ಬದಲಾಗಿ ವರದ ಹಸ್ತವಿರುತ್ತದೆ. ಮತ್ತು ಎಡ ಹಿಂಬದಿಯ ಕೈಯಲ್ಲಿ ಶಂಖವಿದ್ದರೆ (ಪಾಂಚಜನ್ಯ), ಎಡ ಮುಂಬದಿಯ ಕೈ ಕಟಿ ಹಸ್ತವಿರುತ್ತದೆ. ಅಥವಾ ಕೆಲವು ಸಂದರ್ಭಗಳಲ್ಲಿ ಇದೇ ಕೈ ಗದೆಯ ಮೇಲಿರುತ್ತದೆ. ಅಭಯ ಹಸ್ತ ವರದ ಹಸ್ತವಾಗಿ, ಎಡ ಮುಂಬದಿಯ ಕೈ ಕಟಿ ಹಸ್ತವಿದ್ದುದು, ಗದೆಯನ್ನು ಹಿಡಿದಿರುವಂತೆ ಬದಲಾದರೂ ಸಹ ಅದು ವರದರಾಜ ಅಥವಾ ಅಲ್ಲಾಳನಾಥನ ರೂಪವೇ ಆಗಿರುತ್ತದೆ. ಕಿರೀಟ ಮುಕುಟವನ್ನು[9] ಧರಿಸಿರುವಂತಹ ಈ ಮೂರ್ತಿಯು ಕರ್ಣಕುಂಡಲಗಳು[10], ತೋಳಬಂಧಿ[11], ಕಂಕಣ[12], ಅಂಗುಲಿಕಗಳು[13], ಕಂಠಿಹಾರ[14], ಹಾರ[15], ಯಜ್ಞೋಪವೀತ[16], ಉದರಬಂಧ[17], ಕಟಿಬಂಧ ಇನ್ನೂ ಮುಂತಾದ ಆಭರಣಗಳಿಂದ ಅಲಂಕೃತವಾಗಿರುತ್ತದೆ. ವಿಶೇಷವಾಗಿ ಮೂರ್ತಿಯ ಮುಖವು ತೇಜಸ್ಸಿನಿಂದ ಕೂಡಿದ್ದು, ಕೆಲವು ಸಂದರ್ಭಗಳಲ್ಲಿ ಈ ಮೂರ್ತಿಯ ವಕ್ಷ ಸ್ಥಳದಲ್ಲಿ (ಎದೆಯ ಭಾಗ) ಲಕ್ಷ್ಮಿಯ ಶಿಲ್ಪವನ್ನು ಚಿಕ್ಕದಾಗಿ ಕೆತ್ತಲಾಗಿರುತ್ತದೆ. ಹೀಗೆ ಈ ಮೇಲೆ ಸಂಕ್ಷಿಪ್ತವಾಗಿ ವಿವರಿಸಿದ ಸಾಮಾನ್ಯ ಲಕ್ಷಣಗಳನ್ನು ಜಕ್ಕೂರಿನ ಅಲ್ಲಾಳನಾಥ ಮೂರ್ತಿಯೂ ಸಹ ಹೊಂದಿದ್ದಿರಬಹುದು. ಬಹುಶಃ ಈ ಮೂರ್ತಿ ಕಂಡುಬಂದಿದ್ದೇ ಆಗಿದ್ದರೆ ಜಕ್ಕೂರಿನ ಸಾಂಸ್ಕೃತಿಕ ಆಯಾಮ ಬೇರೆ ರೀತಿಯಲ್ಲೇ ಇರುತ್ತಿತ್ತು ಎಂದು ನಿಸ್ಸಂದೇಹವಾಗಿ ಹೇಳಬಹುದು.

ಜಕ್ಕೂರಿಗೆ ಸಂಬಂಧಿಸಿದ ಶಾಸನಗಳು ಅಲ್ಲಾಳನಾಥ ದೇವರ ಹೆಸರನ್ನು ಉಲ್ಲೇಖಿಸುವುದರಿಂದ ಮೇಲೆ ತಿಳಿಸಿದ ಅಲ್ಲಾಳನಾಥ ದೇವರ ಸಾಮಾನ್ಯ ಶಿಲ್ಪಲಕ್ಷಣಗಳ ಆಧಾರದ ಮೇಲೆ ಜಕ್ಕೂರಿನ **ಅಲ್ಲಾಳನಾಥ ಮೂರ್ತಿಯು ಸ್ಥಾನಕ ಭಂಗಿಯಲ್ಲಿದ್ದು (ನಿಂತಂತೆ) ಬಲ ಮುಂಗೈ ಅಭಯ ಅಥವಾ ವರದ ಹಸ್ತವಿದ್ದು, ಉಳಿದ ಮೂರು ಕೈಗಳು ಶಂಖ, ಚಕ್ರ ಹಾಗೂ ಗದೆಯನ್ನು ಹಿಡಿದಿರುವಂತೆ ಇದ್ದಿರಬಹುದು** ಎಂದು ಊಹಿಸಬಹುದು.

---

5 B Lewis Rice, Epigraphia Carnatica Vol 09, Inscriptions in the Bangalore District, ಮಾಗಡಿ ತಾಲ್ಲೂಕು ಶಾಸನ ಸಂಖ್ಯೆ-15, ಕಲ್ಲೂರು, 1905.

6 B Lewis Rice, Epigraphia Carnatica Vol 09, Inscriptions in the Bangalore District, ಮಾಗಡಿ ತಾಲ್ಲೂಕು ಶಾಸನ ಸಂಖ್ಯೆ-82, ಮಾರೇನಹಳ್ಳಿ, 1905.

7 https://templetiming.com/places/kondajji-temple-lakshmi-varadharaja-swami-allalanatha-hassan-karnataka-india/

8 ಎರಡು ಕಾಲುಗಳನ್ನು ಒಟ್ಟಿಗೆ ಜೋಡಿಸಿ ನಿಂತಿರುವಂತೆ ಇರುವುದು

9 ದೇವರ ತಲೆಯ ಮೇಲಿರುವ ಕಿರೀಟ. ಸಾಮಾನ್ಯವಾಗಿ ದೇವತಾ ಮೂರ್ತಿಗಳು ಮತ್ತು ರಾಜರುಗಳ ಶಿಲ್ಪಗಳ ಮೇಲೆ ಈ ರೀತಿಯ ಕಿರೀಟಗಳನ್ನು ಕಾಣಬಹುದು.

10 ಕಿವಿಗಳಿಗೆ ಧರಿಸಿರುವ ಆಭರಣಗಳು / ಕಿವಿಯೋಲೆಗಳು

11 ತೋಳಿಗೆ ಧರಿಸಿರುವ ಒಂದು ಆಭರಣ

12 ಕೈಗಳಿಗೆ ಧರಿಸುವ ಕಡಗದ ರೀತಿಯ ಆಭರಣ

13 ಉಂಗುರಗಳು

14 ಕುತ್ತಿಗೆ ಅಥವಾ ಕತ್ತನ್ನು ಸುತ್ತುವರಿದಂತೆ ಕಂಡುಬರುವ ಸರ / ಆಭರಣ. ಒಂದು ರೀತಿಯಲ್ಲಿ necklace ಇದ್ದಂತೆ

15 ಮೂರ್ತಿಯ ಎದೆಯ ಭಾಗದವರೆಗೂ ಇಳಿ ಬಿದ್ದಂತೆ ಕಂಡುಬರುವ ಸರ / ಆಭರಣ.

16 ಜನಿವಾರ

17 ಹೊಟ್ಟೆ ಅಥವಾ ಸೊಂಟಕ್ಕೆ ಧರಿಸುವ ಒಂದು ಆಭರಣ.



ದಾಸರಹಳ್ಳಿಯ ಚೌಡೇಶ್ವರಿ ದೇವಾಲಯ

ದಾಸರಹಳ್ಳಿಯ ಚೌಡೇಶ್ವರಿ ದೇವಾಲಯ

ದಾಸರಹಳ್ಳಿಯ ಚೌಡೇಶ್ವರಿ ದೇವಾಲಯವು ಪ್ರಸ್ತುತ ಸಂಪೂರ್ಣವಾಗಿ ಆಧುನಿಕ ಕಟ್ಟಡದ ರೀತಿ ನಿರ್ಮಾಣವಾಗಿರುತ್ತದೆ. ಈಗಿರುವ ಕಟ್ಟಡದಿಂದ ಈ ದೇವಾಲಯವು ಪ್ರಾಚೀನವಾದುದು ಎಂದು ಗುರುತಿಸಲು ಖಂಡಿತವಾಗಿಯೂ ಸಾಧ್ಯವಿಲ್ಲ. ಪೂರ್ವಾಭಿಮುಖವಾಗಿ ನಿರ್ಮಾಣವಾಗಿರುವ ಈ ದೇವಾಲಯವು ಗರ್ಭಗುಡಿ ಮತ್ತು ನವರಂಗ ಭಾಗಗಳನ್ನು ಹೊಂದಿದೆ. ಈ ದೇವಾಲಯದ ಹೆಸರು ಇಂದು ಚೌಡೇಶ್ವರಿ ಎಂದು ಕರೆಯಲ್ಪಡುತ್ತಿದ್ದರೂ, ಗರ್ಭಗೃಹದಲ್ಲಿ ಚೌಡೇಶ್ವರಿ ವಿಗ್ರಹಕ್ಕೆ ಬದಲಾಗಿ ಸಪ್ತ ಮಾತೃಕೆಯರ ಶಿಲ್ಪಗಳು ಕಂಡುಬರುತ್ತಿರುವುದು ಆಶ್ಚರ್ಯಕರ. ಆದರೂ ಸಹ ಇಂದಿಗೂ ಈ ದೇವಾಲಯ ಚೌಡೇಶ್ವರಿ ಎಂಬ ಹೆಸರಿನಿಂದಲೇ ಆರಾಧಿಸಲ್ಪಡುತ್ತಿದೆ. ಈ ಸಪ್ತ ಮಾತೃಕೆಯರ ಶಿಲ್ಪಗಳಿಂದ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಶಕ್ತಿ ದೇವತೆಗಳ ಆರಾಧನೆ ಇತ್ತೆಂಬುದು ತಿಳಿದು ಬರುತ್ತದೆ. ಇದಕ್ಕೆ ಪುಷ್ಠಿ ಎಂಬಂತೆ ಈ ದೇವಾಲಯದ ಮುಂದೆ ಭಕ್ತರ ಶಿಲ್ಪಗಳನ್ನು ಇಂದಿಗೂ ನೋಡಬಹುದು. ಇಲ್ಲಿ ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನವನ್ನು ಸಹ ಕಾಣಬಹುದು.




3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ಚೌಡೇಶ್ವರಿ ದೇವಾಲಯದ ಗರ್ಭಗುಡಿಯ ಬಾಗಿಲ ಬಲಕ್ಕೆ ಇರುವ ಭಕ್ತರ ಶಿಲ್ಪದ ಡಿಜಿಟಲ್ ಚಿತ್ರ




3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದಾಸರಹಳ್ಳಿಯ ಚೌಡೇಶ್ವರಿ ದೇವಾಲಯದ ಗರ್ಭಗುಡಿಯ ಬಾಗಿಲ ಬಲಕ್ಕೆ ಇರುವ ಸೂರ್ಯ ಮತ್ತು ಭಕ್ತರ ಶಿಲ್ಪದ ಡಿಜಿಟಲ್ ಚಿತ್ರ

ಈ ದೇವಾಲಯದ ಗರ್ಭಗುಡಿಯಲ್ಲಿ ಕಂಡುಬರುವ ಸಪ್ತ ಮಾತೃಕೆಯರ ಶಿಲ್ಪಗಳೆಂದರೆ, **ಬ್ರಾಹ್ಮೀ, ವೈಷ್ಣವಿ, ಮಹೇಶ್ವರಿ, ಇಂದ್ರಾಣಿ, ಕೌಮಾರಿ, ವರಾಹೀ ಮತ್ತು ಚಾಮುಂಡಾ**. ಈ ಶಿಲ್ಪಗಳಲ್ಲಿ ಮಧ್ಯದಲ್ಲಿ ಕಂಡುಬರುವ ಇಂದ್ರಾಣಿ ಶಿಲ್ಪವು ಉಳಿದ ಶಿಲ್ಪಗಳಿಗಿಂತ ಎತ್ತರವಾಗಿರುವುದನ್ನು ಗುರುತಿಸಬಹುದು. ಮತ್ತು ಈ ಶಿಲ್ಪಗಳಿಗೆ ಹೆಚ್ಚಿನ ಅಲಂಕರಣವನ್ನು ಮಾಡಿರುವುದರಿಂದ ಇವುಗಳ ಕಾಲಮಾನವನ್ನು ನಿಖರವಾಗಿ ತಿಳಿಸಲು ಸಾಧ್ಯವಾಗಿರುವುದಿಲ್ಲ.


ಸಾಮಾನ್ಯವಾಗಿ ಶಕ್ತಿ ದೇವತೆಗಳಾದ ಸಪ್ತಮಾತೃಕೆಯರನ್ನು ಮೊದಲಿಗೆ ಶೈವ ದೇವಾಲಯಗಳಲ್ಲಿ ಪರಿವಾರ ದೇವತೆಗಳಾಗಿ ಸುಖನಾಸಿ ಅಥವಾ ನವರಂಗದ ಭಾಗಗಳಲ್ಲಿ ಇರಿಸುತ್ತಿದ್ದರು. ಹಾಗೂ ಹೆಚ್ಚಿನದಾಗಿ ಊರಿನ ಹೊರಗೆ ಕೆರೆಯ ಏರಿಯ ಮೇಲೆ ಸ್ಥಾಪಿಸುತ್ತಿದ್ದರು. ಕಾಲಕ್ರಮೇಣ ಊರುಗಳಲ್ಲೇ ಈ ಸಪ್ತಮಾತೃಕೆಯರಿಗೆ ದೇವಾಲಯಗಳನ್ನು ನಿರ್ಮಿಸಿ ಪೂಜಿಸಲು ಪ್ರಾರಂಭಿಸಿದರು. ದಾಸರಹಳ್ಳಿಯ ಈ ಚೌಡೇಶ್ವರಿ ದೇವಾಲಯದ ಗರ್ಭಗುಡಿಯ ಬಾಗಿಲ ಬಳಿ ಭಕ್ತ ದಂಪತಿಗಳು, ಯತಿ, ಸೂರ್ಯ, ಧಾರ್ಮಿಕ ಬಲಿದಾನದ ಶಿಲ್ಪಗಳಿವೆ ಹಾಗೂ ದೇವಾಲಯದ ಮುಂಭಾಗದಲ್ಲಿ ತುಲಾಭಾರ ಕಂಬವನ್ನು ನಿರ್ಮಿಸಲಾಗಿದೆ.

ಈ ದೇವಾಲಯದ ಆವರಣದಲ್ಲಿ **ಸತಿಪತಿಯರಿರುವ ಭಕ್ತರ ಶಿಲ್ಪವಿದ್ದು**, ಇವರು ಸಕಲ ವಸ್ತ್ರಾಭರಣಗಳೊಂದಿಗೆ ಸಮಬಂಗಿಯಲ್ಲಿ ನಿಂತು, ತಮ್ಮ ಎರಡು ಕೈಗಳನ್ನು ಜೋಡಿಸಿ ದೇವರಿಗೆ ವಂದಿಸುತ್ತಾ ನಿಂತಿದ್ದಾರೆ. ಬಹುಶಃ ಈ ಶಿಲ್ಪಗಳು **ಸ್ಥಳೀಯ ನಾಯಕ ಮತ್ತು ಆತನ ಪತ್ನಿಗೆ ಸಂಬಂಧಿಸಿದ್ದಿರಬಹುದು**. ಈ ಶಿಲ್ಪಗಳ ಲಕ್ಷಣದ ಆಧಾರದ ಮೇಲೆ ಇವುಗಳ ಕಾಲಮಾನ **ಸುಮಾರು ಹದಿನಾರನೇ ಶತಮಾನ ಇರಬಹುದು** ಎಂದು ಅಂದಾಜಿಸಬಹುದು. ಈ ಶಿಲ್ಪಗಳ ಪಕ್ಕದಲ್ಲಿ ಒಬ್ಬ ಯತಿಯ ಶಿಲ್ಪವಿದ್ದು, ಈತನು ಪದ್ಮಾಸನ ಮತ್ತು ಯೋಗಮುದ್ರೆಯಲ್ಲಿ ಕುಳಿತಿದ್ದು, ಬಲಗೈನಲ್ಲಿ ಕಮಲದ ಪುಷ್ಪವನ್ನು ಹಿಡಿದಿದ್ದಾನೆ. ಈ ದೇವಾಲಯದ ಗರ್ಭಗುಡಿಯ ಎಡಭಾಗದಲ್ಲಿ ತೃಟಿತವಾದ ಸೂರ್ಯನ ಶಿಲ್ಪವಿದ್ದು, ಈ ಶಿಲ್ಪದ ಎರಡೂ ಕೈಗಳು ನಾಶವಾಗಿವೆ. ಸಮಭಂಗಿಯಲ್ಲಿ ನಿಂತಿರುವ ಸೂರ್ಯನು, ವಸ್ತ್ರಾಭರಣಗಳಿಂದ ಅಲಂಕೃತವಾಗಿದ್ದಾನೆ. ಸಾಮಾನ್ಯವಾಗಿ ಸೂರ್ಯನು ತನ್ನ ಎರಡೂ ಕೈಗಳಲ್ಲಿ ಪದ್ಮವನ್ನು ಹಿಡಿದಿರುತ್ತಾನೆ. ಆದರೆ ಈ ಶಿಲ್ಪವು ತೃಟಿತವಾಗಿರುವುದರಿಂದ ಎರಡೂ ಕೈಗಳಲ್ಲಿ ಪದ್ಮದ ರಚನೆ ಕಂಡುಬರುವುದಿಲ್ಲ. ಮತ್ತು ಸೂರ್ಯ ಶಿಲ್ಪದ ಪಕ್ಕದಲ್ಲಿ ಎರಡು ಸೇವಕರ ಶಿಲ್ಪಗಳಿದ್ದು, ಇವು **ಹದಿನೇಳು-ಹದಿನೆಂಟನೇ ಶತಮಾನಕ್ಕೆ ಸೇರಿದವಾಗಿವೆ**.

ಒಟ್ಟಾರೆಯಾಗಿ ದಾಸರಹಳ್ಳಿಯ ಚೌಡೇಶ್ವರಿ ದೇವಾಲಯವು ತನ್ನ ಪ್ರಾಚೀನತೆಯನ್ನು ಉಳಿಸಿಕೊಳ್ಳದೇ, ಹೊಸ ಹೊಸ **ಮಾರ್ಪಾಡುಗಳೊಂದಿಗೆ ಬದಲಾದರೂ ಸಹ ನಿತ್ಯವೂ ಪೂಜಾ ಕೈಂಕರ್ಯಗಳಿಗೆ ಒಳಪಡುವ ಮೂಲಕ ಆರಾಧಿಸುತ್ತಾ ಬರುತ್ತಿದೆ ಎಂದು ಅಭಿಪ್ರಾಯಿಸಬಹುದು. ಚೌಡೇಶ್ವರಿ ವಿಗ್ರಹಕ್ಕೆ ಬದಲಾಗಿ ಸಪ್ತ ಮಾತೃಕೆಯರನ್ನು ಹೊಂದಿದ್ದರೂ ಸಹ ಚೌಡೇಶ್ವರಿ ಎಂದು ಪೂಜಿಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ**.

ಭೆಂಟೆಯರಾಯ ದೇವಾಲಯ (ಬೇಟೆರಾಯ)

ದಾಸರಹಳ್ಳಿ ಚೌಡೇಶ್ವರಿ ದೇವಾಲಯದ ಬಳಿ ಇರುವ **ಸಾ.ಶ.1532ರ ಶಾಸನವು** ಕೆಂಪದೇವರಸಅಂಣ ಹಾಗೂ ಅಚ್ಯುತರಾಯರಿಗೆ ಧರ್ಮವಾಗಲೆಂದು ..ಲೆನಾಯಕ (ವ್ಯಕ್ತಿಯ ಹೆಸರಿನ ಭಾಗ ತೃಟಿತವಾಗಿದೆ) ಎಂಬುವರು ಚೊಕ್ಕನಹಳ್ಳಿ ಗ್ರಾಮವನ್ನು **ಭೇಂಟೆಯರಾಯ (ಭೇಟೆರಾಯ) ದೇವಸ್ಥಾನಕ್ಕೆ ದಾನವಾಗಿ ನೀಡಿರುವುದನ್ನು ಉಲ್ಲೇಖಿಸಿದೆ**. ವಾಸ್ತವವಾಗಿ ದಾಸರಹಳ್ಳಿಯಲ್ಲಿ ಭೆಂಟೆಯರಾಯ (ಬೇಟೆಯರಾಯ) ಎಂಬ ಹೆಸರಿನ ಯಾವುದೇ ದೇವಾಲಯ ಕಂಡುಬರುವುದಿಲ್ಲ. ಆದ್ದರಿಂದ ಈ ಭೆಂಟೆಯರಾಯ ದೇವಾಲಯವು ದಾಸರಹಳ್ಳಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಲ್ಲಿಯಾದರೂ ಕಂಡು ಬರಬಹುದು ಎಂಬ ಊಹೆಯ ಮೇರೆಗೆ ಕ್ಷೇತ್ರಕಾರ್ಯ ಮಾಡಿದಾಗಲೂ ನಮಗೆ ಈ ದೇವಾಲಯ ಕಾಣಸಿಗುವುದಿಲ್ಲ. ಆದರೆ ಈ **ಪ್ರದೇಶದ ಮುಜರಾಯಿ ದೇವಾಲಯಗಳ ಪಟ್ಟಿಯಲ್ಲಿ ಬ್ಯಾಟರಾಯನಪುರಕ್ಕೆ ಸಂಬಂಧಿಸಿದಂತೆ ಆಂಜನೇಯ ದೇವಾಲಯ ಎಂದು ಉಲ್ಲೇಖಿಸಿ ಪರ್ಯಾಯ ಹೆಸರಾಗಿ ಬ್ಯಾಟರಾಯಸ್ವಾಮಿ ಎಂದು ನಮೂದಿಸಲಾಗಿದೆ**.


ಬೆಂಗಳೂರು ಉತ್ತರ (ಅಪರ) ತಾಲ್ಲೂಕು ವ್ಯಾಪ್ತಿಯ ಮುಜರಾಯಿ ಸಂಸ್ಥೆಯ ವಿವರಗಳು

ಸಂ.	ದೇವಾಲಯದ ಹೆಸರು	ಗ್ರಾಮದ ಹೆಸರು	ತಸ್ತೀಕ್ ಮೊತ್ತ
109	ಶ್ರೀ ಆಂಜನೇಯಸ್ವಾಮಿ (ಬ್ಯಾಟರಾಯನಸ್ವಾಮಿ)	ಬ್ಯಾಟರಾಯನಪುರ	16000

ಈ ಬ್ಯಾಟರಾಯನಪುರ ಎಂಬ ಹೆಸರು ಬೇಟೆರಾಯ/ ಬ್ಯಾಟರಾಯ ಎಂಬ ಹೆಸರಿನ ಮೂಲದಿಂದಲೇ ಬಂದಿರುವ ಸಾಧ್ಯತೆ ಇರುವುದರಿಂದ, ಬಹುಶಃ **ಬ್ಯಾಟರಾಯನಪುರದಲ್ಲಿ ಈ ದೇವಾಲಯ ಸಿಗಬಹುದು ಎಂಬ ದೃಷ್ಟಿಯಿಂದ ಆಂಜನೇಯ ದೇವಾಲಯವಿರುವ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು**.

ಇಲ್ಲಿಯೂ ಕೂಡ ಬೇಟೆರಾಯ ಎಂಬ ಹೆಸರಿನ ಯಾವುದೇ ಪುರಾತನ ದೇವಾಲಯ ಕಂಡು ಬರಲಿಲ್ಲ. ಆದರೆ ಈ ಸ್ಥಳದಲ್ಲಿ ಕಾಟೇರಮ್ಮ ಎಂಬ ದೇವಾಲಯ ಇತ್ತೀಚಿನ ದಿನಗಳಲ್ಲಿ ವಿಶಾಲವಾದ ಪ್ರಾಕಾರದೊಳಗೆ ನಿರ್ಮಾಣವಾಗಿದ್ದು, ಈ ಪ್ರಾಕಾರದ ಈಶಾನ್ಯ ದಿಕ್ಕಿನಲ್ಲಿ 16ನೇ ಶತಮಾನಕ್ಕೆ ಸೇರಿದ ಆಂಜನೇಯನ ಗುಡಿಯು ಪಶ್ಚಿಮಾಭಿಮುಖವಾಗಿ ಕಂಡುಬರುತ್ತದೆ. ಈ ಆಂಜನೇಯ ಗುಡಿಯ ಗರ್ಭಗೃಹವು ಮಾತ್ರ ಪ್ರಾಚೀನ ಕಲ್ಲಿನ ರಚನೆಯನ್ನು ಉಳಿಸಿಕೊಂಡಿದ್ದು, ಇದರ ಮುಂಭಾಗದ ಸಣ್ಣ ಹಜಾರವು ಇಟ್ಟಿಗೆ ಮತ್ತು ಸಿಮೆಂಟ್‌ನಿಂದ ನಿರ್ಮಿಸಿದ ಇತ್ತೀಚಿನ ರಚನೆಯಾಗಿದೆ. ಸುಮಾರು 5x5 ಅಡಿ ವಿಸ್ತೀರ್ಣವಿರುವ ಗರ್ಭಗುಡಿಯ ಮಧ್ಯಭಾಗದಲ್ಲಿ, ಸುಮಾರು 4 ಅಡಿ ಎತ್ತರವಿರುವ ಆಂಜನೇಯನ ವಿಗ್ರಹ ಪಶ್ಚಿಮಾಭಿಮುಖವಾಗಿ ಕಂಡುಬರುತ್ತದೆ. ಹಾಗೂ ಈ ಆಂಜನೇಯ ಗುಡಿ/ದೇವಾಲಯದ ಮುಂಭಾಗದಲ್ಲಿ ಸುಮಾರು 13 ಅಡಿ ಎತ್ತರದ ದೀಪಸ್ತಂಭವಿದೆ. ಈ ದೀಪಸ್ತಂಭದ ಪಾದ ಭಾಗವು ನಾಲ್ಕು ಕೋನಗಳನ್ನು ಹೊಂದಿದ್ದು, ಇದರಲ್ಲಿ ಉತ್ತರಕ್ಕೆ ಶಂಖ (ಪಾಂಚ್ಯಜನ್ಯ), ದಕ್ಷಿಣಕ್ಕೆ ಸುದರ್ಶನ ಚಕ್ರ, ಪಶ್ಚಿಮಕ್ಕೆ ಪದ್ಮ ಮತ್ತು ಪೂರ್ವಕ್ಕೆ ಆಂಜನೇಯನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ.

ಕ್ಷೇತ್ರಕಾರ್ಯಕ್ಕೆ ತೆರಳಿದ ನಮಗೆ ಅಲ್ಪ-ಸ್ವಲ್ಪ ಭಾಗಗಳು ಉಳಿದಿರುವ ಆಂಜನೇಯ ದೇವಾಲಯದ ಅವಶೇಷಗಳು ದೊರಕಿದವೇ ಹೊರತು, ಬಹು ನಿರೀಕ್ಷೆಯಿಂದ **ಹುಡುಕಿಕೊಂಡು ಹೋಗಿದ್ದ ಬೇಟೆಯರಾಯ ದೇವಾಲಯ ಅಥವಾ ಇದರ ಯಾವುದೇ ಅವಶೇಷಗಳು ನಮಗೆ ಸಿಗಲಿಲ್ಲ.** ಈ ಗ್ರಾಮದ ಒಂದೆರಡು ಮಂದಿ ಹೇಳುವ ಪ್ರಕಾರ, ಇವರ ಪೂರ್ವಿಕರು ಈ ಗ್ರಾಮದಲ್ಲಿ ಬೇಟೆರಾಯಸ್ವಾಮಿ ಎಂಬ ದೇವಾಲಯ ಇತ್ತು ಎಂದು ಹೇಳುತ್ತಿದ್ದ ಅಂಶವನ್ನು ನೆನಪಿಸಿಕೊಳ್ಳುತ್ತಾರೆ. ಆದರೆ ವಾಸ್ತವದಲ್ಲಿ ಈ ದೇವಾಲಯ ಕಂಡುಬರುವುದಿಲ್ಲ. ದಾಸರಹಳ್ಳಿಯ ಸಾ.ಶ. 1532ರ ಶಾಸನದ ಪ್ರಕಾರ ಸುಮಾರು 500 ವರ್ಷಗಳಿಗೂ ಹಳೆಯದಾದ **ಈ ಬೇಟೆಯರಾಯ ದೇವಾಲಯ ಇಂದು ಕಣ್ಮರೆಯಾಗಿರುವುದು/ನಾಶವಾಗಿರುವುದು ನಿಜಕ್ಕೂ ಐತಿಹಾಸಿಕ ನಷ್ಟ ಎಂದರೆ ತಪ್ಪಾಗಲಾರದು**. ವಿಪರ್ಯಾಸವೆಂದರೆ ಹೆಚ್ಚು ಕಡಿಮೆ **ಇದೇ ಕಾಲಘಟ್ಟಕ್ಕೆ ಸೇರಿದ ಜಕ್ಕೂರಿನ ಅಲ್ಲಾಳನಾಥ ಎಂಬ ವೈಷ್ಣವ ದೇವಾಲಯವೂ ಸಹ ನಾಶವಾಗಿರುವುದು ನಿಜಕ್ಕೂ ದುರಂತವೇ ಎನ್ನಬಹುದು**.

ಬೇಟೆ ಎಂಬುದು ರಾಜರು ಪ್ರಾಚೀನ ಕಾಲದಿಂದಲೂ ಆಹಾರಕ್ಕಾಗಿ, ವಿನೋಧಕ್ಕಾಗಿ, ರಕ್ಷಣೆಗಾಗಿ ಮಾಡುತ್ತಿದ್ದ ಕರ್ತವ್ಯವಾಗಿದ್ದವು. ದೇವತೆಗಳಾದ ಕೃಷ್ಣ, ವೆಂಕಟೇಶ್ವರರು ವಿನೋದಕ್ಕಾಗಿ ಬೇಟೆ ಆಡುತ್ತಿದ್ದರು ಎಂಬುದನ್ನು ಆಗಮಗಳು, ಪುರಾಣಗಳು, ಆಗಮಶಾಸ್ತ್ರಗಳಲ್ಲಿ ಉಲ್ಲೇಖಿಸಿವೆ. ಆದ್ದರಿಂದ ವಿಷ್ಣುವನ್ನು ಬೇಟೆಯರಾಯ ಎಂಬ ಹೆಸರಿನಿಂದಲೂ ಕರೆಯುತ್ತಾರೆ. ವಿಷ್ಣುವಿನ ಅನೇಕ ದೇವಾಲಯಗಳಲ್ಲಿ ಬೇಟೆ ಮಂಟಪಗಳನ್ನು ನಿರ್ಮಿಸಿದ್ದು, ಇಲ್ಲಿ ಪರಿವೇಟ್ಟೈ ಉತ್ಸವ ಎಂದು ಆಚರಿಸುತ್ತಾರೆ. ಬೇಟೆರಾಯನ ದೇವಾಲಯಗಳು ರಾಜ್ಯದಲ್ಲಿ **ಮಾರಶೆಟ್ಟಿಹಳ್ಳಿ, ತುರುವೆಕೆರೆ**, **ಚಿಕ್ಕಬಳ್ಳಾಪುರ**, **ನೊಣವಿನಕೆರೆ**, **ಗುಬ್ಬಿ** ಹಾಗೂ ಹೊರ ರಾಜ್ಯಗಳಾದ **ಆಂಧ್ರದ ಕುಪ್ಪಂ, ತಮಿಳುನಾಡಿನ ಹೊಸೂರು, ಡೆಂಕಣೀ ಕೋಟೆಯಲ್ಲಿ** ಕಂಡುಬರುತ್ತದೆ. **ಸಾಮಾನ್ಯವಾಗಿ ಈ ಬೇಟೆರಾಯನ ಮೂರ್ತಿಶಿಲ್ಪವು ವೆಂಕಟೇಶ್ವರನ ಶಿಲ್ಪದ ರೀತಿಯಲ್ಲಿಯೇ ಇರುತ್ತದೆ**. ಆದರೆ ಬೇಟೆಯರಾಯ ಎಂದು ತೋರಿಸಲು **ಬಿಲ್ಲು-ಬಾಣ**, **ಕತ್ತಿಯನ್ನು ವೆಂಕಟೇಶ್ವರನಿಗೆ** (ವಿಷ್ಣು) **ಹಿಡಿಸಿರುತ್ತಾರೆ.** ತೋರಿಸಿಲ್ಲವೆಂದರೆ ಉತ್ಸವಮೂರ್ತಿಗಳಲ್ಲಿ ಕುದುರೆಯ ಮೇಲೆ ಬೇಟೆಗೆ ಹೊರಟಿರುವ ರೀತಿ ಮಾಡಿರುತ್ತಾರೆ.

ಬೇಟೆಯನ್ನು ಪ್ರಮುಖ ವೃತ್ತಿಯನ್ನಾಗಿ ಹೊಂದಿರುವ ಬೇಡರು, ಹೆಚ್ಚಾಗಿ ವಾಸಿಸುವ ಪ್ರದೇಶವನ್ನು ಬೇಡರಹಳ್ಳಿ/ಬ್ಯಾಡರಹಳ್ಳಿ ಎಂದು ಕರೆಯುತ್ತಾರೆ. ಇವರು ಬೇಟೆಯರಾಯನನ್ನು (ವಿಷ್ಣು) ತಮ್ಮ ಆರಾಧ್ಯ ದೈವವನ್ನಾಗಿ ಪೂಜಿಸುತ್ತಾರೆ. **ಈ ಅಂಶಗಳ ಆಧಾರದ ಮೇಲೆ ಬ್ಯಾಟರಾಯನಪುರದಲ್ಲಿ ಬೇಟೆಯರಾಯ ದೇವಾಲಯ ಇದ್ದುದರಿಂದಲೇ ಬ್ಯಾಟರಾಯನಪುರ ಎಂಬ ಹೆಸರು ಬಂದಿರುತ್ತದೆ ಎಂದು ಹೇಳಬಹುದು.**

ಆದರೆ ಇಲ್ಲಿನ ಶಾಸನದಲ್ಲಿ ಉಲ್ಲೇಖವಿರುವ ಬೇಟೆಯರಾಯನ ದೇವಾಲಯ ಸುತ್ತಮುತ್ತಲ್ಲಿನ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಮಾಡಿದಾಗಲೂ ಸದ್ಯದ ಮಟ್ಟಿಗೆ ದೊರೆತಿರುವುದಿಲ್ಲ.



ಅಗ್ರಹಾರದ ವೇಣುಗೋಪಾಲಸ್ವಾಮಿ ದೇವಾಲಯ

ಅಗ್ರಹಾರದ ವೇಣುಗೋಪಾಲ ದೇವಾಲಯ

ಅಗ್ರಹಾರವು ಐತಿಹಾಸಿಕ ಗ್ರಾಮವಾಗಿದ್ದು, ಇಲ್ಲಿನ ವೇಣುಗೋಪಾಲ ದೇವಾಲಯವು ಹೊಸ ರಚನೆಗಳೊಂದಿಗೆ ಜೀರ್ಣೋದ್ಧಾರವಾಗಿದೆ. ಹಾಗೂ ನಾವು ಕ್ಷೇತ್ರಕಾರ್ಯ ಕೈಗೊಂಡ ಸಮಯದಲ್ಲೂ ನವೀಕರಣ ಕಾರ್ಯಗಳು ನಡೆಯುತ್ತಿದ್ದವು. **ಈ ದೇವಾಲಯವು ಈ ಮೂವತ್ತು ವರ್ಷಗಳಿಗೆ ಮೊದಲು ಪಾಳು ಬಿದ್ದಿದ್ದು, ನಂತರ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಾ ಬಂದಿರುತ್ತಾರೆ.**

ದೇವಾಲಯ ನವೀಕರಣಗೊಂಡಿರುವುದರಿಂದ ದೇವಾಲಯದ **ಗರ್ಭಗುಡಿಯಲ್ಲಿನ ಮೂಲ ಮೂರ್ತಿ ಮತ್ತು ಗರುಡಗಂಬವನ್ನು ಹೊರತುಪಡಿಸಿ** ಉಳಿದ ಭಾಗಗಳು ಬದಲಾಗಿವೆ. ಮೂಲ ಮೂರ್ತಿಯು ವೇಣುಗೋಪಾಲನದಾಗಿದ್ದು, ಪ್ರಸ್ತುತವು ಅದೇ ಹೆಸರಿನಿಂದಲೇ ಕರೆಯಲ್ಪಡುತ್ತಿದೆ. ಇಲ್ಲಿ ವಿಷ್ಣುವಿನ ಅವತಾರವಾದ ಕೃಷ್ಣನನ್ನು ವೇಣುಗೋಪಾಲನ ರೂಪದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ನಾಲ್ಕು ಕೈಗಳನ್ನು ಹೊಂದಿರುವ ಗೋಪಾಲನು ಎರಡು ಕೈಗಳಲ್ಲಿ ಕೊಳಲನ್ನು ನುಡಿಸುತ್ತಿದ್ದು, ಉಳಿದ ಕೈಗಳಲ್ಲಿ ಶಂಖ -ಚಕ್ರವನ್ನು ಹಿಡಿದಿದ್ದಾನೆ. ಕಿರೀಟವು ಉದ್ದವಾಗಿದ್ದು, ಅಲಂಕರಣೆಯನ್ನು ಹೊಂದಿದೆ. ಸಕಲ ವಸ್ತ್ರಾಭರಣವನ್ನು ಧರಿಸಿರುವ ವೇಣುಗೋಪಾಲನು, ಬಲಗಾಲನ್ನು ಎಡಗಾಲಿನ ಮುಂಭಾಗದಲ್ಲಿ ತ್ರಿಭಂಗಿಯಲ್ಲಿ (ಕತ್ತರಿ ಕಾಲಿನಂತೆ ಇಟ್ಟು) ನಿಂತಿದ್ದಾನೆ. ಗೋಪಿಕೆಯರ ಶಿಲ್ಪಗಳು ಗೋಪಾಲನ ಅಕ್ಕ-ಪಕ್ಕ ಇದ್ದು, ಅವರ ಹಿಂದೆ ಗೋವಿನ ರಚನೆಯನ್ನು ಮೂಡಿಸಲಾಗಿದೆ. ಹಾಗೂ ಶಿಲ್ಪದ ಹಿಂದೆ ಪ್ರಭಾವಳಿಯನ್ನು ರಚಿಸಲಾಗಿದೆ. ಆದರೆ ಇಲ್ಲಿ ಈ ಮೂರ್ತಿಯನ್ನು ನಿಲ್ಲಿಸಲು ಯಾವುದೇ ಪಾಣಿಪೀಠದ ರಚನೆಯನ್ನು ಮಾಡಿರುವುದು ಕಂಡುಬರುವುದಿಲ್ಲ.

ಈ ದೇವಾಲಯದ ಮುಂಭಾಗದಲ್ಲಿ ಸುಮಾರು 20 ಅಡಿ ಎತ್ತರದ ಗರುಡಗಂಭವನ್ನು ನಿಲ್ಲಿಸಲಾಗಿದ್ದು, ಇದರಲ್ಲಿ ಗರುಡ, ಆಂಜನೇಯ, ಶಂಖ ಮತ್ತು ಸುದರ್ಶನ ಚಕ್ರಗಳನ್ನು ಕೆತ್ತಲಾಗಿದೆ.

ಅಗ್ರಹಾರದ ವೇಣುಗೋಪಾಲ ದೇವಾಲಯ ಮತ್ತು ಶಿಲ್ಪದ ಕಾಲಮಾನವನ್ನು ನಿರ್ಧಿಷ್ಟವಾಗಿ ತಿಳಿಸುವ ಯಾವುದೇ ಆಧಾರಗಳು ದೊರೆತಿರುವುದಿಲ್ಲ. ಆದರೆ ಇಲ್ಲಿನ ಶಾಸನದಲ್ಲಿ ಬಂದಿರುವ ಅರುಳಾಳಮೂರ್ತಿ ಅಗ್ರಹಾರ ಎಂಬ ಹೆಸರನ್ನು ಆಧಾರವಾಗಿಟ್ಟುಕೊಂಡು

ವೇಣುಗೋಪಾಲ ದೇವಾಲಯ ಮತ್ತು ಶಿಲ್ಪದ ಕಾಲಮಾನವನ್ನು ಅಂದಾಜಿಸಲಾಗಿದೆ. **ಅರುಳಾಳ ಮೂರ್ತಿ ಎಂಬುದು ತಮಿಳು ಪದವಾಗಿದ್ದು ಕನ್ನಡದಲ್ಲಿ ಉಚ್ಚರಿಸುವ ಸಂದರ್ಭದಲ್ಲಿ ಇದು ಅಲ್ಲಾಳನಾಥ ಎಂದು ಕರೆಯಲ್ಪಡುತ್ತದೆ**. ಈ ಅಲ್ಲಾಳನಾಥನನ್ನು **ವರದರಾಜ ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ**. ತಮಿಳಿನ ಅರುಳಾಳ, ಕನ್ನಡದ ಅಲ್ಲಾಳ, ಸಂಸ್ಕೃತದ ವರದರಾಜ ಎಂಬ ಈ ಮೂರು ಹೆಸರುಗಳು ವಿಷ್ಣುವಿನ ಪ್ರತಿನಾಮ ಅಥವಾ ಬೇರೆ ಬೇರೆ ಹೆಸರುಗಳಾಗಿದ್ದು, ಅದೇ ರೀತಿಯಲ್ಲಿ ವೇಣುಗೋಪಾಲ ಹೆಸರು ಕೂಡ ವಿಷ್ಣುವಿನ ಮತ್ತೊಂದು ಹೆಸರಾಗಿದೆ. ವಿಷ್ಣುವಿನ ಅವತಾರಗಳಲ್ಲಿ ಕೃಷ್ಣನ (ವೇಣುಗೋಪಾಲ) ಅವತಾರವೂ ಒಂದಾಗಿದ್ದು, **ಬಹುಶ: ಅಗ್ರಹಾರದ ಶ್ರಾದ್ಧದ ಶಾಸನದಲ್ಲಿ ಉಲ್ಲೇಖಿಸಿರುವ ಅರುಳಾಳ ಮೂರ್ತಿಯೇ ಈ ವೇಣುಗೋಪಾಲಸ್ವಾಮಿ ಇರಬಹುದು**. ಬಹುಶಃ ಈ ಶಾಸನವನ್ನು ಹಾಕಿಸಿದ ನಂತರದ ಕಾಲಘಟ್ಟದಲ್ಲಿ ಹೆಸರೂ ಕೂಡ ಬದಲಾಗಿರಬಹುದು. ಆದ್ದರಿಂದ ಅಗ್ರಹಾರದ ಶಾಸನವನ್ನು ಹಾಕಿಸಿದ ಕಾಲಮಾನ ಅಥವಾ ಇದಕ್ಕೂ ಮುಂಚಿನ ಅಂದರೆ ಸಾ.ಶ.14ನೇ ಶತಮಾನದಲ್ಲಿ ಈ ವೇಣುಗೋಪಾಲ ದೇವಾಲಯವನ್ನು ನಿರ್ಮಿಸಲಾಗಿದೆ ಎಂದು ಹೇಳಬಹುದು. ಶಿಲ್ಪಶಾಸ್ತ್ರದ ಹಿನ್ನೆಲೆಯಲ್ಲಿ ಈ ವೇಣುಗೋಪಾಲ ಶಿಲ್ಪವು **ಸುಮಾರು ಹದಿನಾರನೇ ಶತಮಾನದ್ದಿರಬಹುದೆಂದು ಶಲ್ವಪಿಳ್ಳೈ ಅಯ್ಯಂಗಾರ್ ಅವರು ಹೇಳಿದರೆ, ವಿ.ಅನುರಾಧ ಅವರು ವಿಜಯನಗರ ಕಾಲದ ಶೈಲಿಯ ಲಕ್ಷಣಗಳನ್ನು ಹೊಂದಿದೆ ಎಂದು ತಿಳಿಸಿರುತ್ತಾರೆ**.



ಅಗ್ರಹಾರದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿರುವ ವೇಣುಗೋಪಾಲನ ಮೂಲಮೂರ್ತಿ

ಶ್ರಾದ್ಧ - ಹಿರಿಯರ ಸ್ಮರಣೆಯ ದಿನ

ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ ಉಲ್ಲೇಖವಾಗಿರುವ ವಿಶೇಷ ವಿಷಯ ಶ್ರಾದ್ಧ . **ಶ್ರಾದ್ಧ ಉಲ್ಲೇಖವಿರುವ ಶಾಸನಗಳು ಬಹು ವಿರಳ.** ಬೆಂಗಳೂರು ಜಿಲ್ಲೆಯಲ್ಲಿ ಈ ಶಾಸನವನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಶಾಸನದಲ್ಲಿ ಶ್ರಾದ್ಧದ ಪ್ರಸ್ತಾಪ ಕಂಡುಬರುವುದಿಲ್ಲ. ಆದ್ದರಿಂದ ಈ ಶಾಸನವು ವಿಶಿಷ್ಟವಾದುದಾಗಿದ್ದು, ನಮ್ಮ **ಪೂರ್ವಜರ ಆಚರಣೆಗಳನ್ನು ನೆನಪಿಸುವ ಮಹತ್ವಪೂರ್ಣವಾದ ದಾಖಲೆಗಳಲ್ಲಿ ಒಂದಾಗಿದೆ.** ವಿಶೇಷವಾಗಿ ನಮಗೆ ಶ್ರಾದ್ಧದ ಬಗ್ಗೆ ಇರುವ ಮೂಢನಂಬಿಕೆಯಿಂದ ಹೊರ ಬಂದು ಅಂದಿನ ಜನರು ತಮ್ಮ ಹಿರಿಯರಿಗೆ ಗೌರವ ಸಲ್ಲಿಸುವ ದಿನವನ್ನು ಹೇಗೆ ಆಚರಿಸುತ್ತಿದ್ದರು ಎಂಬುದನ್ನು ಇಲ್ಲಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. **ಶ್ರಾದ್ಧ ಎಂದರೆ ಒಂದು ಭಯದಿಂದ ಆಚರಿಸುವ ಆಚರಣೆ ಎಂದು ನಂಬಿರುವ ಇಂದಿನ ಕಾಲದಲ್ಲಿ ಶ್ರಾದ್ಧವನ್ನು ಅಪಾರವಾದ ಭಕ್ತಿಯೊಂದಿಗೆ ಆಚರಣೆ ಮಾಡಿ ಹಲವು ದಾನಗಳನ್ನು ನೀಡಿ, ದಾನದ ವಿವರಗಳನ್ನು ದಾಖಲಿಸಿರುವುದು ಈ ಅಗ್ರಹಾರದ ಶಾಸನದಲ್ಲಿನ ವಿಶೇಷತೆಯಾಗಿದೆ.**

ಪ್ರಕೃತಿಯಲ್ಲಿ ಪ್ರತಿಯೊಂದು ಜೀವಸಂಕುಲಗಳಿಗೂ ಹುಟ್ಟು ಸಾವು ಎಂಬುದು ಇರುತ್ತದೆ. ಇದು ಪ್ರಕೃತಿಯ ನಿಯಮ, ಇದರಲ್ಲಿ ಯಾವುದೇ ವಿಶೇಷತೆ ಇರುವುದಿಲ್ಲ. ಹುಟ್ಟು ಸಂದರ್ಭದಲ್ಲಿ ನಾವು ಸಂತೋಷಿಸಿದರೆ, ಸಾವಿನ ಸಮಯದಲ್ಲಿ ಶೋಕಿಸುತ್ತೇವೆ. ಇದು ಕೇವಲ ಮನುಷ್ಯರಲ್ಲಿ ಮಾತ್ರವಲ್ಲದೆ ಪ್ರಾಣಿಗಳಲ್ಲೂ ಕಾಣಬಹುದು. ಆದರೆ ಮಾನವರಲ್ಲಿ ಹುಟ್ಟು-ಸಾವಿನ ಸಮಯದಲ್ಲಿ ಮಾಡುವ ಆಚರಣೆಗಳು ವಿಶೇಷವಾಗಿರುತ್ತವೆ. ಹುಟ್ಟು ಸಂದರ್ಭವನ್ನು ಸಂತೋಷದಿಂದ ನಾಮಕರಣ ಎಂದು ಆಚರಿಸಿದರೆ ಸಾವಿನ ನಂತರದಲ್ಲಿನ ಆಚರಣೆಗಳನ್ನು ಶ್ರಾದ್ಧ ಎಂದು ಆಚರಿಸುವುದನ್ನು ನಾವು ನೋಡುತ್ತೇವೆ.

ಮನುಷ್ಯನು ತನ್ನ ಜೀವಿತದ ಅವಧಿಯಲ್ಲಿ ಸಾರ್ಥಕತೆಯನ್ನು ಸಾಧಿಸಲು ಹಲವಾರು ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಅಂತಹ ಸಾರ್ಥಕ ಕರ್ತವ್ಯಗಳಲ್ಲಿ ಶ್ರಾದ್ಧವೂ ಕೂಡ ಒಂದು. **ಶ್ರಾದ್ಧ ಎಂದರೆ ಶ್ರದ್ಧೆಯಿಂದ ಮತ್ತು ವಿಶ್ವಾಸದಿಂದ ಮಾಡುವ ಕೆಲಸ. ಅದು ತನ್ನ ಹೆತ್ತವರಿಗೆ ಸಲ್ಲಿಸುವ ಕೃತಜ್ಞತೆ.** ತಂದೆತಾಯಿಯರು ನಮಗೆ ಪ್ರತ್ಯಕ್ಷ ದೇವತೆಗಳು. ಅವರುಗಳು ತಮ್ಮ ಜೀವಿತ ಅವಧಿಯನ್ನು ನಮ್ಮ ಏಳಿಗೆಗಾಗಿ ದುಡಿದು ನಮ್ಮನ್ನು ಒಂದು ಹಂತಕ್ಕೆ ತಂದು ನಿಲ್ಲಿಸುತ್ತಾರೆ. ಅವರು ದುಡಿಯಲು ಅಶಕ್ತರಾದಾಗ ಅವರಿಗೆ ಸೇವಾ ಶುಶ್ರೂಷಾದಿಗಳನ್ನು ಶ್ರದ್ಧೆಯಿಂದ ಮಾಡಿ, ಅವರು **ನಮ್ಮನ್ನು ಅಗಲಿದ ಮೇಲೆ ಮಾಡಿರುವ ಉಪಕಾರಕ್ಕೆ ಅವರಿಗೆ ಕೃತಜ್ಞತೆ, ಪ್ರೀತಿ, ಗೌರವಗಳನ್ನು ವಿಶೇಷವಾಗಿ ಸಲ್ಲಿಸಲು ಮಾಡುವ ಕರ್ತವ್ಯವನ್ನು ಶ್ರಾದ್ಧ ಎಂದು ಕರೆಯಲಾಗುತ್ತದೆ.**

ಮಾನವ ಒಂದು ಕಡೆ ನೆಲೆ ನಿಂತು ಜೀವಿಸಲು ಪ್ರಾರಂಭಿಸಿದ ನಂತರ ಮನುಷ್ಯ ಸತ್ತ ಮೇಲೆ ಅವನನ್ನು ಪಂಚ ಭೂತಗಳಿಗೆ ಅರ್ಪಿಸಲಾಗುತ್ತಿತ್ತು ಅಥವಾ ಭೂಮಿಯಲ್ಲಿ ಹೂಳಲಾಗುತ್ತಿತ್ತು. ಸಾವಿನ ಸಮಯದಲ್ಲಿ ಆತ್ಮವು ದೇಹದಿಂದ ಬೇರ್ಪಟ್ಟಾಗ ಅದು ಮತ್ತೆ ಬೇರೆ ದೇಹದೊಂದಿಗೆ ಪುನರ್ಜನ್ಮ ಪಡೆಯಬಹುದು ಅಥವಾ ಪಿತೃಲೋಕಕ್ಕೆ (ಪಾಪ ಪುಣ್ಯದ ಆಧಾರದ ಮೇಲೆ ಸ್ವರ್ಗ/ನರಕ ಹೋಗುತ್ತದೆ ಎಂಬ ನಂಬಿಕೆ) ಹೋಗಬಹುದು ಎಂಬ ನಂಬಿಕೆ ಬೆಳೆಯಿತು. ಸರಿಯಾದ ಸಂಸ್ಕಾರವನ್ನು ಸಾವಿನ ನಂತರ ಮಾಡದೇ ಹೋದರೆ ಆತ್ಮವು ಪ್ರೇತಾತ್ಮವಾಗಿ ನೋವನ್ನು ಪಡುವುದು ಎಂಬ ಕಾರಣದಿಂದ ಶ್ರಾದ್ಧ ಎಂಬ ಕ್ರಿಯೆಯು ರೂಢಿಗೆ ಬಂದಿತು. ಶ್ರಾದ್ಧದ ಬಗ್ಗೆ ವಿಷಯಗಳನ್ನು ಗೃಹ್ಯಸೂತ್ರ, ಗರುಡಪುರಾಣ ಮುಂತಾದ ಗ್ರಂಥಗಳಲ್ಲಿ ಕಾಣಬಹುದು.

ಸಾವು ಮತ್ತು ನಂತರದ ಕಾರ್ಯಗಳನ್ನು ಜನರು ತಮ್ಮ **ಮೂಢನಂಬಿಕೆಯ ಕಾರಣದಿಂದ ಭಯ ಹಾಗೂ ನಿಷಿದ್ಧ ವಾತಾವರಣವನ್ನು ಸೃಷ್ಟಿಸಿ ತಮ್ಮ ಹಿರಿಯರಿಗೆ ಕೃತಜ್ಞತೆಯನ್ನು ಸಲ್ಲಿಸುವ ಉತ್ತಮವಾದ ಸಂಸ್ಕಾರವನ್ನು ಭಯಂಕರವನ್ನಾಗಿ ಪರಿವರ್ತಿಸಿದ್ದಾರೆ.** ಆದ್ದರಿಂದ ಶ್ರಾದ್ಧ ಕಾರ್ಯವನ್ನು ಅತ್ಯಂತ ಭಯದಿಂದಲೇ ಆಚರಿಸುತ್ತಿದ್ದಾರೆ. ಈ ರೀತಿಯ ಭಯದಿಂದ ಆಚರಣೆಗಳನ್ನು ಆಚರಿಸುತ್ತಾ ಬಂದಾಗ ಕಾಲನಂತರ ಆ ಆಚರಣೆಗಳು ತಮ್ಮ ಮೌಲ್ಯವನ್ನು ಕಳೆದುಕೊಂಡು ಮುಂದೊಂದು ದಿನ ಆ ಸಂಸ್ಕಾರವೇ ಮರೆತು ಹೋಗಿ ತಂದೆ-ತಾಯಿ, ಗುರು-ಹಿರಿಯರಿಗೆ ಸಲ್ಲಿಸುವ ಕೃತಜ್ಞತೆಯಿಂದಲೂ ಅವಕಾಶ ವಂಚಿತರಾಗುತ್ತಾರೆ.

ಹಲವಾರು ಆಚರಣೆಗಳನ್ನು ಇಂದಿಗೂ ನಾವು ಆಚರಿಸುತ್ತಿದ್ದೇವೆ ಅಂದರೆ ಅದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿರುತ್ತದೆ. ಹಲವಾರು ಆಚರಣೆಗಳಿಗೆ ಯಾವುದೇ ರೀತಿಯ ದಾಖಲೆಗಳಿರುವುದಿಲ್ಲ ಹಾಗೂ ಅವುಗಳನ್ನು ಎಂದಿನಿಂದ ಆಚರಿಸುತ್ತಿದ್ದಾರೆ ಎಂಬುದಕ್ಕೂ ನಿಖರವಾದ ಪುರಾವೆಗಳು ಸಿಗುವುದಿಲ್ಲ. ಭಕ್ತಿಯಿಂದ ಆಚರಿಸುವ ಎಷ್ಟೋ ಸಂಸ್ಕಾರಗಳಿಗೆ ದಾಖಲೆ ಸಿಗದೇ ಇರುವ ಸಮಯದಲ್ಲಿ ಭಯದಿಂದ ಆಚರಿಸುವ ಸಂಸ್ಕಾರಗಳಿಗೆ ದಾಖಲೆ ಸಿಗುತ್ತದೆಯೇ. ಶ್ರಾದ್ಧದ ಬಗ್ಗೆ

ಇಷ್ಟೊಂದು ಪೀಠಿಕೆ ಏಕೆಂದರೆ ಶ್ರಾದ್ಧದ ಬಗ್ಗೆ ಇರುವ ಇಂದಿನ ಭಯದ ವಾತಾವರಣವನ್ನು ಹೋಗಲಾಡಿಸಿ, ಇದೊಂದು ನಮ್ಮ ಪೂರ್ವಜರಿಗೆ ಸಲ್ಲಿಸುವ ಒಂದು ವಿಶಿಷ್ಟ ಸಂಸ್ಕಾರವಾಗಿತ್ತು ಎಂಬುದನ್ನು ತಿಳಿಸುವುದಾಗಿದೆ. ನಮ್ಮ ಪೂರ್ವಜರೂ ಸಹ ಇದನ್ನು **ತಮ್ಮ ಹಿರಿಯರಿಗೆ ಕೃಜ್ಞತೆಯನ್ನು ಸಲ್ಲಿಸುವ ಸುದಿನ ಎಂದು ಭಾವಿಸಿದ್ದರು**. ಆದ್ದರಿಂದ ಅವುಗಳನ್ನು ದಾಖಲಿಸುವ ಕೆಲಸವನ್ನು ಸಹ ಮಾಡುತ್ತಿದ್ದರು. ಅಂತಹದೇ ಕೆಲಸವನ್ನು ಅಗ್ರಹಾರ ಶಾಸನದಲ್ಲಿ ಕಾಣಬಹುದು.

ವಿಶೇಷವಾಗಿ ಶ್ರಾದ್ಧವನ್ನು ವ್ಯಕ್ತಿಯು ಸತ್ತ ದಿನವನ್ನು ಪರಿಗಣನೆಗೆ ತೆಗೆದುಕೊಂಡು 10 ದಿನಗಳೊಳಗೆ ಮಾಡಲಾಗುತ್ತದೆ. ಇದಕ್ಕೆ ನವ ಶ್ರಾದ್ಧ ಎಂದು ಕರೆಯುತ್ತಾರೆ. ಹನ್ನೊಂದು, ಹನ್ನೆರಡನೆಯ ದಿನದ ಕಾರ್ಯ ಮುಗಿದ ನಂತರ ಪ್ರತಿ ತಿಂಗಳು ಒಂದು ವರ್ಷದವರೆಗೆ ಮಾಸಿಕ ಶ್ರಾದ್ಧವನ್ನು ಆಚರಿಸುತ್ತಾರೆ.

ಶ್ರಾದ್ಧದ ಸಮಯದಲ್ಲಿ ಹಿರಿಯರ ಹೆಸರಿನಲ್ಲಿ ದಾನ ಧರ್ಮ ಮಾಡಿದರೆ ಅವರಿಗೆ ಮೋಕ್ಷ ದೊರೆಯುತ್ತದೆ ಎಂಬ ಭಾವನೆಯಿಂದ ತಮ್ಮ ಶಕ್ತಿಗೆ ಅನುಸಾರವಾಗಿ ದಾನ ನೀಡುತ್ತಾರೆ. **ಅರುಳಾಳ ಪೆರುಮಾಳ್ ಕಣಪ್ಪನ್ ಎಂಬುವನು ತಮ್ಮ ಹಿರಿಯರ ಶ್ರಾದ್ಧ ಕಾರ್ಯವನ್ನು ಮಾಡಿ, ಹನ್ನೊಂದು ಜನ ಬೇರೆ ಬೇರೆ ಗೋತ್ರದ ಬ್ರಾಹ್ಮಣರಿಗೆ ಭೂದಾನವನ್ನು ನೀಡಿರುವುದನ್ನು ವಿಶೇಷವಾಗಿ ಈ ಶಾಸನದಲ್ಲಿ ದಾಖಲಿಸಿರುವುದನ್ನು ಕಾಣಬಹುದು**. ಯಾರಿಗೆ ಶ್ರಾದ್ಧ ಮಾಡಲಾಗಿದೆ ಹಾಗೂ ಹನ್ನೊಂದು ನಾನಾ ಗೋತ್ರದ ಬ್ರಾಹ್ಮಣರು ಯಾರು ಎಂಬುದು ಇಲ್ಲಿ ತಿಳಿಯದಾಗಿದೆ. ಈ ಸಂದರ್ಭದಲ್ಲಿ ಇಮ್ಮಡಿ ಹರಿರಾಯನು (2ನೇ ಹರಿಹರ 1350-1404) ವಿಜಯನಗರ ಸಾಮ್ರಾಜ್ಯವನ್ನು ಆಳ್ವಿಕೆ ಮಾಡುತ್ತಿದ್ದು, ಈತನ ಅಧೀನದಲ್ಲಿ, ಮಯಿಲೆಯ ನಾಯಕರು ಇಲ್ಯೆಪಾಕ ನಾಡ (ಯಲಹಂಕ ನಾಡು) ಮಹಾ ಸಾಮಂತಾಧಿಪತಿಯಾಗಿ ಆಳ್ವಿಕೆ ಮಾಡುತ್ತಿರುತ್ತಾರೆ.

ಇದು ವ್ಯಕ್ತಿ ಸತ್ತ ಹನ್ನೆರಡನೇ ದಿನಕ್ಕೆ ಮಾಡಿದ ಕಾರ್ಯವಾಗಿದೆ. ವಿಶೇಷವಾಗಿ ಈ ರೀತಿಯ ಭೂದಾನ ನೀಡಿರಲು ಕಾರಣಗಳನ್ನು ಯೋಚಿಸಿದಾಗ, ಬಹುಶಃ ವ್ಯಕ್ತಿಯು ಇಲ್ಲಿ ಅಪಮೃತ್ಯುವಿಗೆ ಒಳಗಾಗಿರುವುದರಿಂದ ವಿಶೇಷವಾಗಿ ಶ್ರಾದ್ಧವನ್ನು ಆಚರಿಸಿ ದಾನವನ್ನು ನೀಡಲಾಗಿದೆ. ಶ್ರಾದ್ಧವನ್ನು ಆಚರಿಸಲು ನಾಲ್ಕು ಜನ ಬ್ರಾಹ್ಮಣರನ್ನು (ವಸು, ರುದ್ರ, ಆದಿತ್ಯ, ವಿಷ್ಣು ಸ್ವರೂಪ) ಸಾಮಾನ್ಯವಾಗಿ ಕರೆಸುವುದು ರೂಢಿ. ಆದರೆ ಇಲ್ಲಿ ಹನ್ನೊಂದು ಜನ ಬ್ರಾಹ್ಮಣರು (ಏಕಾದಶ ರುದ್ರರು) ಈ ಶ್ರಾದ್ಧವನ್ನು ಮಾಡಿದ್ದಾರೆಂಬುದು ಶಲ್ವಪಿಳ್ಳೈ ಅಯ್ಯಂಗಾರ್ ಅವರ ಅಭಿಪ್ರಾಯವಾಗಿದೆ

ಇಲ್ಲಿ ಭೂಮಿಯನ್ನು ದಾನ ನೀಡಿರುವುದರಿಂದ ಒಂದೇ ಗೋತ್ರದ ಜನರಿಗೆ ದಾನ ನೀಡಿದರೆ ಒಂದೇ ಕುಟುಂಬಕ್ಕೆ ಸೇರುತ್ತದೆ. ಆದ್ದರಿಂದ ಇದು ಬೇರೆಯವರಿಗೂ ಸಲ್ಲಬೇಕು ಎಂಬ ದೃಷ್ಟಿಯಿಂದ ಬೇರೆ ಬೇರೆ ಗೋತ್ರಗಳ (ಭಾರ್ಗವ, ಭಾರದ್ವಜ, ಗೌತಮ, ವಿಶ್ವಾಮಿತ್ರ, ಕೌಶಿಕ, ವಶಿಷ್ಠ ಮುಂತಾದ) ಬ್ರಾಹ್ಮಣರಿಗೆ ನೀಡಿದ್ದಾರೆ.

ದಾನಗಳನ್ನು ನೀಡುವಾಗ ಸಾಮಾನ್ಯವಾಗಿ ವಿಶೇಷ ದಿನಗಳಂದು ನೀಡಿದರೆ ಪುಣ್ಯ ದ್ವಿಗುಣವಾಗುತ್ತದೆ ಎಂಬ ನಂಬಿಕೆಯಿಂದ ಉತ್ತರಾಯಣ/ದಕ್ಷಿಣಾಯಣ/ಗ್ರಹಣ ಕಾಲ ಹಾಗೂ ವಿಶೇಷ ಸಂದರ್ಭಗಳಲ್ಲಿ ನೀಡುತ್ತಿದ್ದರು. **ಈ ಶಾಸನವನ್ನು ಸಹ ಉತ್ತರಾಯಣ ಪುಣ್ಯಕಾಲದ ದಿನವಾದ ಸಾ.ಶ.13 ಜನವರಿ 1350 ರಂದು (ಉತ್ತರಾಯಣ-ಸಂಕ್ರಾತಿ) ನೀಡಲಾಗಿದೆ**.


ಭಯದಿಂದಾಗಲಿ, ಪ್ರತಿಫಲಾಪೇಕ್ಷೆಯಿಂದಾಗಲಿ, ಕನಿಕರದ ಭಾವನೆಯಿಂದಾಗಲಿ ದಾನ ಮಾಡದೆ ಸಮರ್ಪಣಾ ಭಾವದಿಂದ ಮಾಡುವುದೇ ನಿಜವಾದ ದಾನ. ಈ **ದಾನಗಳಲ್ಲಿ ವಿದ್ಯಾದಾನ, ಭೂ ದಾನ, ಗೋ ದಾನ, ಅನ್ನ ದಾನ** ಮುಂತಾದವು ಪ್ರಮುಖವಾಗಿದ್ದು, ಭೂ ದಾನವು ಇವುಗಳಲ್ಲಿ ಮಹತ್ವದಾಗಿದೆ. ದಾನ ಪಡೆದವರು ಶತ ಶತಮಾನಗಳವರೆಗೆ ಅವುಗಳನ್ನು ಅನುಭವಿಸಿಕೊಂಡು ಹೋಗುತ್ತಾರೆ ಹಾಗೂ ಸದಾ ಕಾಲ ದಾನ ನೀಡಿದವರನ್ನು ಹರಸುತ್ತಾರೆ ಎಂಬ ಭಾವನೆಯಿಂದ ಭೂ ದಾನವನ್ನು ಮಾಡಲಾಗುತ್ತಿತ್ತು. **ಅರುಳಾಳ ಪೆರುಮಾಳ್ ಕಣಪ್ಪನ್ ನೀಡಿರುವ ಭೂ ದಾನದಲ್ಲಿ ಅಗ್ರಹಾರ ನಿರ್ಮಾಣವಾಗಿದ್ದು, ಅಂದಿನಿಂದ ಇಂದಿನವರೆಗೆ ಹಲವಾರು ತಲೆಮಾರುಗಳು ಜೀವನವನ್ನು ನಡಿಸಿಕೊಂಡು ಬಂದಿವೆ. ಇಂದು ಈ ಅಗ್ರಹಾರದ ಜನರು ಆರ್ಥಿಕವಾಗಿ ಉತ್ತಮವಾಗಿದ್ದು, ಉತ್ತಮ ವಿದ್ಯಾಭ್ಯಾಸವನ್ನು ಹೊಂದಿ ದೇಶ ವಿದೇಶಗಳಲ್ಲಿ ಹೆಸರನ್ನು ಮಾಡಿದ್ದಾರೆ. ಇಷ್ಟೆಲ್ಲಾ ಸಾಧ್ಯವಾಗಿದ್ದು, ಅಂದು ಭೂ ದಾನವನ್ನು ನೀಡಿ ಅಗ್ರಹಾರವನ್ನು ನಿರ್ಮಾಣ ಮಾಡಿರುವುದೂ ಒಂದು ಕಾರಣ ಎಂದು ಹೇಳಿದರೆ ತಪ್ಪಾಗಲಾರದು.** ಆದ್ದರಿಂದ ಅಗ್ರಹಾರದ ಪೂರ್ವಿಕರು ಶ್ರಾದ್ಧದ ನೆನಪಿನಲ್ಲಿ ಹಾಕಿಸಿರುವ ಶಾಸನದ ದಿನವನ್ನು ಅಂದರೆ **ಜನವರಿ 13 ನ್ನು "ಅಗ್ರಹಾರದ ದಿನ"** ಎಂದು ಪ್ರತೀ ವರ್ಷವೂ, ಅಗ್ರಹಾರದಲ್ಲಿ ಆಚರಿಸುವ ಮೂಲಕ ತಮ್ಮ ಪೂರ್ವಜರ ಆಚರಣೆ ಮತ್ತು ನಂಬಿಕೆಗಳನ್ನು ಗೌರವಿಸಬೇಕಾಗಿದೆ.

ಅಗ್ರಹಾರ


ಅಗ್ರಹಾರ ಎಂಬುದು ಜಕ್ಕೂರಿನ ಸಮೀಪದಲ್ಲಿ ಕಂಡುಬರುವ 700 ವರ್ಷದ ಐತಿಹಾಸಿಕ ಸ್ಥಳವಾಗಿದ್ದು, ಈ ಅಗ್ರಹಾರವನ್ನು ಅರುಳಾಳ ಪೆರುಮಾಳ್ ಕಣ್ಣಪ್ಪ ಎಂಬುವನು ತಮ್ಮ ಸಂಬಂಧಿಕರೊಬ್ಬರ ಶ್ರಾದ್ಧವನ್ನು ನೆರವೇರಿಸಿ ಅಗ್ರಹಾರವನ್ನು (ಪಾಠಶಾಲೆ) ನಿರ್ಮಿಸಿದ್ದಾನೆ. ಅಗ್ರಹಾರ ಅಂದರೆ ಏನು? ಇದರ ವಿಶೇಷತೆಗಳೇನು? ಎಂಬ ಇನ್ನಿತರ ಹಲವಾರು ವಿಷಯಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಸ್ಥಳನಾಮಗಳು ಒಂದು ಪ್ರದೇಶದ ಭೌಗೋಳಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ತಿಳಿಯಲು ಸಹಾಯಕವಾಗಿವೆ. ಅದೇ ರೀತಿ ಅಗ್ರಹಾರ ಎಂಬುದು ಕೂಡ ಒಂದು ಸಾಮಾಜಿಕ-ಧಾರ್ಮಿಕ ಆಧಾರದಲ್ಲಿ ನಿರ್ಮಾಣವಾದ ಒಂದು ವ್ಯವಸ್ಥೆಯಾಗಿದೆ. ಈ ಅಗ್ರಹಾರಗಳನ್ನು **ಅಗ್ರಹಾರ, ಬ್ರಹ್ಮಪುರಿ, ಮಠ, ಘಟಿಕ ಸ್ಥಾನ,, ಅಗರ**, **ಅರಗ**, **ಆರಗ**, **ಮಹಾಜನ**, **ಹಾರೋ**, **ಹಾರನ್**, **ಶ್ರೋತ್ರಿಯ**, **ಮಂಗಲ**, **ಗಾಲ** ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಬ್ರಾಹ್ಮಣರಿಗೆ ವಿಶೇಷ ಸವಲತ್ತುಗಳೊಂದಿಗೆ ನೀಡುತ್ತಿದ್ದ ಪ್ರದೇಶವನ್ನು ಅಗ್ರಹಾರ ಎಂದು ಕರೆಯಲಾಗುತ್ತಿತ್ತು. ಇಂದಿನ ಕೇರಳ ಮತ್ತು ತಮಿಳು ಪ್ರದೇಶದಲ್ಲಿ ಅಗ್ರಹಾರಗಳನ್ನು **ಚತುರ್ವೇದಿ ಮಂಗಲ** ಎಂದು ಸಹ ಕರೆಯುತ್ತಿದ್ದರು. ಅಗ್ರಹಾರಗಳು ಬ್ರಾಹ್ಮಣರಿಗೆ (ಅಗ್ರ) ಕೊಟ್ಟ ಕೊಡುಗೆಗಳನ್ನು (**ಹಾರ<ಹೃ=ಕೊಡು, ತೆಗೆದುಕೊ**) ತಿಳಿಸುತ್ತವೆ. ಈ ಅಗ್ರಹಾರ ಎಂಬ ಹೆಸರುಗಳು ಕೆಲವು ಸಂದರ್ಭಗಳಲ್ಲಿ ಸ್ವತಂತ್ರವಾಗಿ ಕಂಡುಬಂದರೆ ಹಲವು ಸಂದರ್ಭಗಳಲ್ಲಿ ಊರಿನ ಹೆಸರಿನ ಮುಂದೆ ಅಥವಾ ಹೆಸರಿನ ಹಿಂದೆ ಬಂದಿರುತ್ತವೆ. ಉದಾಹರಣೆಗೆ ಅಗ್ರಹಾರ ಬಾಚಹಳ್ಳಿ ಇದರಲ್ಲಿ ಹೆಸರಿನ ಪೂರ್ವದಲ್ಲಿ ಅಗ್ರಹಾರ ಎಂದು ಬಂದಿದ್ದರೆ, ಶಿವನಸಮುದ್ರ ಅಗ್ರಹಾರ, ಕಲಿಯೂರು ಅಗ್ರಹಾರ, ಸಿಂಗಸಮುದ್ರ ಅಗ್ರಹಾರ, ಗೋಪಾಲಸಾಗರ ಅಗ್ರಹಾರ, ಪರಪ್ಪನ ಅಗ್ರಹಾರ, ವಿಮಲಸಾಗರ ಭಟ್ಟಗ್ರಹಾರ ಇವುಗಳಲ್ಲಿ ಹೆಸರಿನ ನಂತರ ಅಗ್ರಹಾರ ಎಂಬ ಪದ ಬಂದಿರುವುದನ್ನು ಗುರುತಿಸಬಹುದು. ಕೆಲವು ಸಂದರ್ಭಗಳಲ್ಲಿ ಹಳೆಯ ಹೆಸರಿಗೆ ಪ್ರತಿನಾಮವಾಗಿ ಬೇರೊಂದು ಹೆಸರನ್ನಿಟ್ಟು ದಾನಗಳನ್ನು ನೀಡಿ ಅಗ್ರಹಾರ ಎಂದು ಕರೆದಿರುವುದೂ ಕೂಡ ಶಾಸನಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ: ಕಂಚಿಗನಾಳು ಗ್ರಾಮ - ಪ್ರತಿನಾಮ ಸಿಂಗಸಮುದ್ರ ಅಗ್ರಹಾರ.

ಅಗ್ರಹಾರಗಳನ್ನು ಸಾಮಾನ್ಯವಾಗಿ **ರಾಜನು ಯುದ್ಧದಲ್ಲಿ ಗೆದ್ದಾಗ, ಪಟ್ಟಾಭಿಷೇಕದ ಸಂದರ್ಭ, ಯಜ್ಞ-ಹೋಮ ಮಾಡುವಾಗ, ವಿಶೇಷ ಕಾಲ/ದಿನಗಳಲ್ಲಿ ಪರೋಕ್ಷ ವಿನಯ, ಪ್ರಾಯಶ್ಚಿತ್ತಕ್ಕಾಗಿ, ಹರಕೆ ತೀರಿಸಲು, ಪುಣ್ಯ ಸಂಪಾದಿಸುವ ಉದ್ದೇಶ** ಇನ್ನೂ ಮುಂತಾದ ಕಾರಣಗಳಿಗೋಸ್ಕರ ಅಗ್ರಹಾರಗಳನ್ನು



ಚಿತ್ರ ಕೃಪೆ : Wikimedia Commons
(https://commons.wikimedia.org/wiki/File:Bhaskararajapuram_agraharam.jpg)



[ಭಾರತದಲ್ಲಿ ಅಗ್ರಹಾರ /ಮಂಗಳಮ್ ಹೆಸರಿನಲ್ಲಿ ಹೊಂದಿರುವ ಗ್ರಾಮಗಳು]

ನಿರ್ಮಿಸಲಾಗುತ್ತಿತ್ತು. ಭಾರತದಲ್ಲಿ **ಪ್ರಪ್ರಥಮ ಬಾರಿಗೆ ಗುಪ್ತರ ಕಾಲದಲ್ಲಿ ಅಗ್ರಹಾರಗಳನ್ನು ಸ್ಥಾಪಿಸುವ ಪರಿಪಾಠ ಆರಂಭವಾಯಿತು. ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಸಾ.ಶ.4ನೇ ಶತಮಾನದಲ್ಲಿ ತಾಳಗುಂದದಲ್ಲಿ ಒಂದು ಅಗ್ರಹಾರವನ್ನು ನಿರ್ಮಾಣ ಮಾಡಿದ್ದರ ಬಗ್ಗೆ ಆಧಾರಗಳು ಸಿಗುತ್ತವೆ**. ನಂತರದ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ವಿವಿಧ ರಾಜಮನೆತನಗಳು ಅಗ್ರಹಾರಗಳನ್ನು ನಿರ್ಮಿಸುವ, ಇವುಗಳಿಗೆ ದಾನ ನೀಡುವ ಕಾರ್ಯವನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ.

ಅಗ್ರಹಾರಗಳು ಕೇವಲ ಬ್ರಾಹ್ಮಣರ ವಾಸಸ್ಥಳಗಳಾಗಿರದೇ, **ವಿದ್ಯಾದಾನ ಮಾಡುವ ಪಾಠಶಾಲೆ/ವಿದ್ಯಾಕೇಂದ್ರಗಳೂ ಆಗಿದ್ದವು**. ಆದ್ದರಿಂದ ಈ ಅಗ್ರಹಾರಗಳಿಗೆ ಹೆಚ್ಚಿನ ಅನುದಾನ, ಭೂಮಿ ಹಾಗೂ ವಿಶೇಷ ಸವಲತ್ತುಗಳನ್ನು ನೀಡಲಾಗುತ್ತಿತ್ತು. ಮುಖ್ಯವಾಗಿ ಅಗ್ರಹಾರಗಳಿಗೆ ನೀಡಿದ ಭೂಮಿಯು ಅಲ್ಲಿನ ಬ್ರಾಹ್ಮಣರಿಗೆ ಸಲ್ಲಿಕೆಯಾಗುತ್ತಿತ್ತು ಹಾಗೂ ಈ ಭೂಮಿ ಮತ್ತು ಇಲ್ಲಿ ಬೆಳೆದ ಬೆಳೆಗಳು ತೆರಿಗೆ ಮುಕ್ತವಾಗಿದ್ದವು. ಅಗ್ರಹಾರದ ಜನರಿಗೆ ಭೂಮಿಯನ್ನು ನೀಡಿದರೂ ಸಹ ಇವರು ವ್ಯವಸಾಯ ಚಟುವಟಿಕೆಗಳಿಗಿಂತ ಹೆಚ್ಚಾಗಿ ಜ್ಞಾನಾರ್ಜನೆ ಮತ್ತು ವಿದ್ಯಾದಾನಕ್ಕೆ ತಮ್ಮ ಸಮಯವನ್ನು ಮೀಸಲಾಗಿಡುತ್ತಿದ್ದರು. ಆದ್ದರಿಂದ **ಈ ಭೂಮಿಯಲ್ಲಿ ಇತರೆ ವರ್ಗದ ಒಕ್ಕಲುತನ ಮಾಡುವ ಜನರು ಕೂಲಿ ಹಾಗೂ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದರು**.

ದಾನ ದಾನಗಳಲ್ಲೇ ವಿದ್ಯಾದಾನ ಎಂಬುದು ಬಹಳ ಶ್ರೇಷ್ಠದಾನ ಎನ್ನುವ ಮಾತುಗಳು ನಮ್ಮ ಪರಂಪರೆಯಲ್ಲಿ ಕೇಳಿಬರುತ್ತವೆ. ಇಂತಹ **ವಿದ್ಯಾದಾನ ಮಾಡುವ ಅತ್ಯಮೂಲ್ಯ** ಕೆಲಸವನ್ನು ಈ ಅಗ್ರಹಾರಗಳು ಮಾಡುತ್ತಿದ್ದವು. ಅಗ್ರಹಾರಗಳ ಸ್ಥಾಪನೆಯ ಮೂಲ ಉದ್ದೇಶವೂ ಕೂಡ ಇದೇ ಆಗಿರುತ್ತಿತ್ತು. ಸಾಮಾನ್ಯವಾಗಿ ಅಗ್ರಹಾರಗಳಲ್ಲಿ **ವೇದಗಳು, ಪುರಾಣಗಳು, ಸ್ಮೃತಿಗಳು, ಉಪನಿಷತ್ತುಗಳು, ಶಾಸ್ತ್ರಗಳು, ಇತಿಹಾಸ , ತರ್ಕ, ನಾಟಕ, ದರ್ಶನಗಳು, ಸಂಗೀತ, ಸಾಹಿತ್ಯ, ಕಾವ್ಯ, ಮೀಮಾಂಸೆ, ಭಾಷೆ, ಛಂದಸ್ಸು, ವ್ಯಾಕರಣ ಮತ್ತು ಖಗೋಳಶಾಸ್ತ್ರ** ಇನ್ನೂ ಮುಂತಾದ ಹಲವಾರು ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಆದರೆ **ಈ ಎಲ್ಲಾ ವಿಷಯಗಳನ್ನು ಎಲ್ಲಾ ಅಗ್ರಹಾರಗಳಲ್ಲಿಯೂ ಬೋಧಿಸುತ್ತಿರಲಿಲ್ಲ**. ಆದರೆ ಕೆಲವು ಅಗ್ರಹಾರಗಳು ಕೆಲವೊಂದು ವಿಷಯಗಳಿಗೆ ಪ್ರಸಿದ್ಧವಾಗಿದ್ದವು. ಉದಾಹರಣೆಗೆ ಗದಗ ಜಿಲ್ಲೆಯ **ಲಕ್ಕುಂಡಿ (ಲೋಕಿಗುಂಡಿ) ಒಂದು ಪ್ರಾಚೀನ ಅಗ್ರಹಾರವಾಗಿದ್ದು, ಇಲ್ಲಿ ಪ್ರಭಾಕರ ಮೀಮಾಂಸ ಶಾಲೆಯು ಒಂದು ಪ್ರಮುಖ ವಿಷಯವಾಗಿತ್ತು**. ಅಗ್ರಹಾರಗಳಲ್ಲಿ ಬೋಧಿಸುತ್ತಿದ್ದ ಶಿಕ್ಷಕರುಗಳನ್ನು **ಉಪಾಧ್ಯಾಯ, ಓಜ, ಅಕ್ಕರಿಗ, ಭಟ್ಟ, ಭಟ್ಟೋಪಧ್ಯಾಯ, ಶಾಸ್ತ್ರಿ, ಪಂಡಿತ, ಆಚಾರ್ಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು**. ಹಾಗೂ ಈ ಶಿಕ್ಷಕರಿಗೆ ಕೆಲವು ಸಂದರ್ಭಗಳಲ್ಲಿ ನೇರವಾಗಿ ದಾನವನ್ನು ಕೊಡಲಾಗುತ್ತಿದ್ದು, ಇದನ್ನು **ಭಟ್ಟವೃತ್ತಿ** ಎಂದು ಕರೆಯಲಾಗುತ್ತಿತ್ತು. ಮೊದಲೇ ಹೇಳಿದಂತೆ ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿದ್ದರಿಂದ **ಇಲ್ಲಿ ಗ್ರಂಥಾಲಯಗಳು ಇರುತ್ತಿದ್ದು, ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳುವವರನ್ನು ಸರಸ್ವತಿ ಭಂಡಾರಿಗ** ಎಂದು ಕರೆಯುತ್ತಿದ್ದರು.


ಈ ಅಗ್ರಹಾರಗಳಲ್ಲಿನ ವಿದ್ಯಾರ್ಥಿಗಳನ್ನು ಚಾತ್ರರು ಎಂದು ಕರೆಯಲಾಗುತ್ತಿದ್ದು, ಈ ಚಾತ್ರರಲ್ಲಿ **ದೇಶಿಗ ಚಾತ್ರರು ಮತ್ತು ಪ್ರವಾಸಿಗ ಚಾತ್ರರು** ಎಂಬ ವಿಧಗಳಿದ್ದವು. ದೇಶಿಗ ಚಾತ್ರರು ಅಂದರೆ ಅಗ್ರಹಾರ ಮತ್ತು ಇದರ ಸುತ್ತಮುತ್ತಲಿನ ಪ್ರದೇಶದವರು. ಪ್ರವಾಸಿಗ ಚಾತ್ರರು ಅಂದರೆ ಹೊರ ರಾಜ್ಯದವರು. ಇತ್ತೀಚಿನ ಶಿಕ್ಷಣ ಕ್ರಮದಲ್ಲಿ ನಾವು ಹೇಗೆ ತರಗತಿಗಳು ಎಂದು ಕರೆಯುತ್ತೇವೋ, ಹಾಗೆಯೇ ಅಗ್ರಹಾರಗಳಲ್ಲಿ ತರಗತಿಗಳಿಗೆ **ಖಂಡಿಕ** ಎಂದು ಕರೆಯಲಾಗುತ್ತಿತ್ತು.


ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದು, ವಿಶೇಷ ಸವಲತ್ತುಗಳನ್ನು ಪಡೆದಿದ್ದವು ಎಂದು ನಿಸ್ಸಂದೇಹವಾಗಿ ಹೇಳಬಹುದು. ಈ ದೃಷ್ಟಿಯಲ್ಲಿ ನೋಡಿದರೆ ಜಕ್ಕೂರಿನ ಬಳಿಯ ಅಗ್ರಹಾರವು ಸಹ ಮೇಲೆ ಚರ್ಚಿಸಿದ ಕೆಲವು ವಿಶಿಷ್ಟತೆಯನ್ನು ಹೊಂದಿ, ಒಂದು ಐತಿಹಾಸಿಕ ಮಾನ್ಯತೆಯನ್ನು ಪಡೆದಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

ಭಾರತದಾದ್ಯಂತ ಸಾವಿರಾರು ಅಗ್ರಹಾರಗಳಿದ್ದು, ಕರ್ನಾಟಕದಲ್ಲಿಯೂ ನೂರಾರು ಅಗ್ರಹಾರಗಳು ಕಂಡುಬರುತ್ತವೆ. ಬೆಂಗಳೂರು ವ್ಯಾಪ್ತಿಯಲ್ಲೇ ಸುಮಾರು ಎಂಬತ್ತಕ್ಕೂ ಹೆಚ್ಚು ಅಗ್ರಹಾರಗಳು ಇರುವುದನ್ನು ನಾವು ಕಾಣಬಹುದಾಗಿದೆ. ಇಂದಿನ **ಹೆಸರಘಟ್ಟ, ದೊಡ್ಡಬೊಮ್ಮಸಂದ್ರ, ಕಲಿಯೂರು, ತುರುಹಳ್ಳಿ, ಭಟ್ರಹಳ್ಳಿ, ಕೆಂಪವೀರಸಾಗರ, ಕಂಚಿಗನಾಳು, ಜಾಲಿಗೆ, ಬೇಗೂರು, ಅರಳಾಳು, ಮಳೂರು, ಗೊಂಗಡಿಪುರ** ಇನ್ನೂ ಮುಂತಾದವು **ಬೆಂಗಳೂರು ಪ್ರದೇಶದಲ್ಲಿ ಕಂಡುಬರುವ ಶಾಸನೋಕ್ತ ಅಗ್ರಹಾರಗಳಾಗಿವೆ.**

(ಈ ಅಂಶಗಳನ್ನು ಕೆಳಗೆ ಹೆಸರಿಸಿರುವ ಗ್ರಂಥಗಳ ಆಧಾರಿತವಾಗಿ ವಿವರಿಸಲಾಗಿದೆ - 1) Leela Shantakumari, **History of the Agrahara, Karnataka 400-1300.** 2) K Syamalamma , **History of the Agraharas in Andhra Desa (From the Earliest to 1500 AD))**


ಕರ್ನಾಟಕ ಸರ್ಕಾರ
ನಮ್ಮೂರ ಸರ್ಕಾರಿ ಕಿರಿ
ಪ್ರಾಥಮಿಕ ಪಾಠಶಾಲೆ
ಲಯ - 4, ಬೆಂಗಳೂರು ನಗರ ಜಿಲ್ಲೆ - 560064.
ಜಕ್ಕೂರು (ಅಂಚೆ), ಬೆಂಗಳೂರು
MONDAY
TUESDAY
WEDNESDAY
THURSDAY
FRIDAY
SATURDAY





Observations:


1. The highlighted part is the outline of old settlement (Agrahara). The settlement has grown beyond its boundaries, but the old settlement pattern is strikingly different from its surrounding counterpart. From the road pattern of the old settlement, it can be inferred that the form of the of the settlement has taken inspiration form "Karmuka" or "Padmaka" type of settlement from "Vedic Town Planning System".
2. One of the basic idea of formation of agrahara is a have close knit community. The arrangement of dwelling units, cul-de-sacs and the road pattern (which are few typical town planning features in most of the Agraharas) in the Agrahara emphasize on "introvert nature" and "Close-knit nature" of the settlement.
3. With the visual interpretation of the settlement patterns around the "Agrahara", it can inferred that these settlements still carry spirit of the "Close-knit community" in its form by having many Cul-de-sacs

Pappu Harcharan,
Assitant Professor,
RV College of Architecture, Bangalore


ಗೂಗಲ್ ನಕ್ಷೆಯ ಆಧಾರವಾಗಿ ಬಿಡಿಸಿರುವ ಅಗ್ರಹಾರದ ರೇಖಾಚಿತ್ರ

ಕೆರೆಗಳು

ಪ್ರತಿಯೊಂದು ಜೀವರಾಶಿಯು ಜೀವಿಸಲು ಅವಶ್ಯಕವಾಗಿ ಬೇಕಾಗಿರುವ ಅಗತ್ಯತೆಗಳಲ್ಲಿ ನೀರು ಅತ್ಯಂತ ಪ್ರಮುಖವಾದುದು. ಯಾವೊಂದು ಜೀವಿಯೂ ಸಹ ನೀರಿಲ್ಲದೇ ಬದುಕುವುದನ್ನು ಊಹಿಸಲು ಸಾಧ್ಯವಿಲ್ಲ. ಇಂತಹ ಅತೀ ಮುಖ್ಯವಾದ ನೀರಿನ ಮೂಲಗಳಾಗಿ ಸಾಗರ, ಸಮುದ್ರ, ನದಿ, ಜಲಾಶಯ, ಕೆರೆ, ತೊರೆ ಮತ್ತು ಹಳ್ಳ ಇನ್ನೂ ಮುಂತಾದವು ಕಂಡುಬರುತ್ತವೆ. ಈ ನೀರಿನ ಮೂಲಗಳಲ್ಲಿ ಸಾಗರ ಸಮುದ್ರಗಳು ದೊಡ್ಡ ದೊಡ್ಡ ಜಲಚರಗಳು ಹಾಗೂ ಇನ್ನಿತರ ಜಲಚರ (ನೀರಿನಲ್ಲಿ ವಾಸಿಸುವ ಜೀವಿಗಳು) ಜೀವಿಗಳಿಗೆ ಪ್ರಮುಖವಾಗಿ ಆಧಾರವಾಗಿರುತ್ತವೆಯಾದರೂ ಎಲ್ಲಾ ತರಹದ ಜೀವಿಗಳಿಗೆ ಇವು ಆಶ್ರಯತಾಣಗಳಾಗಲು ಸಾಧ್ಯವಿಲ್ಲ. ಸಾಗರ ಸಮುದ್ರಗಳ ನಂತರ ನದಿಗಳು ಬಹಳ ಪ್ರಮುಖವಾದ ನೀರಿನ ಮೂಲಗಳಾಗಿದ್ದು, ಮಾನವನ ನಾಗರೀಕತೆಯ ಉಗಮ ಮತ್ತು ವಿಕಾಸದಲ್ಲಿ ಇವುಗಳ ಪಾತ್ರ ಮಹತ್ವಪೂರ್ಣವಾದುದು. ಮನುಷ್ಯ ಅಲೆಮಾರಿಯಾಗಿದ್ದಾಗ, ಆ ಅಲೆಮಾರಿ ಜೀವನದಿಂದ ಹೊರಬಂದು, ಒಂದು ಕಡೆ ನೆಲೆನಿಂತು ಕೃಷಿ ಜೀವನವನ್ನು ಪ್ರಾರಂಭಿಸಲು ಈ ನದಿಗಳೇ ಪ್ರಮುಖ ಆಧಾರ. ಮನುಷ್ಯನೂ ಸೇರಿದಂತೆ ಯಾವುದೇ ಜೀವಸಂಕುಲ ಪ್ರತೀ ಬಾರಿ ನೀರನ್ನು ಹುಡುಕಿಕೊಂಡು ಹೋಗುವ ಬದಲು ಸುಲಭವಾಗಿ ನೀರು ದೊರೆಯುವ ಸ್ಥಳದಲ್ಲಿಯೇ ಜೀವಿಸುತ್ತವೆ. ಅಂತಹ ಪ್ರದೇಶಗಳಲ್ಲಿ ನದಿ ತಪ್ಪಲುಗಳು ಪ್ರಮುಖವಾದವು. ಆದರೆ ಕೆಲವೊಮ್ಮೆ ಈ ನದಿಗಳು ಅತಿಯಾದ ಪ್ರವಾಹವನ್ನು ಸೃಷ್ಟಿ ಮಾಡಿ ಈತನಿಗೆ ಸಾಕಷ್ಟು ನಷ್ಟವನ್ನು ಉಂಟುಮಾಡುತ್ತಿದ್ದವು. ಇದರಿಂದ ಮಾನವನು ನದಿ ಪಾತ್ರಗಳಿಂದ ಹಂತ ಹಂತವಾಗಿ ಬೇರೆಡೆ ಸಾಗುವ ಮೂಲಕ ಜೀವನವನ್ನು ಕಟ್ಟಿಕೊಳ್ಳುವ ಕೆಲಸವನ್ನು ಮಾಡುತ್ತಾ ಬರುತ್ತಾನೆ. ಈ ರೀತಿ ನದಿ ತಪ್ಪಲಿನಿಂದ ಬೇರೆಡೆ ನೆಲೆ ನಿಂತಾಗ ಕೃಷಿ ಮತ್ತು ತನ್ನ ದೈನಂದಿನ ಚಟುವಟಿಕೆಗಳಿಗೆ ನೀರಿನ ಮೂಲವಾಗಿ ನಿರ್ಮಾಣ ಮಾಡಿಕೊಂಡ ವ್ಯವಸ್ಥೆಯೇ ಕೆರೆಗಳು. ಹಳ್ಳಿಗಾಡಿನ ಅಥವಾ ಗ್ರಾಮೀಣ ವ್ಯವಸ್ಥೆಯಲ್ಲಿ ಕೆರೆಗಳು ಅಲ್ಲಿನ ಜನರ ಜೀವನಾಡಿಯಾಗಿದ್ದು, ಇವರ ಬಹುಪಾಲು ಜೀವನ ಈ ಕೆರೆಗಳ ಮೇಲೆ ಅವಲಂಭಿತವಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಆದರೆ ಈ ಕೆರೆಗಳ ನಿರ್ಮಾಣವನ್ನು ಹೇಗೆಂದರೆ ಹಾಗೇ ಮಾಡುತ್ತಿರಲಿಲ್ಲ. ಗ್ರಾಮಗಳಿಗೆ ಸಮೀಪದಲ್ಲಿಯೇ ಉಪಯುಕ್ತವಾದ



ಚಿತ್ರ ಕೃಪೆ : Raj Bhagat (Twitter @rajbhagat)



CITY OF LAKES
BENGALURU

ಚಿತ್ರ ಕೃಪೆ : Sensing Local, Bengaluru

ಪ್ರದೇಶದಲ್ಲಿ ಮಳೆಯ ನೀರು ಹರಿದುಬರುವ ಪ್ರದೇಶದಲ್ಲಿ ಇಳಿಜಾರಿಗೆ ಅಡ್ಡಲಾಗಿ ಏರಿ ಅಥವಾ ಒಡ್ಡುಗಳನ್ನು ನಿರ್ಮಾಣ ಮಾಡಿ ನೀರನ್ನು ಸಂಗ್ರಹಿಸುತ್ತಿದ್ದರು. ಈ ಕೆರೆಯ ತಪ್ಪಲು ಅಥವಾ ತಳ ಭಾಗದಲ್ಲಿ ವ್ಯವಸಾಯ ಭೂಮಿಗಳಿದ್ದು, ಈ ಭೂಮಿಗಳಿಗೆ ತೂಬುಗಳ ಮೂಲಕ ನೀರನ್ನು ಹರಿಸಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದರು. ಈ ಕೆರೆಗಳು ವ್ಯವಸಾಯ ಚಟುವಟಿಕೆಗಳಿಗೆ ಮಾತ್ರವಲ್ಲದೇ ಕುಡಿಯುವ ನೀರು, ನಿತ್ಯ ಕರ್ಮಗಳಿಗೆ, ಪಶು-ಪಕ್ಷಿಗಳಿಗೆ, ಜಲಚರಗಳಿಗೆ, ಕೆಲವೊಂದು ತೆರೆದ ಮತ್ತು ಕೊಳವೆ ಬಾವಿಗಳಿಗೆ ಅಂತರ್ಜಲದ ಮೂಲವಾಗಿದ್ದವು.

ಇಂದು **ಬೆಂಗಳೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಕೆರೆಗಳು ನೆನ್ನೆ ಮೊನ್ನೆ ನಿರ್ಮಾಣ ಮಾಡಿರುವಂತಹವಲ್ಲ. ಇವು ಸಾವಿರಾರು ವರ್ಷಗಳಷ್ಟು ಪ್ರಾಚೀನವಾದವುಗಳಾಗಿದ್ದು, ಹತ್ತಾರು ತಲೆಮಾರುಗಳ ಜನರು ಈ ಕೆರೆಗಳಿಂದ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡಿರುತ್ತಾರೆ.** ಹಾಗೂ ಇಂದಿಗೂ ಸಹ ಇವು ಸಾವಿರಾರು ಪ್ರಾಣಿ-ಪಕ್ಷಿಗಳಿಗೆ ಜೀವ ಸೆಲೆಯಾಗಿವೆ. ಆದರೆ ಬೆಂಗಳೂರು ಪ್ರದೇಶದಲ್ಲಿ ತೀವ್ರ ನಗರೀಕರಣದ ಪ್ರಭಾವದಿಂದಾಗಿ ಹಲವಾರು ಕೆರೆಗಳು ವಸತಿ ನಿವೇಶನ, ಬಸ್ ನಿಲ್ದಾಣ, ವಾಣಿಜ್ಯ ಸಂಕೀರ್ಣಗಳಾಗಿ ಮಾರ್ಪಟ್ಟಿವೆ. ಉಳಿದಿರುವ ಕೆರೆಗಳು ನಿರ್ವಹಣೆಯಿಲ್ಲದೆ ಕೊಳಚೆ ನೀರಿನಿಂದ ತುಂಬಿ ದುರ್ನಾತದೊಂದಿಗೆ, ಹಲವಾರು ಸಾಂಕ್ರಾಮಿಕ ಕಾಯಿಲೆಗಳಿಗೆ ತಾಣವಾಗಿರುವುದರ ಜೊತೆಗೆ ಜೀವ-ವೈವಿಧ್ಯತೆಯನ್ನು ಕಳೆದುಕೊಂಡಿವೆ. ಉಳಿದ ಜೀರ್ಣೋದ್ಧಾರವಾಗಿರುವ ಕೆರೆಗಳನ್ನು ಗ್ರಾಮ ಪಂಚಾಯಿತಿ ಕಡೆಯಿಂದ 90ರ ದಶಕದಲ್ಲಿ ಬಿ.ಡಿ.ಎ ವಶಪಡಿಸಿಕೊಂಡು ಅಭಿವೃದ್ಧಿ ಪಡಿಸಿದೆ. ನಂತರ ಈ ಕೆರೆಗಳು ಬಿಬಿಎಂಪಿ ಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು, **ಇಂದು ಇವುಗಳು ಕೆರೆಗಳಾಗಿ ಕಾಣುವ ಬದಲು ಪಾರ್ಕ್ ಗಳಾಗಿ ಮಾರ್ಪಾಡಾಗುತ್ತಿವೆ. ಬೆಳಿಗ್ಗೆ ಮತ್ತು ಸಂಜೆ ಕೇವಲ ವಾಕಿಂಗ್ ಟ್ರಾಕ್ ಗಳಾಗಿರುವ ಈ ಕೆರೆ ಪ್ರದೇಶಗಳು, ಬೇರೆ ಸಮಯದಲ್ಲಿ ಸುತ್ತಲೂ ತಂತಿ ಬೇಲಿ ಮತ್ತು ಕಬ್ಬಿಣದ ಗೇಟ್ ಗಳಿಂದ ಮುಚ್ಚಲ್ಪಟ್ಟಿರುತ್ತವೆ**. ಪ್ರಾಚೀನ ಕಾಲದಲ್ಲಿ ಗ್ರಾಮದ ಸಾರ್ವಜನಿಕರ ಉಪಯೋಗಕ್ಕಿದ್ದ ಈ ಕೆರೆಗಳು, ಇಂದು ಕುಂಟು ನೆಪಗಳ ಕಾರಣಗಳಿಂದ ಸಾರ್ವಜನಿಕರ ವೀಕ್ಷಣೆಗೂ ಅವಕಾಶ ಸಿಗದಂತೆ ನಿರ್ಬಂಧಿಸಲ್ಪಟ್ಟಿವೆ. ಇನ್ನು ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಸಮಯದಲ್ಲಿ ಕೆರೆ ಅಂಗಳದಲ್ಲಿನ (ಒಳ ಪ್ರದೇಶ) ತಗ್ಗು, ದಿಣ್ಣೆಗಳನ್ನು ಸಮ ಮಾಡುವುದರಿಂದ ಹಲವಾರು ಮೀನು/ಜಲಚರ ಪ್ರಭೇದಗಳು ಕಣ್ಮರೆಯಾಗುತ್ತಿವೆ. ಏಕೆಂದರೆ ನೀರಿನ ಆಳಕ್ಕೆ ಅನುಗುಣವಾಗಿ ವಿವಿಧ ಸ್ಥರಗಳಲ್ಲಿ ವಿವಿಧ ರೀತಿಯ ಜಲಚರಗಳು ವಾಸಿಸುತ್ತಿರುತ್ತವೆ. ಆದರೆ ಕೆರೆ ಅಂಗಳವನ್ನು ಸಮತಟ್ಟು ಮಾಡುವುದರಿಂದ, ಈ ತಳ ಸ್ಥರದ ಜೀವಿಗಳು ಅನಿವಾರ್ಯವಾಗಿ ಮೇಲೆ ಬಂದಾಗ ವಾತಾವರಣದ ಬದಲಾವಣೆ ಮತ್ತು ಮೇಲ್ ಸ್ಥರದ ಜೀವಿಗಳಿಗೆ ಆಹಾರವಾಗುವುದರಿಂದ ಈ ಜಲಚರಗಳು ನಾಶವಾಗುತ್ತವೆ. ಹಾಗೂ ಬೇರೆ ಬೇರೆ ತಳಿಯ ಮೀನುಗಳನ್ನು ಸಾಕಾಣಿಕೆ ಮಾಡಲು ಬಿಡುವುದರಿಂದ ಹಲವಾರು ಸಣ್ಣ ಸಣ್ಣ ಪ್ರಭೇದಗಳು ನಾಶವಾಗುತ್ತವೆ. ಜೊತೆಗೆ ಈ ಜಲಚರಗಳನ್ನೇ ಪ್ರಮುಖ ಆಹಾರವನ್ನಾಗಿ ಅವಲಂಭಿಸಿರುವ ಹಲವಾರು ಪಕ್ಷಿ ಸಂಕುಲಗಳು ಸಹ ಕಣ್ಮರೆಯಾಗುತ್ತವೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ.

ಈ ಸಂಚಿಕೆಯಲ್ಲಿ ಹೆಸರಿಸಲ್ಪಟ್ಟಿರುವ **ಜಕ್ಕೂರು (ಸಾ.ಶ.1342), ಅಗ್ರಹಾರ (ಸಾ.ಶ.1350), ದಾಸರಹಳ್ಳಿ (ಸಾ.ಶ.1532), ಅಲ್ಲಾಳಸಂದ್ರದ (ಸಾ.ಶ.1544) ಶಾಸನಗಳಲ್ಲಿ ಗದ್ದೆ-ಬೆದ್ದಲು, ಪೆರಿಯ ಏರಿ** ಎಂಬ ಪದಗಳ ಉಲ್ಲೇಖವಿರುವುದರಿಂದ ಈ ಪ್ರದೇಶದಲ್ಲಿನ ಕೆರೆಗಳು ಸುಮಾರು ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿದ್ದು, ಈ ಕೆರೆಗಳ ಬಗ್ಗೆ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಜಕ್ಕೂರು ಕೆರೆ

ಜಕ್ಕೂರಿನ ಇಂದಿನ ಕೆರೆಯು ಜಕ್ಕೂರಿನ ಬಡಾವಣೆಯಷ್ಟೇ ಪ್ರಾಚೀನವಾದ ಕೆರೆಯಾಗಿದ್ದು, **ಪ್ರಸ್ತುತ 170 ಎಕರೆ ವಿಸ್ತೀರ್ಣವನ್ನು ಹೊಂದಿದೆ**. ಹಾಗೂ ಬೆಂಗಳೂರಿನಲ್ಲಿ ಕಂಡುಬರುವ ದೊಡ್ಡ ಕೆರೆಗಳಲ್ಲಿ ಇದೂ ಸಹ ಒಂದು ಎಂಬುದು ಗಮನಾರ್ಹ. ಈ ಕೆರೆಯ ನೀರಿನ ಆಶ್ರಯದಿಂದಲೇ ಗದ್ದೆಗಳಲ್ಲಿ ವ್ಯವಸಾಯ ಮಾಡಲಾಗುತ್ತಿತ್ತು ಎಂಬುದನ್ನು ಇಲ್ಲಿ ದೊರೆತಿರುವ ಶಾಸನದಲ್ಲಿ ಗದ್ದೆಯ ಉಲ್ಲೇಖ ಮಾಡಿರುವುದರಿಂದ ತಿಳಿಯುತ್ತದೆ. ಜಕ್ಕೂರು ಸಮೀಪದ ಅಗ್ರಹಾರದ **ಸಾ.ಶ.1350 ರ ತಮಿಳು ಶಾಸನವು ಪೆರಿಯ ಏರಿ** ಎಂದು ಉಲ್ಲೇಖಿಸಿರುವುದನ್ನು ಗಮನಿಸಿದಾಗ, ಅಗ್ರಹಾರದ ಸುತ್ತಮುತ್ತಲಿನ ಪ್ರದೇಶದ ಕೆರೆಗಳನ್ನು ಅವಲೋಕಿಸಿದಾಗ ಜಕ್ಕೂರಿನ ಕೆರೆಯೇ ಹೆಚ್ಚು ವಿಶಾಲವಾಗಿ ಕಂಡು ಬರುತ್ತದೆ. ಆದ್ದರಿಂದ **ಅಗ್ರಹಾರ ಶಾಸನದಲ್ಲಿ ಪೆರಿಯ ಏರಿ (ದೊಡ್ಡ ಏರಿ) ಎಂದು ಅನ್ವರ್ಥಕವಾಗಿ, ಜಕ್ಕೂರಿನ ಕೆರೆಯ ಕುರಿತಾಗಿಯೇ ಕರೆಯಲಾಗಿದೆ ಎಂದು ತಿಳಿಯುತ್ತದೆ**. ಜಕ್ಕೂರು ಕೆರೆಯು ಇಲ್ಲಿನ ರೈತರ ಭೂಮಿಗಳಿಗೆ, ಬಾವಿಗಳಿಗೆ, ಪ್ರಾಣಿಗಳಿಗೆ, ಬಟ್ಟೆಗಳನ್ನು ತೊಳೆಯುವ ಧೋಬಿಗಳಿಗೆ ಮತ್ತು ಮೀನುಗಾರರಿಗೆ ಪ್ರಮುಖ ಆಧಾರವಾಗಿತ್ತು. **ಬೇಸಿಗೆ ಕಾಲದಲ್ಲಿ ಕೆರೆಯ ನೀರು ಬತ್ತಿದಾಗ, ಈ ಕೆರೆಯ ಮಣ್ಣು (ಹೂಳು) ಫಲವತ್ತಾದುದರಿಂದ ರೈತರು ತಮ್ಮ ಭೂಮಿಗಳಿಗೆ**

ಜಕ್ಕೂರು ಸಂಪಿಗೆಹಳ್ಳಿ ಕೆರೆ
JAKKUR SAMPIGEHALLI LAKE

JALA POSHAN

SATYA FOUNDATION



ಪ್ರಮುಖ ಅಂಶಗಳು
KEY

- ಆಗ್ನೇಯ ದಿಕ್ಕಿನಿಂದ ಪ್ರವೇಶ — South Eastern Entrance
- ಆಗ್ನೇಯ ಹೊರಹರಿವು — South Eastern Outlet
- ಭದ್ರತಾ ಕಚೇರಿ — Security
- ಮಕ್ಕಳ ವಲಯ — Children's Zone
- ಪೂರ್ವದ ಒಳಹರಿವು — Eastern Inlet
- ಆಂಫಿಥಿಯೇಟರ್ — Amphitheatre
- ಮೀನುಗಾರರ ಕಟ್ಟೆ — Fisherman's Dock
- ಸಮುದಾಯ ತೋಟ — Community Garden
- ಉತ್ತರದಿಕ್ಕಿನ ಒಳಹರಿವು — Northern Inlet
- ಸಂಸ್ಕರಣ ಘಟಕದ ಹೊರಹರಿವು — STP Outlet
- ಕೊಳಚೆ ನೀರು ಸಂಸ್ಕರಣ ಘಟಕ — Sewage Treatment Plant
- ಚಿಟ್ಟೆ ಉದ್ಯಾನ — Butterfly Garden
- ಶೌಚಾಲಯ — Toilet
- ಹೊರಾಂಗಣ ಕಲಿಕಾ ಕೇಂದ್ರ — Outdoor Learning Centre
- ಕಾಂಪೋಸ್ಟ್ ಕೇಂದ್ರ — Compost Centre
- ನಿಗಾ ಘಟಕ — Observation Deck
- ಕಲ್ಯಾಣಿ — Kalyani
- ಪಶ್ಚಿಮ ದಿಕ್ಕಿನಿಂದ ಪ್ರವೇಶ — Western Entrance
- ಪಶ್ಚಿಮದ ಒಳಹರಿವು — Western Inlet
- ನೈರುತ್ಯ ಹೊರಹರಿವು — South Western Outlet
- ಆದ್ರ್ಯಭೂಮಿ — Wetland
- ಆದ್ರ್ಯಭೂಮಿ ವಿಭಾಜಕ — Wetland Divider
- ಮಧ್ಯ ದ್ವೀಪ — Central Island
- ಜೋಡಿ ದ್ವೀಪ — Twin Islands
- ರೈಲು ಮಾರ್ಗ — Railway Line
- ಜಕ್ಕೂರು ಮುಖ್ಯ ರಸ್ತೆ — Jakkur Main Road
- ಸಂರಕ್ಷಣಾ ವಲಯ — Conservation Zone
- ಸಮುದಾಯ ವಲಯ — Community Zone

ಆಡಳಿತ ಪ್ರಾಧಿಕಾರ: ಬಿಬಿಎಂಪಿ

Governing authority : BBMP

ಪುನಶ್ಚೇತನಗೊಂಡಿದ್ದು: 2008-2015 ಬಿಡಿಎ ರವರಿಂದ

Rejuvenated : 2008 - 2015 by BDA

ನಿರ್ವಹಣೆ: ಸತ್ಯ ಪ್ರತಿಷ್ಠಾನ ಆರಂಭಿಸಿರುವ ನಾಗರೀಕರ ಗುಂಪು - ಜಲಪೋಷಣ

Maintained by : Citizen Group Jalaposhan initiated by Satya Foundation

ಕೆರೆಯ ವಿಸ್ತೀರ್ಣ: 164 ಎಕರೆ 7 ಗುಂಟಾ*

Area of the lake : 164 acres 7 guntas*

ನಿರ್ಮಿತ ಆದ್ರ್ಯಭೂಮಿ: 7 ಎಕರೆಗಳು*

Constructed wetland : 7 acres*

ಸುತ್ತಳತೆ: 5.4 ಕಿ.ಮೀ*

Perimeter : 5.4 kms*

ಕಾಲುದಾರಿಯ ದೂರ: 4.5 ಕಿ.ಮೀ–

Walking path Distance : 4.5 kms–

ಕೆರೆ ನೀರಿನ ವಿಸ್ತೀರ್ಣ: 139 ಎಕರೆಗಳು*

Water spread area : 139 acres*

ಕೆರೆಯ ಸಂಪುಟ: 697 ಎಂಎಲ್*

Volume of lake : 697 ML*

ಕೆರೆಯ ಸರಾಸರಿ ಆಳ: 3.00 ಮೀ*

Average Depth of the lake : 3.00 meters*

ಕೆರೆ ಸರಣಿ: ಯೆಲ್ಲಮಲ್ಲಪ್ಪ ಶೆಟ್ಟಿ ಕೆರೆ ಸರಣಿಯ ಭಾಗವಾಗಿ ದಕ್ಷಿಣ ಪಿನಾಕಿನಿ ನದಿಯ ಕಡೆಗೆ ಹರಿಯುತ್ತದೆ

Lake Series : Part of Yellamallappa Shetty lake series and flows into Dakshina Pinakini river

ವೈಶಿಷ್ಟ್ಯತೆ: ಸಮಗ್ರ ನಗರ ನೀರು ನಿರ್ವಹಣೆ ವ್ಯವಸ್ಥೆ, ನಿರ್ಮಿತ ಆದ್ರ್ಯಭೂಮಿ ಮತ್ತು ಜೀವವೈವಿಧ್ಯ ಸ್ಥಳ

Key Features : Integrated Urban Water Management System, Constructed Wetland and Biodiversity Hotspot

ನಿರ್ವಹಣಾ ನಿಧಿ: ಸಮುದಾಯ ದೇಣಿಗೆ ಹಾಗು ಸಿಎಸ್ ಆರ್ ಮೂಲಕ ಜಲಪೋಷಣ ಹಣವನ್ನು ಒಟ್ಟುಗೂಡಿಸಿದೆ

Maintenance Fund : Jalaposhan has mobilized funds through Community donations and CSR

ಮಾಹಿತಿಯ ಮೂಲ
* ಬಿಡಿಎ/ಬಿಬಿಎಂಪಿ
– ಗೂಗಲ್ ಅರ್ಥ್
^ ಎಟಿಆರ್ ಇ ಇ

Source of Information :
* BDA/BBMP
– Google Earth
^ ATREE

ಸಂಪರ್ಕ ವಿವರಗಳು:
Contact Details :
Phone : +91 8296335577
e-mail : jalaposhan@gmail.com
Website : www.jalaposhan.org

ಜಲಪೋಷಣ
Jala Poshan

Citizen Lakes Dashboard

As a part of the Citizen Lakes Dashboard, this display board is designed and executed by biome atree






ಜಕ್ಕೂರು ಕೆರೆಯಲ್ಲಿ ಪಕ್ಷಿಗಳು
ಚಿತ್ರ ಕೃಪೆ: ವೆಂಕಟ್ ಮಂಗುಡಿ








ಜಕ್ಕೂರು ಕೆರೆಯಲ್ಲಿ ಪಕ್ಷಿಗಳು ಮತ್ತು ಕೀಟಗಳು
ಚಿತ್ರ ಕೃಪೆ: ವೆಂಕಟ್ ಮಂಗುಡಿ




ಹಾಕಿಸುತ್ತಿದ್ದರು. ಇದರಿಂದ ಹೆಚ್ಚಿನ ಇಳುವರಿಯೂ ಬರುತ್ತಿತ್ತು. ಆದರೆ ಇತ್ತೀಚಿನ ನಗರೀಕರಣದ ಕಾರಣದಿಂದಾಗಿ ಈ ವ್ಯವಸಾಯ ಭೂಮಿಗಳೆಲ್ಲವೂ ಇಂದು ವಸತಿ ಬಡಾವಣೆಗಳಾಗಿ ಮಾರ್ಪಾಡಾಗಿವೆ. ಹಾಗೂ ಇಂದಿಗೂ ಸಹ ಈ ಕೆರೆಯಲ್ಲಿ ಮೀನುಗಾರಿಕೆ ಚಟುವಟಿಕೆಗಳು ನಡೆಯುತ್ತಿದ್ದು, ರೋಹು, ಕಾಟ್ಲ ಮತ್ತು ಜಿಲೇಬಿ ಎಂಬ ತಳಿಯ ಮೀನುಗಳನ್ನು ಮೀನುಗಾರಿಕೆ ಇಲಾಖೆಯ ಅಧೀನದಲ್ಲಿ ಸಾಕಣೆ ಮಾಡಲಾಗುತ್ತಿದೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ಜಕ್ಕೂರಿನ ಕೆರೆಯು ಬಹು ಪ್ರಾಚೀನವಾಗಿದ್ದು ಎಷ್ಟೋ ಪೀಳಿಗೆಗೆ, ಪಶು-ಪಕ್ಷಿಗಳಿಗೆ, ಜೀವ-ಜಂತುಗಳ ಜೀವನಕ್ಕೆ ಆಸರೆಯಾಗಿತ್ತು ಎಂದು ತಿಳಿಯುತ್ತದೆ. ಹಾಗೂ ಇದೇ ಬಡಾವಣೆಯ ಇಂದಿನ ವ್ಯಕ್ತಿಗಳ ತಲೆಮಾರಿಗೆ ಹೋಲಿಸಿದರೆ **ಸುಮಾರು 15 ರಿಂದ 20 ತಲೆಮಾರುಗಳಿಗೆ (775ವರ್ಷಕ್ಕೆ) ಈ ಕೆರೆಯು ಆಸರೆ ನೀಡಿದೆ ಎಂದು ಹೇಳಬಹುದು**.

2005 ಕ್ಕೂ ಮುಂಚೆ ಈ ಕೆರೆಯು, ನಗರದ ಕೊಳಚೆ ನೀರು ಮತ್ತು ತ್ಯಾಜ್ಯದಿಂದ ಹೆಚ್ಚು ಕಲುಷಿತಗೊಂಡಿತ್ತು. ಆದ್ದರಿಂದ 2005ರಲ್ಲಿ ಈ ಕೆರೆಗೆ ಬರುತ್ತಿದ್ದ ಕೊಳಚೆ ನೀರು ಮತ್ತು ತ್ಯಾಜ್ಯವನ್ನು ಸಂಸ್ಕರಿಸುವ ಮೂಲಕ ಈ ಕೆರೆಯನ್ನು ಪುನರುಜ್ಜೀವನಗೊಳಿಸಲಾಗಿದೆ. ಸತ್ಯ ಫೌಂಡೇಷನ್ ಎಂಬ ಚಾರಿಟೇಬಲ್ ಟ್ರಸ್ಟ್ ಪ್ರಕೃತಿಯನ್ನು ಸಂರಕ್ಷಿಸುವ ದಿಸೆಯಲ್ಲಿ ಕಾರ್ಯಮಾಡುತ್ತಿದ್ದು, ಈ ಸಂಸ್ಥೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದೊಂದಿಗೆ (BDA) ಕೈ ಜೋಡಿಸಿ, ಜಲ ಪೋಷಣ್ ಎಂಬ ಅಭಿಯಾನದಡಿ ಈ ಕೆರೆಯನ್ನು ಪುನರುಜ್ಜೀವನಗೊಳಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿರುತ್ತದೆ. 2014ರ ವರೆಗೂ ಬಿಡಿಎ ಅಧೀನದಲ್ಲಿದ್ದ ಈ ಕೆರೆಯು ಪ್ರಸ್ತುತ ಬಿ.ಬಿ.ಎಂ.ಪಿ. ಯ ವ್ಯಾಪ್ತಿಯಲ್ಲಿರುತ್ತದೆ ಹಾಗೂ **2019ರಲ್ಲಿ ಈ ಕೆರೆಗೆ ಉತ್ತಮ ನಿರ್ವಹಣೆ ಪ್ರಶಸ್ತಿ ಬಂದಿರುವುದು** ನಿಜವಾಗಿಯೂ ಪ್ರಶಂಸನೀಯ[18]. ಇತ್ತೀಚೆಗೆ ಈ ಕೆರೆಯು ತುಂಬಿ ಕೋಡಿ ಬಿದ್ದಿದ್ದು, ಜನರಲ್ಲಿ ಹರ್ಷವನ್ನುಂಟು ಮಾಡಿದೆ. ಈ ಕೆರೆಯ ಪ್ರದೇಶದಲ್ಲಿ ಸುಮಾರು 209 ಬಗೆಯ ಪಕ್ಷಿ ಪ್ರಭೇದಗಳು ಕಂಡುಬರುತ್ತವೆ[19]. ಹಾಗೂ ವಿಶೇಷವಾಗಿ ಬೇರೆ ಬೇರೆ ದೇಶಗಳಿಂದಲೂ ಪಕ್ಷಿಗಳು ಈ ಕೆರೆಗೆ ವಲಸೆ ಬರುತ್ತವೆ. ಕೆಲವು ವರ್ಷಗಳ ಹಿಂದೆ ಈ ವಲಸೆ ಪಕ್ಷಿಗಳ ಸಂಖ್ಯೆ ಜಾಸ್ತಿ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಸಂಖ್ಯೆಯಲ್ಲಿ ಕುಸಿತ ಕಂಡು ಬರುತ್ತಿದೆ.

18 https://timesofindia.indiatimes.com/city/bengaluru/bengalureans-win-award-for-reviving-and-protecting-jakkur-lake/articleshow/71319835.cms

19 https://ebird.org/hotspot/L2570625

ಅಲ್ಲಾಳಸಂದ್ರದ ಕೆರೆ

ಅಲ್ಲಾಳಸಂದ್ರ ಕೆರೆಯು ಬೆಂಗಳೂರು ಪ್ರದೇಶದ ಐತಿಹಾಸಿಕ ಕೆರೆಗಳಲ್ಲಿ ಒಂದಾಗಿದ್ದು, ಇದು ಸುಮಾರು 700 ವರ್ಷದ ಹಳೆಯದೆಂದು ಇಲ್ಲಿನ ಶಾಸನಗಳಿಂದಲೇ ತಿಳಿಯಬಹುದು. ಇದು ಯಲಹಂಕ ಉಪನಗರದಿಂದ ಒಂದು ಕಿ.ಮೀ. ಅಂತರದಲ್ಲಿ ಕಂಡು ಬರುತ್ತದೆ. **ಈ ಕೆರೆಯು 42 ಎಕರೆ ವಿಸ್ತೀರ್ಣ ಹೊಂದಿದೆ**, ಅಲ್ಲದೇ ನೂರಾರು ಪಕ್ಷಿ ಪ್ರಭೇದಗಳಿಗೆ ಆಶ್ರಯತಾಣವಾಗಿದ್ದು, ಇಲ್ಲಿ ಸುಮಾರು 123 ಪಕ್ಷಿ ಪ್ರಭೇದಗಳು[20] ಕಂಡುಬರುತ್ತವೆ. ಇವುಗಳಲ್ಲಿ ಬೇರೆ ಬೇರೆ ದೇಶಗಳಿಂದ/ಖಂಡಗಳಿಂದ ಬಂದಂತಹ ಪಕ್ಷಿಗಳು ಸೇರಿವೆ. ಲಿಟಲ್ ಗ್ರೀಬೆ, ರಾಕ್ ಪಿಜನ್, ಸ್ಪಾಟೆಡ್ ಡವ್, ಸ್ಪಾಟ್ ಬಿಲ್ಡ್ ಪೆಲಿಕಾನ್, ಇಂಟರ್ ಮೀಡಿಯೆಟ್ ಈಗ್ರೆಟ್,ಇಂಡಿಯನ್ ಪಾಂಡ್ ಹೆರಾನ್, ಯುರೇಷಿಯನ್ ಕೂಟ್, ಏಷಿಯನ್ ಓಪನ್ ಬಿಲ್, ಓರಿಯಂಟಲ್ ಡಾರ್ಟರ್, ಕಾಮನ್ ಮೈನಾ, ಇಂಡಿಯನ್ ಕೊರ್ಮೊರೆಂಟ್, ಗ್ರೀನ್ ಸ್ಯಾಂಡ್ ಪೈಪರ್, ಕಾಮನ್ ಕಿಂಗ್ ಫಿಷರ್ ಎಂಬ ಇನ್ನೂ ಮುಂತಾದ ಪಕ್ಷಿಗಳು ಕಂಡುಬರುತ್ತವೆ. ಮುಖ್ಯವಾಗಿ ಋತುಮಾನಗಳಿಗೆ ಅನುಗುಣವಾಗಿ ಈ ಕೆರೆಗೆ ವಿದೇಶಿ ಪಕ್ಷಿಗಳು ವಲಸೆ ಬರುತ್ತವೆ ಎಂಬುದನ್ನು ನಾವು ಗುರುತಿಸಬಹುದು. ಹಾಗೂ ಈ ಅಲ್ಲಾಳಸಂದ್ರ, ಜಕ್ಕೂರು, ರಾಚೇನಹಳ್ಳಿ ಹಾಗೂ ಈ ಊರುಗಳ ಸುತ್ತಮುತ್ತಲಿನ ಕೆರೆಗಳಲ್ಲಿ ಮೇಲೆ ಹೆಸರಿಸಿದ ಪಕ್ಷಿ ಪ್ರಭೇದಗಳು ಸಾಮಾನ್ಯವಾಗಿ ಕಂಡು ಬರುತ್ತವೆ.

ರಾಚೇನಹಳ್ಳಿ (ದಾಸರಹಳ್ಳಿ ಕೆರೆ)

20 https://ebird.org/hotspot/L2962871



ಅಲ್ಲಾಳಸಂದ್ರ ಕೆರೆಯ ಸುಂದರ ನೋಟ

ಈ ಕೆರೆಯ ಬಗ್ಗೆ ದಾಸರಹಳ್ಳಿಯ ಶಾಸನವು ಉಲ್ಲೇಖಿಸಿದ್ದು, ಇದು ಸುಮಾರು 500 ವರ್ಷದ ಪುರಾತನವಾದುದ್ದಾಗಿದೆ ಹಾಗೂ. ದಾಸರಹಳ್ಳಿಯ ಸುತ್ತ ಮುತ್ತಲಿನಲ್ಲಿ ಕಂಡುಬರುವ ಕೆರೆಗಳಲ್ಲಿ ರಾಚೇನಹಳ್ಳಿ (ದಾಸರಹಳ್ಳಿ) ಕೆರೆಯು ಬಹಳ ಪ್ರಮುಖವಾದುದು. **ಈ ಕೆರೆಯು ಸುಮಾರು 130 ಎಕರೆ ವಿಸ್ತೀರ್ಣವನ್ನು ಹೊಂದಿದ್ದು,** ದಾಸರಹಳ್ಳಿ, ಜಕ್ಕೂರು ಮತ್ತು ರಾಚೇನಹಳ್ಳಿ ಈ ಮೂರು ಗ್ರಾಮಗಳಿಗೆ ಹೊಂದಿಕೊಂಡಂತೆ ಕಂಡು ಬರುತ್ತದೆ. ಬಿ.ಬಿ.ಎಂ.ಪಿ ಯ ಕೆರೆಗಳ ಪಟ್ಟಿಯಲ್ಲಿ ಪ್ರಸ್ತುತ ಇದನ್ನು ರಾಚೇನಹಳ್ಳಿ ಕೆರೆ ಎಂದು ದಾಖಲಿಸಲಾಗಿದೆ. ಆದರೆ ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ರಾಚೇನಹಳ್ಳಿ, ದಾಸರಹಳ್ಳಿ ಮತ್ತು ಜಕ್ಕೂರು ಮೂರು ಗ್ರಾಮಗಳ ಕಂದಾಯ ಭೂಮಿಯು ಸೇರಿರುತ್ತದೆ. ಪ್ರಸ್ತುತ ಈ ಕೆರೆಯ ಕೆಳಭಾಗದ ವ್ಯವಸಾಯ ಭೂಮಿಯು ದೊಡ್ಡ ದೊಡ್ಡ ಬಡಾವಣೆಗಳಾಗಿ ಮಾರ್ಪಾಡಾಗಿದೆ. ನಮಗೆ ತಿಳಿದಿರುವಂತೆ ಒಂದು ಕೆರೆಯಿಂದ ಕೋಡಿ ಬಿದ್ದ ನೀರು ಮತ್ತೊಂದು ಕೆರೆಗೆ ಹರಿಯುವುದು ಸರ್ವೇ ಸಾಮಾನ್ಯ. ಅದರಂತೆ ರಾಚೇನಹಳ್ಳಿ ಕೆರೆಯ ಮೇಲ್ಭಾಗದಲ್ಲಿನ ಯಲಹಂಕ, ಜಕ್ಕೂರು ಮತ್ತು ಸಂಪಿಗೆಹಳ್ಳಿಯ ಕೆರೆಗಳ ನೀರು ರಾಚೇನಹಳ್ಳಿ ಕೆರೆಗೆ, ರಾಚೇನಹಳ್ಳಿ ಕೆರೆಯಿಂದ ಹರಿದ ನೀರು, ಕಲ್ಕೆರೆ ಮತ್ತು ನಾಗವಾರ ಕೆರೆಗಳಿಗೆ ಹರಿಯುತ್ತದೆ. ನಂತರ ಈ ಕೆರೆಗಳಿಂದ ಹರಿದ ನೀರು ಮುಂದೆ ದಕ್ಷಿಣ ಪಿನಾಕಿನಿ ನದಿಯನ್ನು ಸೇರುತ್ತದೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಈ ರಾಚೇನಹಳ್ಳಿ ಕೆರೆಯ ಭೂ ಪ್ರದೇಶವು ಬೇರೆ ಬೇರೆ ಕಾರಣಗಳಿಗೆ ಬಳಕೆಯಾಗಿದೆ/ಒತ್ತುವರಿಯಾಗಿದೆ. 'ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರೀಸರ್ಚ್' (JNCASR) ಸಂಸ್ಥೆಗೆ 18.39 ಎಕರೆ ಮತ್ತು ಮಹಾತ್ಮ ಗಾಂಧಿ ಇನ್ಸ್ಟಿಟ್ಯೂಟ್ ಆಫ್ ರೂರಲ್ ಎನರ್ಜಿ ಅಂಡ್ ಡೆವಲಪ್ ಮೆಂಟ್ ಸಂಸ್ಥೆಗೆ 9.88 ಎಕರೆ ಭೂ ಪ್ರದೇಶವನ್ನು ಈ ರಾಚೇನಹಳ್ಳಿ ಕೆರೆಯ ಭೂಭಾಗವನ್ನು ಬಳಸಿಕೊಳ್ಳಲಾಗಿದೆ. ಕೆರೆಯ ಸುತ್ತಮುತ್ತಲಿನ ಸುಮಾರು 18 ಎಕರೆ ಭೂ ಪ್ರದೇಶವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (BDA) ವಸತಿ ಸಮುಚ್ಚಯಗಳನ್ನು (Residential Complexes) ನಿರ್ಮಿಸಿದ್ದರೆ, ಇನ್ನುಳಿದ ಕೆಲವು ಭೂ ಭಾಗವು ಖಾಸಗಿ ವ್ಯಕ್ತಿಗಳ ಹಿಡಿತದಲ್ಲಿರುತ್ತದೆ. ಹಾಗೂ ಈ ಕೆರೆಗೆ ಸೇರುವ ತ್ಯಾಜ್ಯಗಳನ್ನು ಸಂಸ್ಕರಿಸುತ್ತಿದ್ದರೂ ಸಹ, ಅಕ್ಕ-ಪಕ್ಕದ ಬಡಾವಣೆಗಳ ಕೊಳಚೆ ನೀರು ಹರಿದು ಬರುತ್ತಲೇ ಇದೆ.



ರಾಚೇನಹಳ್ಳಿ ಕೆರೆ
ಚಿತ್ರ ಕೃಪೆ : https://www.facebook.com/rachenahallilake

ರಾಚೇನಹಳ್ಳಿ ಕೆರೆಯು ದೇಶ ವಿದೇಶಗಳಿಂದ ಬರುವ ಪಕ್ಷಿಗಳಿಗೆ ಒಂದು ಆಶ್ರಯತಾಣವಾಗಿದ್ದು, ಇಲ್ಲಿ ಸುಮಾರು 130 ಬಗೆಯ ಪಕ್ಷಿ ಪ್ರಭೇದಗಳು ಕಂಡು ಬರುತ್ತವೆ[21]. ಸ್ಪಾಟ್ ಬಿಲ್ಡ್ ಪೆಲಿಕಾನ್, ಲಿಟಲ್ ಕೊರ್ಮೊರೆಂಟ್, ಗ್ರೆ ಹೆರಾನ್, ರಾಕ್ ಪಿಜನ್, ನಾರ್ದನ್ ಶಾವೆಲೆರ್, ಏಷಿಯನ್ ಕೋಲ್, ಇಂಡಿಯನ್ ಸ್ಪಾಟ್ ಬಿಲ್ಡ್ ಡಕ್, ಯುರೇಷಿಯನ್ ಕೂಟ್, ಬ್ಲಾಕ್ ಹೆಡೆಡ್ ಇಬಿಸ್, ಓರಿಯಂಟಲ್ ಡಾರ್ಟರ್ ಎಂಬ ಇನ್ನೂ ಮುಂತಾದ ಪಕ್ಷಿ ಪ್ರಭೇದಗಳು ಕಂಡು ಬರುತ್ತವೆ. ಇವುಗಳಲ್ಲಿ ಕೆಲವು ಪಕ್ಷಿಗಳು ಕೆಲವು ಋತುಮಾನಗಳಲ್ಲಿ ಮಾತ್ರ ಕಂಡು ಬಂದರೆ, ಕೆಲವು ಪಕ್ಷಿಗಳು ಸದಾ ಕಾಲ ಕಂಡುಬರುತ್ತವೆ.

ಈ ರೀತಿಯಾಗಿ ಐತಿಹಾಸಿಕ ಮಹತ್ವವುಳ್ಳ ಕೆರೆಗಳನ್ನು ಗಮನಿಸಬಹುದಾಗಿದ್ದು, ಇವು ತಕ್ಕಮಟ್ಟಿಗೆ ಉತ್ತಮ ನಿರ್ವಹಣೆಯಿಂದ ಕೂಡಿವೆ. ಇವು ಈ ಪ್ರದೇಶದ ಜನರ ಜೀವನಾಡಿಗಳಾಗಿದ್ದು, ಅಷ್ಟೇ ಅಲ್ಲದೇ ಹಲವು ಜಲಚರ ಜೀವಿಗಳು, ಪಶು-ಪಕ್ಷಿಗಳಿಗೆ, ಜೀವ-ಜಂತುಗಳಿಗೆ ಆಶ್ರಯ ತಾಣಗಳಾಗಿದ್ದನ್ನು ಕಾಣಬಹುದು. ಹಾಗಾಗಿ ಎಲ್ಲಾ ಕೆರೆಗಳನ್ನು ಉತ್ತಮವಾಗಿ ಸಂರಕ್ಷಣೆ ಮಾಡಿಕೊಂಡು ಉಳಿಸಬೇಕಾಗಿರುವುದು ಅವಶ್ಯಕವಾಗಿದೆ.

21 https://ebird.org/hotspot/L8704863



ರಾಚೇನಹಳ್ಳಿ ಕೆರೆ

ಸಂರಕ್ಷಣೆಯ ಯೋಜನೆ ಮತ್ತು ಪ್ರಚಾರ

ಗತಕಾಲದ ಚರಿತ್ರೆಯನ್ನು ಹೊತ್ತು ನಿಂತ ಶಾಸನಗಳು ದಿನೇ ದಿನೇ ಕಣ್ಮುಂದೆ ಕಾಣದಂತೆ ಕಣ್ಮರೆಯಾಗುತ್ತಿರುವುದು ಶೋಚನೀಯ. ಹೀಗೆಯೇ ಮುಂದುವರೆದರೆ ಮುಂದಿನ ಪೀಳಿಗೆ ಕೇವಲ ಶಾಸನಗಳ ಫೋಟೋಗಳನ್ನು ನೋಡಿ ತೃಪ್ತಿಪಟ್ಟುಕೊಳ್ಳುವ ಸ್ಥಿತಿ ಬಂದರೂ ಆಶ್ಚರ್ಯಪಡುವಂತಿಲ್ಲ. ಆದ್ದರಿಂದ ನಮ್ಮ ಸಂಸ್ಕೃತಿ ಹಾಗೂ ಪರಂಪರೆಯ ಹಲವಾರು ಅಂಶಗಳನ್ನು ಒಳಗೊಂಡಿರುವ ಈ ಶಾಸನಗಳನ್ನು ಜೋಪಾನ ಮಾಡಿ, ಸಂರಕ್ಷಿಸಬೇಕಾಗಿರುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ.

ಶಾಸನಗಳನ್ನು ದಾಖಲು ಮಾಡಿದ ನಂತರ, ದಾಖಲಾಗಿದ್ದ ಮೂಲ ಶಾಸನವನ್ನು ಭೌತಿಕವಾಗಿ ನೋಡುವ ಗೋಜಿಗೆ ಬಹುಪಾಲು ಜನರು ಹೋಗುವುದಿಲ್ಲ ಹಾಗೂ ಅದರ ಸ್ಥಿತಿಗತಿಯನ್ನು ನೋಡುವ ಇಚ್ಛಾಶಕ್ತಿಯೂ ಇರುವುದಿಲ್ಲ. ಈ ಕಾರಣದಿಂದ ಇಂದು ಹಲವಾರು ಶಾಸನಗಳು ಹಾಳಾಗುತ್ತಿವೆ/ ಮರೆಯಾಗುತ್ತಿವೆ. ಸ್ಥಳೀಯರಿಗೆ ಇದರ ಬಗ್ಗೆ ಅರಿವು ಇರುವುದಿಲ್ಲದ ಕಾರಣ ಕೆಲವರು **ಶಾಸನ ಕಲ್ಲನ್ನು ತಮ್ಮ ದನಕರು ಕಟ್ಟಿಕೊಳ್ಳಲು ಬಳಸಿದರೆ, ಕೆಲವರು ಬಟ್ಟೆ ಒಗೆಯಲು, ಕೆಲವರು ಚರಂಡಿ ಮುಚ್ಚಲು, ಕೆಲವರು ಕುಡುಗೋಲು ಮಸೆಯಲು ಹಾಗೂ ಕೆಲವರು ಶಾಸನ ಕಲ್ಲನ್ನು ಒಡೆದು ತಮ್ಮ ಮನೆ ಕಟ್ಟಿಕೊಳ್ಳಲು ಬಳಸಿರುವುದುಂಟು.** ಮತ್ತೂ ಕೆಲವರು ಶಾಸನ ಕಲ್ಲಿನ ಮೇಲಿನ ಚಿನ್ಹೆಗಳನ್ನು ನೋಡಿ ಭಕ್ತಿಯಿಂದ ಪೂಜಿಸುತ್ತಿರುವುದೂ ಉಂಟು. ಸಾಮಾನ್ಯವಾಗಿ ಪೂಜಿಸುತ್ತಿರುವ ಶಾಸನಗಳು ಸ್ವಲ್ಪ ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿರುತ್ತವೆ. **ಹೀಗೆ ನಾನಾ ಕಾರಣಗಳಿಂದ ಶಾಸನಕಲ್ಲುಗಳು ಕಣ್ಮರೆಯಾಗುತ್ತಿರುವುದನ್ನು ತಪ್ಪಿಸಿ ಅವುಗಳನ್ನು ಸೂಕ್ತ ವೇದಿಕೆ ಕಲ್ಪಿಸಿ ಸಂರಕ್ಷಿಸಿ ಸ್ಥಳೀಯರಲ್ಲಿ ಶಾಸನದ ಬಗ್ಗೆ ಜಾಗೃತಿ ಮೂಡಿಸುವುದು ಅತೀ ಅವಶ್ಯಕವಾಗಿದೆ.**

ಸಂರಕ್ಷಣೆಯ ನಂತರ ಅವುಗಳ ಐತಿಹಾಸಿಕತೆಯನ್ನು ಇತರರಿಗೆ ತಿಳಿಸದೆ ಹೋದರೆ, ಮತ್ತೆ ಅದು ಮೂಲೆಗುಂಪಾಗುತ್ತದೆ. ಆದ್ದರಿಂದ ಸ್ಥಳೀಯರೇ ಶಾಸನ ಮತ್ತು ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದರ ಜೊತೆಗೆ ಅವುಗಳ ಪ್ರಚಾರ ಮಾಡುವಂತೆ ಪ್ರೇರೇಪಿಸಬೇಕಾಗುತ್ತದೆ. ಆದರೆ ಈ ಪ್ರಕ್ರಿಯೆ ನಿರಂತರವಾಗಿ ಸಾಧ್ಯವಾಗದೆ ಇರುವುದರಿಂದ ವರ್ಷಕ್ಕೆ ಒಂದು ಬಾರಿಯಾದರೂ **ಗ್ರಾಮಸ್ಥರೆಲ್ಲ ಒಟ್ಟಿಗೆ ಸೇರಿ ಆ ಗ್ರಾಮದ ಐತಿಹಾಸಿಕ ದಿನವನ್ನಾಗಿ ಆಚರಿಸುವುದರ ಮೂಲಕ ಚರಿತ್ರೆಯು ಸದಾ ಹಸಿರಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.** ಈ ನಿಟ್ಟಿನಲ್ಲಿ ನಮ್ಮ ತಂಡವು ಶಾಸನಗಳ ಸಂರಕ್ಷಣೆ ಮತ್ತು ಪ್ರಚಾರವನ್ನು ನಿರಂತರವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸುತ್ತಿದೆ ಮತ್ತು ನೇರವಾಗಿ ಆಸಕ್ತರಿಗೆ ಶಾಸನಗಳು ಇರುವ ಸ್ಥಳದಲ್ಲಿಯೇ ವಿವರಣೆಗಳನ್ನು ನೀಡುತ್ತಿದೆ. ಮುಖ್ಯವಾಗಿ ಇದೂವರೆಗೂ ನಡೆದಿರುವ ಸಂರಕ್ಷಣೆ ಮತ್ತು ಪ್ರಚಾರದ ಬಗೆಗಿನ ಮಾಹಿತಿಗಳನ್ನು ಇಲ್ಲಿ ಹಂಚಿಕೊಳ್ಳಲಾಗಿದೆ.

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿಗಳಲ್ಲಿನ ಭೌಗೋಳಿಕ ಪ್ರದೇಶದ ಜನರು ಸಾವಿರಾರು ವರ್ಷಗಳಿಂದ ಹಲವಾರು ಏಳು-ಬೀಳುಗಳ ನಡುವೆ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಅಂದಿನ ಜನರು ಬಿಟ್ಟು ಹೋಗಿರುವ ಶಾಸನಗಳು ಮತ್ತು ಸ್ಮಾರಕಗಳ ಬಗ್ಗೆ ಇಂದಿನ **ಜನರಿಗೆ ಅರಿವಿನ ಕೊರತೆಯಿರುವುದರಿಂದ, ಅವುಗಳು ಅವಸಾನದ ಹಂಚಿನಲ್ಲಿದ್ದರೂ, ಭಯದ ವಾತಾವರಣದಿಂದಾಗಿ ಅವುಗಳನ್ನು ಮುಟ್ಟುವ ಗೋಜಿಗೆ ಹೋಗುತ್ತಿಲ್ಲ.** ಕೆಲವು ಕಡೆ ಜನರು ತಮ್ಮ ಸಾಂಸ್ಕೃತಿಕ ಕುರುಹುಗಳ ರಕ್ಷಣೆಗೆ ಮುಂದಾಗಿದ್ದು ಅವುಗಳನ್ನು ಸೂಕ್ತ ರೀತಿಯಲ್ಲಿ ಭೌತಿಕ ಸಂರಕ್ಷಣೆಯನ್ನು ಸಹ ಮಾಡುತ್ತಿದ್ದಾರೆ. ಇನ್ನೂ ಕೆಲವು ಕಡೆ ಇಂದಿನ ರಾಜಕೀಯ ಪರಿಸ್ಥಿತಿಗಳು ಇವುಗಳ ರಕ್ಷಣೆಯಲ್ಲಿ ತೊಡಕಾಗಿರುವುದಂತು ಸುಳ್ಳಲ್ಲ.

ಜಕ್ಕೂರ ಸಾ.ಶ.1342ರ ಹೊಂನಮಾರಯನಾಯ್ಕರ ದಾನ ಶಾಸನ

ಭೌತಿಕ ಸಂರಕ್ಷಣೆ

ಈ ಶಾಸನವನ್ನು ಬಿ.ಎಲ್. ರೈಸ್ ಅವರು ದಾಖಲಿಸಿದಾಗ ಜಕ್ಕೂರು ಗ್ರಾಮದ ಮಕ್ಕರಿಗನ ಹೊಲದಲ್ಲಿ ನೆಟ್ಟ ಕಲ್ಲಿನಲ್ಲಿ ಎಂದಿತ್ತು. ಈ ಬಡಾವಣೆಯಲ್ಲಿರುವ ಶಾಸನ ಕಲ್ಲು ಅಲ್ಲಿನ ಜನರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ನಂತರ ಶಾಸನ ತಜ್ಞರಾದ ಕೆ.ಆರ್.ನರಸಿಂಹನ್ ಹಾಗೂ ಧನಪಾಲ್ ಮಂಚೇನಹಳ್ಳಿ ಅವರು ಗ್ರಾಮಸ್ಥರಿಗೆ ಶಾಸನದ ಮಹತ್ವ ತಿಳಿಸಿದಾಗ, **ಗ್ರಾಮಸ್ಥರಾದ ರವಿಗೌಡ, ನಾಗರಾಜಪ್ಪ, ಶ್ರೀನಿವಾಸ ಮುಂತಾದವರು ಆಸಕ್ತಿ ವಹಿಸಿ ಅದನ್ನು 2017ರಲ್ಲಿ ಬಡಾವಣೆಯಲ್ಲಿರುವ ಶ್ರೀ ಕೆ.ವಿ. ಭೈರೇಗೌಡ**



ಜಕ್ಕೂರಿನ ದಂಪತಿಗಳ ಸ್ಮಾರಕ ಕಲ್ಲಿನ ಸಂರಕ್ಷಣೆ ಕಾರ್ಯ ಮಾಡುತ್ತಿರುವ ಗ್ರಾಮಸ್ಥರು



ಕಲಾಮಂದಿರದ ಆವರಣದಲ್ಲಿ ಸಂರಕ್ಷಿಸಿರುವರು. ಈ ಶಾಸನವನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದ್ದರೂ ಯಾವುದೇ ಮಾಹಿತಿ ಫಲಕವನ್ನು ಹಾಕಿಲ್ಲ. ಮುಂದಿನ ದಿನಗಳಲ್ಲಿ ಮಾಹಿತಿ ಫಲಕವನ್ನು ಹಾಕುವುದು ಅತ್ಯವಶ್ಯಕ.

ಡಿಜಿಟಲ್ ಸಂರಕ್ಷಣೆ

ಶಾಸನಗಳನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದರೂ ಹವಾಮಾನದ ವೈಪರಿತ್ಯದಿಂದಾಗಿ ಲಿಪಿಗಳು ಸವೆದು ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಶಾಶ್ವತವಾಗಿ ಇವುಗಳನ್ನು ಸಂರಕ್ಷಿಸಲು ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ಅವುಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸುವ ಅಗತ್ಯವಿದೆ. ಇದರಿಂದ ಇವು ಶಾಶ್ವತವಾಗಿ ಉಳಿಯುತ್ತವೆ. **ಸ್ಕ್ಯಾನ್ ಮಾಡಿದ ದಿನ ಶಾಸನಕಲ್ಲು ಇದ್ದ ರೀತಿಯಲ್ಲಿಯೇ ಅದನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸುವುದರಿಂದ ಅದು ಸಾವಿರಾರು ವರ್ಷಗಳು ಕಳೆದರೂ ಹಾಗೆಯೇ ಉಳಿಯುತ್ತದೆ**. ಅವಶ್ಯವಿದ್ದಲ್ಲಿ ಅದರ **ಪ್ರತಿಗಳನ್ನು ಯಥಾವತ್ತಾಗಿ ಮರ, ಕಲ್ಲು ಹಾಗೂ ಲೋಹಗಳ ಮೇಲೆ ಅಚ್ಚು ಹಾಕಿಸಿಕೊಳ್ಳಬಹುದು**.

ಈ ಶಾಸನವನ್ನು ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ದಿನಾಂಕ 24-ಮಾರ್ಚ್-2021ರಂದು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ನಂತರ ಕಛೇರಿಯಲ್ಲಿ ಆರ್ಟೆಕ್ ಸ್ಟುಡಿಯೋ ತಂತ್ರಾಂಶದ ಸಹಾಯದಿಂದ ಅದರ 3ಡಿ ಮಾಡಲ್ ಅನ್ನು ತಯಾರಿಸಿದೆ. **ಈ ಡಿಜಿಟಲ್ ಮಾಡಿದ ಶಾಸನವು 9 ಕೋಟಿ ಮೂವತ್ತೊಂದು ಲಕ್ಷ ಪಾಲಿಗನ್ಸ್ ಗಳನ್ನು ಹೊಂದಿದೆ**.

ಜಕ್ಕೂರ ಹತ್ತನೇ ಶತಮಾನದ ಪ್ರಶಸ್ತಿ ಶಾಸನ

ಭೌತಿಕ ಸಂರಕ್ಷಣೆ

ಕೆ.ಆರ್.ನರಸಿಂಹನ್ ಮತ್ತು ಧನಪಾಲ್ ಮಂಚೇನಹಳ್ಳಿ ಅವರು 2017ರಲ್ಲಿ ಈ ಬಡಾವಣೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದರ ಫಲವಾಗಿ ಈ ಶಾಸನವನ್ನು ಗುರುತಿಸಲು ಸಾಧ್ಯವಾಯಿತು. ಆದರೆ ಈ ಶಾಸನ ಅಪ್ರಕಟಿತವಾದುದ್ದರಿಂದ ಇದನ್ನು ನರಸಿಂಹನ್ ಅವರು ಇತಿಹಾಸ ದರ್ಶನ ಸಂಪುಟ 33ರಲ್ಲಿ ಪ್ರಕಟಿಸಿರುತ್ತಾರೆ. ಪ್ರಾರಂಭದಲ್ಲಿ ಈ ಶಾಸನ ಕಲ್ಲು ನಿರ್ಲಕ್ಷ್ಯಕ್ಕೊಳಗಾಗಿದ್ದನ್ನು ಗಮನಿಸಿದ ನರಸಿಂಹನ್ ಮತ್ತು ಧನಪಾಲ್ ಮಂಚೆನಹಳ್ಳಿ ಗ್ರಾಮಸ್ಥರಿಗೆ ಇದರ ಮಹತ್ವ ತಿಳಿಸಿದಾಗ ಗ್ರಾಮಸ್ಥರಾದ ರವಿಗೌಡ, ನಾಗರಾಜಪ್ಪ, ಶ್ರೀನಿವಾಸ ಮುಂತಾದವರು ಆಸಕ್ತಿ ವಹಿಸಿ ಅದನ್ನು 2017ರಲ್ಲಿ ಗ್ರಾಮದ ಶ್ರೀ ಕೆ.ವಿ. ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಸಂರಕ್ಷಿಸಿರುವರು. **ಸಂರಕ್ಷಣೆಯ ದಿನ ಬಡಾವಣೆಯಲ್ಲಿ ಹಬ್ಬವನ್ನು ಆಚರಿಸುತ್ತಿದ್ದಾರೆ**



ಜಕ್ಕೂರಿನ ಸಾ.ಶ.1342ರ ಹೊಂನಮಾರಯನಾಯ್ಕರ ಶಾಸನದ 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ



ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ (ಚಿತ್ರದಲ್ಲಿ ಲಕ್ಷ್ಮೀಕಾಂತ ಶರ್ಮಾ)

ಎನ್ನುವಂತಹ ವಾತಾವರಣವಿತ್ತು. ಅದು ಹೇಗಿತ್ತೆಂದರೆ, ಜನರೇ ಸ್ವಯಂಪ್ರೇರಿತರಾಗಿ ಬೀದಿಯಲ್ಲಿ ರಂಗೋಲಿ ಬಿಡಿಸಿ, ಹೂವುಗಳ ಅಲಂಕಾರ ಮಾಡಿ ಶಾಸನ ಹಾಗೂ ವೀರಗಲ್ಲುಗಳನ್ನು ಹೊಸ ಜಾಗಕ್ಕೆ ಬರಮಾಡಿಕೊಂಡರು. ಇದು ಬಡಾವಣೆಯ ಜನರಿಗೆ ಐತಿಹಾಸಿಕ ಕುರುಹುಗಳು ಹಾಗೂ ತಮ್ಮ ಪರಂಪರೆಯ ಬಗ್ಗೆ ಇರುವ ಕಾಳಜಿ ಹಾಗೂ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಸಂರಕ್ಷಣೆಯ ನಂತರ ಶಾಸನ ಕಲ್ಲುಗಳನ್ನು ನೋಡಲು ಹೋದವರಿಗೆ ಗ್ರಾಮಸ್ಥರೇ ತಮ್ಮ ಊರಿನ ಇತಿಹಾಸವನ್ನು ಹೆಮ್ಮೆಯಿಂದ ಹೇಳುತ್ತಿದ್ದುದು ಗಮನಾರ್ಹ. ಈ ಶಾಸನವನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದ್ದರೂ, ಯಾವುದೇ ಮಾಹಿತಿ ಫಲಕ ಹಾಕಿಲ್ಲ, ಆದ್ದರಿಂದ ಮುಂದಿನ ದಿನಗಳಲ್ಲಿ ಮಾಹಿತಿ ಫಲಕ ಹಾಕುವುದು ಅತ್ಯವಶ್ಯಕ.

ಡಿಜಿಟಲ್ ಸಂರಕ್ಷಣೆ

ಈ ಶಾಸನವನ್ನು ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ದಿನಾಂಕ 05-ಸೆಪ್ಟೆಂಬರ್-2020ರಂದು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ನಂತರ ಕಛೇರಿಯಲ್ಲಿ ಆರ್ಟೆಕ್ ಸ್ಟುಡಿಯೋ ತಂತ್ರಾಂಶದ ಸಹಾಯದಿಂದ ಅದರ 3ಡಿ ಮಾಡಲ್ ಅನ್ನು ತಯಾರಿಸಿದ್ದು. **ಈ ಶಾಸನದ 3ಡಿ ಮಾಡಲ್ 2 ಕೋಟಿ ನಲವತ್ತೆಂಟು ಲಕ್ಷ ಪಾಲಿಗನ್ಸ್ ಹೊಂದಿದೆ**. ಈ ಮಾಡೆಲ್ ಅನ್ನು ಮೆಷ್ ಲ್ಯಾಬ್ ತಂತ್ರಾಂಶದ ಸಹಾಯದಿಂದ ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ಮರು ಓದುವುದರ ಮೂಲಕ ಶಾಸನ ಅಧ್ಯಯನ ಮಾಡಿದೆ.

ಜಕ್ಕೂರ ಸಾ.ಶ. ಸು.10ನೇ ಶತಮಾನದ ಕಲ್ನಾಡು ಶಾಸನ

ಭೌತಿಕ ಸಂರಕ್ಷಣೆ

ಈ ಶಾಸನವು ಜಕ್ಕೂರಿನ ಖಾಸಗಿಯವರ ಜಮೀನಿನಲ್ಲಿದ್ದು, ಸದ್ಯದಲ್ಲೇ **ಸ್ಥಳೀಯರು ಸ್ಥಳಾಂತರಿಸಿ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಶಾಶ್ವತವಾಗಿ ಸಂರಕ್ಷಣೆ ಮಾಡುವ ಭರವಸೆ ನೀಡಿದ್ದಾರೆ**.

ಡಿಜಿಟಲ್ ಸಂರಕ್ಷಣೆ

ಈ ಶಾಸನವನ್ನು ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ದಿನಾಂಕ 22-ಡಿಸೆಂಬರ್-2021ರಂದು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ

ಮಾಡಿದೆ. ಈ ಶಾಸನವು **1 ಕೋಟಿ ಮೂವತ್ತೆರಡು ಲಕ್ಷ ಪಾಲಿಗನ್ಸ್** ಹೊಂದಿದೆ.

ಜಕ್ಕೂರಿನ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬದ ಶಾಸನ

ಭೌತಿಕ ಸಂರಕ್ಷಣೆ

ಈ ಶಾಸನವನ್ನು ಆಂಜನೇಯ ದೇವಾಲಯದ ಆವರಣದಲ್ಲಿಡಲಾಗಿದ್ದು, ಸದ್ಯದಲ್ಲೇ ಗ್ರಾಮಸ್ಥರು ಸ್ಥಳಾಂತರಿಸಿ ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣದಲ್ಲಿ ಸಂರಕ್ಷಣೆ ಮಾಡುವ ಭರವಸೆ ನೀಡಿದ್ದಾರೆ.

ಡಿಜಿಟಲ್ ಸಂರಕ್ಷಣೆ

ಈ ಶಾಸನವನ್ನು ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ದಿನಾಂಕ 22-ಡಿಸೆಂಬರ್-2021ರಂದು 0.05 ಮಿಲಿ ಮೀ ಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ಈ ಶಾಸನವು **2 ಕೋಟಿ ಹದಿಮೂರು ಲಕ್ಷ ಪಾಲಿಗನ್ಸ್** ಹೊಂದಿದೆ.



ಜಕ್ಕೂರಿನ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬದ ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ (ಚಿತ್ರದಲ್ಲಿ ಭೈರಪ್ಪ ಎಂ.ಜಿ. ಹಾಗೂ ಉದಯ ಕುಮಾರ್ ಪಿ.ಎಲ್.)



ಜಕ್ಕೂರ ಸಾ.ಶ. ಸು.10ನೇ ಶತಮಾನದ ಕಲ್ನಾಡು ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ (ಚಿತ್ರದಲ್ಲಿ ಶಶಿಕುಮಾರ ನಾಯ್ಕ ಕೆ.ಸಿ.)

ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನ

ಭೌತಿಕ ಸಂರಕ್ಷಣೆ

ಅಲ್ಲಾಳಸಂದ್ರದ ಚರಂಡಿ ಪಕ್ಕದಲ್ಲಿ ನಿಂತಿದ್ದ ಈ ಶಾಸನದ ಬಗ್ಗೆ ಸ್ಥಳೀಯರಿಗೆ ಮಾಹಿತಿಯ ಕೊರತೆ ಇದ್ದುದರಿಂದ (13°05'11.7"N 77°35'13.3"E) ಶಾಸನ ಕಲ್ಲಿನ ಮುಂಭಾಗದಲ್ಲಿ ಪೂಜೆ ಮಾಡುವುದು ಮತ್ತು ಹಿಂಭಾಗದಲ್ಲಿ ಅರಿವಿಲ್ಲದೆ ಸಗಣಿಯ ಬೆರಣಿ ತಟ್ಟಲು ಬಳಸಿಕೊಳ್ಳುತ್ತಿದ್ದರು.

ಇದೇ ಬಡಾವಣೆಯ ನಿವಾಸಿ ಎಸ್.ಸೋಮಶೇಖರ್ ಅವರು ಆಸಕ್ತಿ ವಹಿಸಿ ಈ ಶಾಸನವನ್ನು ಸಂರಕ್ಷಿಸಿರುವರು. ಹೀಗೆ ಸಂರಕ್ಷಣೆ ಮಾಡಲು ಪ್ರೇರಣೆಯಾದ ವಿಷಯ ಸ್ವಾರಸ್ಯಕರವಾಗಿದೆ, ಅದನ್ನು ಮುಂದೆ ನೋಡೋಣ.

ದಿನಾಂಕ 21-ಡಿಸೆಂಬರ್-2017ರಂದು ಜಕ್ಕೂರಿನ ಕೆ.ವಿ.ಭೈರೇಗೌಡ ರಂಗಮಂದಿರ ಆವರಣದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ನರಸಿಂಹನ್ ಮತ್ತು ಉದಯ ಕುಮಾರ್ ಅವರು ಜಕ್ಕೂರಿನ ಇತಿಹಾಸವನ್ನು ಹೇಳುತ್ತಿರುವಾಗ ಅಲ್ಲಾಳಸಂದ್ರ ಶಾಸನದಲ್ಲಿ ಜಕ್ಕೂರಿನ ದೇವಾಲಯದ ಉಲ್ಲೇಖವಿದೆ ಎಂದು ಪದೇ ಪದೇ ಅಲ್ಲಾಳಸಂದ್ರ ಹೆಸರನ್ನು ಮೈಕ್ ನಲ್ಲಿ ಹೇಳುತ್ತಿರುವುದನ್ನು ಕೇಳಿ ಅಲ್ಲೆ ಬಿ.ಬಿ.ಎಂ.ಪಿ ಕಛೇರಿಗೆ ಬಂದಿದ್ದ ಅಲ್ಲಾಳಸಂದ್ರದ ನಿವಾಸಿ **ಎಸ್ ಸೋಮಶೇಖರ್** ಅವರು ಅಲ್ಲಿಗೆ ಬಂದು ಉದಯಕುಮಾರ್ ಅವರನ್ನು ನೇರವಾಗಿ ಸಾರ್ ಅವಾಗ್ಲಿಂದ ಅಲ್ಲಾಳಸಂದ್ರ ಅಂತ ಹೇಳುತಿದ್ರಲ್ಲ ಅದೇ ಊರೋನು ನಾನು ಎಂದಾಗ,

ಉದಯಕುಮಾರ್ ಅವರು: ಸ್ವಲ್ಪ ಹೊತ್ತು ಇರಪ್ಪ ಎಂದು ಕಾರ್ಯಕ್ರಮದಲ್ಲಿ busy ಆದರು.

ಸೋಮಶೇಖರ್: (ಅಲ್ಲೆ ಸುಮಾರು 1 1/2 ಗಂಟೆ ನಂತರ ಮೇಲೆ ಮತ್ತೆ ಉದಯಕುಮಾರ್ ರವರ ಬಳಿ ಹೋಗಿ ಸಾರ್ ಅವಾಗಲೇ ಅಲ್ಲಾಳಸಂದ್ರ ಅಂದ್ರಿ)

ಉದಯಕುಮಾರ್: ಹ ಹೇಳ್ದೆ, ಏನು ಸಮಾಚಾರ?

ಸೋಮಶೇಖರ್: ಸಾರ್ ನಮ್ದು ಅದೇ ಊರು, ಅಲ್ಲಾಳಸಂದ್ರದ್ದು ಅದೇನೋ ಇತಿಹಾಸ ಹೇಳುತ್ತಿದ್ರಿ ?

ಉದಯಕುಮಾರ್: ಹೌದು ಮಾರಾಯ ಹೇಳ್ದೆ

ಸೋಮಶೇಖರ್: ಏನು ಸಾರ್ ನಮ್ಮ ಊರಿನ್ದು ಇತಿಹಾಸ?

ಉದಯಕುಮಾರ್: ನಿಮ್ಮ ಊರಲ್ಲಿ ಮೂರು ಶಾಸನ ಇತ್ತು (ಅನ್ನುವಷ್ಟರಲ್ಲೇ)

ಸೋಮಶೇಖರ್: ಸಾರ್ ಅಕ್ಷರ ಬರೆದಿರೋ ಎರಡು ಕಲ್ಲು ಇದೆ ಅದನ್ನು ನೋಡಿದ್ದೀನಿ

ಉದಯಕುಮಾರ್: ಅದೇ ಮೋರಿ ಪಕ್ಕ ಇರೋ ಕಲ್ಮೇಲೆ ಬೆರಣಿ ತಟ್ಟುತ್ತಿದ್ದಿರಲ್ಲ !!!



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಶಾಸನವು ಮೊದಲು ಇದ್ದ ಸ್ಥಳ



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಶಾಸನ ಮತ್ತು ತಂತ್ರ-ಮಂತ್ರದ ಕಲ್ಲನ್ನು ಸಂರಕ್ಷಣೆ ಮಾಡಿರುವ ಚಿತ್ರ



ಅಲ್ಲಾಳಸಂದ್ರದ ಸಾ.ಶ.1544ರ ರಾಚುರ
ನರಸಪಯರ ದಾನ ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ
(ಚಿತ್ರದಲ್ಲಿ ಭೈರಪ್ಪ ಎಂ.ಜಿ. ಹಾಗೂ ಯುವರಾಜು ಆರ್)

ಅಂದಾಗ

ಸೋಮಶೇಖರ್: (ಈ ಮಾತನ್ನು ಕೇಳಿ ಒಂದು ಥರ ನಾಚಿಕೆ ಆಗಿ ಅಲ್ಲಿಂದ ನಡೆದು ಬಿಟ್ಟರು)

ಉದಯಕುಮಾರ್: (ಸೋಮಶೇಖರ್ ನಡೆದುಕೊಂಡು ಹೋಗುತ್ತಿರುವುದನ್ನು ಕಂಡು ಯಾಕೋ ಆ ಮಾತು ಹೇಳಬಾರದಿತ್ತೇನೋ ಎಂದೆನಿಸಿತು)

ಮರುದಿನ ಬೆಳಿಗ್ಗೆ ಸೋಮಶೇಖರ್ ಅವರು ಉದಯ ಕುಮಾರ್‌ಗೆ ಕರೆ ಮಾಡಿ ನಮ್ಮ ಊರಿಗೆ ಯಾವಾಗ ಬರುತ್ತೀರ?

ಉದಯಕುಮಾರ್: ಯಾಕಪ್ಪ?

ಸೋಮಶೇಖರ್: ನಮಗೂ ಊರಿನ ಇತಿಹಾಸ ತಿಳಿಸಿಕೊಡಿ

ಉದಯಕುಮಾರ್: ಅಲ್ಲಯ್ಯಾ ನಿಮ್ಮ ಊರಿನ ಇತಿಹಾಸ ಹೇಳೋ ಶಾಸನವೇ ಮೋರಿ ಪಕ್ಕದಲ್ಲಿದೆ

ಸೋಮಶೇಖರ್: ಆ ಕಲ್ಲಿಗೆ ಪೂಜೆ ಮಾಡುತ್ತೇವಲ್ಲ!!!

ಉದಯಕುಮಾರ್: ಮುಂದೆ ಬೊಟ್ಟು ಇಟ್ಟು ಪೂಜೆ ಮಾಡುತ್ತೀರ ಹಿಂದಕ್ಕೆ ಸಗಣಿ ಬೆರಣಿ ತಟ್ಟುತ್ತೀರ, ಊರಿನ ಗಲೀಜು ನೀರು ಅಲ್ಲೇ ಹೋಗುತ್ತೆ, ಮತ್ತೆ ದನಗಳನ್ನು ಕಟ್ಟೊ ಕೊಟ್ಟಿಗೆ ಮಾಡಿಕೊಂಡಿದ್ದೀರ ಊರಿಗೆ ಬಂದು ಶಾಸನದ ಬಗ್ಗೆ ಮಾತನಾಡಿದರೆ ಯಾರು ಮುಂದೆ ಬರುತ್ತಿಲ್ಲ?

ಸೋಮಶೇಖರ್: ನೀವು ಬಂದು ಹೇಳಿ ಸಾರ್ ಅದೇನು ಮಾಡಬೇಕು ನಾವು ಮಾಡುತ್ತೇವೆ.

ಉದಯಕುಮಾರ್: ಬರುತ್ತೇನಪ್ಪ ಮೊದಲು ಆ ಶಾಸನವನ್ನು ಯಾವುದಾದರೂ ಒಳ್ಳೆ ಜಾಗಕ್ಕೆ ಶಿಫ್ಟ್ (Shift) ಮಾಡಬೇಕು.

ಸೋಮಶೇಖರ್: ಆಯ್ತು ಸಾರ್ ಮಾಡ್ತೀವಿ. ನೀವು ಎಲ್ಲಿಗೆ ಹೇಳ್ತಿರೋ ಅಲ್ಲಿಗೆ ಮಾಡ್ತೀವಿ.

ಇದಾದ 23 ದಿನದ ನಂತರ 13-ಜನವರಿ-2018 ರಂದು ಉದಯಕುಮಾರ್ ಅವರು ಅಲ್ಲಾಳಸಂದ್ರ ಗ್ರಾಮಕ್ಕೆ ಭೇಟಿ ನೀಡಿ, ಸೋಮಶೇಖರ್ ಮತ್ತು ಕೆಲವು ಗ್ರಾಮಸ್ಥರಿಗೆ ಶಾಸನದ ಪಾಠವನ್ನು ಓದಿ ಹೇಳಿ, ಅಲ್ಲಾಳಸಂದ್ರ ಗ್ರಾಮ ಹಿನ್ನೆಲೆಯನ್ನು ತಿಳಿಸುತ್ತಾ ಈ ನಿಮ್ಮ ಊರಿನ ಇತಿಹಾಸವನ್ನು ಹೇಳುವ ಒಟ್ಟು ಮೂರು ಶಾಸನಗಳು ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಒಂಭತ್ತರಲ್ಲಿ ದಾಖಲಾಗಿದ್ದು, ಈಗ ಉಳಿದುಕೊಂಡು ಬಂದಿರುವುದು ಈ ಒಂದು ಶಾಸನ ಮಾತ್ರ. ಶಾಸನವನ್ನು ಹೇಗಾದರೂ ಮಾಡಿ ಸಂರಕ್ಷಣೆ ಮಾಡಲೇಬೇಕು ಎನ್ನುವಾಗ

ಗ್ರಾಮಸ್ಥರಾದ ವ್ಯಕ್ತಿ: ಸಾರ್ ಈ ತರ ಶಾಸನದ ಕಲ್ಲು ನೋಡಿದ್ದೀನಿ

ಉದಯಕುಮಾರ್: ಎಲ್ಲಿ ನೋಡಿದ್ದಿರಾ ?

ಗ್ರಾಮಸ್ಥರಾದ ವ್ಯಕ್ತಿ: (ಬಲಗೈ ಎತ್ತಿ ಗ್ರಾಮದ ದಕ್ಷಿಣ ಕಡೆ ತೋರಿಸುತ್ತಾ) ಅಲ್ಲೊಂದು ಮಣ್ಣಿನ ಗುಡ್ಡ ಇತ್ತು. ಆ ಗುಡ್ಡದ ಹತ್ತಿರ ನೋಡಿದ್ದೀನಿ

ಉದಯಕುಮಾರ್: ಯಾವಾಗ ನೋಡಿದ್ದಿರಾ ?

ಗ್ರಾಮಸ್ಥರಾದ ವ್ಯಕ್ತಿ: ದನ ಮೇಯಿಸೋಕೆ ಹೋಗ್ತಿದ್ದಾಗ ನೋಡಿದ್ದೀನಿ, ಈಗ GKVK ಕಾಂಪೌಂಡು ಒಳಗೆ ಸೇರಿಕೊಂಡುಬಿಟ್ಟೈತೆ.

ಉದಯಕುಮಾರ್: ಸರಿ ಅದನ್ನು ಇನ್ನೊಂದು ದಿನ ಹೋಗಿ ನೋಡೋಣ, ಈಗ ಶಾಸನವನ್ನು ಎಲ್ಲಿ ಇಡಬಹುದು ಎಂದು ಚರ್ಚೆ ಮಾಡುತ್ತಾ ಮೂರು ಸ್ಥಳಗಳನ್ನು ಗುರ್ತಿಸಿಕೊಂಡು, ಅದರಲ್ಲಿ ಮೊದಲನೆಯದ್ದು ಮಾರಮ್ಮ ದೇವಸ್ಥಾನ, ಆದರೆ ದೇವಸ್ಥಾನ ಬಳಿ ಶಾಸನ ಇಡಲು ಜಾಗವಿಲ್ಲದಿದ್ದರಿಂದಾಗಿ ಎರಡನೇ ಸ್ಥಳವಾಗಿ ಗುರ್ತಿಸಿದ ಜಾಗದಲ್ಲೇ ಶಾಸನವನ್ನು ಇಡಲು ತೀರ್ಮಾನಿಸಲಾಯಿತು.

ಸೋಮಶೇಖರ್: ಸಾರ್ ನಾಳೆನೇ Shift ಮಾಡ್ಸೋದಾ?

ಉದಯಕುಮಾರ್: (ಸೋಮಶೇಖರ್ full excite ಆಗಿರುವುದನ್ನು ನೋಡಿ ಶಾಸನ ತೆಗಿಯುವಾಗ ಏನಾದರು ಯಡವಟ್ಟು ಮಾಡಿಬಿಡುತ್ತಾರೆ ಅಂದುಕೊಂಡು) ನೋಡಿ ಸೋಮಶೇಖರ್ ನಾಳೆ ನಾನು ಅಮೇರಿಕಕ್ಕೆ ಹೋಗುತ್ತಿದ್ದೇನೆ. ಬರೋದು 15 ದಿನ ಆಗುತ್ತೆ, ಬಂದ ಮೇಲೆ ಮಾಡೋಣ, ಯಾವುದೇ ಕಾರಣಕ್ಕೂ ಒಬ್ಬರೇ ಮಾಡೋಕೆ ಹೋಗಬೇಡಿ. ಹಂಗೂ ಮಾಡಬೇಕೆಂದರೆ ಇಲ್ಲೆ ಯಲಹಂಕದಲ್ಲಿ ಕೆ.ಆರ್.ನರಸಿಂಹನ್ ಮತ್ತು ಧನಪಾಲ್ ಮಂಚೆನಹಳ್ಳಿ ಅವರು ಇದ್ದಾರೆ ಅವರನ್ನು ಸಂಪರ್ಕಿಸಿ ಎಂದು ಹೇಳಿದರು.

(ದಿನಾಂಕ ಫೆಬ್ರವರಿ 6, 2018ರಂದು ಬೆಂಗಳೂರಿಗೆ ಬಂದು ವಿಶ್ರಾಂತಿ ಮಾಡುತ್ತಿರುವಾಗ ಬೆಳಗಿನ ಜಾವ ಐದು ಗಂಟೆಗೆ ಸೋಮಶೇಖರ್ ಅವರಿಂದ ಕರೆ ಬರುತ್ತದೆ)

ಸೋಮಶೇಖರ್: ಸಾರ್ ನಾನು ಸೋಮಶೇಖರ್

ಉದಯಕುಮಾರ್: ಹೇಳಪ್ಪ

ಸೋಮಶೇಖರ್: ನಿಮಗೆ good news

ಉದಯಕುಮಾರ್: ಏನಾಯಿತು ?

ಸೋಮಶೇಖರ್: ಶಾಸನವನ್ನು shift ಮಾಡಿಸಿದ್ದೀನಿ ಬೇಗ ಬನ್ನಿ ಸಾರ್ ಬೇಗ ಬನ್ನಿ !

ಉದಯಕುಮಾರ್: ಸರಿ ಬರುತ್ತೇನೆ (ಎಂದು ಹೇಳಿ 7 ಗಂಟೆಗೆ ಅಲ್ಲಾಳಸಂದ್ರಕ್ಕೆ ಬಂದು ನೋಡಿದರೆ ಶಾಸನವನ್ನು ಗುರುತಿಸಿದ ಸ್ಥಳದಲ್ಲಿ ಕೆಳಭಾಗದಲ್ಲಿನ ಕೆಲವು ಸಾಲುಗಳನ್ನು ಸೇರಿಸಿ ಮುಚ್ಚಿ ಸಿಮೆಂಟ್ ಹಾಕಲಾಗಿತ್ತು). ಏನಪ್ಪ ಸೋಮಶೇಖರ್ ಅಷ್ಟೆಲ್ಲಾ ಹೇಳಿದ್ದೀನಿ ಹಾಗಿದ್ದರೂ ಶಾಸನದ ಸಾಲುಗಳ ಕೆಳಭಾಗವನ್ನು ಮುಚ್ಚಿದ್ದೀರ ಎಂದಾಗ

ಸೋಮಶೇಖರ್: ಕಲ್ಲು ಇದ್ದಿದ್ದು ಅಷ್ಟೆ ಸಾರ್!!! ಎಂದರು

ಉದಯಕುಮಾರ್: ಸರಿ ಬಿಡಪ್ಪ (ಮನಸ್ಸಿನಲ್ಲೇ, ಅಂತು ಶಾಸನ ಸಂರಕ್ಷಣೆಯಾಯಿತಲ್ಲ ಎಂದುಕೊಂಡು) ಒಳ್ಳೆ ಕೆಲಸ ಮಾಡಿದ್ದೀರ ಎಂದು ಹೇಳುತ್ತಿರುವಾಗ ಅಷ್ಟರಲ್ಲೆ ಮತ್ತೊಬ್ಬ ಗ್ರಾಮಸ್ಥ ಅಲ್ಲಿಗೆ ಬಂದು

ಗ್ರಾಮಸ್ಥ 2: ಯಾರನ್ನ ಕೇಳಿ ಈ ಕಲ್ಲನ್ನು ಇಲ್ಲಿಗೆ ತಂದೆ? ನಮ್ಮನ್ನ ಕೇಳಬೇಕು ತಾನೆ? (ಉದಯಕುಮಾರ್ ಅವರನ್ನು ದುರುಗುಟ್ಟಿ ನೋಡುತ್ತಾ ಮತ್ತೆ ಸೋಮಶೇಖರ್ ಕಡೆ ತಿರುಗಿ) ಯಾರೋ ಬೇರೆ ಊರಿನವರನ್ನು ಕರೆಸಿ ಏನೇನೋ ಮಾಡ್ತಿದಿಯ ಮಾಡು ಮಾಡು (ಎನ್ನುತ್ತಾ ಅಲ್ಲಿಂದ ಮುಂದೆ ನಡೆದರು).

ಸೋಮಶೇಖರ್: ಸಾರ್ ಬೇಜಾರು ಮಾಡಿಕೊಳ್ಳಬೇಡಿ ಊರು ಅಂದ ಮೇಲೆ ಇದೆಲ್ಲ ಸಾಮಾನ್ಯ ಅಂದರು.

ಉದಯಕುಮಾರ್: ಇದೆಲ್ಲ ನಮಗೆ ಸರ್ವೆ ಸಾಮಾನ್ಯ

ಸೋಮಶೇಖರ್: (ಮುಗುಳ್ ನಗುತ್ತಾ) ಬನ್ನಿ ಸಾರ್ ಕಾಫಿ ಕುಡಿಯೋಣ (ಎಂದು ಇಬ್ಬರು ಬೇಕರಿ ಕಡೆ ನಡೆದರು)

ಹೀಗೆ ಶಾಸನವನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವರು ಸೋಮಶೇಖರ್ ಅವರು **ಶಾಸನವನ್ನು ಸಂರಕ್ಷಿಸಿದ ಮೇಲೆ ಅವರ ಅನುಭವವನ್ನು ಹಂಚಿಕೊಂಡಿರುವ Video** ವನ್ನು ಮುಂದಿನ ಲಿಂಕ್ ಮೂಲಕ ನೋಡಬಹುದು - https://www.facebook.com/647427309/videos/10156383129807310/

ಡಿಜಿಟಲ್ ಸಂರಕ್ಷಣೆ

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವು ದಿನಾಂಕ 24-03-2021ರಂದು ಅಲ್ಲಾಳಸಂದ್ರದಲ್ಲಿರುವ ಶಾಸನವನ್ನು 0.05 ಮಿಲಿಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. **ಈ ಶಾಸನದ 3ಡಿ ಮಾಡಲ್ 6 ಕೋಟಿ ಮೂವತ್ತೈದು ಲಕ್ಷ ಪಾಲಿಗನ್ಸ್ ಹೊಂದಿದೆ.** ಈ 3ಡಿ ಡಿಜಿಟಲ್ ತಂತ್ರಜ್ಞಾನದಿಂದ ತೆಗೆದ ಚಿತ್ರಗಳನ್ನು ಶಾಸನ ತಜ್ಞರಾದ ಕೆ.ಆರ್.ನರಸಿಂಹನ್ ಅವರು ಶಾಸನವನ್ನು ಪರಿಷ್ಕರಿಸಿ ಕೊಟ್ಟಿರುತ್ತಾರೆ.



ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನ

ಭೌತಿಕ ಸಂರಕ್ಷಣೆ

ಈ ಶಾಸನವನ್ನು ಗ್ರಾಮಸ್ಥರೇ **ಚೌಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಉತ್ತಮವಾಗಿ ಸಂರಕ್ಷಣೆ ಮಾಡಿರುತ್ತಾರೆ**.

ಡಿಜಿಟಲ್ ಸಂರಕ್ಷಣೆ

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವು ದಿನಾಂಕ 21-ಅಕ್ಟೋಬರ್-2021 ರಂದು ದಾಸರಹಳ್ಳಿಯ ಚೌಡೇಶ್ವರಿ ದೇವಾಲಯದ ಮುಂದಿರುವ ಶಾಸನವನ್ನು 0.05 ಮಿಲಿಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. **ಈ ಶಾಸನದ 3ಡಿ ಮಾಡಲ್ 4 ಕೋಟಿ ಅರವತ್ತಮೂರು ಲಕ್ಷ ಪಾಲಿಗನ್ಸ್ ಹೊಂದಿದೆ**.



ದಾಸರಹಳ್ಳಿಯ ಸಾ.ಶ.1532ರ ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವ ಚಿತ್ರ
(ಚಿತ್ರದಲ್ಲಿ ಯುವರಾಜು ಆರ್ ಹಾಗೂ ಪಕ್ಕದಲ್ಲಿ ಚೌಡೇಶ್ವರಿ ದೇವಾಲಯದ ಅರ್ಚಕರು ನಿಂತಿರುವರು)

ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧದ ಶಾಸನ

ಭೌತಿಕ ಸಂರಕ್ಷಣೆ

ಈ ಶಾಸನವು ಪ್ರಾರಂಭದಲ್ಲಿ ಅಗ್ರಹಾರದ ವೇಣುಗೋಪಾಲಸ್ವಾಮಿ ದೇವಾಲಯದ ಮುಂದೆ ನಿಂತಿತ್ತು. ಆದರೆ ಸುಮಾರು ಹತ್ತು ವರ್ಷಗಳ ಹಿಂದೆ ರಸ್ತೆ ಕಾಮಗಾರಿ ಮಾಡುವ ಸಂದರ್ಭದಲ್ಲಿ ರೋಡ್ ರೋಲರ್ (Road roller) ವಾಹನವು ತಗುಲಿ ಎರಡು ಹೋಳಾಗಿ ಒಡೆದು ಹೋಗಿತ್ತು. ನಂತರ ಗ್ರಾಮಸ್ಥರೇ ಈ ಒಡೆದು ಹೋದ ಕಲ್ಲುಗಳನ್ನು ಒಂದರ ಮೇಲೆ ಮತ್ತೊಂದನ್ನು ಜೋಡಿಸಿ ಮೂಲ ಸ್ಥಳದಲ್ಲಿಯೇ ಇಟ್ಟಿದ್ದರು. ಸುಮಾರು ನಾಲ್ಕೈದು ವರ್ಷಗಳ ಹಿಂದೆ ಶಾಸನತಜ್ಞರಾದ ಕೆ.ಆರ್.ನರಸಿಂಹನ್ ಅವರು ಹಾಗೂ ಇತಿಹಾಸ ಸಂಶೋಧಕರಾದ ಧನಪಾಲ್ ಅವರು ಅಗ್ರಹಾರಕ್ಕೆ ಬೇಟಿ ನೀಡಿ ಈ ಶಾಸನವನ್ನು ನೋಡುತ್ತಿರುತ್ತಾರೆ. ಅದೇ ಸಂದರ್ಭದಲ್ಲಿ ರಸ್ತೆ ಕಾಮಗಾರಿಯು ನಡೆಯುತ್ತಿದ್ದರಿಂದ ನರಸಿಂಹನ್ ಅವರು ಈಗಾಗಲೇ ಈ ಶಾಸನಕಲ್ಲು ಒಡೆದುಹೋಗಿದೆ. ಪುನಃ ಇಲ್ಲಿಯೇ ಬಿಟ್ಟರೆ ನಿಮ್ಮೂರಿನ ಇತಿಹಾಸವನ್ನು ತಿಳಿಸುವ ಈ ಕಲ್ಲು ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ. ಆದ್ದರಿಂದ ಈ ಕಲ್ಲನ್ನು ಈ ದೇವಾಲಯದ (ವೇಣುಗೋಪಾಲಸ್ವಾಮಿ) ಪಕ್ಕದಲ್ಲಿ ಇಡಿ ಎಂದು ಸಲಹೆಯನ್ನು ನೀಡಿದಾಗ ಗ್ರಾಮಸ್ಥರು ಈ ಕಲ್ಲನ್ನು ದೇವಾಲಯದ ಹಿಂಭಾಗದಲ್ಲಿ ಇಟ್ಟಿದ್ದರು. ನಂತರದ ದಿನಗಳಲ್ಲಿ ಈ ಕಲ್ಲನ್ನು ಪುನಃ ಗ್ರಾಮಸ್ಥರು ದೇವಾಲಯದ ಪಕ್ಕದಲ್ಲೇ ಇರುವ ದೊಡ್ಡ ಆಲದ ಮರದ ಪಕ್ಕದಲ್ಲಿ ಇಟ್ಟಿದ್ದರು. ಆದರೆ **ಇತೀಚೆಗೆ ಯಶಸ್ವಿನಿ ಶರ್ಮ ಹಾಗೂ ಇವರ ತಂಡದ ಸಹಕಾರದೊಂದಿಗೆ ಎರಡು ಭಾಗವಾಗಿದ್ದ ಈ ಶಾಸನ ಕಲ್ಲನ್ನು ಅಕ್ಷರಗಳಿಗೆ ಚ್ಯುತಿ ಬರದಂತೆ ವೈಜ್ಞಾನಿಕವಾಗಿ ಜೋಡಿಸಿ ಸಂರಕ್ಷಿಸಲಾಗಿದೆ.** ಈ ಶಾಸನದ ಮೂಲ ಸ್ಥಿತಿ ಹೇಗಿತ್ತು, ನಂತರ ವಿವಿಧ ಹಂತಗಳಲ್ಲಿ ಈ ಶಾಸನವನ್ನು ಹೇಗೆ ಸಂರಕ್ಷಣೆ ಮಾಡಲಾಯಿತು ಎಂಬುದನ್ನು ಈ ಕೆಳಗಿನಂತೆ ಛಾಯಾಚಿತ್ರಗಳ ಸಹಿತ ವಿವರಿಸಲಾಗಿದೆ.

2019ರಲ್ಲಿ Inscriptions Stones of Bangalore ತಂಡದಿಂದ ಶಾಸನಗಳ 3D Scanning ಮಾಡುವ ಕಾರ್ಯ ಪ್ರಾರಂಭವಾಗಿತ್ತು. Altem ಸಂಸ್ಥೆಯ ಮಾಲೀಕರಾದ ಪ್ರಸಾದ್ ರೊಡಗಿ ಪರಂಪರೆಯ ರಕ್ಷಣೆಯ ಬಗ್ಗೆ ತುಂಬಾ ಆಸಕ್ತಿಯನ್ನು ಹೊಂದಿದ್ದರಿಂದ, ಅವರ ಸಹಕಾರದಿಂದ ಸುಮಾರು 10 ಶಾಸನಗಳನ್ನು ಉಚಿತವಾಗಿ 3D Scanning ಮೂಲಕ ಸಂರಕ್ಷಿಸುವ ಕಾರ್ಯ ಯಶಸ್ವಿಯಾಗಿ ನಡೆಯಿತು. ನಂತರ ಉದಯ್ ಕುಮಾರ್ Altem ಕಂಪನಿಯವರಿಗೆ, ಈಗಾಗಲೇ ಹತ್ತು ಶಾಸನಗಳನ್ನು ಉಚಿತವಾಗಿ Scanning ಮಾಡಿಕೊಟ್ಟಿದ್ದೀರ ಇನ್ನು ಮುಂದೆ ಸ್ಕ್ಯಾನಿಂಗ್ ಮಾಡುವ ಶಾಸನಗಳಿಗೆ ನಮ್ಮ ಕಡೆಯಿಂದ ಸಣ್ಣ ರೂಪದಲ್ಲಿ ಹಣವನ್ನು ನೀಡುತ್ತೇವೆ, ತಾವುಗಳು ದಯವಿಟ್ಟು ಪಡೆಯಬೇಕೆಂದು ಒತ್ತಾಯದ ಮೂಲಕ ಒಪ್ಪಿಸಲಾಯಿತು. ಇದಾದ ನಂತರ ಜನರ



ಎರಡು ಹೋಳಾಗಿದ್ದ ಶಾಸನವನ್ನು ಒಂದರ ಮೇಲೆ ಮತ್ತೊಂದನ್ನು ಕೂರಿಸಿರುವ ಚಿತ್ರ
ಚಿತ್ರಕೃಪೆ - ಧನಪಾಲ್ ಮಂಚೇನಹಳ್ಳಿ



ಎರಡು ಹೋಳಾಗಿದ್ದ ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನು ಹಾಕಿಸಿರುವ ಶ್ರಾದ್ಧದ ಶಾಸನದ ಚಿತ್ರ

ಕೊಡುಗೆಯಿಂದ ಅದರಲ್ಲೂ ಬೆಂಗಳೂರು ಮೂಲದ ಅಮೇರಿಕದಲ್ಲಿರುವ ಅನಾಮಿಕರೊಬ್ಬರು (ಅವರೇ ಹೆಸರನ್ನು ಹೇಳಬೇಡಿ ಎಂದಿದ್ದಾರೆ) ಮತ್ತು ಕೆಲವು ಸ್ಥಳೀಯರು ನೀಡಿರುವ ಹಣ ಸಹಾಯದಿಂದಾಗಿ ಇನ್ನಷ್ಟು ಶಾಸನಗಳನ್ನು 3D Scanning ಮಾಡಲಾಗುತ್ತಿತ್ತು. ಅದೇ ಸಮಯದಲ್ಲಿ ಮಲ್ಲೇಶ್ವರದ ರಕ್ಷಿತ್ ಶಿವರಾಮ್ ಅವರು ಮಲ್ಲೇಶ್ವರದ ಶಾಸನವನ್ನು ಸ್ಕ್ಯಾನ್ ಮಾಡಿಕೊಡಿ ನಾವು ಅದರ ಖರ್ಚುಗಳನ್ನು ಕೋಡುತ್ತೇವೆ ಎಂದರು. ಆಗ ಉದಯ್ ಕುಮಾರ್ ಅವರು ಬರೀ ಒಂದೇ ಒಂದು ಸ್ಕ್ಯಾನ್ ಮಾಡೋಕೆ ಆಗಲ್ಲ, ಸ್ಕ್ಯಾನ್ ಮಾಡುವವರು ಬಂದರೆ ಇಡೀ ದಿನ ಇರುತ್ತಾರೆ. ಒಂದು ದಿನಕ್ಕೆ 3-4 ಶಾಸನಗಳನ್ನು ಸ್ಕ್ಯಾನ್ ಮಾಡಬಹುದು. ಆ ಸ್ಕ್ಯಾನ್ ಗೆ ಖರ್ಚು ಬರುತ್ತದೆ ಎಂದಾಗ, ರಕ್ಷಿತ್ ಶಿವರಾಮ್ ಅವರು ಜಕ್ಕೂರು ಪ್ರದೇಶದಲ್ಲಿ ಸ್ನೇಹಿತರಿದ್ದಾರೆ. ಹಾಗಾದರೆ ಒಂದೇ ದಿನದಲ್ಲಿ ಮಲ್ಲೇಶ್ವರ, ಜಕ್ಕೂರು, ಅಗ್ರಹಾರ, ದೇವಸಂದ್ರದ ಶಾಸನಗಳನ್ನು ಸ್ಕ್ಯಾನ್ ಮಾಡಿಕೊಡಿ, ಆ ಒಂದು ದಿನದ ಖರ್ಚನ್ನು ನಾನು ಮತ್ತು ಗೆಳೆಯ ಶಿವಕುಮಾರ್ ಸೇರಿ ಕೊಡುತ್ತೇವೆ ಎಂದರು.

ನಂತರ ಇವರು ಕೊಟ್ಟಂತಹ ಹಣವನ್ನು ಬಳಸಿಕೊಂಡು ದಿನಾಂಕ 05-ಸೆಪ್ಟೆಂಬರ್-2020 ರಂದು ಉದಯ್ ಕುಮಾರ್ ಅವರು ALTEM ಕಂಪನಿಯವರನ್ನು ಕರೆದುಕೊಂಡು ಅಗ್ರಹಾರಕ್ಕೆ ಸ್ಕ್ಯಾನ್ ಮಾಡಲು ಬಂದಾಗ ಸ್ಥಳೀಯರಾದ ಮುನಿರಾಜು, ಅಶ್ವತ್ ಮತ್ತು ಇತರರು ಸೇರಿ ಶಾಸನದ ಕಲ್ಲನ್ನು ತೊಳೆದು ಹಾಗೂ ಕಲ್ಲನ್ನು ತಿರುಗಿಸಿ ಸ್ಕ್ಯಾನ್ ಮಾಡಲು ಅನುಕೂಲ ಮಾಡಿಕೊಟ್ಟರು. ಇದಾದ ನಂತರ ಶಾಸನವನ್ನು ಎಲ್ಲಿಯಾದರೂ ನಿಲ್ಲಿಸಬೇಕು ಎಂದಾಗ ಇಲ್ಲೆ ಪಕ್ಕದಲ್ಲಿರುವ ಆಲದಮರದ ಕೆಳಗೆ ಕಟ್ಟೆ ಕಟ್ಟಿ ನಿಲ್ಲಿಸುತ್ತೇವೆ ಎಂದು ಸ್ಥಳೀಯರು ಹೇಳಿದ್ದರು.

ಇದಾದ ನಂತರ ಮತ್ತೊಮ್ಮೆ ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವು ದಿನಾಂಕ 24-03-2021 ರಂದು ಅಗ್ರಹಾರದ ವೇಣುಗೋಪಾಲ ದೇವಸ್ಥಾನದ ಬಳಿ ಬೃಹತ್ ಮರದ ಕೆಳಗೆ ಇಟ್ಟಿರುವ ಈ ಶಾಸನವನ್ನು ಸ್ಕ್ಯಾನ್ ಮಾಡಿತು. **ಎಸ್.ರಾಜಗೋಪಾಲ್** (ತಮಿಳುನಾಡು ಪುರಾತತ್ವ ಇಲಾಖೆಯ **ಸೌಂದರಿ ರಾಜ್ ಕುಮಾರ್, ಪೊನ್ ಕಾರ್ತೀಕೆಯನ್** ಮತ್ತು **ಪಿ.ವಿ.ಕೃಷ್ಣಮೂರ್ತಿ** ಅವರು ಈ ಶಾಸನದ ಪಾಠವನ್ನು ಓದಿಕೊಟ್ಟರು. ಇದರಿಂದ ನಮಗೆ ತಿಳಿದು ಬಂದ ಹೊಸ ವಿಷಯವೇನೆಂದರೆ ಬಿ.ಎಲ್. ರೈಸ್ ಅವರು ಶಾಸನದ ಹಿಂಭಾಗದ ಪಾಠವನ್ನು ಮಾತ್ರ ದಾಖಲಿಸಿದ್ದರು ಮತ್ತು ಕಾಲಮಾನವನ್ನು 1250? ಎಂದು ಅನುಮಾನವನ್ನು ವ್ಯಕ್ತಪಡಿಸಿದ್ದರು. ಆದರೆ **ನಮ್ಮ 3ಡಿ ಸ್ಕ್ಯಾನ್ ಮೂಲಕ ಶಾಸನ ಮುಂಭಾಗದ ಪಾಠ ಮತ್ತು ದಿನಾಂಕವು ದೊರೆಯಿತು. ಶಾಸನದ ದಿನಾಂಕವು 13 ಜನವರಿ, 1350 ಆಗಿದ್ದು, ರೈಸ್ ಅವರು ತಿಳಿಸಿರುವ ಕಾಲಕ್ಕಿಂತ ನೂರು ವರ್ಷಗಳು ಮುಂದಕ್ಕೆ ಹೋಯಿತು**.

ಅಗ್ರಹಾರ ಶಾಸನದ ಭಾರತೀಯ ಕಾಲಮಾನ ಇಂದಿನ ಕ್ಯಾಲೆಂಡರ್ ಪ್ರಕಾರ ಜನವರಿ 13ಕ್ಕೆ ಹೊಂದಿಕೆಯಾಗುತ್ತದೆ. ಹೇಗಿದ್ದರೂ ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಸಂಚಿಕೆಯನ್ನು ಜನವರಿ 13ಕ್ಕೆ ಬಿಡುಗಡೆ ಮಾಡಲು ಸಿದ್ಧತೆ



ಅಗ್ರಹಾರದ ಶಾಸನವನ್ನು ಕೂಡಿಸಲು ಸರಿಯಾದ ಯೋಜನೆ ಮಾಡುತ್ತಿರುವುದು (ಚಿತ್ರದಲ್ಲಿ ಶಶಿಕುಮಾರ ನಾಯ್ಕ ಕೆ.ಸಿ, ಉದಯ ಕುಮಾರ್ ಪಿ.ಎಲ್. ಹಾಗೂ ನಂಜುಂಡಸ್ವಾಮಿ)



ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ
ತುಂಡಾದ ಶಾಸನದ ಭಾಗವನ್ನು ಸ್ಟೈನ್ಲೆಸ್ ಸ್ಟೀಲ್ ಡೋವೆಲ್ ಪಿನ್‌ಗಳನ್ನು ಹಾಕಿ ಜೋಡಿಸುತ್ತಿರುವುದು



ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ
ತುಂಡಾದ ಶಾಸನದ ಭಾಗವನ್ನು ಸ್ಟೈನ್ಲೆಸ್ ಸ್ಟೀಲ್ ಡೋವೆಲ್ ಪಿನ್‌ಗಳನ್ನು ಹಾಕಿ ಜೋಡಿಸುತ್ತಿರುವುದು

ಮಾಡಿಕೊಳ್ಳುತ್ತಿರುವಾಗ, ಅದೂ ಅಲ್ಲದೇ ಅಗ್ರಹಾರದ ಶಾಸನದ ಕಾಲಮಾನವೂ ಜನವರಿ 13 ಆಗಿರುವುದರಿಂದ, ಅಗ್ರಹಾರದಲ್ಲಿಯೇ ಈ ಸಂಚಿಕೆಯನ್ನು ಬಿಡುಗಡೆ ಮಾಡಿದರೆ ಅಗ್ರಹಾರದ ಜನರಿಗೆ ತಮ್ಮ ಊರಿನ ಗತ ಇತಿಹಾಸವನ್ನು ತಿಳಿಸಿಕೊಟ್ಟಂತೆ / ನೆನಪು ಮಾಡಿದಂತೆ ಆಗುತ್ತದೆ. ಆದ್ದರಿಂದ ಈ ಶಾಸನ ಕಲ್ಲನ್ನು ಸ್ಥಳೀಯರು ಸಂರಕ್ಷಣೆ ಮಾಡಿದ್ದಾರೋ ಇಲ್ಲವೋ ಎಂಬುದನ್ನು ನೋಡಲು ಉದಯ್ ಕುಮಾರ್ ಅವರು ಅಗ್ರಹಾರಕ್ಕೆ ಹೋದಾಗ ಶಾಸನ ಕಲ್ಲು ಅಶ್ವತ್ಥ ಮರದ ಕೆಳಗೆ ಮೊದಲಿದ್ದ ಹಾಗೆಯೇ ಬಿದ್ದಿತ್ತು. ನಂತರ ಉದಯ್ ಕುಮಾರ್ ಅವರು ಈ ಶಾಸನ ಕಲ್ಲನ್ನು ಒಂದರ ಮೇಲೆ ಮತ್ತೊಂದನ್ನು ಇಟ್ಟು ಜೋಡಿಸಬಹುದಾ ಅಥವಾ ಬೇರೆ ಯಾವುದಾದರೂ ವಿಧಾನಗಳನ್ನು ಬಳಸಿಕೊಳ್ಳಬಹುದಾ ಎಂದು ಯೋಚಿಸುತ್ತಾ ವಾಸ್ತುಶಿಲ್ಪ ಹಾಗೂ ಸಂರಕ್ಷಣೆ ತಜ್ಞರಾದ **ಯಶಸ್ವಿನಿ ಶರ್ಮ** ಅವರಿಗೆ ಕರೆ ಮಾಡಿ ಕೇಳಿದರು. ಅದಕ್ಕೆ ಯಶಸ್ವಿನಿ ಶರ್ಮ ಅವರು **ನೀಲೇಶ್ ಥಾಕ್ಕರ್** (ಜೀರ್ಣೋದ್ಧಾರ ಸಂಸ್ಥೆಯ ಮಾಲೀಕರು) ಅವರೊಂದಿಗೆ ಮಾತನಾಡಿ ನಂತರ ಉದಯ್ ಅವರಿಗೆ **ನೀಲೇಶ್ ಥಾಕ್ಕರ್ ಅನ್ನುವವರು ಉಚಿತವಾಗಿ ಸ್ಟೈನ್ ಲೇಸ್ ಸ್ಟೀಲ್ ಡವಲ್ ಪಿನ್ ಸೇರಿಸಿ ಜೋಡಿಸುವ ಕಾರ್ಯವನ್ನು ಮತ್ತು ಸಂರಕ್ಷಿಸುವ ಕೆಲಸವನ್ನು ಮಾಡುತ್ತೇವೆ** ಅಂತ ಮುಂದೆ ಬಂದಿದ್ದಾರೆ ಎಂದು ತಿಳಿಸಿದರು.



ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ ಶಾಸನದ ಸಂರಕ್ಷಣೆಯಲ್ಲಿ ಕೈ ಜೋಡಿಸಿದ ಗ್ರಾಮಸ್ಥರು

ಇದಾದ ಮೇಲೆ ದಿನಾಂಕ 29-ಡಿಸೆಂಬರ್-21ರ ಬುಧವಾರದಂದು ನೀಲೇಶ್ ಥಾಕ್ಕರ್ ತಂಡವು ಶಾಸನ ಜೋಡಣೆಗೆ ಅಗ್ರಹಾರಕ್ಕೆ ಬಂದು ವೈಜ್ಞಾನಿಕವಾಗಿ, ಅಕ್ಷರಗಳಿಗೆ ಹಾನಿಯಾಗದಂತೆ ಶಾಸನದ ಒಂದು ಭಾಗವನ್ನು ಮತ್ತೊಂದು ಭಾಗಕ್ಕೆ ಮರು ಜೋಡಿಸಲು ಬೆಳಿಗ್ಗೆಯಿಂದ ಸಂಜೆಯವರೆಗೆ ಸಮಯ ತೆಗೆದುಕೊಂಡಿತು. ಈ ಸಂದರ್ಭದಲ್ಲಿ ಯಶಸ್ವಿನಿ ಶರ್ಮ ಅವರ ಜೊತೆಗೆ ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವೂ ಸಹ ಸ್ಥಳದಲ್ಲಿತ್ತು. ಒಡೆದು ಹೋಗಿದ್ದ ಎರಡೂ ಕಲ್ಲುಗಳನ್ನು ಜೋಡಿಸಿದ ನಂತರ, ಥಾಕ್ಕರ್ ಅವರ ತಂಡವು ಈ ಕಲ್ಲುಗಳ ಜೋಡಣೆಗೆ ಹಾಕಿರುವ ಅಂಟು ಒಣಗಲು ಎರಡು ದಿನ ಬೇಕು ಎಂದು ಹೇಳಿ ಹೋದರು. ಇದಾದ ಮೇಲೆ ದಿನಾಂಕ 06-ಜನವರಿ-2022ರ ಗುರುವಾರದಂದು ನೀಲೇಶ್ ಥಾಕ್ಕರ್ (ಜೀರ್ಣೋದ್ಧಾರ ಸಂಸ್ಥೆಯ ಮಾಲೀಕರು) ಮತ್ತು ಅವರ ತಂಡವು (ಹತ್ತು ಜನ) ಜೋಡಿಸಿದ ಶಾಸನವನ್ನು ಸಂರಕ್ಷಿಸುವ ಕೆಲಸವನ್ನು ಬೆಳಗ್ಗೆ ಹತ್ತು ಗಂಟೆಗೆ ಪ್ರಾರಂಭಿಸಿ, ಕೆಲಸವನ್ನು ಮುಗಿಸುವಷ್ಟರಲ್ಲಿ ಸಂಜೆ 7 ಗಂಟೆಯಾಯಿತು.

ಈ ರೀತಿಯಾಗಿ ಅಗ್ರಹಾರದ ಶಾಸನ ಕಲ್ಲನ್ನು ಬಹು ಜೋಪಾನವಾಗಿ ಸಂರಕ್ಷಿಸಿರುವ **ಯಶಸ್ವಿನಿ ಶರ್ಮ** ಹಾಗೂ **ನಿಲೇಶ್ ಥಾಕ್ಕರ್** ಅವರ ತಂಡ ಅಭಿನಂದನಾರ್ಹರು. ಇದೊಂದು ಶಾಸನ ಸಂರಕ್ಷಣೆಗೆ ಮಾದರಿ ವಿಧಾನವಾಗಿದ್ದು, ಈ ಕಾರ್ಯವು ಶಾಸನ ಕಲ್ಲನ್ನು ಹೇಗೆ ಜೋಪಾನವಾಗಿ ಕಾಪಾಡಿಕೊಳ್ಳಬೇಕೆಂಬ ಪಾಠ ಕಲಿಸುತ್ತದೆ.



ಅಗ್ರಹಾರ ಶಾಸನದ 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವುದು.
(ಚಿತ್ರದಲ್ಲಿ ಭೈರಪ್ಪ ಎಂ.ಜಿ.)

ಡಿಜಿಟಲ್ ಸಂರಕ್ಷಣೆ

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವು ದಿನಾಂಕ 24-03-2021ರಂದು ಅಗ್ರಹಾರದ ವೇಣುಗೋಪಾಲಸ್ವಾಮಿ ದೇವಾಲಯದ ಪಕ್ಕದಲ್ಲಿ ಅಶ್ವತ್ಥ ಮರದ ಬುಡದಲ್ಲಿ ಬಿದ್ದಿದ್ದ ಶಾಸನವನ್ನು 0.05 ಮಿಲಿಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. **ಈ ಶಾಸನದ 3ಡಿ ಮಾಡಲ್ 9 ಕೋಟಿ ಐವತ್ತೆರಡು ಲಕ್ಷ ಪಾಲಿಗನ್ಸ್ ಹೊಂದಿದೆ.**



ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿ ಕಲ್ಲನ್ನು ಸ್ವಚ್ಛತೆ ಮಾಡುತ್ತಿರುವುದು
(ಚಿತ್ರದಲ್ಲಿ ಯುವರಾಜು ಆರ್)

ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿಕಲ್ಲು

ಭೌತಿಕ ಸಂರಕ್ಷಣೆ

ಜಕ್ಕೂರು ಬಡಾವಣೆಯ ಟೆಲಿಕಾಂ ಲೇಔಟ್ ನಲ್ಲಿರುವ ಮೀರಾ ವಿಜಯಕುಮಾರ್ ಅವರು ತಮ್ಮ ನಿವೇಶನದಲ್ಲಿ ಮನೆ ಕಟ್ಟಿಸಲು 2011ರಲ್ಲಿ ಪಾಯ ತೋಡಿಸುತ್ತಿದ್ದಾಗ, ನಿವೇಶನದ ವಾಯುವ್ಯ ಮೂಲೆಯಲ್ಲಿ ಮುಚ್ಚಿಹೋಗಿರುವ ಬಾವಿಯನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ, ಬಾವಿಯೊಳಗೆ ಒಂದು ಶಿಲ್ಪ ಇರುವುದನ್ನು ಗಮನಿಸುತ್ತಾರೆ. ಕಲ್ಲಿನ ಮೇಲೆ ಕೆತ್ತನೆ ಇರುವುದನ್ನು ಗಮನಿಸಿ, ಆ ಕಲ್ಲನ್ನು ಅಲ್ಲೇ ಪಕ್ಕದಲ್ಲಿದ್ದ ಮರದ ಕೆಳಗೆ ಇರಿಸುತ್ತಾರೆ. ಇತ್ತೀಚೆಗೆ ಡೆಕ್ಕನ್ ಹೆರಾಲ್ಡ್ ನಲ್ಲಿ ಶಾಸನಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನಮ್ಮ ತಂಡದ ಕಾರ್ಯವೈಖರಿಯನ್ನು ಕಂಡು ಮೀರಾ ವಿಜಯಕುಮಾರ್ ಅವರು ನಮ್ಮ ಗಮನಕ್ಕೆ ತಂದಾಗ, ನಮ್ಮ ತಂಡವು ಸ್ಥಳಕ್ಕೆ ಬೇಟಿ ನೀಡಿ, ಉಬ್ಬು ಶಿಲ್ಪದ ಮೇಲೆ ಸೀಮೆಂಟ್ ಬಿದ್ದು ಅಸ್ಪಷ್ಟವಾಗಿದ್ದನ್ನು, ಶುಭ್ರಗೊಳಿಸಿ, ನಂತರ 3ಡಿ ಸ್ಕ್ಯಾನಿಂಗ್ ಮೂಲಕ ಡಿಜಿಟಲ್ ಸಂರಕ್ಷಣೆ ಮಾಡಿತು.

ಡಿಜಿಟಲ್ ಸಂರಕ್ಷಣೆ

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡವು ದಿನಾಂಕ-21-10-2021ರಂದು ಜಕ್ಕೂರಿನ ಟೆಲಿಕಾಂ ಲೆ ಔಟ್ ನ ಮೀರಾ ವಿಜಯ್ ಅವರ ಮನೆಯ ಬಳಿ ಇರುವ ಸತಿಗಲ್ಲನ್ನು 0.05 ಮಿಲಿಮೀಟರ್ ಹೈ-ರೆಸಲ್ಯೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. **ಈ ಕಲ್ಲಿನ 3ಡಿ ಮಾಡಲ್ 1 ಕೋಟಿ ಐವತ್ತಾರು ಲಕ್ಷ ಪಾಲಿಗಾನ್ಸ್ ಹೊಂದಿದೆ**.



ಜಕ್ಕೂರಿನ ಟೆಲಿಕಾಂ ಲೇಔಟ್ ನಲ್ಲಿರುವ ಸತಿ ಕಲ್ಲನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡುತ್ತಿರುವುದು.
(ಚಿತ್ರದಲ್ಲಿ ಶಶಿಕುಮಾರ ನಾಯ್ಕ ಕೆ.ಸಿ.)

ಪ್ರಚಾರ

ಶಾಸನಗಳನ್ನು ಭೌತಿಕವಾಗಿ ಮತ್ತು ಡಿಜಿಟಲ್ ರೂಪದಲ್ಲಿ ಸಂರಕ್ಷಿಸಿದರೂ ಕೂಡ ಆ **ಶಾಸನಗಳ ಮಾಹಿತಿಯು ಹೊರ ಜಗತ್ತಿಗೆ ತಿಳಿಯದೇ ಹೋದರೆ ನಿಜವಾಗಿಯೂ ಆ ಶಾಸನ ನಾಶವಾಗಿರುವಷ್ಟೇ ನಷ್ಟ ಎಂದು ಹೇಳಬಹುದು.** ಹಾಗೂ ಯಾರಿಗೂ ತಿಳಿಯದೇ ಒಂದು ರೀತಿಯಲ್ಲಿ ಅಜ್ಞಾತವಾಗಿ ಉಳಿಯುವುದರಿಂದ ಮಾಡಿದ ಕಾರ್ಯವೂ ಸಹ ಸಾರ್ಥಕವಾಗುವುದಿಲ್ಲ ಎಂಬುದು ನಮ್ಮ ಅನಿಸಿಕೆ. ಆದ್ದರಿಂದ ಈ ಪರಿಸ್ಥಿತಿಯನ್ನು ಬದಲಾಯಿಸುವುದು ಬಹಳ ಮುಖ್ಯವಾಗುತ್ತದೆ. ಇದಕ್ಕಾಗಿ ಕೆಲವು ಪ್ರಚಾರ ಕಾರ್ಯಗಳನ್ನು ಮಾಡಲೇಬೇಕಾಗುತ್ತದೆ. ಅದು **ಅಂತರ್ಜಾಲದ ಮೂಲಕವಾದರೂ ಸರಿ ಅಥವಾ ಭೌತಿಕವಾದರೂ ಸರಿ**. ಈ ದೃಷ್ಟಿಯಿಂದ ಈ ಸಂಚಿಕೆಯಲ್ಲಿ ಹೆಸರಿಸಿರುವ ಕೆಲವು ಶಾಸನಗಳಿಗೆ ಸಂಬಂಧಿಸಿದಂತೆ ನಡೆದಿರುವ ಪ್ರಚಾರ ಕಾರ್ಯಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

ಜಕ್ಕೂರಿನಲ್ಲಿ ಎರಡು ಶಾಸನಗಳು ಮತ್ತು ವೀರಗಲ್ಲುಗಳ ಬಗ್ಗೆ ಪ್ರಾರಂಭದಲ್ಲಿ ಸ್ಥಳೀಯರಿಗೆ ಯಾವುದೇ ಮಾಹಿತಿ ಇರಲಿಲ್ಲ, ಕೆ.ಆರ್.ನರಸಿಂಹನ್ ಮತ್ತು ಧನಪಾಲ್ ಮಂಚೆನಹಳ್ಳಿ ಅವರ ಮಾರ್ಗದರ್ಶನದಲ್ಲಿ ಗ್ರಾಮಸ್ಥರು ಇವುಗಳನ್ನು ಸಂರಕ್ಷಿಸಿದ್ದರು. ನಂತರ ಸ್ಥಳೀಯರಿಗೆ ಇವುಗಳ ಬಗ್ಗೆ ಮಾಹಿತಿ ನೀಡಿದಾಗ, **ತಮ್ಮ ಗ್ರಾಮದ ಸಾವಿರ ವರ್ಷಗಳ ಐತಿಹಾಸಿಕತೆ ತಿಳಿದು ಹೆಮ್ಮೆ ಪಟ್ಟರು ಮತ್ತು ತಮ್ಮ ಊರಿನ ಇತರೆ ಪ್ರಾಚೀನ ಸ್ಮಾರಕಗಳ ರಕ್ಷಣೆಗೆ ಮುಂದಾದರು**. ಇದಾದ ಕೆಲವು ದಿನಗಳ ನಂತರ ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು ತಂಡದ ಸದಸ್ಯರಾಗಿದ್ದ ಪಿ.ಎಲ್.ಉದಯ್ ಕುಮಾರ್ ಅವರು ಬೆಂಗಳೂರಿನ **ಸೃಷ್ಟಿ ಕಾಲೇಜಿನ ವಿದ್ಯಾರ್ಥಿಗಳನ್ನು** 1 ಆಗಸ್ಟ್ 2019ರಂದು ಜಕ್ಕೂರಿಗೆ ಕರೆದುಕೊಂಡು ಹೋಗಿ ಶಾಸನಗಳು ಮತ್ತು ಅಲ್ಲಿನ ವೀರಗಲ್ಲಿನ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತಾರೆ. ಹಾಗೂ ಇವುಗಳನ್ನು ಕೆ.ವಿ.ಭೈರೇಗೌಡ ಕಲಾಮಂದಿರದ ಆವರಣಕ್ಕೆ ಸ್ಥಳಾಂತರಿಸಿದ ಸ್ವಾರಸ್ಯಕರ ಸನ್ನಿವೇಶ ಬಗ್ಗೆಯೂ ವಿದ್ಯಾರ್ಥಿಗಳಿಗೆ ವಿವರಿಸಿರುತ್ತಾರೆ. ಇಷ್ಟು ಮಾತ್ರವಲ್ಲದೇ ಬೆಂಗಳೂರಿನ ವಿವಿಧ ಬಡಾವಣೆಗಳ ಶಾಸನಗಳ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ದಿನಾಂಕ 18-01-2018ರಂದು ಸುಮಾರು ಎರಡು ಸಾವಿರ ಪ್ರತಿಗಳನ್ನು ಮುದ್ರಣ ಮಾಡಿಸಿ ಹಂಚಲಾಗಿದ್ದು, ಇದೇ ಪತ್ರಿಕೆಯಲ್ಲೇ ಜಕ್ಕೂರಿನ ಶಾಸನಗಳ ಬಗ್ಗೆಯೂ ಇದ್ದುದರಿಂದ ಈ ಬಡಾವಣೆಗೂ ಸಹ ಸುಮಾರು ಇನ್ನೂರು ಪತ್ರಿಕೆಗಳನ್ನು ಗ್ರಾಮಸ್ಥರ ಮೂಲಕವೇ ಹಂಚಿಸಲಾಗಿದೆ. ಹಾಗೂ ಬೆಂಗಳೂರಿನ ವಿವಿಧ ಪ್ರದೇಶದ ಇತಿಹಾಸಕ್ತ ಜನರನ್ನು ಜಕ್ಕೂರಿಗೆ ಕರೆಸುವ ಮೂಲಕ Know to



ಜಕ್ಕೂರಿನ ಶಾಸನಗಳ ಬಗ್ಗೆ ದಿನ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡುತ್ತಿರುವ ಗ್ರಾಮಸ್ಥರು

your Neighbourhood ಎಂಬ ಎಂಟಕ್ಕೂ ಹೆಚ್ಚು ಕಾರ್ಯಕ್ರಮಗಳನ್ನುನಡೆಸಿರುವುದು ಇನ್ನೂ ವಿಶೇಷ. ಹಾಗೂ ಜಕ್ಕೂರಿನ ಇತಿಹಾಸವನ್ನು ತಿಳಿಸುವ ಶಾಸನದ ಚಿತ್ರ ಮತ್ತು ಮಾಹಿತಿಯನ್ನು ಒಳಗೊಂಡ ಸುಮಾರು ಐದು ಸಾವಿರ ಪೋಸ್ಟ್‌ಕಾರ್ಡ್ ಗಳನ್ನು ಸ್ಥಳೀಯರಿಗೆ ಹಂಚಿರುವುದು ಗಮನಾರ್ಹ ಸಂಗತಿ.

ನಂತರ ಮಿಥಿಕ್ ಸೊಸೈಟಿಯ 3ಡಿ ಡಿಜಿಟಲ್ ತಂಡದ ನೇತೃತ್ವವನ್ನು ವಹಿಸಿಕೊಂಡ ನಂತರ, ಪಿ.ಎಲ್.ಉದಯ್ ಕುಮಾರ್ ಮತ್ತು ತಂಡ 24 ಆಗಸ್ಟ್ 2021ರಂದು **ಯಲಹಂಕ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳನ್ನು** ಜಕ್ಕೂರಿಗೆ ಕರೆಸಿ ಇಲ್ಲಿನ ಶಾಸನಗಳು ಮತ್ತು ವೀರಗಲ್ಲಿನ ಬಗ್ಗೆ ತಿಳಿಸಿರುತ್ತಾರೆ. ಮುಖ್ಯವಾಗಿ ಶಾಸನಗಳ ಅಕ್ಷರಗಳಿಗೆ ಗೋಧಿ ಹಿಟ್ಟನ್ನು ಹಚ್ಚಿ ಯಾವ ರೀತಿ ಓದಬಹುದು ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕವೂ ತಿಳಿಸಿರುತ್ತಾರೆ.


2019ರಲ್ಲಿ ಬೆಂಗಳೂರಿನ ಕೆರೆಗಳ ಬಗ್ಗೆ ಸಂಶೋಧನಾ ಲೇಖನವನ್ನು ಪ್ರಸ್ತುತಪಡಿಸುವ ದೃಷ್ಟಿಯಿಂದ ಆಸ್ಟ್ರೇಲಿಯಾದ ಗ್ರಿಫ್ರಿತ್ ವಿಶ್ವವಿದ್ಯಾಲಯದ ಲಿಯಾ ರಿಬೈರೊ ಡಿ ನೊರೊನ್ಹಾ ಎಂಬ ಒಬ್ಬ ವಿದ್ಯಾರ್ಥಿನಿಯು ಸಹ ಜಕ್ಕೂರಿನ ಶಾಸನವಿರುವ ಸ್ಥಳಕ್ಕೆ ಬೇಟಿ ನೀಡಿದ್ದಾರೆ. ಈ ಸಂಗತಿ ನಿಜಕ್ಕೂ ಜಕ್ಕೂರಿನ ಜನರು ಹೆಮ್ಮೆಪಡುವಂತಹ ವಿಚಾರವಾಗಿದ್ದು, ಇದರಿಂದ ವಿದೇಶಿಗರಿಗೂ ಕೂಡ ಸ್ಥಳೀಯ ಇತಿಹಾಸದಲ್ಲಿ ಇರುವ ಆಸಕ್ತಿಯು ತಿಳಿಯುತ್ತದೆ.

ಜಕ್ಕೂರಿನ ಶಾಸನಗಳ ಸಂರಕ್ಷಣೆಯಲ್ಲಿ ಸಹಕರಿಸಿದವರಲ್ಲಿ ಒಬ್ಬರಾದ ನಾಗರಾಜಪ್ಪನವರು ಸಹ ಶಾಸನ ಕಲ್ಲಿನಲ್ಲಿರುವ ಪಾಠ ಮತ್ತು ತಮ್ಮ ಊರಿನ ಇತಿಹಾಸವನ್ನು ಇಲ್ಲಿಗೆ ಭೇಟಿ ನೀಡಿದವರಿಗೆ ವಿವರಿಸುತ್ತಿರುವುದು ಇವರಿಗೆ ತನ್ನೂರಿನ ಬಗ್ಗೆ ಇರುವ ಹೆಮ್ಮೆಯನ್ನು ತಿಳಿಸುತ್ತದೆ.

ಜಕ್ಕೂರಿಗೆ ಸಂಬಂಧಿಸಿದ ಶಾಸನಗಳ ಬಗ್ಗೆ ಜಕ್ಕೂರಿನಲ್ಲಿ ಸ್ಥಳೀಯರಿಗೆ ತಿಳಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಾಳಸಂದ್ರದ ಉಲ್ಲೇಖ ಬರುತ್ತದೆ. ಆ ಸಮಯದಲ್ಲಿ ಅಲ್ಲೇ ಇದ್ದ ಅಲ್ಲಾಳಸಂದ್ರದ ಸೋಮಶೇಖರ್ ಎಂಬ ಸ್ಥಳೀಯ ವ್ಯಕ್ತಿ ಈ ಕಾರ್ಯಕ್ರಮದಿಂದ ಪ್ರೇರಿತನಾಗಿ ಅಲ್ಲಾಳಸಂದ್ರದ ಮೋರಿಯ ಬಳಿ ನಿಂತಿದ್ದ ಒಂದು ಐತಿಹಾಸಿಕ ಶಾಸನವನ್ನು ಒಂದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಸಂರಕ್ಷಿಸುತ್ತಾರೆ ಎಂದರೆ ಶಾಸನಗಳ ಬಗ್ಗೆ ಇರುವ ಪ್ರಚಾರದ ಅವಶ್ಯಕತೆ ತಿಳಿಯುತ್ತದೆ. ಆದ್ದರಿಂದ ಈ ಸಂಚಿಕೆಯಲ್ಲಿ ಉಲ್ಲೇಖವಾಗಿರುವ ಇನ್ನಿತರ ಬಡಾವಣೆಗಳ ಪರಂಪರೆ ಮತ್ತು ಶಾಸನಗಳ ಬಗ್ಗೆಯೂ ಮುಂದಿನ ದಿನಗಳಲ್ಲಿ ಆಸಕ್ತರಿಗೆ ತಿಳಿಸುವ/ಪ್ರಚಾರ ಮಾಡುವ ಪ್ರಯತ್ನ ನಿರಂತರವಾಗಿ ಮುನ್ನಡೆಯಲಿದೆ. ಇಷ್ಟು ಮಾತ್ರವಲ್ಲದೇ **ಬೆಂಗಳೂರಿನ ಶಾಸನಗಳನ್ನು ಹಾಕಿಸಿದ ದಿನವನ್ನು ಆ ಶಾಸನದ ಹುಟ್ಟುಹಬ್ಬ ಎಂದು ಸಾಮಾಜಿಕ ಜಾಲತಾಣಗಳಲ್ಲಿ ತಿಳಿಸುವ/ಪ್ರಚಾರ ಮಾಡುವ ಕಾರ್ಯವನ್ನೂ ಮಾಡಲಾಗುತ್ತಿದೆ**.



ಜಕ್ಕೂರಿನ ಶಾಸನದ ಬಳಿ ಯಲಹಂಕದ ಸರ್ಕಾರಿ ಕಾಲೇಜಿನ ಇತಿಹಾಸ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಜಕ್ಕೂರಿನ ಎಂ.ಶ್ರೀನಿವಾಸ್ ಮೂರ್ತಿ, ಎನ್ ಶ್ರೀಕಂಠಪ್ಪ ಅವರು



City Express | www.newindianexpress.com | Expresso | PHOTOSHOOT | THURSDAY 18•1•2018 | 6

BEGUR NAAGATARA'S BENGULURU KAALAGA INSCRIPTION
Year of installation: 900 AD
Inscription language: Kannada
Location: Begur Nageshwara temple praakara
Description: Earliest written record of the name Bengaluru

T DASARAHALLI
Year of installation : 700 - 750 AD
Inscription language: Kannada
Location: In a lane in Vidya Nagar
Description: Turugol Veeragallu (heroic death defending a cattle raid) of Marasinga

CITY LOSING
MEMORIES ETCHED IN STONE

Bengaluru once had over 150 inscription stones dating from 750AD. But today, 120 of them have disappeared due to rapid urbanisation. Udaya Kumar, a history buff, has created a Facebook group, The Incredible Inscription Stones of Bangalore, along with his friends to educate people about their history and importance. *City Express* documents some of these stone inscriptions such as Begur Naagatara's Benguluru Kaalaga Inscription which is the earliest written record of the name Bengaluru dating back to 900 AD

Pics and text by Pushkar V

BEGUR FORT TONDABBE INSCRIPTION
Year of installation : 950 AD
Inscription language: Kannada
Location: On a pillar at the entrance to Begur fort
Description: Record of the death of Tondabbe, the daughter of Chieftain Naagtara by the Jain way of Sanyasana or fasting to death.

VIBHUTIPURA
Year of installation : 1307 AD
Inscription language: Tamil
Location: Inside Veerashaiva Mutt alongside a modern-day stone installation carrying Kannada and English translations of the inscription.
Description: Record of the building of the village, mutta and lake by VeeraBallala III

DODDANEKKUNDI
Year of installation : 1304 AD
Inscription language: Tamil
Location: Leaning against a roadside tree next to Sri Ram Temple
Description: Donation record by VeeraBallala III of lands in Nekkundi to the Sivaganga temple.

KAIKONDRAHALLI
Year of installation : 900 AD
Inscription language: Kannada
Location: Near a commercial complex on Kasavanahalli Main Road
Description: Uralivu (heroic death defending village desecration) veeragallu for Ereyappa of Kannelli

JAKKUR
Year of installation : 1342 AD
Inscription language: Kannada
Location: Recently relocated to the KV Bhyregowda Rangamandira
Description: Donation record by Veera Ballala III of lands in Jakkur to the Allalanatha temple.

MARATHAHALLI
Year of installation : 1508 AD
Inscription language: Telugu
Location: In an inner lane of Chowdeshwari Temple Street

KODIGEHALLI
Year of installation : 1431 AD
Inscription language: Kannada
Location: On the edge of a busy road near the Anjenaya Temple, Virupakshapura layout
Description: Donation of the village of Virupakshapura on August 8, 1431

TINDLU
Year of installation : 1368 AD
Inscription language: Kannada
Location: In a narrow lane near Thindlu Main Road

ಬೆಂಗಳೂರು ಪ್ರದೇಶದಲ್ಲಿರುವ ಶಾಸನಗಳ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದು

https://www.newindianexpress.com/cities/bengaluru/2018/jan/17/city-losing-memories-etched-in-stone-1756926.html



ತಮ್ಮ ಗ್ರಾಮದ ಇತಿಹಾಸವನ್ನು ಸೃಷ್ಟಿ ಕಾಲೇಜಿನ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಿರುವ ನಾಗರಾಜಪ್ಪ ಅವರು.




ಜಕ್ಕೂರಿನ ಇತಿಹಾಸ ಪರಂಪರೆ ತಿಳಿಸಿದ ಸಂದರ್ಭದಲ್ಲಿ ಬೆಂಗಳೂರಿನ ಸೃಷ್ಟಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಉದಯ್ ಕುಮಾರ್ ಮತ್ತು ಜಕ್ಕೂರಿನ ಎಸ್.ನಾಗರಾಜ್ ಅವರು



ಜಕ್ಕೂರ ಶಾಸನದ ಬಳಿ ಯಲಹಂಕದ ಸರ್ಕಾರಿ ಕಾಲೇಜಿನ ಇತಿಹಾಸ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಜಕ್ಕೂರಿನ ಎಂ.ಶ್ರೀನಿವಾಸ್ ಮೂರ್ತಿ ಮತ್ತು ಎನ್.ಶ್ರೀಕಂಠಪ್ಪ ಅವರು




ಜಕ್ಕೂರಿನ ಇತಿಹಾಸ ತಿಳಿಯಲು ಬಂದ ಆಸಕ್ತರು ಶಾಸನಗಳು ಮತ್ತು ಕೆರೆಗಳ ನಕ್ಷೆಯಿರುವ ಚಿತ್ರವನ್ನು ಕುತೂಹಲವಾಗಿ ನೋಡುತ್ತಿರುವುದು.




ಶಾಸನಗಳನ್ನು ನಿರರ್ಗಳವಾಗಿ ಓದುವ ಜಕ್ಕೂರಿನ ನಿವಾಸಿ ಅಭಿಷೇಕ್
(ಚಿತ್ರಕೃಪೆ - ರಕ್ಷಾ ಕೆ ಭಟ್)



ಜಕ್ಕೂರಿನ ಸಾ.ಶ 1342ರ ಹೊಂನಮಾರಯನಾಯ್ಕರ ಶಾಸನವನ್ನು ನೋಡುತ್ತಿರುವ ಉದಯ ಕುಮಾರ್, ಲಕ್ಷ್ಮಿಕಾಂತ ಶರ್ಮ ಹಾಗೂ ರಕ್ಷಿತ್ ಶಿವರಾಂ



ಸಂಪಿಗೆಹಳ್ಳಿಯ ಗ್ರೇಟ್ ಟ್ರಿಗ್ನೋಮೆಟ್ರಿಕಲ್ ಸರ್ವೆ ಕಾರ್ಯದ ಪಾಯಿಂಟ್ ಜಾಗವನ್ನು ವೀಕ್ಷಿಸುತ್ತಿರುವುದು



ಸಂಪಿಗೆಹಳ್ಳಿಯ ಗ್ರೇಟ್ ಟ್ರಿಗ್ನೋಮೆಟ್ರಿಕಲ್ ಸರ್ವೆ ಕಾರ್ಯದ ಪಾಯಿಂಟ್ ಜಾಗವನ್ನು ವೀಕ್ಷಿಸುತ್ತಿರುವುದು (ಚಿತ್ರಕೃಪೆ - ಚಿತ್ರಾ ರಾಮಚಂದ್ರನ್)



ಜಕ್ಕೂರಿನ ಶಾಸನದ ಮುಂದೆ ಲಿಯಾ ರಿಬೈರೊ ಡಿ ನೊರೊನ್ಹಾ , ಗ್ರಿಫಿತ್ ವಿಶ್ವವಿದ್ಯಾಲಯ (ಬ್ರಿಸ್ಬೇನ್, ಆಸ್ಟ್ರೇಲಿಯಾ).

ಊರಿನ ಹೆಸರುಗಳ ನಿಷ್ಪತ್ತಿ

ಸ್ಥಳನಾಮಗಳ ಬಗ್ಗೆ ಆಯಾಯ ಊರಿನ ಜನರು ತಮ್ಮ ಊರು ಇಷ್ಟು ವರ್ಷ ಪುರಾತನವಾದುದು, ಇಂತಹ ಪ್ರಸಿದ್ಧ ವ್ಯಕ್ತಿಗಳಿಂದ ನಮ್ಮ ಊರಿಗೆ ಈ ಹೆಸರು ಬಂದಿದೆ, ರಾಮಾಯಣ, ಮಹಾಭಾರತ ಕಾಲಕ್ಕೆ ಹೋಲಿಸಿ ಅನೇಕ ಕಥೆಗಳನ್ನು ಕಟ್ಟಿ ಹೇಳುತ್ತಾರೆ. ಕೆಲವೊಮ್ಮೆ ಇವುಗಳು ಕಲ್ಪಿತವಾದರೂ ಆಸಕ್ತಿದಾಯಕವಾಗಿರುತ್ತವೆ[1].

ಯಾವುದೇ ಒಂದು ವಸ್ತು, ಪ್ರದೇಶ, ವ್ಯಕ್ತಿ ಮುಂತಾದವನ್ನು ಗುರುತಿಸಲು, ಅದಕ್ಕೆ ಸರಿ ಹೊಂದುವಂತಹ ಹೆಸರುಗಳನ್ನು (ನಾಮ) ಇಡುವುದು ವಾಡಿಕೆ. ಇವುಗಳನ್ನು ಮಾನವ ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಮಾಡಿಕೊಂಡಿರುವಂತಹುದು. ಈ ಸಂಚಿಕೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಗ್ರಾಮಗಳ ಹೆಸರುಗಳನ್ನು ಪರಿಚಯಿಸುವ ಕೆಲಸವನ್ನು ಈ ಭಾಗದಲ್ಲಿ ಮಾಡಲಾಗಿದೆ. **ಸಾ.ಶ.10ನೇ ಶತಮಾನದ ಜಕ್ಕೂರು**, **ಸಾ.ಶ.1340ರ ಅಲ್ಲಾಳಸಂದ್ರ**, **ಸಾ.ಶ.1350ರ ಅರುಳಾಳಮೂರ್ತಿ ಅಗ್ರಹಾರ**, **ಸಂಪಿಗೆಹಳ್ಳಿ**, **ಶಿವರನ್ ಪಳ್ಳಿ (ಶಿವನಹಳ್ಳಿ)**, **ಸಾ.ಶ.1544ರ ರಾಚುರ**, **ಸಾ.ಶ.1532ರ ಚೊಕ್ಕನಹಳ್ಳಿ**, ಹೀಗೆ ಶಾಸನದಲ್ಲಿ ಯಾವ ರೀತಿ ಗ್ರಾಮದ ಹೆಸರುಗಳನ್ನು ಬಳಸಿದ್ದಾರೋ ಅದೇ ರೀತಿ ಯಥಾವತ್ತಾಗಿ ಇಲ್ಲಿ ಬಳಸಿಕೊಂಡಿದ್ದು, ಅವುಗಳನ್ನು ವ್ಯಾಕರಣ ದೋಷ ಎಂದು ತಿಳಿದುಕೊಳ್ಳಬಾರದು. ಅಂದಿನ ಜನರಲ್ಲಿ ಉಚ್ಚಾರಣೆಯಲ್ಲಿದ್ದ ಪದಗಳನ್ನೇ ಶಾಸನದಲ್ಲಿ ಕೆತ್ತಿರುವುದರಿಂದ ಶಾಸನಗಳಲ್ಲಿನ ಪದಗಳನ್ನೇ (ಸ್ಥಳನಾಮ) ಇಲ್ಲಿ ಬಳಸಿಕೊಳ್ಳಲಾಗಿದೆ.

ಜಕ್ಕೂರು

ಜಕ್ಕೂರು ಎಂಬ ಹೆಸರಿನ ಉಲ್ಲೇಖ **ಮೊಟ್ಟ ಮೊದಲನೆಯದಾಗಿ ಕಂಡುಬರುವ ಜಕ್ಕೂರಿನ ಸಾ.ಶ.10ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ 'ಜಕ್ಕಿಯೂ'** ಎಂದಿದ್ದು, ನಂತರ ಇದೇ ಬಡಾವಣೆಯ **ಸಾ.ಶ.1342ರ ಕಾಲಮಾನಕ್ಕೆ ಸೇರಿದ ಮತ್ತೊಂದು ಶಾಸನವು ಜಕ್ಕೂರ** ಎಂದು ಹಾಗೂ **ಅಲ್ಲಾಳಸಂದ್ರ, ಗ್ರಾಮದ ಸಾ.ಶ.1544ರ ಶಾಸನವು ಜಕುರ** ಎಂದು ಉಲ್ಲೇಖಿಸಿದೆ.

ಜಕ್ಕೂರು ಪದವನ್ನು ಬಿಡಿಸಿದರೆ, **ಜಕ್ಕ+ಊರು** ಆಗುತ್ತದೆ. ಜಕ್ಕ ಎಂಬುದು **ಪ್ರಾಕೃತ (ತದ್ಭವ ಪದ) ವಾಗಿದ್ದು**, ಇದಕ್ಕೆ **ಯಕ್ಷ ಎಂಬುದು ತತ್ಸಮ** ಪದವಾಗಿದೆ. **ಜಕ್ಕ ಎಂದರೆ 'ಯಕ್ಷ'**, ಕುಬೇರನ ಪ್ರಜೆಗಳಲ್ಲಿ ಒಬ್ಬ ಎಂಬರ್ಥವನ್ನು ಕನ್ನಡ ನಿಘಂಟು ನೀಡುತ್ತದೆ[2]. ಜಕ್ಕ ನಾಮಪದವಾದರೆ, ಊರು ಸಾಮಾನ್ಯವಾಚಕವಾಗಿದೆ. **ಊರು ಎಂಬುದು ಅಚ್ಚ ದ್ರಾವಿಡ ಪದವಾಗಿದೆ**. ವಾಸಸ್ಥಳಗಳನ್ನು ಸಾಮಾನ್ಯವಾಗಿ ಊರು ಎಂದು ಕರೆಯಲಾಗುತ್ತದೆ. **ಜಕ್ಕನು ಇದ್ದ ಊರು ಜಕ್ಕೂರು ಆಗಿರಬಹುದು**.

ಬೆಂಗಳೂರು ಪ್ರದೇಶದಲ್ಲಿ ಕಂಡುಬರುವ ಕೆಲವು ಶಾಸನಗಳಲ್ಲಿ ಜಕ್ಕ ಎಂಬ ವ್ಯಕ್ತಿನಾಮಗಳಿದ್ದು, ಸಾ.ಶ.1336ರ ಬೆಂಗಳೂರು ಜಿಲ್ಲೆಯ ಬ್ಯಾಡರಹಳ್ಳಿ ಶಾಸನವು ಸೇನಬೋವ ಜಕ್ಕಣ್ಣ ಎಂಬ ಹೆಸರನ್ನು ಉಲ್ಲೇಖಿಸುತ್ತದೆ. ಅಲ್ಲದೆ ಜಕ್ಕನಾಯಕ, ಜಕ್ಕ, ಜಕ್ಕಯ್ಯ, ಜಕ್ಕಗಾವುಂಡ ವ್ಯಕ್ತಿನಾಮಗಳು ಇತರೆ ಜಿಲ್ಲೆಗಳ ಶಾಸನಗಳಲ್ಲಿ ಬರುತ್ತವೆ.

ಜಕ್ಕ ಎಂಬ ವ್ಯಕ್ತಿನಾಮದಿಂದ ಪ್ರಾರಂಭವಾಗುವ ಗ್ರಾಮಗಳ ಹೆಸರುಗಳನ್ನು ನಾವು ಕರ್ನಾಟಕದ ಅವಿಭಜಿತ ಬೆಂಗಳೂರು, ಚಿಕ್ಕಬಳ್ಳಾಪುರ, ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಮಂಡ್ಯ, ಕೋಲಾರ, ರಾಯಚೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾಣಬಹುದು. ಉದಾಹರಣೆಗೆ **ಜಕ್ಕಸಂದ್ರ**, **ಜಕ್ಕಿಲಿ**, **ಜಕ್ಕಹಳ್ಳಿ**, **ಜಕ್ಕನಹಳ್ಳಿ**, **ಜಕ್ಕನಾಯ್ಕನಕೊಪ್ಪ** ಇತ್ಯಾದಿಗಳು. ಕರ್ನಾಟಕದಲ್ಲಿ ಮಾತ್ರವಲ್ಲದೇ **ದಕ್ಷಿಣ ಭಾರತದ ಆಂದ್ರಪ್ರದೇಶ, ತಮಿಳುನಾಡಿನಲ್ಲಿಯೂ ಸಹ ಜಕ್ಕ ಎಂಬ ಹೆಸರಿನಿಂದ ಪ್ರಾರಂಭವಾಗುವ ಗ್ರಾಮಗಳು ಕಂಡುಬರುತ್ತವೆ.**

ಬಹುಶಃ ಈ ಜಕ್ಕೂರು ಜೈನರು ವಾಸಿಸುತ್ತಿದ್ದ ಊರು ಆಗಿರಲೂ ಸಾಧ್ಯ, ಏಕೆಂದರೆ ಸಮೀಪದ ಬೇಗೂರು ಹಾಗೂ ಇತರೆ ಪ್ರದೇಶಗಳು ಜೈನ ಕೇಂದ್ರಗಳಾಗಿ ಗುರುತಿಸಿಕೊಂಡಿವೆ.


ಆದರೆ ಜಕ್ಕೂರಿನಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಯಾವುದೇ ಆಧಾರಗಳು ಇದುವರೆಗೂ ಸಿಕ್ಕಿಲ್ಲ.

ಜಕ್ಕೂರ ಸಾ.ಶ.1342ರ ಹೊನಮಾರಯನಾಯ್ಕರ ಶಾಸನದಲ್ಲಿ ಜಕ್ಕೂರ ಹೆಸರು



1 ಎಂ.ಚಿದಾನಂದ ಮೂರ್ತಿ, ವಾಗರ್ಥ, ಬಾಪ್ಕೊ ಪಬ್ಲಿಕೇಷನ್ಸ್ ಬೆಂಗಳೂರು, 1981, ಪುಟ ಸಂಖ್ಯೆ-10.

2 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1970.



ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳು

ಆದ್ದರಿಂದ **ಜಕ್ಕೂರಿನ ಹೆಸರು ಧಾರ್ಮಿಕ ವಾಚಿಯಾಗಿಯೋ ಅಥವಾ ವ್ಯಕ್ತಿವಾಚಿಯಾಗಿಯೋ ಬಂದಿರುವ ಸಾಧ್ಯತೆಯಿದೆ**. ಒಟ್ಟಾರೆಯಾಗಿ ಜಕ್ಕೂರು ಸುಮಾರು ಹತ್ತನೇ ಶತಮಾನದ ಹಿಂದಿನಿಂದಲೂ ಜನವಸತಿ ಪ್ರದೇಶವಾಗಿದ್ದು, ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿತ್ತು ಎಂದು ಹೇಳಬಹುದು.

ಅಲ್ಲಾಳಸಂದ್ರ

ಅಲ್ಲಾಳಸಂದ್ರ ಎಂಬ ಹೆಸರಿನ **ಮೊದಲ ಉಲ್ಲೇಖವು ಸಾ.ಶ.1544ರ ಅಲ್ಲಾಳಸಂದ್ರ ಗ್ರಾಮದಲ್ಲಿನ ಶಾಸನದಲ್ಲಿ ಕಂಡು ಬರುತ್ತದೆ**. ಅಲ್ಲಾಳಸಂದ್ರ **ಪದವನ್ನು ಬಿಡಿಸಿದಾಗ ಅಲ್ಲಾಳ ಮತ್ತು ಸಂದ್ರ (ಸಮುದ್ರ)** ಎಂಬ ಎರಡು ಘಟಕಗಳಿಂದ ಕೂಡಿದೆ. **ಅಲ್ಲಾಳ ಎಂಬುದು ವಿಷ್ಣುವಿನ ಮತ್ತೊಂದು ಹೆಸರಾಗಿದ್ದು**, ಈ ಶಬ್ದವು **ತಮಿಳಿನ ಅರುಳ್ ಪದದಿಂದ ಬಂದಿದೆ. ಅರುಳ್ ಎಂದರೆ ಕರುಣೆ, ಅರುಳಾಳರ್ ಎಂದರೆ ವರ ನೀಡುವವನು ಅಥವಾ ಅನುಗ್ರಹ ನೀಡುವ** ಎಂದರ್ಥ. ಹಾಗೂ ಈ **ಅರುಳ್ ಪದವು ಕನ್ನಡದಲ್ಲಿ ಉಚ್ಚರಿಸುವ ಸಂದರ್ಭದಲ್ಲಿ ಅಲ್ಲಾಳ** ಎಂದು ಭಾಷಾಂತರವಾಗಿದೆ ಎಂದು ಹೇಳಬಹುದು. ಈ ದೃಷ್ಟಿಯಲ್ಲಿ ನೋಡುವುದಾರೆ ಅಲ್ಲಾಳಸಂದ್ರ ಊರಿನ ಹೆಸರು **ಅಲ್ಲಾಳನಾಥ ದೇವರು ಮತ್ತು ಅಲ್ಲಿನ ಕೆರೆಯ ಹಿನ್ನೆಲೆಯಲ್ಲಿ ಬಂದಿದೆ** ಎಂದು ಹೇಳಬಹುದು. **ಅರುಳಾಳರ್-ಅಲ್ಲಾಳನಾಥ ದೇವರು ವರದರಾಜ ಎಂಬ ಹೆಸರಿನಿಂದಲೂ ಕರೆಯಲ್ಪಡುವುದನ್ನು ನಾವು ವಿವಿಧ ಪ್ರದೇಶಗಳಲ್ಲಿ ನೋಡಬಹುದು.**

'ಸಂದ್ರ' ಪದವನ್ನು ಸಮುದ್ರ (ದೊಡ್ಡಕೆರೆ) ಅಥವಾ ಸಮುದ್ರದಂತೆ ವಿಶಾಲವಾಗಿರುವ ಕೆರೆ (ವಿಶಾಲವಾಗಿ ನೀರು ನಿಂತಿರುವ ಜಾಗ) ಎಂಬ ಅರ್ಥದಲ್ಲಿ ಬಳಸುತ್ತಿದ್ದರು ಎನ್ನಬಹುದು. 'ಸಮುದ್ರ' ಎಂಬ ಪದವು ಕ್ರಮೇಣವಾಗಿ 'ಸಂದ್ರ' ರೂಪವಾಗಿ ಬದಲಾದರೂ ಕೂಡ ದೊಡ್ಡಕೆರೆ ಎಂಬ ಅರ್ಥವನ್ನೇ ನೀಡುತ್ತವೆ. (**ಸಮುದ್ರ ಪದದ ಅಪಭ್ರಂಶವೇ ಸಂದ್ರ**) ಇದಕ್ಕೆ ಉದಾಹರಣೆಯಾಗಿ ಬೆಂಗಳೂರಿನಲ್ಲಿ ಇಂದು **ಜಕ್ಕಸಂದ್ರ, ಬೊಮ್ಮಸಂದ್ರ, ಚನ್ನಸಂದ್ರ, ರಾಮಸಂದ್ರ** ಎಂಬ ಪ್ರದೇಶಗಳಲ್ಲಿ ವಿಶಾಲವಾದ (ದೊಡ್ಡ) ಕೆರೆಗಳಿರುವುದನ್ನು ಇಂದಿಗೂ ನೋಡಬಹುದಾಗಿದೆ. ಬೆಂಗಳೂರಿನಲ್ಲಿ ಮಾತ್ರವಲ್ಲದೇ ಸಂದ್ರ, ಸಮುದ್ರ, ಸಮುದ್ರಂ ಎಂಬ ಹೆಸರಿರುವ ಸಾಕಷ್ಟು ಹಳ್ಳಿಗಳನ್ನು ನಾವು ದಕ್ಷಿಣ ಭಾರತದಲ್ಲಿ ಅಂದರೆ, **ಆಂಧ್ರಪ್ರದೇಶದ ಶ್ರೀಕಾಕುಳಂನಿಂದ ತಮಿಳುನಾಡಿನ ಕನ್ಯಾಕುಮಾರಿಯವರೆಗೆ ಸುಮಾರು 500 ಹಳ್ಳಿಗಳನ್ನು ಇಂದಿಗೂ ಕಾಣಬಹುದು.**

ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಶಾಸನದಲ್ಲಿ ಅಲ್ಲಾಳಸಂದ್ರ ಹೆಸರು



ಅಲ್ಲಾಳಸಂದ್ರ ಗ್ರಾಮಕ್ಕೆ ಈ ಹೆಸರು ಬರಲು **ಇನ್ನೊಂದು ಹಿನ್ನೆಲೆಯನ್ನು ನಾವು ಗುರುತಿಸಬಹುದು**. ಯಲಹಂಕ ನಾಡಿನ ವ್ಯಾಪ್ತಿಯಲ್ಲಿ ಸಾ.ಶ.1328-1348ರ ಅವಧಿಯಲ್ಲಿ ಅಲ್ಲಾಳ ಎಂಬ ನಾಡಸೇನಬೋವನ ಹೆಸರನ್ನು ಉಲ್ಲೇಖಿಸುವ ಕೆಲವು ಶಾಸನಗಳು ದೊರೆತಿದ್ದು, ಜಕ್ಕೂರಿನ ಸಾ.ಶ.1342ರ ಕಾಲದ ಶಾಸನವು ನಾಡಸೇನಬೋವ ಅಲ್ಲಾಳನಿಗೆ ಜಕ್ಕೂರ ಗದ್ದೆ, ಬೆದಲುಗಳನ್ನು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಈ ನಾಡಸೇನಬೋವ ಅಲ್ಲಾಳನು ಈ ಪ್ರದೇಶದ ಪ್ರಮುಖ ವ್ಯಕ್ತಿಯಾಗಿದ್ದು, **ಈತನ ಹೆಸರಿನಿಂದಲೂ ಅಲ್ಲಾಳಸಂದ್ರ ಹೆಸರು ಬಂದಿರಬಹುದು** ಎಂದು ಹೇಳಬಹುದು. ಆದರೆ ಅಲ್ಲಾಳಸಂದ್ರದ ಶಾಸನ ಅಲ್ಲಾಳನಾಥ ಎಂಬ ದೇವರ ಹೆಸರನ್ನು ಉಲ್ಲೇಖಿಸಿದರೆ, ಜಕ್ಕೂರಿನ ಶಾಸನ ನಾಡಸೇನಬೋವ ಅಲ್ಲಾಳ ಎಂಬ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ. ಆದ್ದರಿಂದ ವ್ಯಕ್ತಿನಾಮ ಅಥವಾ ದೇವನಾಮ ಇವೆರಡರಲ್ಲಿ ಯಾವುದರಿಂದ ಅಲ್ಲಾಳಸಂದ್ರ ಊರಿನ ಹೆಸರು ಬಂದಿದೆ ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟ. ಬೇರೆ ಬೇರೆ ಪ್ರದೇಶದಲ್ಲಿನ ಅಲ್ಲಾಳಸಂದ್ರ ಗ್ರಾಮಗಳ ಹೆಸರಿನ ಹಿನ್ನೆಲೆಯನ್ನು ಗಮನಿಸಿದಾಗ, ಇವುಗಳ ಹೆಸರು ದೇವರ ಹೆಸರಿನ ಮೂಲದಿಂದಲೇ ಬಂದಿರುವುದರಿಂದ ಬಹುಶಃ ಈ ಅಲ್ಲಾಳಸಂದ್ರದ ಹೆಸರು ಅಲ್ಲಾಳನಾಥ ದೇವರ ಹಿನ್ನೆಲೆಯಿಂದಲೇ ಬಂದಿರುವ ಸಾಧ್ಯತೆಗಳು ಹೆಚ್ಚಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಒಂದು ಹಾಗೂ ರಾಮನಗರ ತಾಲ್ಲೂಕಿನಲ್ಲಿ ಒಂದು ಅಲ್ಲಾಳಸಂದ್ರ ಎಂಬ ಹೆಸರಿನ ಗ್ರಾಮಗಳಿವೆ.

ಹಲವು ಸ್ಥಳನಾಮಗಳು ತಮ್ಮದೇ ಪ್ರಾದೇಶಿಕ ಪ್ರಸಾರವನ್ನು ಹೊಂದಿವೆ. ಇವುಗಳು ಸ್ಪಷ್ಟ ಗಡಿ ರೇಖೆಯನ್ನು ಎಳೆಯಲು ಸಾಧ್ಯವಾಗುತ್ತದೆ. ಸಮುದ್ರ-ಸಂದ್ರ ಆಗಿರುವುದು ಹದಿನಾಲ್ಕು, ಹದಿನೈದನೇ ಶತಮಾನಗಳಿಗಿಂತ ಪ್ರಾಚೀನವಲ್ಲ ಎಂಬುದು ಶಾಸನಗಳ ಆಧಾರದಿಂದಲೇ ದೊರೆಯುತ್ತದೆ. ಸಂದ್ರ ಕೊನೆಯಾಗುವ ಹೆಸರುಗಳು ಪ್ರದೇಶವನ್ನು ಯಾವುದಾದರೂ ಒಂದು ರಾಜಕೀಯ ಘಟಕದೊಡನೆ ಸಮೀಕರಿಸಬಹುದು


ಎಂದು ಚಿದಾನಂದ ಮೂರ್ತಿ ಅವರು ಅನುಮಾನ ವ್ಯಕ್ತಪಡಿಸಿದ್ದಾರೆ[3].

ಅರುಳಾಳಮೂರ್ತಿ ಅಗ್ರಹಾರ

ಇಂದು ಅಗ್ರಹಾರ ಎಂದು ಕರೆಯುವ ಗ್ರಾಮ/ಬಡಾವಣೆಯ ಮೂಲ ಹೆಸರೇ ಅರುಳಾಳಮೂರ್ತಿ ಅಗ್ರಹಾರ. ಈ ಅಗ್ರಹಾರಕ್ಕೆ ಸಂಬಂಧಿಸಿದ ಸಾ.ಶ.1350ರ ತಮಿಳು ಶಾಸನದಲ್ಲಿ ಇದನ್ನು ಅರುಳಾಳಮೂರ್ತಿ ಅಗ್ರಹಾರ ಎಂದು ಉಲ್ಲೇಖಿಸಿದ್ದು, **ಅರುಳ್ ಎಂದರೆ ಕರುಣೆ, ಅರುಳಾಳರ್ ಎಂದರೆ ವರ ನೀಡುವವನು ಅಥವಾ ಅನುಗ್ರಹ ನೀಡುವ** ಎಂದರ್ಥ. **ಅರುಳಾಳ ದೇವರು ಎಂದರೆ ವರದರಾಜ ದೇವರು.**

ಬ್ರಾಹ್ಮಣರಿಗೆ ದಾನವಾಗಿ ನೀಡುತ್ತಿದ್ದ ಗ್ರಾಮಗಳನ್ನು ಸಾಮಾನ್ಯವಾಗಿ ಅಗ್ರಹಾರಗಳು ಎಂದು ಕರೆಯಲಾಗುತ್ತಿತ್ತು. ಈ ಅಗ್ರಹಾರಗಳು ಪ್ರಾಚೀನ ಕಾಲದಲ್ಲಿ ವಿಶೇಷವಾದ ಸವಲತ್ತುಗಳನ್ನು ಪಡೆಯುವುದರ ಜೊತೆಗೆ **ವಿದ್ಯಾಕೇಂದ್ರಗಳಾಗಿಯೂ** ಕಾರ್ಯ ನಿರ್ವಹಿಸುತ್ತಿದ್ದವು. ಹಾಗೂ ವಿಶೇಷವಾಗಿ ಈ ಅಗ್ರಹಾರಗಳಿಗೆ ಸಂಬಂಧಿಸಿದ ಭೂಮಿಯಲ್ಲಿ ಬೆಳೆದ ಬೆಳೆಗಳು ತೆರಿಗೆ ಮುಕ್ತವಾಗಿದ್ದು, ಈ ಭೂಮಿಯಲ್ಲಿ ದೊರೆತ ಸಕಲವು ಅಗ್ರಹಾರದ ಬ್ರಾಹ್ಮಣರಿಗೆ ಸಲ್ಲಿಕೆಯಾಗುತ್ತಿತ್ತು.

ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ
ಅರುಳಾಳಗ ಮೂರ್ದಿಯ ಕರತ್ತುಕ್ಕು ಹೆಸರು



ಬೆಂಗಳೂರು ನಗರ ಜಿಲ್ಲೆಯಲ್ಲಿ **ಕಾಡ ಅಗ್ರಹಾರ, ಅಗ್ರಹಾರ ಪಾಳ್ಯ, ಬಿದರೆ ಅಗ್ರಹಾರ, ಚನ್ನೆನ ಅಗ್ರಹಾರ, ಗುಣಿ ಅಗ್ರಹಾರ, ಕಾನ್ನೈಕನ ಅಗ್ರಹಾರ, ಮರಸೂರು ಅಗ್ರಹಾರ, ಮೇದಿ ಅಗ್ರಹಾರ, ನವರತ್ನ ಅಗ್ರಹಾರ, ಪಂಡಿತನ ಅಗ್ರಹಾರ, ಸಿಂಗೇನ ಅಗ್ರಹಾರ, ನಾಗೇನ ಅಗ್ರಹಾರ, ಅಗ್ರಹಾರ ದಾಸರಹಳ್ಳಿ ಇತ್ಯಾದಿ** ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ **ಅಗ್ರಹಾರ ವಡ್ಡಹಳ್ಳಿ, ಬೀದಿಕೆರೆ ಅಗ್ರಹಾರ, ಚನ್ನಾದೇವಿ ಅಗ್ರಹಾರ, ಜೋಯಿಸ್ ಅಗ್ರಹಾರ, ಕಲ್ಲುಂಟೆ ಅಗ್ರಹಾರ, ಕಾಮನ ಅಗ್ರಹಾರ, ಕೆಂಪಾಪುರ ಅಗ್ರಹಾರ, ನರಸೈನ ಅಗ್ರಹಾರ, ಪೂಜೇನ ಅಗ್ರಹಾರ, ವಾಗಟ ಅಗ್ರಹಾರ** ಇತ್ಯಾದಿ ಹಾಗೂ ರಾಮನಗರ ಜಿಲ್ಲೆಯಲ್ಲಿ ಅಗ್ರಹಾರ ಮತ್ತು ಅಗ್ರಹಾರ ವಲಗೆರೆಹಳ್ಳಿ ಎಂಬ ಗ್ರಾಮಗಳಿರುವುದನ್ನು ಗುರುತಿಸಬಹುದು.


ಹಾಗೆಯೇ **ತುಮಕೂರು, ಕೋಲಾರ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ಚಾಮರಾಜನಗರ, ಮಂಡ್ಯ, ಮೈಸೂರು** ಜಿಲ್ಲೆಗಳಲ್ಲಿ ಅಗ್ರಹಾರಗಳಿದ್ದು, ಒಟ್ಟಾರೆಯಾಗಿ **ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚಿನ ಅಗ್ರಹಾರಗಳಿವೆ. ಕರ್ನಾಟಕದಲ್ಲಿ ಮಾತ್ರವಲ್ಲದೇ ಆಂದ್ರಪ್ರದೇಶ, ಕೇರಳ ಮತ್ತು ತಮಿಳುನಾಡಿನಲ್ಲಿಯೂ ನೂರಾರು ಅಗ್ರಹಾರಗಳನ್ನು ಕಾಣಬಹುದು.**

ಅಗ್ರಹಾರದ ಬಗ್ಗೆ ಹೆಚ್ಚಿನ ವಿಷಯವನ್ನು **ಪುಟ ಸಂಖ್ಯೆ 112ರಲ್ಲಿ ಚರ್ಚಿಸಲಾಗಿದೆ.**

ರಾಚುರ

ಅಲ್ಲಾಳಸಂದ್ರದ ಸಾ.ಶ.1544ರ ಶಾಸನವು ರಾಚುರ ನರಸಪಯ ಎಂಬ ಹೆಸರನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಕ್ತವಾಗಿರುವ **ರಾಚುರು ಎಂಬ ಸ್ಥಳವು, ಇಂದಿನ 'ರಾಯಚೂರು'** ಎಂಬ ಸ್ಥಳ/ಪ್ರದೇಶವೇ ಆಗಿದೆ. ರಾಯಚೂರು ಪ್ರದೇಶದಲ್ಲಿ ಕಂಡುಬಂದಿರುವ ಹಲವು ಶಾಸನಗಳು ರಾಯಚೂರನ್ನು ರಾಚುರು ಎಂದು ಕರೆದಿವೆ.

ಅಲ್ಲಾಳಸಂದ್ರದ ಸಾ.ಶ.1544ರ ರಾಚುರ
ನರಸಪಯರ ಶಾಸನದಲ್ಲಿ ರಾಚುರ ಹೆಸರು



ಗೊಬೆಟ್ಟ

ಜಕ್ಕೂರು ಗ್ರಾಮದ ಹತ್ತನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ಗೊಬೆಟ್ಟ ಎಂಬ ಸ್ಥಳದ ಉಲ್ಲೇಖವಿದ್ದು, **ಪ್ರಸ್ತುತ ಈ ಸ್ಥಳ/ಪ್ರದೇಶ ಯಾವುದೆಂದು ತಿಳಿದು ಬರುವುದಿಲ್ಲ.**

ಜಕ್ಕೂರ ಸಾ.ಶ. 10ನೇ ಶತಮಾನದ ಪ್ರಶಸ್ತಿ
ಶಾಸನದಲ್ಲಿ ಗೊಬೆಟ್ಟ ಹೆಸರು



ಹಾರಮರವೂರ ಕೋಟೆ

ಅಲ್ಲಾಳಸಂದ್ರದ ಸಾ.ಶ.1340ರ ಶಾಸನವು ಹಾರಮರವೂರಕೋಟೆ ಎಂದಿದ್ದು, ಇದು ಯಾವ

3 ಎಂ.ಚಿದನಾಂದ ಮೂರ್ತಿ, *ವಾಗರ್ಥ*, ಬಾಪ್ಕೊ ಪಬ್ಲಿಕೇಷನ್ಸ್ ಬೆಂಗಳೂರು, 1981, ಪುಟಸಂಖ್ಯೆ-27.

ಪ್ರದೇಶವೆಂಬುದು ನಿಖರವಾಗಿ ತಿಳಿದು ಬಂದಿರುವುದಿಲ್ಲ. ಆದರೆ ಕೆಲವು ವಿದ್ವಾಂಸರು **ಇಂದಿನ ಹೊರಮಾವು ಗ್ರಾಮವೇ ಹಾರಮರವೂರ ಕೋಟೆ ಆಗಿರಬಹುದು** ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಚೊಕ್ಕನಹಳ್ಳಿ

ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಚೊಕ್ಕನಹಳ್ಳಿ ಎಂಬ ಸ್ಥಳದ ಪ್ರಸ್ತಾಪವಿದ್ದು, **ದಾಸರಹಳ್ಳಿಯಿಂದ 4 ಕಿ.ಮೀ. ದೂರದಲ್ಲಿ ಕಂಡುಬರುವ ಇಂದಿನ ಚೊಕ್ಕನಹಳ್ಳಿಯೇ ಶಾಸನೋಕ್ತ ಹಳ್ಳಿಯಾಗಿದೆ.** ಬಹುಶಃ ದೇವರ ಹೆಸರಿನಿಂದ ಈ ಊರಿಗೆ ಚೊಕ್ಕನಹಳ್ಳಿ ಎಂಬ ಹೆಸರು ಬಂದಿರಬಹುದು. **ಚೊಕ್ಕ - ಎಂದರೆ ಸುಂದರವಾದ ಮುಖ ಉಳ್ಳವನು ಎಂಬರ್ಥ.** ಈ ಅರ್ಥದಲ್ಲಿ ನೋಡುವುದಾದರೆ ಚೊಕ್ಕ ಎಂಬುದು ವಿಷ್ಣುವಿಗೆ ಹೋಲಿಕೆಯಾಗುತ್ತದೆ. ಆದ್ದರಿಂದ ಬಹುಶ: **ವಿಷ್ಣುವಿನ ಹೆಸರಿನ ಹಿನ್ನೆಲೆಯಲ್ಲಿ ಚೊಕ್ಕನಹಳ್ಳಿ ಎಂಬ ಹೆಸರು ಬಂದಿರಬಹುದು.** ಇದಕ್ಕೆ ಉದಾಹರಣೆ ಕೊಡುವುದಾದರೆ ಬೆಂಗಳೂರಿನ **ದೊಮ್ಮಲೂರಿನಲ್ಲಿ ಚೊಕ್ಕನಾಥ ಸ್ವಾಮಿ ಎಂಬ ವಿಷ್ಣು ದೇವಾಲಯವನ್ನು ನಾವು ನೋಡಬಹುದು.** ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಂದು, **ಚಿಕ್ಕಬಳ್ಳಾಪುರ ಜಿಲ್ಲೆ**ಯಲ್ಲಿ ನಾಲ್ಕು ಹಾಗೂ **ಆಂಧ್ರ ಪ್ರದೇಶ**ದಲ್ಲಿ ಎರಡು ಮತ್ತು **ತಮಿಳುನಾಡಿನಲ್ಲಿ** ಆರು ಗ್ರಾಮಗಳು ಚೊಕ್ಕನಹಳ್ಳಿ ಎಂಬ ಹೆಸರಿನಲ್ಲಿ ಕಂಡುಬರುತ್ತದೆ.

ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಚೊಕ್ಕನಹಳ್ಳಿ ಹೆಸರು



ಸಂಪಿಗೆಹಳ್ಳಿ

ಅಗ್ರಹಾರದ ಸಾ.ಶ.1350ರ ತಮಿಳು ಶಾಸನವು **ಚಂಪತ್ತೈಪಲ್ಲಿ** ಎಂಬ ಹೆಸರನ್ನು ಉಲ್ಲೇಖಿಸುತ್ತದೆ. **ಚಂಪಕ ಎಂಬುದು ಸಂಸ್ಕೃತದ ತತ್ಸಮ ರೂಪವಾಗಿದ್ದು ಕನ್ನಡಕ್ಕೆ ತದ್ಭವ ರೂಪ ಸಂಪಿಗೆಯಾಗಿದೆ. ಕನ್ನಡದ ಸಂಪಿಗೆಹಳ್ಳಿಯನ್ನು ತಮಿಳು ಭಾಷೆಯಲ್ಲಿ ಚಂಪತ್ತೈಪಲ್ಲಿ ಎಂದು ಹೇಳಲಾಗಿದೆ.**

ಸಂಪಿಗೆಹಳ್ಳಿಯ ಹೆಸರಿನ ಹಿನ್ನೆಲೆಯನ್ನು ನೋಡುವುದಾದರೆ, ಹಿಂದಿನ ಕಾಲದಲ್ಲಿ ಗ್ರಾಮ/ಊರುಗಳಿಗೆ ಪ್ರಕೃತಿದತ್ತವಾದ ಗಿಡ, ಮರ, ಬೆಟ್ಟ, ಗುಡ್ಡ, ನದಿ, ಹೊಳೆ, ಕಾಡು, ಕೆರೆ, ಕುಂಟೆ ಇತ್ಯಾದಿಗಳನ್ನು ಆಧಾರವಾಗಿಟ್ಟುಕೊಂಡು ಹೆಸರನ್ನು ಇಡುವ ಪದ್ಧತಿಯು ರೂಢಿಯಲ್ಲಿತ್ತು. ಅದೇ ರೀತಿ ಸಂಪಿಗೆಹಳ್ಳಿಯಲ್ಲಿ ಸಂಪಿಗೆ (ಸಂಪಿಗೆಹೂವು) ಮರಗಳು ಹೆಚ್ಚಾಗಿ ಇದ್ದುದರಿಂದಲೇ ಅನ್ವರ್ಥಕವಾಗಿ ಈ ಊರಿಗೆ ಸಂಪಿಗೆಹಳ್ಳಿ ಎಂಬ ಹೆಸರು ಬಂದಿರುವ ಸಾಧ್ಯತೆಗಳು ಹೆಚ್ಚು. ಇದೇ ರೀತಿ ಬೆಂಗಳೂರಿನಲ್ಲಿ **ಹಲಸೂರು**, **ಹೊರಮಾವು**, **ಜಾಲಹಳ್ಳಿ**, **ತಾವರೆಕೆರೆ**, **ಚಿಕ್ಕಜಾಲ**, **ದೊಡ್ಡಜಾಲ**, **ದೊಡ್ಡಬಿದರಕಲ್ಲು**, **ಚಿಕ್ಕಬಿದರಕಲ್ಲು**, **ಹುಳಿಮಾವು**, **ಹುಣಸೇಮಾರನಹಳ್ಳಿ**, **ಬೆಟ್ಟಹಲಸೂರು**, **ಹೊನ್ನಸಂದ್ರ**, **ಚಿಕ್ಕಬೆಟ್ಟಹಳ್ಳಿ**, **ದೊಡ್ಡಬೆಟ್ಟಹಳ್ಳಿ** ಇನ್ನು ಮುಂತಾದ **ಗಿಡ**, **ಮರ**, **ಹೂವುಗಳ** ಹೆಸರುಗಳನ್ನು ಹೊಂದಿರುವ ಗ್ರಾಮ/ಬಡಾವಣೆಗಳನ್ನು ನಾವು ನೋಡಬಹುದು.

ಶಿವರನ್ ಪಳ್ಳಿ (ಶಿವನಹಳ್ಳಿ)


ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಶಿವರನ್ ಪಳ್ಳಿಯ ಉಲ್ಲೇಖ ಕಂಡುಬಂದಿದ್ದು,ತಮಿಳು ಭಾಷೆಯಲ್ಲಿ ಉಚ್ಚರಿಸುವ **ಈ ಶಿವರನ್ ಪಳ್ಳಿಯೇ ಕನ್ನಡದಲ್ಲಿ ಶಿವನಹಳ್ಳಿಯಾಗಿದೆ.** ಜಕ್ಕೂರಿನ ಗಡಿಗೆ ಹೊಂದಿಕೊಂಡಿರುವ ಈ ಶಿವನಹಳ್ಳಿಯು 671 ವರ್ಷಗಳಷ್ಟು ಪುರಾತನ ಗ್ರಾಮವಾಗಿದ್ದು, ಶೈವ ಧರ್ಮದ ಆರಾಧ್ಯ ದೈವವಾದ ಶಿವನ ಹೆಸರಿನ ಹಿನ್ನೆಲೆಯಲ್ಲಿ ಈ ಗ್ರಾಮಕ್ಕೆ/ಊರಿಗೆ ಶಿವನಹಳ್ಳಿ ಎಂಬ ಹೆಸರು ಬಂದಿರುತ್ತದೆ. ಬಹುಶಃ ಈ ಊರಿನಲ್ಲಿ ಈಶ್ವರ (ಶಿವನ) ದೇವಾಲಯವಿದ್ದುದಕ್ಕೆ ಈ ಹೆಸರು ಬಂದಿರಬಹುದು.

ಬ್ಯಾಟರಾಯಪುರ

ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಭೆಂಟೆಯರಾಯನ ಪ್ರಸ್ತಾಪವಿರುತ್ತದೆ. ಆದರೆ ಪ್ರಸ್ತುತ ದಾಸರಹಳ್ಳಿ ಮತ್ತು ಇದಕ್ಕೆ ಹೊಂದಿಕೊಂಡಂತಿರುವ ಬೇರೆ ಯಾವುದೇ ಪ್ರದೇಶಗಳಲ್ಲಿ ಭೆಂಟೆಯರಾಯ/ಬೇಟೆಯರಾಯ ಎಂಬ ಹೆಸರಿನ ದೇವಾಲಯ ಕಂಡುಬರುವುದಿಲ್ಲ. ಆದರೆ ದಾಸರಹಳ್ಳಿ ಶಾಸನಕ್ಕೂ ಭೆಂಟೆಯರಾಯಸ್ವಾಮಿ ದೇವಾಲಯಕ್ಕೂ ಸಂಬಂಧ ಇದ್ದುದರಿಂದ ಈ ದೇವಾಲಯವನ್ನು ಹುಡುಕುವುದು ಅವಶ್ಯಕವಾಗಿತ್ತು. **ಬ್ಯಾಟರಾಯನಪುರ ಎಂಬ ಹೆಸರು ಬೇಟೆಯರಾಯ ಎಂಬ ದೇವರ ಹೆಸರಿನ ಹಿನ್ನೆಲೆಯಲ್ಲಿ ಬಂದಿರುವುದರಿಂದ, ಬಹುಶಃ ದಾಸರಹಳ್ಳಿಗೆ ಸಮೀಪದಲ್ಲೇ ಇರುವ ಬ್ಯಾಟರಾಯನಪುರದಲ್ಲಿ ಭೇಂಟೆಯರಾಯ (ಬೇಟೆಯರಾಯ) ದೇವಾಲಯ ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಅದೂ ಅಲ್ಲದೇ ಈ ಅನುಮಾನಕ್ಕೆ ಪುಷ್ಟಿ ನೀಡುವಂತೆ** ಕರ್ನಾಟಕ ಸರ್ಕಾರದ **ಧಾರ್ಮಿಕ ದತ್ತಿ ಇಲಾಖೆಯ**

(ಮುಜರಾಯಿ) ಉತ್ತರವಲಯ ಪಟ್ಟಿಯಲ್ಲಿ ಬ್ಯಾಟರಾಯನಪುರದ ಬ್ಯಾಟರಾಯಸ್ವಾಮಿ ಎಂಬ ದೇವಸ್ಥಾನದ ಉಲ್ಲೇಖ ಇರುವುದರಿಂದ ಈ ಸ್ಥಳದಲ್ಲಿ ಕ್ಷೇತ್ರಕಾರ್ಯ ಮಾಡಲಾಯಿತು. ಆದರೆ ಪ್ರಸ್ತುತ ಭೆಂಟೆರಾಯಸ್ವಾಮಿ/ಬೇಟೆಯರಾಯಸ್ವಾಮಿ ದೇವಾಲಯ ಬ್ಯಾಟರಾಯನಪುರದಲ್ಲಿ ಕಂಡುಬರುವುದಿಲ್ಲವಾದರೂ, ಖಚಿತವಾಗಿ ಬ್ಯಾಟರಾಯನಪುರಕ್ಕೆ ಭೆಂಟೆಯರಾಯಸ್ವಾಮಿ ದೇವರ ಹೆಸರಿನಿಂದಲೇ ಬಂದಿದೆ ಎಂದು ಹೇಳಬಹುದು. ಇದಕ್ಕೆ ಉದಾಹರಣೆಯಾಗಿ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಇರುವ ಬ್ಯಾಟರಾಯನಪುರದಲ್ಲಿಯೂ ಸಹ ಬೇಟೆಯರಾಯಸ್ವಾಮಿ ದೇವಸ್ಥಾನವಿದ್ದು, ಈ ಬೇಟೆಯರಾಯಸ್ವಾಮಿ ದೇವರ ಹೆಸರ ಹಿನ್ನೆಲೆಯಿಂದ ಈ ಊರಿಗೂ ಅದೇ ಹೆಸರು ಬಂದಿದೆ.

ಈ ಬೇಟೆಯರಾಯಸ್ವಾಮಿ ಬಗ್ಗೆ **ಪುಟ ಸಂಖ್ಯೆ 106ರಲ್ಲಿ** ಚರ್ಚಿಸಲಾಗಿದೆ



ಭಾರತದಲ್ಲಿ ಸಮುದ್ರ-ಸಂದ್ರವನ್ನು ಹೆಸರಿನಲ್ಲಿ ಹೊಂದಿರುವ ಗ್ರಾಮಗಳು

ಐತಿಹಾಸಿಕ ವ್ಯಕ್ತಿಗಳು

ಸ್ಥಳನಾಮಗಳು ಸಾರ್ವಜನಿಕ ಆಸಕ್ತಿಯ ವಿಷಯವಾದರೆ, ವ್ಯಕ್ತಿನಾಮಗಳು ವೈಯಕ್ತಿಕವಾದವು. ವ್ಯಕ್ತಿಯನ್ನು ಸರಿಯಾಗಿ ಗುರುತಿಸಲು ಜನ್ಮ ನಕ್ಷತ್ರ, ರಾಶಿಯ ಆಧಾರದ ಮೇಲೆ ಹಾಗೂ ದೇವರ ಹೆಸರುಗಳನ್ನು ವ್ಯಕ್ತಿಗಳಿಗೆ ಇಡುತ್ತಾರೆ. ಈ ಹೆಸರುಗಳಲ್ಲಿ ಅಡ್ಡಹೆಸರು, ಕುಲದ ಹೆಸರು, ತಂದೆಯ ಹೆಸರು, ಜಾತಿಯ ಹೆಸರುಗಳು ಸಾಮಾನ್ಯವಾಗಿ ಸೇರಿರುತ್ತವೆ. ಪ್ರಸ್ತುತ ಸಂಚಿಕೆಯಲ್ಲಿ ವಿವರಿಸಲಾಗಿರುವ ಶಾಸನಗಳಲ್ಲಿ ಉಲ್ಲೇಖವಾಗಿರುವ ವ್ಯಕ್ತಿಗಳ ಪರಿಚಯವನ್ನು ಈ ಐತಿಹಾಸಿಕ ವ್ಯಕ್ತಿಗಳು ಭಾಗದಲ್ಲಿ ನೋಡಬಹುದು.

ಶಾಸನೋಕ್ತ ವ್ಯಕ್ತಿಗಳ ಹೆಸರುಗಳನ್ನು ಶಾಸನದಲ್ಲಿ ಯಾವ ರೀತಿ ಬಳಸಿದ್ದಾರೋ ಅದೇ ರೀತಿ ಯಥಾವತ್ತಾಗಿ ಇಲ್ಲಿ ಬಳಸಿಕೊಂಡಿದ್ದು, ಅವುಗಳು ಅಂದಿನ ಜನರ ಆಡು ಭಾಷೆಯಲ್ಲಿ ಉಚ್ಚಾರಣೆಯಲ್ಲಿದ್ದ ಪದಗಳು/ಹೆಸರುಗಳೆಂದು ಗುರುತಿಸಬಹುದು. ಆದ್ದರಿಂದ ಇಲ್ಲಿ ನಾವು **ಹೆಸರಿಸಿರುವ ಪದಗಳಲ್ಲಿನ (ವ್ಯಕ್ತಿಗಳ ಹೆಸರು) ವ್ಯತ್ಯಾಸಗಳನ್ನು ವ್ಯಾಕರಣ ದೋಷ ಎಂದು ತಿಳಿದುಕೊಳ್ಳಬಾರದು**.

ಮರಾಟೆಯ ವಿಟಲೇಶ್ವರ

ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ಮರಾಟೆಯ ವಿಟಲೇಶ್ವರ ಎಂಬ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಈ ಮರಾಟೆಯ ವಿಟಲೇಶ್ವರನು ಆ ಸಂದರ್ಭದಲ್ಲಿ ಒಂದು ಪ್ರದೇಶದ **ಮಹಾಮಂಡಳೇಶ್ವರನಾಗಿ** ಕಾರ್ಯನಿರ್ವಹಿಸುತ್ತಿದ್ದನು. ಆದರೆ ಯಾವ ಪ್ರದೇಶದ ಮಂಡಳೇಶ್ವರನಾಗಿದ್ದ ಎಂಬುದನ್ನು ಶಾಸನ ನಿರ್ಧಿಷ್ಟವಾಗಿ ಉಲ್ಲೇಖಿಸುವುದಿಲ್ಲ. ಮುಖ್ಯವಾಗಿ ಈತನ ಹೆಸರಿನ ಪೂರ್ವದಲ್ಲಿ ಬಂದಿರುವ **ಮರಾಟೆ ಎಂಬ ಶಬ್ದವು ಇಂದಿನ ಮರಾಠಿ** ಪದಕ್ಕೆ ಸಮನಾರ್ಥವಾಗಿರುತ್ತದೆ. ವಿಟಲೇಶ್ವರ ಎಂಬುದು ದೈವ ಮೂಲದ ಹೆಸರಾಗಿದೆ.

ಪ್ರಸ್ತುತ IAS ಅಧಿಕಾರಿಗಳನ್ನು ವರ್ಗಾವಣೆ ಮಾಡುವಂತೆ, ಕರ್ನಾಟಕ ಸಾಮ್ರಾಜ್ಯದ ಅರಸರು ಮತ್ತೊಂದು ಸಾಮ್ರಾಜ್ಯವನ್ನು ವಶಪಡಿಸಿಕೊಂಡಾಗ ಅಲ್ಲಿನ ಅಧಿಕಾರಿಗಳನ್ನು (ಮಂಡಾಳಾಧಿಪತಿ) ತನ್ನ ಪ್ರಾಂತ್ಯಕ್ಕೆ ಹಾಗೂ ಗೆದ್ದ ಪ್ರಾಂತ್ಯಕ್ಕೆ ತನ್ನ ನಿಷ್ಠಾವಂತ ಅಧಿಕಾರಿಗಳನ್ನು ನೇಮಿಸುತ್ತಿದ್ದರು ಎಂದು ಹೇಳಬಹುದು. ಇದರಿಂದಾಗಿ ಸೋಲನ್ನು ಅನುಭವಿಸಿದವರಿಗೂ ಅಧಿಕಾರ ಕಳೆದುಕೊಂಡೆ ಎಂಬ ಭಾವನೆ ಬರುವುದಿಲ್ಲ ಹಾಗೂ ಗೆದ್ದ ಅರಸನಿಗೂ ಗೆದ್ದ ಪ್ರಾಂತ್ಯದ ಮೇಲಿನ ಹಿಡಿತ ತಪ್ಪುತ್ತದೆ ಎಂಬ ಭಯವೂ ಬಾರದಂತೆ ಬಹುಶಃ ಮರಾಟೆಯ ವಿಟಲೇಶ್ವರನನ್ನು ಈ ಭಾಗಕ್ಕೆ ವರ್ಗಾವಣೆಯನ್ನು ಮಾಡಿರಬಹುದು. ಮರಾಟೆಯ ವಿಟಲೇಶ್ವರ ಎಂಬ ಹೆಸರಿನ ಪೂರ್ವದಲ್ಲಿ ಬಂದಿರುವ ಮರಾಟೆ (ಮರಾಠಿ) ಎಂಬ ಶಬ್ದದಿಂದ ತಿಳಿಯುವುದೇನೆಂದರೆ, ಈ ವಿಟಲೇಶ್ವರನು ಮೂಲತಃ ಮಹಾರಾಷ್ಟ್ರ ಪ್ರದೇಶದವನಾಗಿರಬಹುದು.

ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ಮರಾಟೆಯ ಹೆಸರು




ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ವಿಟಲೇಶ್ವರ ಹೆಸರು



ರಾಚುರ ನರಸಪಯ

ರಾಚುರು ನರಸಪಯ ಎಂಬ ಎರಡು ಪದಗಳಲ್ಲಿ **ರಾಚುರು ಎಂಬುದು (ಇಂದಿನ ರಾಯಚೂರು)** ಸ್ಥಳದ ಹೆಸರಾಗಿದ್ದರೆ, ನರಸಪಯ ಎಂಬುದು ವ್ಯಕ್ತಿಯ ಹೆಸರಾಗಿದೆ. ಸಾಮಾನ್ಯವಾಗಿ ನಾವು ಹೆಸರಿನ ಪೂರ್ವದಲ್ಲಿ ಊರಿನ ಹೆಸರನ್ನು ಸೇರಿಸಿ ಹೇಳುವುದನ್ನು ನೋಡುತ್ತೇವೆ. ಅದೇ ರೀತಿ ಈ ಹೆಸರು ಕೂಡ ಬಂದಿದೆ ಎಂದು ಹೇಳಬಹುದು.


ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ಉಲ್ಲೇಖವಾಗಿರುವ ಈ **ರಾಚುರ ನರಸಪಯನು ಮೂಲತಃ ರಾಯಚೂರು ಪ್ರದೇಶದವನಾಗಿದ್ದು** ಮರಾಟೆಯ ವಿಟಲೇಶ್ವರ ದೇವರ ಕಾರ್ಯಕರ್ತರಾಗಿ ಯಲಹಂಕ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದವನು ಎಂಬುದು ತಿಳಿದುಬರುತ್ತದೆ. ಒಂದು ಸಾಮ್ರಾಜ್ಯದಲ್ಲಿ ಪ್ರಾಂತ್ಯ, ನಾಡು, ಸೀಮೆ, ಸ್ಥಳ ಎಂಬ ಹಲವಾರು ಆಡಳಿತ ವಿಭಾಗಗಳು ಕಂಡು ಬರುತ್ತಿದ್ದವು. ಈ ಆಡಳಿತ ವಿಭಾಗಗಳಿಗೆ ರಾಜನಾದವನು ತನ್ನ ಆತ್ಮೀಯರನ್ನು, ಕುಟುಂಬದವರನ್ನು ಹಾಗೂ ತನಗೆ ನಿಷ್ಠರಾದ ಸಾಮಂತರುಗಳನ್ನು ಅಧಿಕಾರಿಗಳನ್ನಾಗಿ ನೇಮಿಸುತ್ತಿದ್ದನು. ಅದೇ ರೀತಿ ಬಹುಶಃ ಯಲಹಂಕನಾಡಿಗೆ ಈ ರಾಚುರ ನರಸಪಯನು ನೇಮಕವಾಗಿರಬಹುದು. ಈ ನರಸಪಯನು ಬೆಂಗಳೂರು ಪ್ರದೇಶದ ಯಲಹಂಕ



ಶಾಸನದಲ್ಲಿ ಬಂದಿರುವ ಐತಿಹಾಸಿಕ ವ್ಯಕ್ತಿಗಳ ಹೆಸರುಗಳು

ನಾಡಿನಲ್ಲಿ ಆಡಳಿತ ಮಾಡಲು ನೇಮಕವಾದರೂ ಸಹ ತನ್ನ ಊರಿನ ಹೆಸರನ್ನು ಬಿಟ್ಟುಕೊಡದೇ ತನ್ನ ಹೆಸರಿನ ಪ್ರಾರಂಭದಲ್ಲಿ ಉಳಿಸಿಕೊಂಡಿರುವುದನ್ನು ನೋಡಬಹುದು.

ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ನರಸಪಯ ಹೆಸರು



ಸದಾಸಿವಮಹಾರಾಯ

ಸಾ.ಶ.1544ರ ಅಲ್ಲಾಳಸಂದ್ರದ ಶಾಸನವು ವೀರ ಸದಾಸಿವಮಹಾರಾಯ ಎಂಬ ಹೆಸರನ್ನು ಉಲ್ಲೇಖಿಸುತ್ತದೆ. ಈ ಸದಾಸಿವಮಹಾರಾಯನು (ಸದಾಶಿವರಾಯ) **ಕರ್ನಾಟಕ (ವಿಜಯನಗರ ಸಾಮ್ರಾಜ್ಯ) ಸಾಮ್ರಾಜ್ಯದ ರಾಜನಾಗಿ ಸಾ.ಶ.1542–1570ರ ವರೆಗೆ ಆಳ್ವಿಕೆ ನಡೆಸುತ್ತಿದ್ದನು**.

ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ಸದಾಸಿವ(ಮಾಹರಾಯರು) ಹೆಸರು



ಅಲ್ಲಾಳ

ನಮ್ಮಪರಂಪರೆಯಲ್ಲಿ ದೈವೀ ಶಕ್ತಿಯಲ್ಲಿ ನಂಬಿಕೆ ಉಳ್ಳವರು ಹುಟ್ಟಿದ ಮಗುವಿಗೆ ದೇವರ ಹೆಸರು ಅಥವಾ ತಮ್ಮ ಕುಲದೈವದ ಹೆಸರು ಇಡುವುದನ್ನು ನಾವು ಸಾಮಾನ್ಯವಾಗಿ ನೋಡುತ್ತೇವೆ. ಅದೇ ರೀತಿ ಬೆಂಗಳೂರಿನ ಕೆಲವು ಶಾಸನಗಳಲ್ಲಿ **ವಿಷ್ಣುವಿನ ಪ್ರತಿನಾಮವಾದ ಅಲ್ಲಾಳನಾಥ ದೇವರ ಹೆಸರನ್ನು ಅಲ್ಲಾಳ ಎಂದು ಒಬ್ಬ ವ್ಯಕ್ತಿಗೆ ಇಟ್ಟಿರುವುದನ್ನು ಕಾಣಬಹುದು**.

ಸಾ.ಶ.1340ರ ಅಲ್ಲಾಳಸಂದ್ರ ಮತ್ತು ಸಾ.ಶ.1342ರ ಜಕ್ಕೂರು ಶಾಸನಗಳಲ್ಲಿ ಅಲ್ಲಾಳನ ಪ್ರಸ್ತಾಪವಿದ್ದು, ಈ ಅಲ್ಲಾಳ ಎಂಬ ವ್ಯಕ್ತಿಯು **ಯಲಹಂಕನಾಡಿನಲ್ಲಿ ಸಾ.ಶ.1328-1348ರ ಅವಧಿಯಲ್ಲಿ ನಾಡಸೇನಬೋವನಾಗಿ ಕಾರ್ಯನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಹಲವಾರು ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ**. ಸಾಮಾನ್ಯವಾಗಿ **ಆಡಳಿತದ ಲೆಕ್ಕಪತ್ರವನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು ಸೇನಬೋವ ಎಂದು ಕರೆಯಲಾಗುತ್ತಿತ್ತು**[1]. ಈ ಅಲ್ಲಾಳನನ್ನು ಶಾಸನಗಳಲ್ಲಿ **ನಾಡಸೇನಬೋವ ಎಂದು ಕರೆದಿರುವುದರಿಂದ ಈತನು ಯಲಹಂಕನಾಡಿನ ಲೆಕ್ಕಪತ್ರದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದನು ಎನ್ನಬಹುದು**. ಸಾ.ಶ.1328ರ **ದೊಮ್ಮಲೂರು** ಶಾಸನ[2], ಸಾ.ಶ.1330ರ **ಬಯಿರತ್ತಿ** ಶಾಸನ[3], ಇನ್ನೂ ಮುಂತಾದ ಶಾಸನಗಳು ಅಲ್ಲಾಳನ ಬಗ್ಗೆ ಉಲ್ಲೇಖಿಸುತ್ತವೆ. ಈ ನಾಡಸೇನಬೋವರಿಗೆ ಕೆಲವು ನಿರ್ದಿಷ್ಟ ತೆರಿಗೆಗಳನ್ನು/ಗ್ರಾಮಗಳನ್ನು ದತ್ತಿ ನೀಡುತ್ತಿದ್ದರು. ಅದರಂತೆ ಅಲ್ಲಾಳನಿಗೆ ಅಲ್ಲಾಳಸಂದ್ರ, ಜಕ್ಕೂರು, ಬಯಿರತ್ತಿ ಗ್ರಾಮಗಳಲ್ಲಿ ದಾನ-ದತ್ತಿ ಬಿಟ್ಟಿರುವುದನ್ನು ಕಾಣಬಹುದು.

ಜಕ್ಕೂರ ಸಾ.ಶ.1342ರ ಶಾಸನದಲ್ಲಿ ನಾಡಸೇನಬೋವನಾದ ಅಲ್ಲಾಳನ ಹೆಸರು



ಹೊನ್ನಮಾರಯನಾಯ್ಕ

ಜಕ್ಕೂರಿನ ಸಾ.ಶ.1342ರ ಶಾಸನದಲ್ಲಿ ಹೊಂನಮಾರಯನಾಯ್ಕ ಎಂಬ ವ್ಯಕ್ತಿಯ ಉಲ್ಲೇಖ ಕಂಡುಬರುತ್ತದೆ. ಈತನು ಚಿಕ್ಕಬಯಿರಯನಾಯ್ಕನ ಮಗನಾಗಿದ್ದು, **ನಾಡಸೇನಬೋವನಾದ ಅಲ್ಲಾಳರಿಗೆ ಜಕ್ಕೂರಿನ ಗದ್ದೆ ಬೆದ್ದಲನೂ ಸರ್ವಮಾನ್ಯವಾಗಿ ದಾನ ನೀಡಿದ ವ್ಯಕ್ತಿಯಾಗಿದ್ದಾನೆ. ಈ ಹೊನ್ನಮಾರಯನಾಯ್ಕ ಪದದಲ್ಲಿ ನಾಯ್ಕ ಎಂಬ ಪದವು ಅಧಿಕಾರದ ಹಿನ್ನಲೆಯಲ್ಲಿ ಬಂದಿದೆಯೇ ಹೊರತು ಇದು ಜಾತಿ ಸೂಚಕ ಪದವಲ್ಲ.**


---

1 ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2000, ಪುಟ ಸಂಖ್ಯೆ-16, 34.

2 B Lewis Rice, Epigraphia Carnatica Vol 09, supplement, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-165, ದೊಮ್ಮಲೂರು

3 B Lewis Rice, Epigraphia Carnatica Vol 09, Inscriptions in the Bangalore District, ಹೊಸಕೋಟೆ ತಾಲ್ಲೂಕು ಶಾಸನ ಸಂಖ್ಯೆ-124, ಬಯಿರತ್ತಿ, 1905.

ಜಕ್ಕೂರ ಸಾ.ಶ.1342ರ ಶಾಸನದಲ್ಲಿ ಹೊಂನಮಾರಯ(ನಾಯ್ಕ) ಹೆಸರು



ಚಿಕ್ಕಬಯಿರಯನಾಯ್ಕ

ಸಾ.ಶ.1342ರ ಜಕ್ಕೂರು ಶಾಸನವು ಚಿಕ್ಕಬಯಿರಯನಾಯ್ಕ ಎಂಬ ಹೆಸರನ್ನು ಉಲ್ಲೇಖಿಸುತ್ತದೆ. ಈ ಚಿಕ್ಕಬಯಿರಯನಾಯ್ಕನಿಗೆ ಸಂಬಂಧಿಸಿದಂತೆ ಕಂಡುಬರುವ ವಿವಿಧ ಶಾಸನಗಳ ಆಧಾರದಲ್ಲಿ ಈತನು **ಮೊದಲು ಪಸಾಯಿತ**[4] (ರಾಜನ ಆಪ್ತ ಸಹಾಯಕ), **ಅರಮನೆಯ ಯೆಕ್ಕಟಿಗ**[5] (ರಾಜನ ವಿಶಿಷ್ಟ ಅಂಗರಕ್ಷಕ), ನಂತರ **ಮಹಾಸಾಮಂತನಾಗಿ**[6] **ಹಂತ ಹಂತವಾಗಿ ಪದೋನ್ನತಿಯನ್ನು ಪಡೆದಿರುವುದನ್ನು** ನಾವು ಗಮನಿಸಬಹುದು.

ಜಕ್ಕೂರ ಸಾ.ಶ.1342ರ ಶಾಸನದಲ್ಲಿ ಚಿಕ್ಕಬಯಿ(ರಯನಾಯ್ಕ) ಹೆಸರು




ಅದಲ್ಲದೇ ಬಹುಶಃ ಇವನ ಅಧಿಕಾರದ ಪ್ರಾಬಲ್ಯದಿಂದ ಇವನ ಕುಟುಂಬಸ್ಥರು ಅಂದರೆ ಇವನ ಮಕ್ಕಳು (ಹೊಂನಮಾರಯನಾಯಕ)[7] ಹಾಗೂ ಸಂಬಂಧಿಕರು[8] (ಮೈದುನರಾದ ತೊಳೆಯನಾಯಕರು ಮತ್ತು ಧೀರುಚೋಳೆಯನಾಯಕರು) ಸಹ ಅಧಿಕಾರಿಗಳಾಗಿ ಯಲಹಂಕನಾಡು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಅಧಿಕಾರ ನಡೆಸಿರುವುದಕ್ಕೆ ಶಾಸನಗಳನ್ನು ನೋಡಬಹುದು (ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಕುಟುಂಬ ರಾಜಕಾರಣವು ಇರುವಂತೆ ಪ್ರಾಚೀನ ರಾಜಕೀಯ ವ್ಯವಸ್ಥೆಯಲ್ಲಿಯೂ ಸಹ ಕುಟುಂಬ ರಾಜಕಾರಣ ಇತ್ತೆಂಬುದು ಈ ಮೇಲಿನ ಕೆಲವು ಉಲ್ಲೇಖಗಳಿಂದ ತಿಳಿದು ಬರುತ್ತದೆ).

ಯೆಕ್ಕಟಿಗ[9] - ಇವತ್ತಿನ ಭಾರತದ **SPG (Special Protection Group)/NSG (National Security Guard)** ಮತ್ತು ಅಮೇರಿಕದ **United States Secret Service (USSS)** ಎಂಬ ಭದ್ರತಾ ಪಡೆಗಳ ಹಾಗೇ **ಹೊಯ್ಸಳರ ಕಾಲದಲ್ಲಿ ಕಂಡುಬರುವ ರಾಜನ ವಿಶೇಷ ಅಂಗರಕ್ಷಕ ಪಡೆಗೆ ಯೆಕ್ಕಟಿಗರು ಎಂದು ಕರೆಯುತ್ತಿದ್ದರು**. ಈ ಯೆಕ್ಕಟಿಗರಾದವರು ಅರಸನಿಗೆ ಆಪ್ತರಾದ ಅಧಿಕಾರಿಯಾಗಿದ್ದು, ಯುದ್ಧಗಳಲ್ಲಿ ರಾಜನ ರಕ್ಷಣೆಗಾಗಿ ಮುಂದೆ ನಿಂತು ಹೋರಾಡುತ್ತಿದ್ದರು. ಹಾಗೂ ಇವರು ರಾಜನ ಮೇಲಿನ ಭಕ್ತಿ, ಶೌರ್ಯ, ಪರಾಕ್ರಮ, ತ್ಯಾಗಕ್ಕೆ ಪ್ರಸಿದ್ಧರಾಗಿದ್ದರು.

ವೀರಬಲ್ಲಾಳ

ಅಲ್ಲಾಳಸಂದ್ರದ ಸಾ.ಶ.1340ರ ಮತ್ತು ಜಕ್ಕೂರ ಸಾ.ಶ.1342ರ ಈ ಎರಡು ಶಾಸನಗಳಲ್ಲಿ ವೀರಬಲ್ಲಾಳನ ಪ್ರಸ್ತಾಪವಿದೆ. ಈ ವೀರಬಲ್ಲಾಳನು ಹೊಯ್ಸಳ ರಾಜವಂಶದಲ್ಲಿ ಸಾ.ಶ.1291-1342ರ[10] ವರೆಗೆ ಆಳ್ವಿಕೆ ಮಾಡಿದ ಪ್ರಸಿದ್ಧ ಅರಸ.

ಜಕ್ಕೂರ ಸಾ.ಶ.1342ರ ಶಾಸನದಲ್ಲಿ ಶ್ರೀ ಹೊಯ್ಸಳ ಎಂಬ ಹೆಸರು



4 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-24, ಗಾಣಿಗರಹಳ್ಳಿ, 1905.

5 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-129, ನಾಗಶೆಟ್ಟಿಹಳ್ಳಿ

6 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-21, ಜಕ್ಕೂರು, 1905.


7 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-21, ಜಕ್ಕೂರು, 1905

8 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-129, ನಾಗಶೆಟ್ಟಿಹಳ್ಳಿ ಮತ್ತು ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-24, ಗಾಣಿಗರಹಳ್ಳಿ, 1905

9 ಎನ್.ಆರ್.ಲಲಿತಾಂಬ, ಶಾಸನವಲ್ಲಿ ಕರ್ನಾಟಕದ ಹೆಮ್ಮೆಯ ವೀರ ಕುಡಿಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2017, ಪುಟಸಂಖ್ಯೆ-20.

10 ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ.ಪಬ್ಲಿಕೇಶನ್ಸ್, ಬೆಂಗಳೂರು, 2011, ಪುಟಸಂಖ್ಯೆ-136.


ಜಕ್ಕೂರ ಸಾ.ಶ.1342ರ ಶಾಸನದಲ್ಲಿ ವೀರಬಲ್ಲಾಳ ಹೆಸರು



ಬಲ್ಲವತಿರಾಯ

ಜಕ್ಕೂರು ಬಡಾವಣೆಯ/ಗ್ರಾಮದ ಹತ್ತನೇ ಶತಮಾನದ ಶಾಸನದಲ್ಲಿ ಬಲ್ಲವತಿರಾಯ ಎಂದಿದ್ದು, **ಇವನ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆತಿಲ್ಲ.**

ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ಬಲ್ಲವತಿರಾಯ ಹೆಸರು



ಬಿರುದಸೆದೇವ

ಜಕ್ಕೂರು ಬಡಾವಣೆಯ/ಗ್ರಾಮದ ಹತ್ತನೇ ಶತಮಾನದ ಶಾಸನದಲ್ಲಿ ಬಿರುದಸೆದೇವ ಎಂಬ ವ್ಯಕ್ತಿಯ ಉಲ್ಲೇಖ ಕಂಡುಬರುತ್ತದೆ. ಹಾಗೂ ಈ ಬಿರುದಸೆದೇವ ಮತ್ತು ಬಲ್ಲವತಿರಾಯನ ನಡುವೆ ಜಕ್ಕೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಕಾಳಗವಾಗಿರುವ ಸಾಧ್ಯತೆಯಿದ್ದು, ಯುದ್ಧದ ಪರಿಣಾಮವಾಗಲಿ ಅಥವಾ ಯುದ್ಧಕ್ಕೆ ಕಾರಣವಾಗಲಿ ಶಾಸನದಲ್ಲಿ ದಾಖಲಾಗಿಲ್ಲ. ಈ ಕಾಳಗದ ಬಗ್ಗೆ ತಿಳಿಸುವ ಶಾಸನ ಕಲ್ಲಿನ ಮೇಲ್ಭಾಗ ಒಡೆದು ಹೋಗಿದ್ದು, ಬಹುಶಃ **ಒಡೆದು ಹೋಗಿರುವ ಈ ಕಲ್ಲಿನ ಭಾಗ ಸಿಕ್ಕರೆ ನಮಗೆ ಹೆಚ್ಚಿನ ಮಾಹಿತಿಯು ಲಭ್ಯವಾಗಬಹುದು.**

ಜಕ್ಕೂರ ಸಾ.ಶ.10ನೇ 10ನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ಬಿರುದಸೆದೇವ ಹೆಸರು



ಕಾಮೆಯ ದಂಣ್ಣಾಯಕರು

ಅಲ್ಲಾಳಸಂದ್ರದ ಸಾ.ಶ.1340ರ ಶಾಸನದಲ್ಲಿ ಕಾಮೆಯ ದಂಣ್ಣಾಯಕರ ಪ್ರಸ್ತಾಪವಿದ್ದು, ಈ ಕಾಮೆಯ ದಂಣ್ಣಾಯಕರ **ವಂಶಸ್ಥರು 3ನೇ ವೀರ ಬಲ್ಲಾಳ ಅಧೀನದಲ್ಲಿ ಒಂದೇ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಆಳ್ವಿಕೆ ನಡೆಸಿದ್ದಾರೆ**. ಈ ಕಾಮೆಯ ದಂಣ್ಣಾಯಕರ **ತಂದೆಯಾದ ಪೊನ್ನಣನು ಮಹಾ ಪ್ರಧಾನನಾಗಿದ್ದು** ಆ ಪೊನ್ನಣನ **ನಾಲ್ಕು ಮಕ್ಕಳಾದ ಶ್ರೀಮೆಯ ದಂಣಾಯಕ[11], ಕಾಮದಣ್ಣಾಯಕ[12], ಯೆನಪಯ[13], ಹೊಯ ದಣ್ಣಾಯಕರು[14] ಒಂದೇ ಅವಧಿಯಲ್ಲಿ ಆಡಳಿತ ನಡೆಸಿದ್ದಾರೆ**. ಅಲ್ಲಾಳಸಂದ್ರದ ಸಾ.ಶ.1340ರ ಶಾಸನದಲ್ಲಿ ಕಾಮೆಯ ದಂಡನಾಯಕರ ಮಕ್ಕಳಾದ ಕಾಮೆಯ ದಂಣ್ಣಾಯಕರು ಅಲ್ಲಾಳರಿಗೆ ದಾನ ನೀಡಿದ್ದಾರೆ. **ಆದರೆ ದುರಾದೃಷ್ಟವಷಾತ್ ಈ ಶಾಸನವು ಇಂದು ನಾಶವಾಗಿದೆ.**

ಕುಲೋತ್ತುಂಗ ಚೋಳ

ಅಲ್ಲಾಳಸಂದ್ರದ ಸಾ.ಶ.1080ರ ಶಾಸನದಲ್ಲಿ ಕುಲೋತ್ತುಂಗ ಚೋಳನ ಉಲ್ಲೇಖ ಕಂಡುಬರುತ್ತದೆ. ಈ **ಕುಲೋತ್ತುಂಗ ಚೋಳನು ಚೋಳ ಮನೆತನದಲ್ಲಿ ಸಾ.ಶ.1070-1122ರ ಅವಧಿಯಲ್ಲಿ ಆಳ್ವಿಕೆ ಮಾಡಿದ ಅರಸ. ಅಲ್ಲಾಳಸಂದ್ರ ಗ್ರಾಮವು ಇವನ ಆಳ್ವಿಕೆಯ ವ್ಯಾಪ್ತಿಗೆ ಸೇರಿತ್ತು**.

ಆದರೆ ಈ ಶಾಸನವು ಕೂಡ ಇಂದು ಅಲ್ಲಾಳಸಂದ್ರದಲ್ಲಿ ಕಣ್ಮರೆಯಾಗಿದೆ.

ರಾಮದೇವ

ಅಲ್ಲಾಳಸಂದ್ರದ **ಸಾ.ಶ.1080ರ ವೀರಗಲ್ಲು ಶಾಸನದಲ್ಲಿ ಬರುವ ವೀರನ ಹೆಸರೇ ರಾಮದೇವ**. ಈ ರಾಮದೇವನು, ಕಾಡೆಯನಾಯಕನ ಬಂಟನಾದ ಮುಮ್ಮಡಿ ಸೆಟ್ಟಿಯ ಮಗ, ಹಾಗೂ ಗೂಳಿಯಣ್ಣನ ತಮ್ಮನಾಗಿದ್ದು, **ಬೇಟೆಗೆ ಹೋದಾಗ ದೊಡ್ಡ ಹಂದಿಯೊಡನೆ ಹೋರಾಡಿ** ಹಂದಿಯನ್ನು ಕೊಂದು **ಸ್ವರ್ಗಸ್ತನಾದ ವೀರನಾಗಿದ್ದಾನೆ**. **ದುರಂತವೇನೆಂದರೆ ಅಲ್ಲಾಳಸಂದ್ರದ ಸಾ.ಶ.1080ರ ಈ ಶಾಸನವು ಕೂಡ ಇಂದು ಕಣ್ಮರೆಯಾಗಿದೆ**.

---

11 B Lewis Rice, Epigraphia Carnatica Vol 09, Inscriptions in the Bangalore District, ದೊಡ್ಡಬಳ್ಳಾಪುರ ತಾಲ್ಲೂಕು ಶಾಸನ ಸಂಖ್ಯೆ-14, ಹಾಡೋನಹಳ್ಳಿ, 1905.

12 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-21, ಜಕ್ಕೂರು, 1905


13 B Lewis Rice, Epigraphia Carnatica Vol 09, Inscriptions in the Bangalore District, ದೊಡ್ಡಬಳ್ಳಾಪುರ ತಾಲ್ಲೂಕು ಶಾಸನ ಸಂಖ್ಯೆ-38, ಶಿವಪುರ, 1905.

14 B Lewis Rice, Epigraphia Carnatica Vol 09, Inscriptions in the Bangalore District, ದೇವನಹಳ್ಳಿ ತಾಲ್ಲೂಕು ಶಾಸನ ಸಂಖ್ಯೆ-60, ಚಿಕ್ಕಜಾಲ, 1905.

ಅಚ್ಯುತರಾಯ

ದಾಸರಹಳ್ಳಿ ಸಾ.ಶ.1532ರ ಶಾಸನದಲ್ಲಿ ಅಚ್ಯುತರಾಯನ ಪ್ರಸ್ತಾಪವಿದ್ದು, **ಇವನು ಕರ್ನಾಟ/ಕರ್ನಾಟಕ ಸಾಮ್ರಾಜ್ಯದ (ವಿಜಯನಗರ ಸಾಮ್ರಾಜ್ಯ) ಅರಸ ಹಾಗೂ ಇದೇ ಮನೆತನದ ಪ್ರಸಿದ್ಧ ಅರಸನಾದ ಕೃಷ್ಣದೇವರಾಯನ ತಮ್ಮ.** ಕೃಷ್ಣದೇವರಾಯನ ನಂತರ ಸಾ.ಶ.1529-1542ರ ವರೆಗೆ ಆಳ್ವಿಕೆ ಮಾಡಿದ ಈ ಅಚ್ಯುತರಾಯನ ಭೌಗೋಳಿಕ ವ್ಯಾಪ್ತಿಗೆ ದಾಸರಹಳ್ಳಿಯು ಸಹ ಒಳಪಟ್ಟಿತ್ತು ಎಂಬುದು ಇಲ್ಲಿನ ಶಾಸನದಿಂದ ತಿಳಿಯುತ್ತದೆ.

ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಅಚುತರಾಯ ಎಂಬ ಹೆಸರು




ಕೆಂಪದೇವರಸ ಆಂಣನವರು

ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಕೆಂಪದೇವರಸ ಆಂಣ ಎಂಬ ವ್ಯಕಿಯ ಉಲ್ಲೇಖವಿರುವುದರ ಜೊತೆಗೆ ಅಚ್ಯುತರಾಯರು ಎಲಹಂಕನಾಡ ನಾಯಕತನವನ್ನು ಈ ಕೆಂಪದೇವರಸ ಆಂಣನವರಿಗೆ ನೀಡಿದ್ದಾರೆ ಎಂಬ ಅಂಶಗಳು ಕಂಡುಬರುತ್ತವೆ. ಹಾಗೂ ಚನ್ನಪಟ್ಟಣ ತಾಲ್ಲೂಕಿನ ಮಾಗೇನಹಳ್ಳಿಯ ಸಾ.ಶ.1535ರ ಶಾಸನದಲ್ಲಿಯೂ ಸಹ ಕೆಂಪದೇವರಸ ಆಂಣ ಎಂಬ ಉಲ್ಲೇಖಬರುತ್ತದೆ[15]. ಈ ದಾಸರಹಳ್ಳಿ ಮತ್ತು ಮಾಗೇನಹಳ್ಳಿ ಶಾಸನಗಳ ಕಾಲಮಾನದ ಅಂತರ ಕೇವಲ ಮೂರು ವರ್ಷಗಳಾದ್ದರಿಂದ ಹಾಗೂ ಎರಡೂ ಶಾಸನದಲ್ಲಿ ರಾಜನಾದ ಅಚ್ಯುತರಾಯನ ಉಲ್ಲೇಖ ಕಂಡುಬರುವುದರಿಂದ ದಾಸರಹಳ್ಳಿ ಹಾಗೂ ಮಾಗೇನಹಳ್ಳಿ ಈ ಎರಡೂ ಶಾಸನದಲ್ಲಿನ ಕೆಂಪದೇವರಸ ಅಂಣ ಒಬ್ಬನೇ ಆಗುತ್ತಾನೆ.

15 B Lewis Rice, Epigraphia Carnatica Vol 09, Inscriptions in the Bangalore District, ಚನ್ನಪಟ್ಟಣ ತಾಲ್ಲೂಕು ಶಾಸನ ಸಂಖ್ಯೆ-74, ಮಾಗೆನಹಳ್ಳಿ, 1905.


ದಾಸರಹಳ್ಳಿಯ ಸಾ.ಶ.1532ರ ಶಾಸನದಲ್ಲಿ ಕೆಂಪದೇವರಸಆಂಣ ಎಂಬ ಹೆಸರು



ಅರುಳಾಳ ಪೆರುಮಾಳ್ ಕಣ್ಣಪ್ಪನ್

ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ ಅರುಳಾಳ ಪೆರುಮಾಳ್ ಕಣ್ಣಪ್ಪನ್ ನ ಉಲ್ಲೇಖವಿದ್ದು, ಈ ಅರುಳಾಳ ಪೆರುಮಾಳ್ ಕಣ್ಣಪ್ಪನು ಶ್ರಾದ್ಧವನ್ನು ಮಾಡಿಸಿರುವುದರ ಜೊತೆಗೆ, ಅರುಳಾಳಮೂರ್ತಿ ಎಂಬ ಅಗ್ರಹಾರವನ್ನು ನಿರ್ಮಿಸಿ, 11 ಜನ ಬ್ರಾಹ್ಮಣರಿಗೆ ದಾನ ನೀಡಿದ್ದಾರೆ **ಅರುಳಾಳ್ ಪದದ ವಿವರಣೆಯನ್ನು ಪುಟ ಸಂಖ್ಯೆ 155ರಲ್ಲಿ ಚರ್ಚಿಸಲಾಗಿದೆ**.

ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಅರುಳಾಳ ಎಂಬ ಹೆಸರು



ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಕಣ್ಣಪ್ಪನ್ ಹೆಸರು



ಇಮ್ಮಡಿ ಹರಿಯಪ್ಪ ಒಡೆಯರು


ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ ಇಮ್ಮಡಿ ಹರಿಯಪ್ಪ ಒಡೆಯರ ಪ್ರಸ್ತಾಪವಿದ್ದು, ಈ **ಇಮ್ಮಡಿ ಹರಿಯಪ್ಪ ಒಡೆಯರು ಕರ್ನಾಟ/ಕರ್ನಾಟಕ ಸಾಮ್ರಾಜ್ಯದ (ವಿಜಯನಗರ) ಅರಸ**.

ಈ ಇಮ್ಮಡಿ ಹರಿಯಪ್ಪ ಒಡೆಯರ್ ನು ವಿಜಯನಗರ ಸಾಮ್ರಾಜ್ಯದ ಸ್ಥಾಪಕರಲ್ಲಿ (ಹರಿರಾಯ - ಬುಕ್ಕರಾಯ) ಒಬ್ಬನಾದ ಒಂದನೇ ಬುಕ್ಕರಾಯನ ಮಗನಾಗಿದ್ದು, ಇವನ ಕಾಲಮಾನವನ್ನು ಸೂರ್ಯನಾಥ ಕಾಮತ್ ಅವರು ಸಾ.ಶ.1377-1404 ಎಂದು ಗುರ್ತಿಸಿದ್ದಾರೆ[16]. ಆದರೆ ಅಗ್ರಹಾರದ ತಮಿಳು ಶಾಸನದ ಪ್ರಕಾರ ಸಾ.ಶ.1350ರಲ್ಲಿ

16 ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ.ಪಬ್ಲಿಕೇಶನ್ಸ್, ಬೆಂಗಳೂರು, 2011, ಪುಟಸಂಖ್ಯೆ-153.

ಆಡಳಿತ ನಡೆಸಿರುವುದಕ್ಕೆ **ನಿಖರವಾದ ಆಧಾರ ದೊರೆತಿರುವುದರಿಂದ ಇವನ ಕಾಲಮಾನವನ್ನು 28 ವರ್ಷಗಳ ಹಿಂದಕ್ಕೆ ಕೊಂಡೊಯ್ಯುತ್ತದೆ**.

ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಇಮ್ಮಟಿ ಎಂಬ ಹೆಸರು




ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಉಟ್ಟೈಯಾರ್ ಹೆಸರು



ಮಯಿಲೆಯನಾಯಕ

ಅಗ್ರಹಾರದ ಸಾ.ಶ.1350ರ ಶಾಸನದಲ್ಲಿ ಮಯಿಲೆಯನಾಯಕನ ಉಲ್ಲೇಖವಿದ್ದು, ಈ ಮಯಿಲೆಯನಾಯಕ ಮತ್ತು ಇವನ ಸಹೋದರರು ಸಾ.ಶ.1333ರಿಂದ ಹೊಯ್ಸಳರ ಸಾಮಂತಾಧಿಪತಿಯಾಗಿ ಕುಕ್ಕಲನಾಡಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದರು. ಹೊಯ್ಸಳ ಮನೆತನದ ಅವನತಿಯ ನಂತರ ಈ ಮಯಿಲೆಯ ನಾಯಕನ ವಂಶಸ್ಥರು **ಸಾ.ಶ.1348ರ ವೇಳೆಗೆ ವಿಜಯನಗರ ಸಾಮ್ರಾಜ್ಯದ ಅರಸರಾದ ಹರಿಹರರಾಯರ ಸಾಮಂತರಾಗಿ ಯಲಹಂಕನಾಡನ್ನು ಆಳ್ವಿಕೆ ಮಾಡಿದ್ದಾರೆ**[17]. ಸಾ.ಶ.1356ರ ಬೊಮ್ಮವಾರ[18] ಮತ್ತು ಸಾ.ಶ.1386ರ ಕ್ಯಾತಮಾರನಹಳ್ಳಿಯ[19] ಶಾಸನದ ಪ್ರಕಾರ ಮಯಿಲೆಯನಾಯಕನು ಹರಿಹರರಾಯನ ಸಾಮಂತನಾಗಿದ್ದರೆ, **ಈ ಅಗ್ರಹಾರದ ಸಾ.ಶ.1350ರ ಶಾಸನದ ಪ್ರಕಾರ ಮಯಿಲೆಯನಾಯಕರು ಇಮ್ಮಡಿ ಹರಿಹರರಾಯನ ಅಧೀನದಲ್ಲಿಯೂ ಆಡಳಿತ ನಡೆಸಿರುವ ಅಂಶ ಬೆಳಕಿಗೆ ಬಂದಿದೆ**.

ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ಮಯಿಲೆಯ ಹೆಸರು



ಅಗ್ರಹಾರದ ಸಾ.ಶ.1350ರ ತಮಿಳು ಶಾಸನದಲ್ಲಿ ನಾಯಕ್ಕರುಮ್ ಹೆಸರು



---

17 ಆರ್.ಯುವರಾಜು, ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ (5ನೇ ಶತಮಾನದಿಂದ 18ನೇ ಶತಮಾನ ದವರೆಗೆ) ಪಿ.ಹೆಚ್.ಡಿ ಮಹಾ ಪ್ರಬಂಧ, 2020, ಪುಟಸಂಖ್ಯೆ-136 ಮತ್ತು 137

18 ಆರ್.ಯುವರಾಜು, ದೇವನಹಳ್ಳಿ ತಾಲ್ಲೂಕಿನ ಬೊಮ್ಮವಾರದ ಅಪ್ರಕಟಿತ ಶಾಸನ, ಇತಿಹಾಸ ದರ್ಶನ ಸಂಪುಟ 36, ಪುಟ ಸಂಖ್ಯೆ-56

19 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-139, ಕ್ಯಾತಮಾರನಹಳ್ಳಿ, 1905

ಐತಿಹಾಸಿಕ ಆಡಳಿತ ವಿಭಾಗಗಳು

ಇಂದು ಆಡಳಿತದ ಅನುಕೂಲಕ್ಕಾಗಿ **ರಾಷ್ಟ್ರ(ದೇಶ)>ರಾಜ್ಯ>ಜಿಲ್ಲೆ>ತಾಲ್ಲೂಕು>ಹೋಬಳಿ>ಗ್ರಾಮ**ಗಳೆಂದು ವಿಂಗಡಿಸಿಕೊಂಡಿರುವಂತೆ ಹಿಂದೆಯೂ ಸಹ ಹಲವಾರು ರಾಜ ಮನೆತನಗಳು ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಹಲವು ಬಗೆಗಳಲ್ಲಿ ವಿಂಗಡಿಸಿಕೊಂಡು ಆಡಳಿತ ನಡೆಸಿರುವುದಕ್ಕೆ ಹಲವಾರು ಶಾಸನಗಳು ಮಾಹಿತಿ ಒದಗಿಸುತ್ತದೆ. 15ನೇ ಶತಮಾನದಲ್ಲಿ **ಸಾಮ್ರಾಜ್ಯ>ರಾಜ್ಯ>ನಾಡು>ಸೀಮೆ>ಸ್ಥಳ>ವೆಂಟೆ** (ಪಾರು) ಮುಂತಾದ ಹೆಸರಿನಲ್ಲಿ ಆಡಳಿತ ವಿಭಾಗಗಳನ್ನು ವರ್ಗೀಕರಣ ಮಾಡಿರುವುದನ್ನು ಕಾಣಬಹುದು. ಈ ರೀತಿಯಾಗಿ ವಿಭಾಗ ಮಾಡುವುದರಿಂದ ಆಡಳಿತ ಹಾಗೂ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ತೆರಿಗೆಗಳ ಸಂಗ್ರಹ ಮುಂತಾದ ಆಡಳಿತ ಕಾರ್ಯಗಳಿಗೆ ಅನುಕೂಲವಾಗುತ್ತಿತ್ತು.

ಬೆಂಗಳೂರು ಪ್ರದೇಶದಲ್ಲಿ **ಕರಿಕನಾಡು**, **ಬೆಂಪೂರು ಪನ್ನೆರಡು**, **ಸಣ್ಣೆನಾಡು**, **ಮೊರಸುನಾಡು**, **ಕುಕ್ಕಲನಾಡು**, **ಮಣ್ಣೆನಾಡು-300**, **ಕೈವಾರನಾಡು**, **ಕೆಳವಲನಾಡು**, **ಪುಲಿಯೂರುನಾಡು**, **ಎಮ್ಮೆರೆನಾಡು**, **ಹುಲುಕಡಿನಾಡು**, **ಕುನ್ನಾಡ್ಜ್ಚಿನಾಡು**, **ಸೀಗಲನಾಡು**, **ಕೀಳಲೆನಾಡು**, **ಕೆರಕುಂದಾ-300**, **ನೆಕ್ಕುಂದಿ** ಮತ್ತು **ಹೊಮ್ಮಳಿಗನಾಡು** ಎಂಬ ಇನ್ನೂ ಮುಂತಾದ ಆಡಳಿತ ವಿಭಾಗಗಳು ಕಂಡುಬರುತ್ತವೆ[1].

ಗಂಗವಾಡಿ ತೊಂಭತ್ತಾರು ಸಾವಿರ

ಜಕ್ಕೂರಿನ 10ನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ಗಂಗವಾಡಿ ತ್ತೊಂಭತ್ತಾರು ಸಾವಿರದ ಉಲ್ಲೇಖವಿದ್ದು, ಈ ಗಂಗವಾಡಿ ತ್ತೊಂಭತ್ತಾರು ಸಾವಿರ ಯಾವುದೆಂದರೆ ಗಂಗ ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನು **ಗಂಗಪಾಡಿ**, **ಗಂಗವಾಡಿ**, **ಗಂಗಮಹಿ**, **ಗಾಂಗೇಯ ರಾಜ್ಯೇ**, **ಗಂಗವಾಡಿ ತೊಂಭತ್ತಾರು ಸಾಸಿರ**, **ಷಣ್ಣವತಿ** (ಷಣ್+ನವತಿ) **ಸಹಸ್ರವಿಷಯ** (ಶ್ರೀಪುರುಷನ ಕಾಲದ ತಾಮ್ರ ಶಾಸನದಲ್ಲಿ ಪ್ರಸ್ತಾಪ) ಎಂದು ಕರೆಯುತ್ತಿದ್ದು[2], ಇದು ಕರ್ನಾಟಕದ **ಬೆಂಗಳೂರು, ಕೋಲಾರ, ಮೈಸೂರು, ಮಂಡ್ಯ, ತುಮಕೂರು, ಚಿತ್ರದುರ್ಗ ಮತ್ತು ಹಾಸನ ಇನ್ನೂ ಮುಂತಾದ** ಜಿಲ್ಲೆಗಳ ವಿಶಾಲವಾದ ವ್ಯಾಪ್ತಿಯನ್ನು ಒಳಗೊಂಡಿತ್ತು. **ಕರ್ನಾಟಕ ಮಾತ್ರವಲ್ಲದೇ ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಕೆಲವು ಭೂ ಭಾಗಗಳು ಈ ಗಂಗವಾಡಿ ತೊಂಭತ್ತಾರು ಸಾವಿರ ಎಂಬ ವಿಶಾಲವಾದ ಭೂಪ್ರದೇಶದ ವ್ಯಾಪ್ತಿಗೆ ಒಳಪಟ್ಟಿದ್ದವು**. ಆದರೆ ಈ ಗಂಗವಾಡಿ ತೊಂಭತ್ತಾರು ಸಾವಿರ ಎಂಬುದು ಗಂಗರ ಆಳ್ವಿಕೆಯಲ್ಲಿ ಕಂಡು ಬರುವ ಹಳ್ಳಿಗಳ ಸಂಖ್ಯೆಯೋ ಅಥವಾ ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದ್ದೋ ಅಥವಾ ಬೇರೆ ಯಾವುದಿರಬಹುದು ಎಂಬುದನ್ನು ತಿಳಿಯಲು ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ.

ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ಳ್ಗಂಗವಾಡಿ ತೊಂಭತ್ತಱು



ಈ ಗಂಗವಾಡಿ ತೊಂಭತ್ತಾರು ಸಾವಿರದ ವ್ಯಾಪ್ತಿಯೊಳಗೆ **ಕೊಂಗುನಾಡು-8000**, **ಗಂಗ-6000**, **ಪುನ್ನಾಟ-6000**, **ವಡುಗವಳಿ-12000** ಮುಂತಾದ **ಆಡಳಿತ ವಿಭಾಗಗಳು ಒಳಪಟ್ಟಿದ್ದವು** ಎಂಬುದನ್ನು ಉಲ್ಲೇಖಿಸುತ್ತವೆ[3].

ಬೆಂಗಳೂರು ಜಿಲ್ಲೆಯಲ್ಲಿ ಬೇಗೂರ ಸಾ.ಶ.890ರ[4] ವೀರಗಲ್ಲು ಶಾಸನ ಹಾಗೂ ಬೆಂಗಳೂರು ಮ್ಯೂಸಿಯಂನಲ್ಲಿರುವ ಕ್ರಿ.ಶ.1105ರ[5] ಚಾಲುಕ್ಯಾರಸರ

1 ವಿ. ಕೃಷ್ಣಮೂರ್ತಿ, "ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು"; ಇತಿಹಾಸ ದರ್ಶನ ಸಂಪುಟ 15, 1990, ಪುಟಸಂಖ್ಯೆ-103.

2 ಆರ್.ಯುವರಾಜು, "ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ (5ನೇ ಶತಮಾನದಿಂದ 18ನೇ ಶತಮಾನ ದವರೆಗೆ) ಪಿ.ಹೆಚ್.ಡಿ ಮಹಾ ಪ್ರಬಂಧ, 2020, ಪುಟಸಂಖ್ಯೆ-45.

3 ಚನ್ನಬಸವಯ್ಯ ಹಿರೇಮಠ, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014, ಪುಟಸಂಖ್ಯೆ-220 ಮತ್ತು 221.

4 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-83, ಬೇಗೂರು, 1905


5 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-142, ವರ್ತೂರು, 1905

ತಾಮ್ರಶಾಸನದಲ್ಲಿ ಗಂಗವಾಡಿ ತೊಂಭತ್ತಾರು ಸಾವಿರದ ಉಲ್ಲೇಖವನ್ನು ಕಾಣಬಹುದು.

ಎಲಹಂಕನಾಡು

ಅಲ್ಲಾಳಸಂದ್ರದ ಸಾ.ಶ.1340ರ[6], ಜಕ್ಕೂರ ಸಾ.ಶ.1342ರ[7], ದಾಸರಹಳ್ಳಿಯ ಸಾ.ಶ.1532ರ[8], ಅಗ್ರಹಾರದ ಸಾ.ಶ.1350ರ[9] ಶಾಸನಗಳ ಪ್ರಕಾರ ಈ ಎಲ್ಲಾ ಗ್ರಾಮ/ಬಡಾವಣೆಗಳು ಯಲಹಂಕನಾಡಿನ[10] ವ್ಯಾಪ್ತಿಗೆ ಸೇರಿತ್ತು. ಈ ಯಲಹಂಕನಾಡು ಎಂಬುದು ಬೆಂಗಳೂರಿನಿಂದ 16 ಕಿ.ಮೀ ದೂರದಲ್ಲಿನ ಯಲಹಂಕವನ್ನು ಕೇಂದ್ರವಾಗಿಟ್ಟುಕೊಂಡ ಯಲಹಂಕನಾಡು ಆಗಿದ್ದು, ಈ ನಾಡು ಇಂದಿನ **ಬೆಂಗಳೂರು ತಾಲ್ಲೂಕಿನ ಪೂರ್ವ ಭಾಗ**, **ಹೊಸಕೋಟೆ ತಾಲ್ಲೂಕಿನ ಪಶ್ಚಿಮ ಭಾಗ**, **ದೊಡ್ಡಬಳ್ಳಾಪುರ, ದೇವನಹಳ್ಳಿ ತಾಲ್ಲೂಕುಗಳ ವ್ಯಾಪ್ತಿಯನ್ನು ಒಳಗೊಂಡ ಪ್ರದೇಶವಾಗಿತ್ತು**.


ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನದಲ್ಲಿ ನವಲಕ್ಕ ಹೆಸರು



ಜಕ್ಕೂರ ಸಾ.ಶ.1342ರ ಶಾಸನದಲ್ಲಿ ಎಲಹಕ್ಕ ನಾಡ ಹೆಸರು



ಅಲ್ಲಾಳಸಂದ್ರ ಸಾ.ಶ.1544ರ ಶಾಸನದಲ್ಲಿ ಎಲಕನಾಡ ಹೆಸರು



ದಾಸರಹಳ್ಳಿ ಸಾ.ಶ.1532ರ ಶಾಸನದಲ್ಲಿ ಎಲಹಕ ರಾಜ್ಯ ಎಂಬ ಹೆಸರು



ಹಾಗೆಯೇ ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ[11] ಯಲಹಂಕನಾಡಿನ ಉಲ್ಲೇಖವನ್ನು ಗಮನಿಸುವುದಾದರೆ **ದೊಮ್ಮಲೂರ** ಸಾ.ಶ.1253, 1266, 1290ರ, **ಗುಂಜೂರ** ಸಾ.ಶ.1301ರ, **ಮಡಿವಾಳದ** ಸಾ.ಶ.1301ರ, **ದ್ಯಾವಸಂದ್ರದ** ಸಾ.ಶ.1376ರ, **ಸಿಂಗನಾಯ್ಕನಹಳ್ಳಿಯ** ಸಾ.ಶ.1305ರ ತಮಿಳು ಶಾಸನಗಳಲ್ಲಿ **ಇಲ್ಯೆಪಾಕ್ಕನಾಡು ಎಂದು** ಹಾಗೂ **ಕಲ್ಲುಕೆರೆಯ** ಸಾ.ಶ.1303ರ, **ಹೆಬ್ಬಾಳದ** ಸಾ.ಶ.1308ರ, **ದೊಮ್ಮಲೂರ** ಸಾ.ಶ.1329ರ, **ನಾಗಸಂದ್ರದ** ಸಾ.ಶ.1342ರ, **ನಾಗಶೆಟ್ಟಿಹಳ್ಳಿಯ** ಸಾ.ಶ.1342ರ, **ಗಾಣಿಗರಹಳ್ಳಿಯ** ಸಾ.ಶ.1342ರ, **ಅಗರದ** ಸಾ.ಶ.1363ರ, **ಕ್ಯಾತಮಾರನಹಳ್ಳಿಯ** ಸಾ.ಶ.1386ರ, **ದೊಮ್ಮಲೂರ** ಸಾ.ಶ.1409ರ, **ಕೊಡಿಗೆಹಳ್ಳಿಯ** ಸಾ.ಶ.1431ರ, **ಸುಲ್ತಾನ್ ಪಾಳ್ಯದ** ಸಾ.ಶ.1474ರ, **ಅಲ್ಲಾಳಸಂದ್ರದ** ಸಾ.ಶ.1544ರ **ಬಳ್ಳಾಪುರಪೇಟೆಯ** ಸಾ.ಶ.1628ರ, **ಚಿಕ್ಕಪೇಟೆಯ** ಸಾ.ಶ.1633ರ, **ಜಕ್ಕರಾಯನ ಕೆರೆ**, **ಯಶವಂತಪುರ** ಹೀಗೆ ಕನ್ನಡ ಶಾಸನಗಳಲ್ಲಿ ಎಲಹಂಕನಾಡು, ಯಲಹಕ್ಕನಾಡು, ಯಲಹಂಕನಾಡು, ಎಲಹಂಕರಾಜ್ಯ ಎಂದು ಪ್ರಸ್ತಾಪವಾಗಿರುವುದನ್ನು ಕಾಣಬಹುದು.

ಸಿವನಸಮುದ್ರ ಸೀಮೆ

ಈ ಸಂಚಿಕೆಯಲ್ಲಿನ ದಾಸರಹಳ್ಳಿಯ ಸಾ.ಶ.1532ರ ಶಾಸನ ಹಾಗೂ ಅಲ್ಲಾಳಸಂದ್ರದ ಸಾ.ಶ.1544ರ ಶಾಸನದಲ್ಲಿ ಸಿವನಸಮುದ್ರದ ಉಲ್ಲೇಖಗಳನ್ನು ಕಾಣಬಹುದು. **ಶಿವನಸಮುದ್ರ ಎಂದಾಕ್ಷಣ ಗಗನ ಚುಕ್ಕಿ, ಭರಚುಕ್ಕಿ ಎಂಬ ಪ್ರಸಿದ್ಧವಾದ ನೀರಿನ ಜರಿ (ವಾಟರ್ ಫಾಲ್ಸ್) ಇರುವ ಪ್ರದೇಶ ಎಂದು ಹಲವರು ತಿಳಿದುಕೊಳ್ಳುತ್ತಾರೆ.** ಆದರೆ **ಬೆಂಗಳೂರಿನಲ್ಲಿ ಸಿವನಸಮುದ್ರ ಇತ್ತೆಂಬುದು**

---

6 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-31, ಅಲ್ಲಾಳಸಂದ್ರ, 1905.

7 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-21, ಜಕ್ಕೂರು, 1905.

8 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-57, ದಾಸರಹಳ್ಳಿ, 1905

9 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-39A, ಅಗ್ರಹಾರ, 1905.

10 https://drive.google.com/file/d/0B5GbasXByROQVW-tEQ3VnR2JwblE/view?resourcekey=0-H0-TftdmaAw-1c0U2ntMx1g

11 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕಿನ ಶಾಸನಗಳು, 1905.

ಸಾ.ಶ.1530ರ ಹಾರೋಹಳ್ಳಿಯ[12] **ಶಾಸನದಲ್ಲಿ ಕಾಣಬಹುದು**. ಈ ಸಿವನಸಮುದ್ರ ಯಾವುದು ಇದ್ದಿರಬಹುದು ಎಂಬ ಗೊಂದಲಕ್ಕೆ **ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯದಲ್ಲಿ ಹಾಕಿಸಿರುವ ಸಾ.ಶ.1533ರ ಶಾಸನದಲ್ಲಿ**[13] **ಹೆಸರಘಟ್ಟಕ್ಕೆ ಪ್ರತಿನಾಮ (ಮತ್ತೊಂದು ಹೆಸರು) ಸಿವನಸಮುದ್ರವೆಂದು ಇತ್ತು ಎಂಬುದು ತಿಳಿದುಬರುತ್ತದೆ**. ಅಂದರೆ ಈ ಶಾಸನದ ಕಾಲಕ್ಕೂ ಮೊದಲೇ ಹೆಸರಘಟ್ಟಕ್ಕೆ ಪ್ರತಿನಾಮವಾಗಿ ಸಿವನಸಮುದ್ರ ಪದ ಬಳಕೆ ಇತ್ತು ಎಂಬುದನ್ನು ತಿಳಿಯಬಹುದು. ಹಾಗೆಯೇ ಐವರುಕಂಡಪುರದ ಸಾ.ಶ.1292ರ[14] ತಮಿಳು ಶಾಸನದಲ್ಲಿ ಪಯರುಗಟ್ಟ ಎಂದು ಹೆಸರುಘಟ್ಟದ ಮೊದಲ ಉಲ್ಲೇಖ ಕಂಡುಬರುತ್ತದೆ. ಇದರಿಂದಾಗಿ ಸಾ.ಶ.1292ರ ಮೊದಲಿನಿಂದಲೂ ಸಿವನಸಮುದ್ರ ಎಂಬ ಹೆಸರಿನ ಬಳಕೆ ಇದ್ದಿರಬಹುದು. ಇದು ಅಲ್ಲದೆ **ಬೆಂಗಳೂರಿನ ಅನೇಕ ಶಾಸನಗಳಲ್ಲಿಯೂ ಸಿವನಸಮುದ್ರದ ಉಲ್ಲೇಖವನ್ನು** ನಾವು ನೋಡಬಹುದಾಗಿದೆ. **ಸಾದಹಳ್ಳಿಯ** ಸಾ.ಶ.1425ರ, **ಕೊಡಿಗೇಹಳ್ಳಿ** ಸಾ.ಶ.1431ರ, **ಕಾವಲ್ ಭೈರಸಂದ್ರ**ದ ಸಾ.ಶ.1538ರ ಶಾಸನಗಳಲ್ಲಿ[15] ಸಿವನಸಮುದ್ರದ ಉಲ್ಲೇಖಗಳನ್ನು ಕಾಣಬಹುದು.

ಅಲ್ಲಾಳಸಂದ್ರ ಸಾ.ಶ.1544ರ ಶಾಸನದಲ್ಲಿ ಸಿವನಸಮು(ದ್ರ)




12 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-28, ಹಾರೋಹಳ್ಳಿ, 1905.

13 B Lewis Rice, Epigraphia Carnatica Vol 09, Inscriptions in the Bangalore District, ನೆಲಮಂಗಲ ತಾಲ್ಲೂಕು ಶಾಸನ ಸಂಖ್ಯೆ-31, ಹೆಸರುಘಟ್ಟ, 1905.

14 B Lewis Rice, Epigraphia Carnatica Vol 09, Inscriptions in the Bangalore District, ನೆಲಮಂಗಲ ತಾಲ್ಲೂಕು ಶಾಸನ ಸಂಖ್ಯೆ-38B, ಅಯಿಗಂಡಪುರ, 1905

15 B Lewis Rice, Epigraphia Carnatica Vol 09, Inscriptions in the Bangalore District, 1905.

ದಾಸರಹಳ್ಳಿ ಸಾ.ಶ.1532ರ ಶಾಸನದಲ್ಲಿ ಸಿವನಸಮುದ್ರ



ಈ ಮೇಲೆ ಹೆಸರಿಸಿದ ಶಾಸನಗಳ ಆಧಾರದ ಮೇಲೆ ನೋಡುವುದಾದರೆ **ಸಿವನಸಮುದ್ರ/ಶಿವನಸಮುದ್ರವು (ಇಂದಿನ ಹೆಸರಘಟ್ಟ) ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು** ಎಂದು ತಿಳಿದುಬರುತ್ತದೆ. ಸಿವನಸಮುದ್ರವು ಯಲಹಂಕನಾಡಿನ ಒಳಗೆ ಮೊದಲು ಸ್ಥಳವಾಗಿ ನಂತರ ಸೀಮೆ, ಹೀಗೆ ಹಂತ ಹಂತವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಪ್ರಸ್ತುತ ಹೆಸರಘಟ್ಟವು ಗ್ರಾಮ ಪಂಚಾಯಿತಿಯಾಗಿ ಗುರುತಿಸಿಕೊಂಡಿದೆ.

ಸಂಣ್ಣನಾಡು

ಅಲ್ಲಾಳಸಂದ್ರದ ಸಾ.ಶ.1080ರ[16] ವೀರಗಲ್ಲು ಶಾಸನದಲ್ಲಿ ಸಂಣ್ಣನಾಡು ಉಲ್ಲೇಖ ಇದ್ದು, ಈ ಸಂಣ್ಣನಾಡು ಬೆಂಗಳೂರಿಂದ 34 ಕಿ.ಮೀ ದೂರದಲ್ಲಿ ಬೆಂಗಳೂರು ದೇವನಹಳ್ಳಿ ರಸ್ತೆಯಲ್ಲಿ **ಚಿಕ್ಕಸಣ್ಣೆ** ಮತ್ತು **ದೊಡ್ಡಸಣ್ಣೆ** ಗ್ರಾಮಗಳಿದ್ದು, ಬಹುಶಃ ಚಿಕ್ಕಸಣ್ಣೆಯೇ ಸಣ್ಣೆನಾಡಿನ ಕೇಂದ್ರ ಸ್ಥಳವಾಗಿರಬೇಕು. ಚಿಕ್ಕಸಣ್ಣೆಯಲ್ಲಿ ಶಾಸನಗಳು, ಕೋಟೆಯ ಅವಶೇಷಗಳನ್ನು ಕಾಣಬಹುದು. ಇಲ್ಲಿನ ಗುಡ್ಡಕ್ಕೆ ಹೊಂದಿಕೊಂಡಂತೆ ವಾಯುವ್ಯ ದಿಕ್ಕಿನಲ್ಲಿ ವಿಶಾಲವಾದ ಕೆರೆಯ ಹಿಂಭಾಗ ಪ್ರದೇಶವು ಹಳೆಯ ಊರಾಗಿದ್ದು, ಈಗ ಬೇಚರಾಕ್ ಆಗಿದೆ. ಅಲ್ಲಿ ಈಗಲೂ ಗ್ರಾಮದ ಅವಶೇಷಗಳಿವೆ. ಬಹುಶಃ ಈ ಗ್ರಾಮದ ಜನರೇ ಕಾಲಾಂತರದಲ್ಲಿ ಚಿಕ್ಕಸಣ್ಣೆ, ದೊಡ್ಡಸಣ್ಣೆ ಎಂದು ಎರಡು ಪ್ರತ್ಯೇಕ ಗ್ರಾಮಗಳನ್ನಾಗಿ ಮಾಡಿಕೊಂಡಿರಬಹುದು[17].

ಈ ಸಣ್ಣೆನಾಡು ಸುಮಾರು ಉತ್ತರದಿಂದ ದಕ್ಷಿಣಕ್ಕೆ 80 ಕಿ.ಮೀ ವ್ಯಾಪ್ತಿಯಲ್ಲಿ ಅಂದರೆ **ಉತ್ತರದಲ್ಲಿ ನಂದಿದುರ್ಗ**ದ ದಕ್ಷಿಣ ತಪ್ಪಲಿನಲ್ಲಿರುವ ಕೊಡವತ್ತಿ ಗ್ರಾಮದಿಂದ **ದಕ್ಷಿಣ ಗಡಿ ಗ್ರಾಮವಾಗಿ ಕಾಡುಗೋಡಿ**ಯವರೆಗೆ ವಿಸ್ತಾರವನ್ನು ಹೊಂದಿತ್ತು. ಸಾ.ಶ.1029ರಲ್ಲಿ ಸಣ್ಣೆನಾಡಿನ ಸಮಕಾಲೀನ ನೆರೆಹೊರೆಯ ನಾಡುಗಳಾದ **ಕುಕ್ಕನೂರುನಾಡು**, **ಕುರುಕುನ್ನಾಡ್ಚಿನಾಡು**, **ಮಣ್ಣೆನಾಡುಗಳು ವಿಕ್ರಮ ಚೋಳಮಂಡಲದ ವ್ಯಾಪ್ತಿಗೆ ಒಳಪಟ್ಟಿತು**.

16 B Lewis Rice, Epigraphia Carnatica Vol 09, Inscriptions in the Bangalore District, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ-32, ಅಲ್ಲಾಳಸಂದ್ರ, 1905

17 ಆರ್.ಯುವರಾಜು, "ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ (5ನೇ ಶತಮಾನದಿಂದ 18ನೇ ಶತಮಾನ ದವರೆಗೆ) ಪಿ.ಹೆಚ್.ಡಿ ಮಹಾ ಪ್ರಬಂಧ, 2020, ಪುಟಸಂಖ್ಯೆ-57

ಬೆಂಗಳೂರಿನ ಶಾಸನಗಳಲ್ಲಿ ಸಣ್ಣೆನಾಡಿನ ಮೊದಲ ಉಲ್ಲೇಖ 9ನೇ ಶತಮಾನದ **ಚಿಕ್ಕಸಣ್ಣೆಯ** ಶಾಸನದಲ್ಲಿ ಸಿಗುತ್ತದೆ. ಈ ಶಾಸನದಲ್ಲಿ "ಸಣ್ಣೆ.."[18]. ಎಂದು, ನಂತರ **ಅರದೇಶನಹಳ್ಳಿಯ** ಸಾ.ಶ.900ರ ಶಾಸನದಲ್ಲಿ **ಸಣ್ಣೆ-ಮುನ್ನೂರು** ಎಂದು, **ಸೋಲದೇವನಹಳ್ಳಿಯ** ಸಾ.ಶ.1029ರ ಕನ್ನಡ ಶಾಸನ, **ಕಾಡುಗೋಡಿಯ** ಸಾ.ಶ.1043ರ, **ಗಂಗವಾರದ** ಸಾ.ಶ.1046ರ, **ಬ್ಯಾಡರಹಳ್ಳಿಯ** ಸಾ.ಶ.1067ರ, **ಆವತಿಯ** ಸಾ.ಶ.1133ರ , **ಕಾರಹಳ್ಳಿಯ** ಸಾ.ಶ.1283ರ, **ಪಟ್ಟಂದೂರ** ಸಾ.ಶ.1343ರ, **ಕಿತ್ತಗನೂರ** ಸಾ.ಶ.1401ರ ಶಾಸನಗಳಲ್ಲಿ[19] **ಸಣ್ಣೆನಾಡು**, **ಸಣ್ಣೆ-300**, **ಸಟ್ನೆಮೂನೂರು** ಎಂಬ ಉಲ್ಲೇಖವನ್ನು ಕಾಣಬಹುದು.

ಜಕ್ಕೂರಿನ 10ನೇ ಶತಮಾನದ ಶಾಸನದಲ್ಲಿ ".ಣ್ಣನಾಡ" ಎಂದು ಇದ್ದು, .ಣ್ಣ ಎಂಬ ಹೆಸರಿನಿಂದ ಬರುವ ನಾಡುಗಳೆಂದರೆ ಮಣ್ಣೆನಾಡು ಮತ್ತು ಸಣ್ಣೆನಾಡು. ಮಣ್ಣೆನಾಡಿನ ವ್ಯಾಪ್ತಿಗೆ ಜಕ್ಕೂರು ಒಳಪಡುವುದಿಲ್ಲ. ಏಕೆಂದರೆ ನೆಲಮಂಗಲ ತಾಲ್ಲೂಕು ಹಾಗೂ ತುಮಕೂರು ತಾಲ್ಲೂಕಿನ ಕೆಲವು ಪ್ರದೇಶಗಳು ಮಣ್ಣೆನಾಡಿನ ವ್ಯಾಪ್ತಿಯಲ್ಲಿತ್ತು. ಅಲ್ಲಾಳಸಂದ್ರದ ಸಾ.ಶ.1080ರ ಶಾಸನದಲ್ಲಿ ಸಣ್ಣೆನಾಡ ಪ್ರಸ್ತಾಪವಿದ್ದು, ಜಕ್ಕೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳೆಲ್ಲ ಸಣ್ಣೆನಾಡಿನ ವ್ಯಾಪ್ತಿಗೆ ಒಳಪಟ್ಟಿರುವುದರಿಂದಾಗಿ ಈ ಶಾಸನದಲ್ಲಿ ಉಲ್ಲೇಖವಾದ .ಣ್ಣನಾಡ (ಆಗಿರುವ ಸ್ಥಳದಲ್ಲಿ ಸ ಅಕ್ಷರ ಇದ್ದಿರಬೇಕು) ಎಂಬುದನ್ನು ಸಣ್ಣೆನಾಡು ಎಂದು ಹೇಳಬಹುದು.

ಉಣ್ಣಾಮಲೆ ಪಟ್ಟಣ

ಅಲ್ಲಾಳಸಂದ್ರದ ಸಾ.ಶ.1340ರ ಮತ್ತು ಜಕ್ಕೂರ ಸಾ.ಶ.1342ರ ಈ ಎರಡು ಶಾಸನಗಳಲ್ಲಿ ಉಣ್ಣಾಮಲೆ ಪಟ್ಟಣದ ಉಲ್ಲೇಖವಿದ್ದು,, ಈ ಉಣ್ಣಾಮಲೆ ಪಟ್ಟಣವು ಹೊಯ್ಸಳ ಮನೆತನದ ರಾಜಧಾನಿಗಳಲ್ಲಿ ಒಂದು. ಉತ್ತರದಿಂದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನು ಸಾ.ಶ.1310, ನಂತರ ಸಾ.ಶ.1313ರಲ್ಲಿ ದ್ವಾರಸಮುದ್ರದ (ಇಂದಿನ ಹಳೆಬೀಡು) ಮೇಲೆ ಆಕ್ರಮಣ ಮಾಡುತ್ತಾನೆ. ಆದ್ದರಿಂದ ಮೂರನೇ ವೀರಬಲ್ಲಾಳನು ಆಡಳಿತದ ಅನುಕೂಲಕ್ಕಾಗಿ ಹಲವಾರು ರಾಜಧಾನಿಗಳನ್ನು[20] ಬದಲಾಯಿಸುತ್ತಾ ಆಳ್ವಿಕೆ ನಡೆಸುತ್ತಿರುತ್ತಾನೆ. ಈ ರೀತಿಯಾಗಿ ಬದಲಾಯಿಸುತ್ತಿದ್ದ ರಾಜಧಾನಿಗಳಲ್ಲಿ ಉಣ್ಣಾಮಲೆಪಟ್ಟಣವು ಒಂದು. 3ನೇ ವೀರಬಲ್ಲಾಳನು ಸಾ.ಶ.1328 ರಿಂದ 1342ರ ವರೆಗೆ ಈ **ಉಣ್ಣಾಮಲೆ ಪಟ್ಟಣವನ್ನು ರಾಜಧಾನಿ ಮಾಡಿಕೊಂಡಿರುವುದಕ್ಕೆ ಹಲವಾರು ಶಾಸನಗಳನ್ನು ಆಧಾರವಾಗಿ ನೀಡಬಹುದು.**

ಅಲ್ಲಾಳಸಂದ್ರ ಮತ್ತು **ಜಕ್ಕೂರು** ಶಾಸನಗಳ ಜೊತೆಗೆ ಬೆಂಗಳೂರಿನ ಗಾಣಿಗರಹಳ್ಳಿ, ಪಟ್ಟಂದೂರು, ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿ, ಕುರಿವಿಗೆರೆ, ದೇವನಹಳ್ಳಿ ತಾಲ್ಲೂಕಿನ ತಿಂಡಲು, ಕಾಡಿಗನಹಳ್ಳಿ , ಚಿಕ್ಕಜಾಲ ಹಾಗೂ ಹೊಸಕೋಟೆ ತಾಲ್ಲೂಕಿನ ಬಯಿರತ್ತಿಯ ಶಾಸನಗಳಲ್ಲಿ[21] **ವುಂಣಾಮಲೆ** ಪಟ್ಟಣ, **ಉಂಣಮಲೆ** ಪಟ್ಟಣ, **ಉಣ್ಣಾಮಲೆ** ಪಟ್ಟಣ ಮುಂತಾದ ಹೆಸರುಗಳಿಂದ ಕರೆದಿರುವುದನ್ನು ಕಾಣಬಹುದು.

ಪ್ರಸ್ತುತ ಉಣ್ಣಾಮಲೆ ಪಟ್ಟಣವು ತಮಿಳುನಾಡಿನಲ್ಲಿರುವ ಪ್ರದೇಶವಾಗಿದ್ದು, **ಇಂದು ಉಣ್ಣಾಮಲೆ ಪಟ್ಟಣವನ್ನು ತಿರುವಣ್ಣಾಮಲೈ ಎಂದು ಕರೆಯಲಾಗುತ್ತದೆ**. ಈ ಹೆಸರು **ಪ್ರಕೃತಿವಾಚಕ (ಮಲೆ-ಬೆಟ್ಟ) ಹಾಗೂ ದೈವ ವಾಚಕವಾದ (ಅಣ್ಣಾಮಲೈದೇವಾಲಯ) ಪದಗಳಿಂದ ಬಂದಿರುವ ಸಾಧ್ಯತೆಯಿದ್ದು, ತಿರುವಣ್ಣಾಮಲೈ ಎಂದರೆ ಕೆಂಪುವರ್ಣದ ಪರ್ವತ ಎಂದರ್ಥ**[22].

---

18 ಆದಪ್ಪ ಪಾಸೋಡಿ, ಬೆಂಗಳೂರು ಪರಿಸರದ ಹೊಸ ಶಾಸನಗಳು, ಇತಿಹಾಸ ದರ್ಶನ ಸಂಪುಟ 34, 2019, ಪುಟಸಂಖ್ಯೆ-16.

19 B Lewis Rice, Epigraphia Carnatica Vol 09, Inscriptions in the Bangalore District, 1905

20 ಆರ್.ಯುವರಾಜು, ಶಾಸನಗಳ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಯನ (5ನೇ ಶತಮಾನದಿಂದ 18ನೇ ಶತಮಾನ ದವರೆಗೆ) ಪಿ.ಹೆಚ್.ಡಿ ಮಹಾ ಪ್ರಬಂಧ, 2020, ಪುಟಸಂಖ್ಯೆ-130.

21 B Lewis Rice, Epigraphia Carnatica Vol 09, Inscriptions in the Bangalore District, 1905

22 "Tiruvannamali Historical moments", Tiruvannamalai Municipality. 2011

ತೆರಿಗೆಗಳು

ರಾಜ್ಯದ ಅಭ್ಯುದಯಕ್ಕೆ ಆಧಾಯದ ಅಥವಾ ಬೆಳೆದ ಬೆಳೆಯ ಇಂತಿಷ್ಟು ಭಾಗದ ಮೊತ್ತದ ಹಣ ಅಥವಾ ಇತರೆ ವಸ್ತುಗಳನ್ನು ಕಡ್ಡಾಯವಾಗಿ ರಾಜನಿಗೆ/ಸರ್ಕಾರಕ್ಕೆ ಪ್ರತಿಯೊಬ್ಬರೂ ಸಲ್ಲಿಸಬೇಕಾದ ಮೊತ್ತವನ್ನು ತೆರಿಗೆ ಎಂದು ಕರೆಯಲಾಗುತ್ತದೆ.

ಸಾಮಾನ್ಯವಾಗಿ ತೆರಿಗೆಗಳನ್ನು ಕೆರೆ, ಕಟ್ಟೆ, ದೇವಾಲಯ, ರಸ್ತೆ ನಿರ್ಮಾಣ ಮುಂತಾದ ಸಾರ್ವಜನಿಕ ಕಾರ್ಯಗಳಿಗೆ, ಯುದ್ಧದ ಸಮಯದಲ್ಲಿ/ರಾಜ್ಯದ ರಕ್ಷಣೆ ಮಾಡುವುದಕ್ಕಾಗಿ, ಹೀಗೆ ಹಲವು ಕಾರಣಗಳಿಗಾಗಿ ಸಂಗ್ರಹಿಸಲಾಗುತ್ತಿತ್ತು. ಹಿಂದೆ ವಸ್ತುಗಳ ರೂಪ ಅಥವಾ ಹಣದ ರೂಪದಲ್ಲಿ ಪಾವತಿಸಲಾಗುತ್ತಿತ್ತು. ಇಂದು ನಾವು ಕೇವಲ ಹಣದ ರೂಪದಲ್ಲಿ ಮಾತ್ರ ತೆರಿಗೆ ಪಾವತಿಸುತ್ತಿರುವುದನ್ನು ಕಾಣಬಹುದು.

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ ಪ್ರದೇಶಗಳಲ್ಲಿ ದೊರೆತಿರುವ ಸುಮಾರು 10-15ನೇ ಶತಮಾನದವರೆಗಿನ ಶಾಸನಗಳ ಆಧಾರಿತವಾಗಿ, ಈ ಪ್ರದೇಶಗಳಲ್ಲಿ ಚಾಲ್ತಿಯಲ್ಲಿದ್ದ ತೆರಿಗೆಗಳನ್ನು ಕೃಷಿ ತೆರಿಗೆಗಳು, ಸುಂಕ ಹಾಗೂ ಇತರೆ ತೆರಿಗೆಗಳೆಂದು ಅಧ್ಯಯನದ ದೃಷ್ಟಿಕೋನದಿಂದ ವಿಭಾಗಿಸಿ ಮುಂದಿನಂತೆ ಚರ್ಚಿಸಲಾಗಿದೆ.

ಕೃಷಿ ತೆರಿಗೆಗಳು

ಈ ಸಂಚಿಕೆಯಲ್ಲಿರುವ ಶಾಸನಗಳು ಎಲ್ಲಿಯೂ ತೆರಿಗೆ ಎಂಬ ಪದವನ್ನು ನೇರವಾಗಿ ಹೇಳದೇ ಇದ್ದರೂ ಸಹ ಗದ್ದೆ, ಬೆದ್ದಲು, ತೋಟ, ತುಡಕೆ ಎಂಬ ಇನ್ನೂ ಮುಂತಾದ ಪದಗಳ ಉಲ್ಲೇಖ ಕಂಡುಬರುವುದರಿಂದ ಅಂದಿನ ಕಾಲದಲ್ಲಿ ರೈತರು ಬೆಳೆಯುವ ಬೆಳೆಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹಾಗೂ **ನೀರಾವರಿ ಆಶ್ರಿತ ಬೆಳೆಗಳಿಗೆ ಅಧಿಕವಾದ ತೆರಿಗೆ**ಯನ್ನು ವಿಧಿಸಲಾಗುತ್ತಿತ್ತು ಎಂದೂ ಊಹಿಸಬಹುದಾಗಿದೆ.

ಜಕ್ಕೂರ ಸಾ.ಶ.1342ರ ಹೊಂನಮಾರಯನಾಯ್ಕರ, ಅಲ್ಲಾಳಸಂದ್ರದ ಸಾ.ಶ.1340ರ ಕಾಮೆಯ ದಂಣ್ನಾಯಕರ ಮತ್ತು ಸಾ.ಶ.1544ರ ರಾಚುರ ನರಸಪಯರ, ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧದ ಮತ್ತು ದಾಸರಹಳ್ಳಿಯ ಸಾ.ಶ.1532ರ ಶಾಸನಗಳಲ್ಲಿ ಉಲ್ಲೇಖವಿರುವ ಕೃಷಿ ತೆರಿಗೆಗಳನ್ನು ಮುಂದೆ ಚರ್ಚಿಸಲಾಗಿದೆ.

ಗದ್ದೆಯ ಮೇಲಿನ ತೆರಿಗೆ

ಕೆರೆ, ಕಾಲುವೆ, ನದಿಯ ನೀರನ್ನು ಬಳಸಿ ವ್ಯವಸಾಯ ಮಾಡುವ ಭೂಮಿಗೆ ಗದ್ದೆ ಎಂದು ಕರೆಯಲಾಗುತ್ತದೆ. ಇಲ್ಲಿ ಸಾಮಾನ್ಯವಾಗಿ ಭತ್ತ, ಕಬ್ಬು ಮುಂತಾದ ಧಾನ್ಯಗಳು ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಭೂಮಿಯು ನೀರಾವರಿ ಆಶ್ರಿತ ಫಲವತ್ತಾದ ಭೂಮಿಯಾಗಿರುವುದರಿಂದ ವರ್ಷದಲ್ಲಿ ಕನಿಷ್ಠ ಎಂದರೂ ಮೂರು ಬೆಳೆಗಳನ್ನು ಬೆಳೆಯಲು ಸಾಧ್ಯತೆಗಳಿರುತ್ತವೆ. ಆದ್ದರಿಂದ ಇಂತಹ ಭೂಮಿಯ ಮೇಲೆ ಸ್ವಾಭಾವಿಕವಾಗಿ ತೆರಿಗೆಯ ಪ್ರಮಾಣ ಹೆಚ್ಚಿರುತ್ತದೆ. **ಜಕ್ಕೂರಿನಲ್ಲಿರುವ ಕೆರೆಯು ಇಲ್ಲಿನ ಗದ್ದೆಗಳಿಗೆ ಪ್ರಮುಖವಾದ ನೀರಾವರಿ ಮೂಲ**ವಾಗಿದ್ದು, ಬಹುಶಃ ಈ ಬಡಾವಣೆಯ ಇಂದಿನ ತಲೆಮಾರಿಗೆ ಹೋಲಿಸಿದರೆ **ಸುಮಾರು 15 ತಲೆಮಾರುಗಳಿಗೆ (775ವರ್ಷಕ್ಕೆ) ಈ ಕೆರೆಯು ಆಸರೆ ನೀಡಿದೆ** ಎಂದು ಹೇಳಬಹುದು. ಸಾಮಾನ್ಯವಾಗಿ ಕೃಷಿ ತೆರಿಗೆಗಳು ನ್ಯಾಯಯುತ ಮತ್ತು ವೈಜ್ಞಾನಿಕವಾಗಿರದೇ ರೈತರಿಗೆ ಹೊರೆಯಾಗಿದ್ದವು. ಆದರೂ ಅವುಗಳನ್ನು ಕೊಡಲೇ ಬೇಕಾಗಿತ್ತು. ಈ ನೀರಾವರಿ ಆಧಾರಿತ ತೆರಿಗೆಯನ್ನು 'ನೀರು ತೆರಿಗೆ' ಅಥವಾ 'ಉದಗಬಾಗ' ಎಂದು ಎಂ.ಎಚ್.ಗೋಪಾಲ್ ಅಭಿಪ್ರಾಯ ಪಟ್ಟಿದ್ದಾರೆ[1]. ನದಿ, ಸರೋವರ, ಕೆರೆ, ಬಾವಿಗಳಿಂದ ನೀರನ್ನು ಬಳಸಿ ಬೆಳೆದ ಬೆಳೆಗೆ **ಸಾಮಾನ್ಯವಾಗಿ 1/3 ಭಾಗ** ತೆರಿಗೆಯನ್ನು ವಿಧಿಸುತ್ತಿದ್ದರು. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಅಂದು ವಸ್ತು ರೂಪದಲ್ಲಿ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಈ ತೆರಿಗೆಗಳನ್ನು ವರ್ಷಕ್ಕೆ ಒಂದು ಬಾರಿ ಸಲ್ಲಿಸುತ್ತಿದ್ದರು. **ಇಂದು ಈ ನೀರಾವರಿ ಆಶ್ರಿತ ಭೂಮಿಯನ್ನು "ತರಿ" ಭೂಮಿ ಎಂದು ಕಂದಾಯ ದಾಖಲೆಗಳಲ್ಲಿ ನಮೂದಿಸುವುದನ್ನು ನೋಡಬಹುದು.**

ಬೆಜಲು, ಬೆದ್ದಲು

ಮಳೆಯಾಶ್ರಿತ ಭೂಮಿಯನ್ನು ಬೆದ್ದಲು ಎಂದು ಕರೆಯಲಾಗುತ್ತಿತ್ತು. ಈ ಭೂಮಿಯಲ್ಲಿ ಹತ್ತಿ, ರಾಗಿ, ನವಣೆ, ಜೋಳ ಹಾಗೂ ದ್ವಿದಳ ದಾನ್ಯಗಳು ಸೇರಿದಂತೆ ಇನ್ನಿತರೆ ಬೆಳೆಗಳನ್ನು ಬೆಳೆಯಲಾಗುತ್ತದೆ. ಆದರೆ ಈ ಭೂಮಿಯು ಕೇವಲ ಮಳೆಯನ್ನೇ ಆಶ್ರಯಿಸುತ್ತಿರುವುದರಿಂದ ಇದರ ಮೇಲೆ ವಿಧಿಸುವ **ತೆರಿಗೆಯ ಪ್ರಮಾಣ ಕಡಿಮೆ** ಇರುತ್ತದೆ. ಈ ಬೆಜಲು ಅಥವಾ ಬೆದ್ದಲು ಭೂಮಿಯಲ್ಲಿ ಬೆಳೆದ ಬೆಳೆಯಲ್ಲಿ 1/4 ರಷ್ಟನ್ನು ತೆರಿಗೆಯ ರೂಪದಲ್ಲಿ ಸಲ್ಲಿಸಬೇಕಿತ್ತು. **ಪ್ರಸ್ತುತ ಕಂದಾಯ ದಾಖಲೆಗಳಲ್ಲಿ ಮಳೆ ಆಶ್ರಿತ ಭೂಮಿಯನ್ನು ಖುಷ್ಕಿ ಜಮೀನು ಎಂದು ನಮೂದು ಮಾಡಲಾಗುತ್ತದೆ**.

ಕೆರೆ

ಕೆರೆ ನೀರಿನ ಬಳಕೆ ಹಾಗೂ ಕೆರೆ ಉತ್ಪನ್ನದ ಮೇಲೆ ಹಲವು ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಮೀನು ಸಾಕಾಣಿಕೆ, ಕೃಷಿಗೆ ನೀರು ಬಳಸಿಕೊಳ್ಳಲು, ಅಗಸರು

1 ಟಿ.ವಿ.ನಾಗರಾಜ, ವಿಜಯನಗರ ಸಾಮ್ರಾಜ್ಯದ ನೀರಾವರಿ ತೆರಿಗೆ, ವಿಜಯನಗರ ಅಧ್ಯಯನ ಸಂಪುಟ 19, 2014, ಪುಟಸಂಖ್ಯೆ-221.



ಶಾಸನದಲ್ಲಿ ಬಂದಿರುವ ತೆರಿಗೆಗಳ ಪಕ್ಷಿನೋಟ

ಬಟ್ಟೆ ತೊಳೆಯಲು (ಅಸಗದೆರೆ/ಅಸಗರ ತೆರಿಗೆ/ಅಸಗ ಸುಂಕ) ನೀರನು ಉಪಯೋಗಿಸುತ್ತಿದ್ದರು. ಇವರುಗಳು ಸಹ ತೆರಿಗೆಯನ್ನು ಸಲ್ಲಿಸಬೇಕಾಗಿತ್ತು. ಜಕ್ಕೂರು, ಅಲ್ಲಾಳಸಂದ್ರ ಹಾಗೂ ದಾಸರಹಳ್ಳಿ ಪ್ರದೇಶದಲ್ಲಿ ಇಂದಿಗೂ ಕೆರೆಗಳು ಸುಸ್ಥಿತಿಯಲ್ಲಿದ್ದು, ಈ ಕೆರೆಗಳ ನೀರಿನ ಬಳಕೆಯ ಮೇಲೆಯೂ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು ಎಂದು ತಿಳಿಯುತ್ತದೆ. ಆದರೆ ಎಷ್ಟು ಭಾಗ ತೆರಿಗೆಯಿತ್ತು ಅಥವಾ ಎಷ್ಟು ತೆರಿಗೆ ಹಾಕಲಾಗಿತ್ತು ಎಂಬುದನ್ನು ಶಾಸನಗಳು ಸ್ಪಷ್ಟಪಡಿಸುವುದಿಲ್ಲ.

ಕುಂಟೆ

ಚಿಕ್ಕ ಚಿಕ್ಕ ನೀರಿನ ಕಟ್ಟೆಗಳನ್ನು ಕುಂಟೆ ಎಂದು ಕರೆಯುವುದುಂಟು. ಮತ್ತೊಂದು ಅರ್ಥದಲ್ಲಿ ಬೆಳೆಗಳ ನಡುವೆ ಬೆಳೆಯುವ ಅನಗತ್ಯ ಕಳೆಯನ್ನು ತೆಗೆಯಲು ಬಳಸುವ ಒಂದು ರೈತ ಉಪಕರಣಕ್ಕೂ ಕುಂಟೆ ಎಂದು ಕರೆಯಲಾಗುತ್ತದೆ. ಇನ್ನೂ ಒಂದರ್ಥದಲ್ಲಿ ಕುಂಟೆಯು ಅಳತೆ ಮಾಪನದ ಒಂದು ಭಾಗ. ಇಷ್ಟು ಪ್ರಮಾಣದ ಕುಂಟೆ ಹೋಗುವ ಭೂಮಿ ಜಾಗ ಎಂಬ ಅರ್ಥವನ್ನು ಕಾಣಬಹುದು. ಆದುದರಿಂದ ಇಂತಿಷ್ಟು ಕುಂಟೆಯ ಭೂಮಿ ಎಂದು ಅಳತೆ ಮಾಡಿ ತೆರಿಗೆ ವಿಧಿಸುತ್ತಿದ್ದರೆಂದು ತಿಳಿಯಬಹುದು.

ಗುಡೆ

ಕಾಳು/ಧಾನ್ಯದ ರಾಶಿ, ಇವುಗಳ ಮೇಲೆ ಸಹ ತೆರಿಗೆಯನ್ನು ವಿಧಿಸುತ್ತಿದ್ದರು.

ಗುಯಲು -ಗುಯ್ಯಲು

ಒಂದು ಬಗೆಯ ಭೂಮಿ ಎಂದರ್ಥವಿದ್ದು,ಇದು ಎಂತಹ ಭೂಮಿ ಎಂಬುದು ಖಚಿತವಿಲ್ಲ.

ತೋಟ

ಕೆರೆಗಳ ಏರಿಯ ಕೆಳಗೆ ಅಥವಾ ಹೆಚ್ಚು ನೀರಾವರಿ ಇರುವ ಪ್ರದೇಶಗಳಲ್ಲಿ ಪ್ರಮುಖವಾಗಿ ತೆಂಗು, ಬಾಳೆ, ಅಡಿಕೆ ಮತ್ತು ಹಣ್ಣಿನ ಗಿಡಗಳು ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುವ ಭೂಮಿ/ಪ್ರದೇಶಕ್ಕೆ ತೋಟ ಎಂದು ಕರೆಯಬಹುದು. ಈ ಮೇಲೆ ತಿಳಿಸಿದ ತೋಟಗಾರಿಕಾ ಬೆಳೆಗಳ ಮೇಲೂ ತೆರಿಗೆಯನ್ನು ವಿಧಿಸುತ್ತಿದ್ದ ನಿದರ್ಶನಗಳುಂಟು. ಉದಾ- ಅಡಿಕೆ ಬೆಳೆಯ ಮೇಲೆ **ಅಡಿಕೆ ಸುಂಕ/ಅಡಿಕೆ ದೆರೆ** ಎಂಬ ತೆರಿಗೆ ಇದ್ದುದನ್ನು ಕಾಣಬಹುದು. ಈ ಸಂಚಿಕೆಯಲ್ಲಿ ಹೆಸರಿಸಿರುವ ಕೆಲವು ಶಾಸನಗಳಲ್ಲಿ ತೋಟ ಪದದ ಉಲ್ಲೇಖ ಕಂಡು ಬರುವುದರಿಂದ ಈ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಈ ಬೆಳೆಗಳ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. **ಪ್ರಸ್ತುತ ಈ ತೋಟಗಾರಿಕಾ ಭೂಮಿಯನ್ನು ಭಾಗಾಯ್ತು ಭೂಮಿ ಎಂದು ಕರೆಯಲಾಗುತ್ತದೆ.**

ತುಡಕೆ

ಭೂಮಿಯ ಚಿಕ್ಕ ಭಾಗ ಅಥವಾ ಹೂದೋಟದ ಮೇಲಿನ ತೆರಿಗೆಯಾಗಿದ್ದು, ಹೂವು ಹಲವು ಕಾರ್ಯಗಳಿಗೆ ಬಳಸುವ ವಸ್ತುವಾಗಿದ್ದು, ಹಲವು ಪ್ರಕಾರದ ಹೂವುಗಳನ್ನು ಈ ಪ್ರದೇಶದಲ್ಲಿ ಬೆಳೆಯುತ್ತಿದ್ದರು ಎಂದು ಹೇಳಬಹುದು. ಇಂದು ನಗರೀಕರಣದಿಂದಾಗಿ ಈ ಪ್ರದೇಶದಲ್ಲಿ ಕೃಷಿಭೂಮಿ ನೋಡುವುದೇ ಭಾಗ್ಯ ಎಂದೆನ್ನಬಹುದು.

ಕಾಡಾರಂಬ

ಮಳೆ ಅವಲಂಬಿಸಿರುವ ಸಾಗುವಳಿ ಭೂಮಿ ಅಥವಾ ನೀರಾವರಿ ಸೌಕರ್ಯವಿಲ್ಲದ ಒಕ್ಕಲುತನದ ಭೂಮಿಯ ಮೇಲಿನ ತೆರಿಗೆ.

ನಿರಾರಂಬ

ನೀರಾವರಿ ಭೂಮಿ, ನೀರಾವರಿ ಭೂಮಿಯ ಮೇಲಿನ ತೆರಿಗೆ.

ಪಗೆಮಾಳ

ಜಕ್ಕೂರ ಹೊಂನಮಾರಯನಾಯ್ಕರ ಶಾಸನದಲ್ಲಿ ಪಗೆಮಾಳ ಎಂದಿದ್ದು ಇದರ ಅರ್ಥದಲ್ಲಿ ಸ್ಪಷ್ಟತೆಯಿಲ್ಲ. ಬಹುಶಃ ಪಾಳು ಭೂಮಿ ಅಥವಾ ಗೋಮಾಳ (ಗೋಮಾಳ ಸುಂಕ) ಇರಬಹುದು.

ಆಣೆ-ಅಚ್ಚುಕಟ್ಟು

ದಾಸರಹಳ್ಳಿಯ ಶಾಸನದಲ್ಲಿ ಆಣೆ-ಅಚ್ಚುಕಟ್ಟು ಎಂಬ ಉಲ್ಲೇಖವಿದ್ದು, ಆಣೆ - ಅಣೆಕಟ್ಟು ಎಂದರೆ ಒಡ್ಡು, ಕೆರೆ ಅಥವಾ ನದಿಯ ನೀರಾವರಿ ಪ್ರದೇಶದಲ್ಲಿರುವ ಭೂಮಿ

ಸುಂಕಗಳು

ದಾಸರಹಳ್ಳಿಯ ಸಾ.ಶ.1532 ಶಾಸನದಲ್ಲಿ ಸುಂಕದ ಉಲ್ಲೇಖವಿದ್ದು, ಸುಂಕ ಎಂದರೆ ಸರಕುಗಳ ತಯಾರಿಕೆ, ಮಾರಾಟ, ಆಮದು, ರಫ್ತು ಇತ್ಯಾದಿ ವ್ಯವಹಾರಿಕ ಚಟುವಟಿಕೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆ ಎಂದು ಹೇಳಬಹುದು.

ಇತರೆ ತೆರಿಗೆಗಳು

ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ಮತ್ತು ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನಗಳಲ್ಲಿ ಉಲ್ಲೇಖವಿರುವ ಇತರೆ ತೆರಿಗಳನ್ನು ಮುಂದೆ ನೋಡೋಣ.

ಸುವರ್ಣಾದಾಯುಂಟಾದ

ಸಕಲ ಸುವರ್ಣಾದಾಯ, ಸಕಲ ಭತ್ತಾದಾಯ[2], ಹಣರೂಪದ ಆದಾಯ ಅಥವಾ ತೆರಿಗೆಗಳನ್ನು ಚಿನ್ನದ ಹಣದ ರೂಪದಲ್ಲಿಯೇ ನೀಡುವುದನ್ನು ಸುವರ್ಣಾದಾಯ ಎಂದು ಕರೆಯಲಾಗಿದೆ.

ಮನೆದೆರೆ

ಮನೆ/ವಾಸದ ಮನೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯಾಗಿದ್ದು, ಇಂದಿಗೂ ಸಹ ನಾವು ಮನೆಗಂದಾಯ ಎಂದು ತೆರಿಗೆ ಕಟ್ಟುವುದನ್ನು ನೋಡುತ್ತೇವೆ.

ಮಗ್ಗದೆರೆ

ನೇಯ್ಗೆಯು ಅನಾದಿ ಕಾಲದಿಂದ ಮಾನವನ ಬಹುಮುಖ್ಯ ಕೆಲಸವಾಗಿದೆ. ರಾಜರುಗಳ ಆಳ್ವಿಕೆಯ ಕಾಲ ಘಟ್ಟದಲ್ಲಿ ಜನ ಸಾಮಾನ್ಯರು ತೊಡುವ ಬಟ್ಟೆಗಳನ್ನು ನೆಯ್ಯುವ ಮತ್ತು ಇವುಗಳ ಮೇಲೆ ಕಸೂತಿ ಕೆಲಸ ಮಾಡುವ ನೇಯ್ಗೆಗಾರರು ಎಂಬ ವರ್ಗವಿದ್ದು, ಇವರ ನೇಯ್ಗೆ ಚಟುವಟಿಕೆಗಳ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಮಗ್ಗದೆರೆ ಅಥವಾ ಸಾಲಿಗದೆರೆ ಎಂದು ಕರೆಯಲಾಗುತ್ತಿತ್ತು, ಈ ತೆರಿಗೆ ಈಗಲೂ ಚಾಲ್ತಿಯಲ್ಲಿದೆ. ದಾಸರಹಳ್ಳಿ ಶಾಸನವು ಮಗ್ಗದೆರೆ ಎಂಬ ತೆರಿಗೆಯನ್ನು ಉಲ್ಲೇಖಿಸುವುದರಿಂದ ಇದೊಂದು ಅಪರೂಪದ ಶಾಸನವೆಂದು ಹೇಳಬಹುದು. ಮತ್ತು ಈ ಪ್ರದೇಶದಲ್ಲಿ ಮಗ್ಗಗಳಿದ್ದು, ಇಲ್ಲಿ ಬಟ್ಟೆಯನ್ನು ನೆಯ್ಯುವ ಕಾರ್ಯಗಳು ನಡೆಯುತ್ತಿದ್ದವು ಹಾಗೂ ಆ ಕಾಲದಲ್ಲಿ ಈ ನೇಯ್ಗೆ ಚಟುವಟಿಕೆಯು ಒಂದು ಪ್ರಮುಖ ಉದ್ಯಮವಾಗಿತ್ತು ಎಂದು ಹೇಳಬಹುದು

ನಿಧಿ-ನಿಕ್ಷೇಪ

ಭೂಮಿಯೊಳಗೆ ಅಂದರೆ ಭೂಮಿಯನ್ನು ಅಗೆಯುತ್ತಿರುವಾಗ ಆಕಸ್ಮಿಕವಾಗಿ ಸಿಗುವ ಚಿನ್ನವನ್ನು (ಹೊನ್ನು) ನಿಧಿ ಎಂದು ಕರೆಯಲಾಗುತ್ತದೆ. ಬೆಲೆಬಾಳುವ ಖನಿಜ ಸಂಪತ್ತನ್ನು ಹೊಂದಿರುವ ಸ್ಥಳ/ಪ್ರದೇಶವನ್ನು ನಿಕ್ಷೇಪ ಎಂದು ಕರೆಯಲಾಗುತ್ತದೆ (ಭೂಗರ್ಭದಲ್ಲಿ ಅಡಗಿಸಿಟ್ಟ ಸಂಪತ್ತು, ಚಿನ್ನ ಇನ್ನಿತರೆ ಬೆಲೆ ಬಾಳುವ ವಸ್ತುಗಳು).

ಜಲ-ಪಾಷಾಣ

ನೀರು ಬಹುಪಯೋಗಿಯಾಗಿದ್ದು, ಕುಡಿಯಲು, ದಿನನಿತ್ಯದ ಚಟುವಟಿಕೆ, ಕೃಷಿ-ನೀರಾವರಿ ಮುಂತಾದ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ಆದುದರಿಂದ ನೀರಿನ ಬಳಕೆಯ ಮೇಲೆ ತೆರಿಗೆ ಹಾಕುವುದನ್ನು ಕಾಣಬಹುದು. ಹಾಗೂ ಕಲ್ಲು ಎಂಬುದು ಮನೆ ಮತ್ತು ಕಟ್ಟಡಗಳನ್ನು ಕಟ್ಟಲು ಬಳಸುವ ಅಗತ್ಯ ವಸ್ತುವಾಗಿದ್ದು, ಈ ಕಲ್ಲನ್ನು ತೆಗೆಯುವ ಕ್ವಾರಿ ಜಾಗಗಳ ಮೇಲೆಯೂ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಬಹುಶ: ಪಾಷಾಣ ಎಂಬುದು ಈ ತೆರಿಗೆಯನ್ನು ಸೂಚಿಸುತ್ತಿರಬಹುದು.

ಸಿದ್ಧಸಾಧ್ಯ

ಸಿಕ್ಕಿರುವ ಮತ್ತು ಸಿಗಬಹುದಾದ ಎಲ್ಲಾ ವಸ್ತುಗಳು/ಉತ್ಪನ್ನಗಳು.

ಅಷ್ಟಭೋಗ

ಎಂಟು ರೀತಿಯ ಭೂಮಿಯ ಒಡೆತನದ ಅಧಿಕಾರಗಳನ್ನು ಅಷ್ಟಭೋಗ ಎಂದು ಕರೆಯಲಾಗುತ್ತದೆ. ಆ ಅಷ್ಟಭೋಗಗಳೆಂದರೆ - ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಆಗಾಮಿ, ಸಿದ್ಧ, ಸಾಧ್ಯ

ಅಕ್ಷೀಣಿ-ಆಗಾಮಿ

ಕಣ್ಣಿಗೆ ಕಾಣಿಸುವ ಪ್ರತಿಯೊಂದು ವಸ್ತುಗಳು.

ಕೃಷಿ ತೆರಿಗೆಗಳು, ಸುಂಕಗಳು ಮಾತ್ರವಲ್ಲದೇ ವೃತ್ತಿ ತೆರಿಗೆಗಳು, ವ್ಯಾಪಾರಿ ತೆರಿಗೆಗಳು ಇನ್ನೂ ಮುಂತಾದ ತೆರಿಗೆಗಳಿದ್ದವು. ಹಾಗೂ ತೆರಿಗೆಗಳನ್ನು ವಸೂಲಿ ಮಾಡಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಲಾಗಿತ್ತು ಎಂಬುದನ್ನು ಗಮನಿಸಬೇಕು.

ಈ ರೀತಿಯಾಗಿ ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ, ದಾಸರಹಳ್ಳಿ ಪ್ರದೇಶದಲ್ಲಿ ಸುಮಾರು ಹತ್ತನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ಶಾಸನೋಕ್ತ ತೆರಿಗೆಗಳನ್ನು ಗಮನಿಸಬಹುದಾಗಿದ್ದು, ಈ ತೆರಿಗೆಗಳು ಜನಸಾಮಾನ್ಯರಿಗೆ ಹೆಚ್ಚು ಹೊರೆಯಾಗದೇ ಇದ್ದವು, ಕೆಲವು ಬಾರಿ ನಿರಂಕುಶ ರಾಜರ ಕಾರಣದಿಂದ ತೆರಿಗೆಗಳು ಹೆಚ್ಚಿದ್ದು ಜನಸಾಮಾನ್ಯರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದ ಉದಾಹರಣೆಯೂ ಸಾಕಷ್ಟಿವೆ. ಆದರೆ ಈ ಪ್ರದೇಶದಲ್ಲಿ ಜನಸಾಮಾನ್ಯರಿಗೆ ಭಾರವಾಗುವಂತಹ ತೆರಿಗೆಗಳು ಇರಲಿಲ್ಲವೆಂದು ಈ ಮೊದಲೇ ಉಲ್ಲೇಖಿಸಿದ ಶಾಸನಗಳಿಂದ ತಿಳಿಯಬಹುದಾಗಿದೆ.

---

2 ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2000, ಪುಟ ಸಂಖ್ಯೆ-41.

ಗಾಣ

ದಿನನಿತ್ಯದ ಅಡುಗೆ ಹಾಗೂ ದೀಪಗಳಿಗೆ ಬಳಸುವ ಔಡಲ ಎಣ್ಣೆ/ಹರಳೆಣ್ಣೆ, ತೆಂಗಿನ ಎಣ್ಣೆ, ಬೇವಿನ ಎಣ್ಣೆ, ತಾಳೆ ಎಣ್ಣೆ, ಹೊಂಗೆ ಎಣ್ಣೆ, ಶೇಂಗಾ ಎಣ್ಣೆ ಮುಂತಾದ ಎಣ್ಣೆಯನ್ನು ತೆಗೆಯಲು ಇಂದಿನ ತಾಂತ್ರಿಕ ವ್ಯವಸ್ಥೆಯಿದ್ದಂತೆ ಹಿಂದೆ ಇರಲಿಲ್ಲ, ಹಾಗಾಗಿ ಅಂದು ಗಾಣಗಳನ್ನು ಬಳಸಿ ಎಣ್ಣೆ ತಯಾರು ಮಾಡಲಾಗುತ್ತಿತ್ತು. ಎತ್ತುಗಾಣ ಮತ್ತು ಕೈಗಾಣ ಎಂಬ ಎರಡು ರೀತಿಯ ಗಾಣಗಳಿದ್ದು, ಗಾಣಗಳಿಂದ ಎಣ್ಣೆ ತಯಾರು ಮಾಡುತ್ತಿದ್ದಲ್ಲದೆ, ಎಣ್ಣೆ ತೆಗೆದು ಉಳಿದವನ್ನು ಹಿಂಡಿ ಹಾಗೂ ಗೊಬ್ಬರವನ್ನು ಸಹ ಮಾರಾಟ ಮಾಡಲಾಗುತ್ತಿತ್ತು. ಹಿಂಡಿ ಎಂಬುದನ್ನು ಕೃಷಿ ಭೂಮಿಗೆ ಫಲವತ್ತಾದ ಫಸಲನ್ನು ನೀಡಲು ಬೆಳೆಗಳಿಗೆ ಬಳಸಲಾಗುತ್ತಿತ್ತು ಮತ್ತು ಕಡಲೆ (ಶೇಂಗಾ) ಹಿಂಡಿಯು ಪಶುಗಳಿಗೆ ಉತ್ತಮ ಆಹಾರವಾಗಿತ್ತು (ಇಂದು ಇದು ಯಥೇಚ್ಛವಾಗಿ ಬಳಕೆಯಿದೆ) ಹಾಗಾಗಿ ಗಾಣಗಳ ಉತ್ಪಾದನೆಯ ಮೇಲೆ ಹಲವು ತೆರಿಗೆ ಹಾಕಲಾಗುತ್ತಿತ್ತು.

ಗಾಣ ವೃತ್ತಿ ಮಾಡುವವರನ್ನು ಗಾಣಿಗರು ಎಂದು ಕರೆಯಲಾಗುತ್ತಿತ್ತು ಹಾಗೂ ಇವರು ಇರುವ ಊರುಗಳನ್ನು ಗಾಣಿಗರಹಳ್ಳಿ, ಗಾಣಿಗರ ಬೀದಿ ಎಂದು ಕರೆಯಲಾಗುತ್ತಿತ್ತು (ಇಂದಿಗೂ ಬೆಂಗಳೂರಿನಲ್ಲಿ ಗಾಣಿಗರ ಪೇಟೆ, ಗಾಣಿಗರಹಳ್ಳಿ ಎಂಬ ಊರುಗಳಿವೆ). ಗಾಣಿಗರ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಗಾಣಿಗದೆರೆ, ಗಾಣದೆರೆ ಎಂದು ಕರೆಯಲಾಗುತ್ತಿತ್ತು. ಎತ್ತು ಗಾಣದ ಹಾಗೂ ಕೈಗಾಣಗಳ ಮೇಲೆ ತೆರಿಗೆ ಹಾಕಿರುವುದನ್ನು ದೊಮ್ಮಲೂರಿನ ಶಾಸನದಿಂದ ತಿಳಿಯಬಹುದು.

ಹಾಗೆಯೇ **ಜಕ್ಕೂರಿನಲ್ಲಿಯೂ** ಒಂದು ಎತ್ತು ಗಾಣವಿದ್ದು, ಇದು 4 ಅಡಿ ಎತ್ತರ, 3 ಅಡಿ ಅಗಲವಿದ್ದು, ಆಧುನಿಕ ತಂತ್ರಾಜ್ಞಾನ ಬರುವ ಮೊದಲು ಈ ಗಾಣ ಬಳಕೆಯಿತ್ತು. ಅಂದು ಅದೆಷ್ಟೋ ಜೀವಗಳಿಗೆ ಆಸರೆಯಾಗಿದ್ದ ಈ ಗಾಣ ಇಂದು ಉತ್ಸವ ಮೂರ್ತಿಯಂತೆ ಬಿಸಿಲು ಗಾಳಿ ಮಳೆಗೆ ಮೈಯನ್ನೊಡ್ಡಿ ಮೂಕಸಾಕ್ಷಿಯಾಗಿ ನಿಂತಿದೆ. ಈ ಬೃಹತ್ ಪ್ರಮಾಣದ ಗಾಣವನ್ನು ಗಮನಿಸಿದರೆ ಬಹುಶಃ ಈ ಗಾಣದ ಮೇಲೆಯೂ ತೆರಿಗೆ ವಿಧಿಸುತ್ತಿದ್ದರು ಎಂದು ನಿಸ್ಸಂದೇಹವಾಗಿ ಹೇಳಬಹುದು.



ಜಕ್ಕೂರಿನಲ್ಲಿರುವ ಎತ್ತಿನಗಾಣ

ಭಾಷಾ ವೈವಿಧ್ಯತೆ


ಮಾನವನ ಸಂವಹನ ಮಾಧ್ಯಮಗಳಲ್ಲಿ ಭಾಷೆ ಪ್ರಮುಖವಾದುದು. ಇದು ಕೇವಲ ಸಂವಹನ ಮಾಧ್ಯಮವಲ್ಲದೇ ಅದರೊಳಗೆ ಸಂಸ್ಕೃತಿಯು ಅಡಗಿರುತ್ತದೆ ಹಾಗೂ ಕಾಲ ಕಾಲಕ್ಕೆ ಬದಲಾವಣೆಯ ಪ್ರಕ್ರಿಯೆಗೂ ಒಳಗಾಗುತ್ತಿರುತ್ತದೆ. ಇಂದು ಭಾಷೆಯ ಅರಿವಿಲ್ಲದೇ ಸಮಾಜದಲ್ಲಿ ವ್ಯವಹರಿಸುವುದು ನಿಜವಾಗಿಯೂ ಕಷ್ಟಕರ. ನಾವು ಇಂದು ಬಳಸುವ ಆಧುನಿಕ ಲಿಪಿ ಹಾಗೂ ಪ್ರಾಚೀನ ಲಿಪಿಗಳಿಗೆ ಭಾಷೆಯೇ ಮೂಲ. ಆದರೆ ಈ ಭಾಷೆಯು ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿ ಇರದೇ, ಒಂದು ಪ್ರದೇಶದಿಂದ (ಪ್ರಾಂತ್ಯ ಅಥವಾ ರಾಜ್ಯ ಅಥವಾ ರಾಷ್ಟ್ರ) ಮತ್ತೊಂದು ಪ್ರದೇಶಕ್ಕೆ ಹೋದಂತೆ ಬದಲಾಗುತ್ತಾ ಹೋಗುವುದರ ಜೊತೆಗೆ ಜನರ ಭಾವನೆಗಳೊಂದಿಗೆ ಹಾಸು ಹೊಕ್ಕಾಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಹಲವಾರು ಭಾಷೆಗಳನ್ನು ಮಾತನಾಡುವ ಜನರು ಕಂಡು ಬರುತ್ತಾರೆ. ಇದನ್ನು ನಾವು ಆ ಪ್ರದೇಶದ ಭಾಷಾ ವೈವಿಧ್ಯತೆ ಎಂದೇ ಕರೆಯಬಹುದು. ಅಂತಹ ಹಲವಾರು ಭಾಷೆಗಳನ್ನು ಮಾತನಾಡುವ ಹಾಗೂ ಸಾಂಸ್ಕೃತಿಕವಾಗಿ ಸಂಪದ್ಭರಿತವಾದ ವೈವಿಧ್ಯಮಯ ಪ್ರದೇಶಗಳಲ್ಲಿ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಗ್ರಹಾರದ ಸಾ.ಶ.1350ರ ಅರುಳಾಳ ಪೆರುಮಾಳ್ ಕಣ್ಣಪ್ಪನ ಶ್ರಾದ್ಧ ಶಾಸನದ ಡಿಜಿಟಲ್ ಚಿತ್ರ

ಬೆಂಗಳೂರು ಸಹ ಒಂದಾಗಿದೆ. ಇಂದು ಬೆಂಗಳೂರಿನಲ್ಲಿ ಕನ್ನಡ, ತಮಿಳು, ತೆಲುಗು, ಮಲಯಾಳಂ, ಉರ್ದು, ಹಿಂದಿ, ಇಂಗ್ಲೀಷ್, ಕೊಂಕಣಿ, ತುಳು, ಮರಾಠಿ ಇನ್ನೂ ಮುಂತಾದ ಸುಮಾರು 107 ಭಾಷೆಗಳನ್ನು ಮಾತನಾಡುವ ಜನರು ಸಿಗುತ್ತಾರೆ. ಹೀಗೆ ಬಹುಭಾಷೆಯನ್ನು ಮಾತನಾಡುವ ಜನರು ಬೆಂಗಳೂರಿನಲ್ಲಿ ಕಂಡುಬರುವುದಕ್ಕೆ, ಬೆಂಗಳೂರಿಗರು ಮತ್ತು ಇನ್ನಿತರ ಜನರು ವಿಭಿನ್ನ ಅಭಿಪ್ರಾಯಗಳನ್ನು ತಿಳಿಸುತ್ತಾರೆ. ಬೆಂಗಳೂರು ಒಂದು ರಾಜಧಾನಿ ಮಾತ್ರವಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾದ ನಗರವಾಗಿರುವುದರಿಂದ, ಉದ್ಯೋಗ, ವ್ಯಾಪಾರ, ಶಿಕ್ಷಣ ಇನ್ನೂ ಮುಂತಾದ ಹಲವು ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದ ಬಂದ ಜನರಿಂದ ಈ ಊರಿನಲ್ಲಿ ಬಹು ಭಾಷೆಗಳು ಹರಡಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು ಮೇಲ್ನೋಟಕ್ಕೆ ಸರಿ ಎನಿಸಬಹುದು. ಆದರೆ ಬೆಂಗಳೂರು ಸಾವಿರಾರು ವರ್ಷಗಳ ಹಿಂದೆಯೇ ಬಹುಭಾಷೆಯ ನಾಡಾಗಿತ್ತು ಎಂದರೆ ಆಶ್ಚರ್ಯಪಡಬೇಕಾಗಿಲ್ಲ.

ಬೆಂಗಳೂರಿನಲ್ಲಿ ಸುಮಾರು ಸಾವಿರ ವರ್ಷದ ಹಿಂದಿನ ತಮಿಳು ಶಾಸನಗಳಿವೆ ಅಥವಾ ಸಿಕ್ಕಿವೆ ಎಂಬ ವಿಚಾರ ಹರಿದಾಡಿದಾಗ ಸಾಮಾನ್ಯ ಜನರು,



ಬೆಂಗಳೂರು ಜಿಲ್ಲೆಯಲ್ಲಿ ಕಂಡುಬರುವ ಹಲವು ಭಾಷೆಯ ಶಾಸನಗಳ ಸ್ಥಳ-ಕಾಲದ ನಕ್ಷೆ
ಚಿತ್ರಕೃಪೆ - ರಾಜ್ ಭಗತ್ (@ rajbhagatt - Twitter)

ಬೆಂಗಳೂರಿನಲ್ಲಿ ತಮಿಳು ಶಾಸನಗಳಿವೆಯಾ? ಹೌದಾ? ಎಂದು ಹುಬ್ಬೇರಿಸಿ ಆಶ್ಚರ್ಯಪಡುವುದನ್ನು ನೋಡುತ್ತೇವೆ. ಅವರ ದೃಷ್ಟಿಯಲ್ಲಿ ತಮಿಳು ಶಾಸನಗಳು ಇಲ್ಲಿ ಹೇಗೆ ಕಂಡು ಬರಲು ಸಾಧ್ಯ ಎಂಬುದಾಗಿರುತ್ತದೆ. ಆದರೆ **ಭಾಷೆಗೆ ಯಾವುದೇ ಸೀಮಿತ ಗಡಿಗಳಿರುವುದಿಲ್ಲ**. ಗಡಿಗಳನ್ನು ಎಳೆಯುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಸ್ವಾತಂತ್ರ್ಯ ನಂತರ ಭಾರತವನ್ನು ಭಾಷಾವಾರು ರಾಜ್ಯಗಳನ್ನಾಗಿ ವಿಂಗಡಿಸಿದ್ದರೂ ಸಹ ಆಯಾ ರಾಜ್ಯಗಳಲ್ಲಿ ಒಂದೇ ಒಂದು ಭಾಷೆಯನ್ನು ಮಾತನಾಡುವ ಜನರನ್ನು ಗುರುತಿಸಲು ಸಾಧ್ಯವಿಲ್ಲ. ಉದಾಹರಣೆಗೆ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಕರ್ನಾಟಕದ ಭೂ ಪ್ರದೇಶಗಳೇ ಆದರೂ ಇಲ್ಲಿ ಕನ್ನಡ ಮತ್ತು ತೆಲುಗು ಎರಡೂ ಭಾಷೆ ಮಾತನಾಡುವವರನ್ನು, ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಜಿಲ್ಲೆಯಾದ ಚಾಮರಾಜನಗರದ ಗಡಿ ಭಾಗದಲ್ಲಿ ಕನ್ನಡ ಮತ್ತು ತಮಿಳು ಮಾತನಾಡುವವರನ್ನು ಹಾಗೂ ಮಹಾರಾಷ್ಟ್ರದ ಗಡಿಯೊಂದಿಗೆ ಹೊಂದಿಕೊಂಡಿರುವ ಬೆಳಗಾವಿಯ ಗಡಿ ಭಾಗದಲ್ಲಿ ಕನ್ನಡ ಮತ್ತು ಮರಾಠಿ ಭಾಷೆ ಮಾತನಾಡುವವರನ್ನು ನಾವು ನೋಡುತ್ತೇವೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ ಆಂಧ್ರಪ್ರದೇಶದ ಚಿತ್ತೂರ್ ಜಿಲ್ಲೆಯಲ್ಲಿ ತೆಲುಗು, ಕನ್ನಡ ಮತ್ತು ತಮಿಳು ಈ ಮೂರು ಭಾಷೆಗಳನ್ನು ಹಾಗೂ ಅನಂತಪುರ ಜಿಲ್ಲೆಯಲ್ಲಿ ತೆಲುಗು ಮತ್ತು ಕನ್ನಡ ಭಾಷೆಗಳನ್ನು ಮಾತನಾಡುವ ಜನರನ್ನು ನೋಡಬಹುದು. ಹಾಗೂ ತಮಿಳುನಾಡಿನ ಕೃಷ್ಣಗಿರಿ, ವೆಲ್ಲೂರು ಮತ್ತು ಧರ್ಮಪುರಿ ಜಿಲ್ಲೆಗಳಲ್ಲಿ ತಮಿಳು, ತೆಲುಗು ಮತ್ತು ಕನ್ನಡ ಈ ಮೂರು ಭಾಷೆಗಳನ್ನು ಹಾಗೂ ಈರೋಡ್ ಮತ್ತು ಸೇಲಂ ಜಿಲ್ಲೆಗಳಲ್ಲಿ ತಮಿಳು ಮತ್ತು ಕನ್ನಡ ಭಾಷೆಗಳನ್ನು ಮಾತನಾಡುವ ಜನರನ್ನು ನೋಡಬಹುದು. ಆದ್ದರಿಂದ ಈ **ಮೂರು ಭಾಷೆಗಳು ಸಾವಿರಾರು ವರ್ಷಗಳ ಕಾಲ ಈ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಕಾರಣಕ್ಕಾಗಿಯೇ ಹರಡಿವೆ ಎಂದು ಹೇಳಬಹುದು**. ಈ ಅಂಶಗಳ ಆಧಾರದಲ್ಲಿ ನೋಡುವುದಾದರೆ ಭಾಷೆಗೆ ಯಾವುದೇ ನಿರ್ಧಿಷ್ಟ ಗಡಿ ಇರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಬೆಂಗಳೂರು ಪ್ರದೇಶದಲ್ಲಿ ಸಾ.ಶ.11ನೇ ಶತಮಾನದ ಕಾಲಘಟ್ಟದಲ್ಲಿ ಚೋಳರು ಆಳ್ವಿಕೆ ಮಾಡಿದ್ದರಿಂದ, **ಈ ಪ್ರದೇಶದಲ್ಲಿ ತಮಿಳು ಶಾಸನಗಳು ಕಂಡು ಬರುವುದರ ಜೊತೆಗೆ ಸಾಂಸ್ಕೃತಿಕವಾಗಿ ತಮಿಳು ಭಾಷೆಯು ಅಸ್ತಿತ್ವದಲ್ಲಿತ್ತು ಎಂಬ ಅಭಿಪ್ರಾಯವನ್ನು ಬಹುಪಾಲು ವಿದ್ವಾಂಸರು ವ್ಯಕ್ತಪಡಿಸುತ್ತಾರೆ**. ಆದರೆ ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ವಾಸ್ತವವಾಗಿ **ಒಂದು ಭಾಷೆಯನ್ನು ಅಲ್ಪಕಾಲದಲ್ಲಿಯೇ ಒಂದು ಪ್ರದೇಶದಲ್ಲಿ ಹರಡಲು ಅಥವಾ ಹೇರಲು ಸಾಧ್ಯವಿಲ್ಲ**. ಒಂದು ಭಾಷೆಯು ಆ ಪ್ರದೇಶದಲ್ಲಿ ಜನ ಸಾಮಾನ್ಯರ ನಡುವೆ ಹರಡಿದೆ ಎಂದರೆ ಅದು ಸಾವಿರಾರು ವರ್ಷಗಳ ಕಾಲ ಬಳಕೆಗೆ ಮತ್ತು ಹಲವು ಪ್ರಕ್ರಿಯೆಗೆ ಒಳಪಟ್ಟು ಅಸ್ಥಿತ್ವದಲ್ಲಿರುತ್ತದೆ. ಇದರಲ್ಲಿ ಅಲ್ಲಿನ ಜನರ ಪರಿಸರವು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅಂದರೆ ವಿವಿಧ ಕಾರಣಕ್ಕಾಗಿ ಈ ಪ್ರದೇಶಕ್ಕೆ ವಲಸೆ ಬಂದ ಜನರು, ಇಲ್ಲಿನ ಜನರೊಡನೆ ಬೆರೆತು, ನೂರಾರು ವರ್ಷಗಳ ಕಾಲ ಸಂವಹನ ಮಾಡಿದ್ದರ ಫಲವಾಗಿ ತಮಿಳು ಭಾಷೆ ಇಲ್ಲಿ ಹರಡಿರಬಹುದು. ಈ ದೃಷ್ಟಿಕೋನದಲ್ಲಿ ನೋಡುವುದಾದರೆ, ಬೆಂಗಳೂರು ಪ್ರದೇಶದಲ್ಲಿನ ಕೆಲವು ತಮಿಳು ಶಾಸನಗಳು ಚೋಳರ ಆಳ್ವಿಕೆಯನ್ನು ಪ್ರತಿನಿಧಿಸುತ್ತವೆ ಎಂಬುದಂತು ಸತ್ಯ. ಆದರೆ ಈ **ಲಿಖಿತ ರೂಪದ ಶಾಸನಗಳನ್ನೇ ಆಧಾರವನ್ನಾಗಿಟ್ಟುಕೊಂಡು ಸಂಪೂರ್ಣವಾಗಿ ಚೋಳರಿಂದಲೇ ತಮಿಳು ಭಾಷೆ ಹರಡಿದೆ ಎಂದು ಹೇಳುವುದು ಕಷ್ಟ**. ಏಕೆಂದರೆ ಮೊದಲೇ ಅಸ್ತಿತ್ವದಲ್ಲಿದ್ದ ಭಾಷೆಗೆ ಅನುಗುಣವಾಗಿ ಚೋಳರು ಶಾಸನಗಳನ್ನು ಹಾಕಿಸಿರಬಹುದೇ ಹೊರೆತು ಇವರಿಂದಲೇ ತಮಿಳು ಭಾಷೆ ಹರಡಿದೆ ಎಂದು ಹೇಳಲು ಸಾಧ್ಯವಿಲ್ಲ. ಹಾಗೇ ನೋಡಿದರೆ ಕೆಲವು ಪ್ರದೇಶಗಳಲ್ಲಿ ಚೋಳರ ಕಾಲಘಟ್ಟದ ಕನ್ನಡ ಶಾಸನಗಳು ಕಂಡು ಬರುತ್ತವೆ. ಚೋಳರು ಕನ್ನಡ ಶಾಸನಗಳನ್ನು ಹಾಕಿಸಿದ ಮಾತ್ರಕ್ಕೆ ಚೋಳರಿಗೆ ಕನ್ನಡ ಗೊತ್ತಿತ್ತು ಎಂದು ಹೇಳಲೂ ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಲಿಪಿಕಾರರಿಗೆ ತಮಿಳು ಭಾಷೆ/ಲಿಪಿ ಗೊತ್ತಿಲ್ಲದೇ ಇದ್ದುದರಿಂದ ಕನ್ನಡದಲ್ಲಿ ಹಾಗೂ ತಮಿಳು ಲಿಪಿಕಾರರಿಗೆ ಸ್ಥಳೀಯ ಭಾಷೆ/ಲಿಪಿ ಗೊತ್ತಿಲ್ಲದೇ ಇದ್ದುದರಿಂದ ತಮಿಳು ಭಾಷೆಯಲ್ಲೂ ಶಾಸನವನ್ನು ಹಾಕಿಸಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. **ಒಟ್ಟಾರೆಯಾಗಿ ಸ್ಥಳೀಯ ಭಾಷೆ ಮತ್ತು ಲಿಪಿಕಾರರ ಲಭ್ಯತೆಗೆ ಅನುಗುಣವಾಗಿ ಶಾಸನಗಳಲ್ಲಿ ಭಾಷೆಗಳು ಮೂಡಿ ಬಂದಿವೆ ಎಂದು ಹೇಳಿದರೆ ತಪ್ಪಾಗಲಾರದು**.

ಚೋಳರ ನಂತರ ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಬೆಂಗಳೂರು ಪ್ರದೇಶವನ್ನು ಆಳ್ವಿಕೆ ಮಾಡಿದ **ಹೊಯ್ಸಳರೂ ಸಹ ತಮಿಳು ಭಾಷೆಯಲ್ಲಿ ಹಲವಾರು ಶಾಸನಗಳನ್ನು ಹಾಕಿಸಿದ್ದಾರೆ** ಎಂದರೆ ಕೆಲವರಿಗೆ ಆಶ್ಚರ್ಯವಾಗಬಹುದು. ಹೌದು! ಹೆಚ್ಚು ಕಡಿಮೆ ಕನ್ನಡ ಶಾಸನಗಳಷ್ಟೇ ಸಂಖ್ಯೆಯಲ್ಲಿ ತಮಿಳು ಶಾಸನಗಳು ಹೊಯ್ಸಳರ ಕಾಲಘಟ್ಟದಲ್ಲಿ ಕಂಡುಬರುತ್ತವೆ. ಇದಕ್ಕೆ ಹೋಲಿಕೆ ಎಂಬಂತೆ **ತಮಿಳುನಾಡಿನಲ್ಲಿಯೂ ಸಾಕಷ್ಟು ಕನ್ನಡ ಶಾಸನಗಳು ಕಂಡು ಬರುತ್ತವೆ**[1]. ಹೊಯ್ಸಳರು

---

1 ಪಿ.ವಿ.ಕೃಷ್ಣಮೂರ್ತಿ, ತಮಿಳುನಾಡಿನ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, 2018

ತಮಿಳುನಾಡಿನಲ್ಲಿಯೂ ಆಳ್ವಿಕೆ ಮಾಡುತ್ತಿದ್ದುದರ ಜೊತೆಗೆ ತಮಿಳು ರಾಜಮನೆತನಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಇಟ್ಟುಕೊಂಡಿದ್ದರಿಂದ ತಮಿಳು ಭಾಷೆಯ ಪ್ರಭಾವ ಇವರ ಮೇಲೆ ಇದ್ದಿರಬಹುದು. ಆದ್ದರಿಂದ ಇವರೂ ಕೂಡ ತಮಿಳು ಭಾಷೆಯಲ್ಲಿ ಶಾಸನಗಳನ್ನು ಹಾಕಿಸಿರಬಹುದು. ಆದರೆ ಇವರೂ ಸಹ ಮೊದಲೇ ಅಸ್ಥಿತ್ವದಲ್ಲಿದ್ದ ಭಾಷೆಗೆ ಅನುಗುಣವಾಗಿ ಶಾಸನಗಳನ್ನು ಹಾಕಿಸಿದರೋ ಹೊರೆತು, ಇವರಿಂದಲೇ ತಮಿಳು ಭಾಷೆಯು ಬೆಂಗಳೂರು ಪ್ರದೇಶದಲ್ಲಿ ಹರಡಿದೆ ಎಂದು ಹೇಳಲು ಸಾಧ್ಯವಿಲ್ಲ.

ಪ್ರಸ್ತುತ ಸಂಚಿಕೆಯಲ್ಲಿ ತಿಳಿಸಿರುವ ಅಗ್ರಹಾರದ ಸಾ.ಶ.1532ರ **ವಿಜಯನಗರ (ಕರ್ನಾಟಕ ಸಾಮ್ರಾಜ್ಯ) ಕಾಲದ ತಮಿಳು ಶಾಸನವು ಅಂದಿನ ಕಾಲಘಟ್ಟದ ಬೆಂಗಳೂರಿನ ಭಾಷಾ ವೈವಿಧ್ಯತೆಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತವೆ**. ಈ ಶಾಸನವು ಇಮ್ಮಡಿ ಹರಿಯಪ್ಪ ಒಡೆಯರ್ ಎಂಬ ಹೆಸರನ್ನು ಉಲ್ಲೇಖಿಸುತ್ತದೆ. ಈ ಇಮ್ಮಡಿ ಹರಿಯಪ್ಪ ಒಡೆಯರ್‌ನು ವಿಜಯನಗರದ ಅರಸ ಒಂದನೇ ಬುಕ್ಕನ ಮಗ. ಆದರೆ ಇಲ್ಲಿ ಮುಖ್ಯವಾಗಿ **ಗಮನಿಸಬೇಕಾದ ಅಂಶವೇನೆಂದರೆ ವಿಜಯನಗರದ ಅರಸರ ಶಾಸನಗಳು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಮಾತ್ರ ಕಂಡುಬರುತ್ತವೆ ಎಂದು ಸಾಮಾನ್ಯವಾಗಿ ತಿಳಿದುಕೊಳ್ಳಲಾಗಿರುತ್ತದೆ**. ಆದರೆ ಅಗ್ರಹಾರದ ಶಾಸನವನ್ನು ತಮಿಳು ಭಾಷೆ ಮತ್ತು ಲಿಪಿಯಲ್ಲಿ ಕೆತ್ತಿರುವುದರಿಂದ ಈ ಪ್ರದೇಶದಲ್ಲಿ ತಮಿಳು ಭಾಷೆಯನ್ನು ಮಾತನಾಡುವ ಜನರಿದ್ದರು ಹಾಗೂ ಈ ಜನರ ಆಡು ಭಾಷೆಗೆ ಅನುಗುಣವಾಗಿ ವಿಜಯನಗರದ ಅರಸರು ಶಾಸನಗಳನ್ನು ಬರೆಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇದುವರೆಗೂ ಗಮನಿಸಿದ ಅಂಶಗಳ ಆಧಾರದಲ್ಲಿ ನೋಡುವುದಾದರೆ ಆಧುನಿಕ ಬೆಂಗಳೂರು ಇಂದಿನ ಬಹುಭಾಷಾ ಸಂಸ್ಕೃತಿಗೂ ಒಗ್ಗಿಕೊಳ್ಳುವ ಮೊದಲೇ, ಅಂದರೆ **ಸುಮಾರು ಸಾವಿರಾರು ವರ್ಷಗಳ ಹಿಂದೆಯೇ ಬೇರೆ ಬೇರೆ ಭಾಷೆಯನ್ನು ಮಾತನಾಡುವ ಜನರನ್ನು ತನ್ನ ಮಡಿಲಲ್ಲಿ ಸೇರಿಸಿಕೊಳ್ಳುವುದರೊಂದಿಗೆ ಭಾಷಾ ವೈವಿಧ್ಯತೆಯನ್ನು ಹೊಂದಿತ್ತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು**.

ಕೊನೆಯ ಮಾತು

ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿಗಳಲ್ಲಿ ದೊರೆತಿರುವ ಶಾಸನಗಳು, ಈ ಪ್ರದೇಶಗಳು ಸಾವಿರಾರು ವರ್ಷಗಳ ಭವ್ಯಪರಂಪರೆ ಹೊಂದಿತ್ತು ಎಂಬುದನ್ನು ಸಾರಿ ಹೇಳುತ್ತವೆ. ಇವು ರಾಜಮಹಾರಾಜರ ಇತಿಹಾಸವನ್ನು ಹೇಳುವ ಶಾಸನಗಳಾಗಿರದೇ, ಸ್ಥಳೀಯ ನಾಯಕರು/ಅಧಿಕಾರಿಗಳು, ಆಡಳಿತ ವಿಭಾಗಗಳು, ಹಲವು ಗ್ರಾಮನಾಮಗಳು, ಕೆರೆಕಟ್ಟೆ, ತೆರಿಗೆಗಳು, ದೇವಾಲಯಗಳು ಹಾಗೂ ಆಚರಣೆಗಳ ಉಲ್ಲೇಖವನ್ನು ತಿಳಿಸುತ್ತವೆ. ಸ್ಮಾರಕ ಶಿಲೆಗಳಿಂದ ಅಂದಿನ ಜನರ ಜೀವನ ಶೈಲಿ, ಉಡುಗೆ-ತೊಡುಗೆ, ಅಂದಿನ ಸಮಾಜದಲ್ಲಿನ ನಂಬಿಕೆಗಳನ್ನು ತಿಳಿಯಬಹುದು.

ಇಲ್ಲಿನ ಹಲವಾರು ಐತಿಹಾಸಿಕ ಮಾಹಿತಿಗಳು ಈ ಮೊದಲು ದಾಖಲಾದ ಶಾಸನಗಳ ಜೊತೆಗೆ ಹೊಸದಾಗಿ ಪತ್ತೆಯಾದ ಶಾಸನಗಳಿಂದ ಹೊರಬಿದ್ದಿವೆ. ಹತ್ತನೇ ಶತಮಾನದಿಂದಲೇ ಜಕ್ಕೂರು ಗ್ರಾಮ ಅಸ್ತಿತ್ವದಲ್ಲಿತ್ತು ಹಾಗೂ ಹಲವಾರು ಅಧಿಕಾರಿಗಳು ಕಾಲ ಕಾಲಕ್ಕೆ ಈ ಭೂ ಪ್ರದೇಶವನ್ನು ಆಳ್ವಿಕೆ ಮಾಡಿ ಹಲವು ದಾನ ದತ್ತಿ ಬಿಟ್ಟಿರುವುದನ್ನು ಶಾಸನಗಳಿಂದ ತಿಳಿಯಬಹುದಾಗಿದೆ.

ಐತಿಹಾಸಿಕವಾಗಿ ಗ್ರಾಮಗಳನ್ನು ಹಾಗೂ ಹಲವು ತೆರಿಗೆಯನ್ನು ದಾನವಾಗಿ ಪಡೆದ ಪುರಾತನವಾದಂತಹ ಅಲ್ಲಾಳನಾಥ ದೇವಾಲಯವು ಇಂದು ಇಲ್ಲದೆ ಇರುವುದು ಬೆಲೆ ಕಟ್ಟಲಾಗದ ನಷ್ಟ ಎಂದೇ ಹೇಳಬಹುದು. ಇಷ್ಟೊಂದು ಆದಾಯವನ್ನು ದಾನವಾಗಿ ಪಡೆದ ಅಲ್ಲಾಳನಾಥ ದೇವಾಲಯವು ಜಕ್ಕೂರಿನಲ್ಲಿ ಎಲ್ಲಿತ್ತು ಎಂಬುದನ್ನು ತಿಳಿಯುವುದಕ್ಕೂ ಯಾವುದೇ ಕುರುಹುಗಳು ದೊರೆಯದಂತೆ ನಾಶವಾಗಿ ಹೋಗಿರುವುದನ್ನು ನೋಡಿದರೆ ಬಹಳ ವ್ಯವಸ್ಥಿವಾಗಿ ದೇವಾಲಯವನ್ನು ನಾಶ ಮಾಡಿರುವಂತೆ ತೋರುತ್ತದೆ.

ಜಕ್ಕೂರು ಪ್ರದೇಶದ ಜನರು, ಜೀವನ ಸಾಗಿಸಲು ಅವಶ್ಯವಾಗಿ ಬೇಕಾಗಿದ್ದ ನೀರಿನ ಅನುಕೂಲವನ್ನು ನೂರಾರು ವರ್ಷಗಳವರೆಗೆ ಮಾಡುತ್ತಾ ಬಂದಿರುವ ಜಕ್ಕೂರಿನ ಕೆರೆ ಭೂ ಪ್ರದೇಶವನ್ನು ಶಾಸನಗಳಲ್ಲಿ ದಾನ ನೀಡಿರುವುದನ್ನು ಗಮನಿಸಿದಾಗ, ಈ ಕೆರೆಯು ನೂರಾರು ಎಕರೆ ಭೂ ಪ್ರದೇಶಕ್ಕೆ ನೀರುಣಿಸುವಷ್ಟು ವಿಶಾಲವಾಗಿತ್ತು ಎಂಬುದನ್ನು ಅರಿಯಬಹುದು. ಇಂದಿಗೂ ಜೀವಂತವಾಗಿರುವ ಕೆರೆಯು ಹಲವು ಜೀವಸಂಕುಲಗಳಿಗೆ ವರದಾನವಾಗಿದೆ.

ಈ ಪ್ರದೇಶದ ಪ್ರಮುಖ ಬಡಾವಣೆಯಾದ ಅಗ್ರಹಾರದಲ್ಲಿ ಕಂಡುಬಂದಿರುವ ತಮಿಳು ಶಾಸನವು ತಮ್ಮ ಹಿರಿಯರಿಗೆ ಶ್ರಾದ್ಧ ಮಾಡಿರುವುದನ್ನು ತಿಳಿಸುವುದರಿಂದ ನಮ್ಮ ಪೂರ್ವಜರ ಆಚರಣೆಗಳು ಮತ್ತು ಸಂಸ್ಕೃತಿಯನ್ನು ತಿಳಿಸುವ ಪ್ರಮುಖ ದಾಖಲೆ ಎಂದು ಹೇಳಿದರೆ ತಪ್ಪಾಗಲಾರದು..

ವೀರಗಲ್ಲುಗಳು, ಹಂದಿಬೇಟೆ ವೀರಗಲ್ಲು, ಭಕ್ತರ ಶಿಲ್ಪಗಳು, ದಂಪತಿಗಳ ಸ್ಮಾರಕ ಶಿಲ್ಪಗಳು ಇನ್ನೂ ಮುಂತಾದ ಅವಶೇಷಗಳು ಅಂದಿನ ಕಾಲದ ಸಂಪ್ರದಾಯ, ಧಾರ್ಮಿಕ ಆಚರಣೆಗಳು, ತ್ಯಾಗ, ಬಲಿದಾನ, ವೀರತ್ವದ ಸಂಕೇತಗಳಾಗಿದ್ದು, ಇವುಗಳ ಮೂಲಕ ಹಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಒಟ್ಟಾರೆಯಾಗಿ ಈ ಸಂಚಿಕೆಯು ಶಾಸನಗಳ ವಿಷಯದ ಆಧಾರದ ಮೇಲೆ ಜಕ್ಕೂರು, ಅಲ್ಲಾಳಸಂದ್ರ, ಅಗ್ರಹಾರ ಮತ್ತು ದಾಸರಹಳ್ಳಿ ಗ್ರಾಮಗಳ ಸ್ಥಳೀಯ ಇತಿಹಾಸವನ್ನು ಹಲವು ಆಯಾಮಗಳಲ್ಲಿ ವಿಶ್ಲೇಷಿಸಿ, ವಿಮರ್ಶಿಸಿ, ಚರ್ಚಿಸಿ ವಸ್ತುನಿಷ್ಠವಾಗಿ ತಿಳಿಯಲು ಸಹಾಯಕವಾಗಿದೆ. ಶಾಸನ ಆಧಾರಿತ ಈ ಗ್ರಾಮಗಳ ಇತಿಹಾಸವು ಸ್ಥಳೀಯರಲ್ಲಿ ನಮ್ಮ ಪರಂಪರೆಯ ಬಗ್ಗೆ ಹೊಸ ಆಲೋಚನೆಯನ್ನೇ ಹುಟ್ಟುಹಾಕಿ, ಈಗಾಗಲೇ ಭೌತಿಕವಾಗಿ ಮತ್ತು ಡಿಜಿಟಲ್ ರೂಪದಲ್ಲಿ ಸಂರಕ್ಷಿತವಾಗಿರುವ ಶಾಸನಗಳು ಮತ್ತು ಸ್ಮಾರಕ ಶಿಲೆಗಳ ಮಹತ್ವವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದರ ಜೊತೆಗೆ ನಮ್ಮ ಪೂರ್ವಜರು ಸ್ಥಾಪಿರುವ ಸ್ಮಾರಕಗಳ ದಿನವನ್ನು ತಮ್ಮ ಊರಿನ ದಿನವೆಂದು ಸ್ಥಳೀಯ ಜನರೆಲ್ಲ ಸೇರಿ ಆಚರಿಸುವುದರ ಮೂಲಕ ನಮ್ಮ ಪ್ರಾಚೀನ ಪರಂಪರೆಯ ಗತವೈಭವವನ್ನು ಸ್ಮರಿಸಿಕೊಂಡು, ಮುಂದಿನ ಪೀಳಿಗೆಗೆ ಅವುಗಳ ಮಹತ್ವವನ್ನು ಸುಸ್ಥಿತಿಯಲ್ಲಿ ವರ್ಗಾಯಿಸಬೇಕಾಗಿದೆ.

ಈ ಸಂಚಿಕೆಯು ನಿಮಗೆ ಸಂತೋಷವನ್ನು ನೀಡಿದೆ ಎಂದು ನಾವು ಬಾವಿಸುತ್ತೇವೆ. **ನಿಮ್ಮ ಅನಿಸಿಕೆಗಳು ಹಾಗೂ ಸಲಹೆಗಳನ್ನು ಈ ಮೂಲಕ - https://bit.ly/biv2_feedback ನಮಗೆ ಕಳಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇವೆ**, ಧನ್ಯವಾದಗಳು.

ಅನುಬಂಧ



ಶಾಸನದಲ್ಲಿರುವ ಅಕ್ಷರಗಳು




ಶಾಸನದಲ್ಲಿರುವ ಪ್ರತಿಯೊಂದು ಅಕ್ಷರಗಳನ್ನು ಬೇರ್ಪಡಿಸುವ ಕೆಲಸವನ್ನು ಈ ಭಾಗದಲ್ಲಿ ಮಾಡಲಾಗಿದ್ದು, ಹೀಗೆ ಅಕ್ಷರಗಳನ್ನು ತೆಗೆಯುವ ಸಮಯದಲ್ಲಿ ಅಕ್ಷರಗಳ ಗಾತ್ರದ ಆಧಾರದ ಮೇಲೆ ಚಿತ್ರವು ದೊಡ್ಡ ಮತ್ತು ಸಣ್ಣವಾಗುವುದರಿಂದ, ಕೆಳಗೆ ಚಿತ್ರಗಳನ್ನು ನೀಡುವಾಗ ಟೇಬಲ್ ಗೆ ಸರಿ ಹೊಂದುವಂತೆ ಕಲ್ಲಿನ ಹಿನ್ನೆಲೆಯನ್ನು (background) ಇಟ್ಟುಕೊಂಡು ಅಕ್ಷರಗಳ ಚಿತ್ರಗಳನ್ನು ಹಾಕಿದೆ. ಆದರೆ ಶಾಸನದ ಅಕ್ಷರಕ್ಕೆ ಯಾವುದೇ ರೀತಿಯಾಗಿ ಚ್ಯುತಿಯಾಗದಂತೆ 3ಡಿ ಸ್ಕ್ಯಾನಿಂಗ್ ಮಾಡಿದ ಡಿಜಿಟಲ್ ಮಾಡಲ್ ನ ಸಹಾಯದಿಂದ ಒಂದೊಂದೇ ಅಕ್ಷರವನ್ನು ತೆಗೆಯಲಾಗಿದೆ.

ಈ ರೀತಿ ಒಂದೊಂದೇ ಅಕ್ಷರಗಳನ್ನು ನೀಡುವುದರಿಂದ ಶಾಸನದಲ್ಲಿರುವ ಪ್ರತಿಯೊಂದು ಅಕ್ಷರವನ್ನು ಸ್ಪಷ್ಟವಾಗಿ ನೋಡಬಹುದು ಹಾಗೂ ಶಾಸನ ಸಂಪಾದನೆಯಲ್ಲಿ ಊಹೆಗೂ ಅವಕಾಶವಿರುವುದಿಲ್ಲ. ಆದರೆ ಈ ಭಾಗದಲ್ಲಿ ಒಂದೊಂದು ಶಾಸನದ ಮೊದಲ ಸಾಲಿನ ಅಕ್ಷರಗಳನ್ನು ಮಾತ್ರ ನೀಡಲಾಗಿದೆ. ಆಸಕ್ತರು ಪೂರ್ಣವಾಗಿ ಬೇಕೆಂದು ಕೇಳಿದರೆ ಅವರಿಗೆ ಪ್ರತ್ಯೇಕವಾಗಿ ನೀಡಲಾಗುತ್ತದೆ. ಏಕೆಂದರೆ ಇಲ್ಲಿ ಎಲ್ಲಾ ಶಾಸನದ ಅಕ್ಷರಗಳನ್ನು ಕೊಡಲು ಹೋದರೆ ಪುಟಗಳು ಹೆಚ್ಚಿ, ಮುಖ್ಯ ವಿಷಯದಲ್ಲಿ ಓದುವ ಆಸಕ್ತಿ ಕಡಿಮೆ ಆಗಬಹುದೆಂಬ ಕಳಕಳಿಯಾಗಿದೆ. ಅಲ್ಲದೇ ಬೆಂಗಳೂರು ಪ್ರದೇಶದಲ್ಲಿ ಡಿಜಿಟಲ್ ಸಂರಕ್ಷಣೆ ಮಾಡುವ ಎಲ್ಲಾ ಶಾಸನಗಳ ಒಂದೊಂದು ಅಕ್ಷರಗಳನ್ನು ತೆಗೆದು ತಂತ್ರಾಂಶದಲ್ಲಿ ಹಾಕಿ, ತಂತ್ರಾಂಶದ ಮುಖಾಂತರ ಶಾಸನಗಳನ್ನು ಓದುವ ಪ್ರಯತ್ನ ನಡೆಯುತ್ತಿದ್ದು, ಸದ್ಯದಲ್ಲೇ ಈ ತಂತ್ರಾಂಶ ಬಿಡುಗಡೆಯಾಗಲಿದೆ.

ಜಕ್ಕೂರ ಸಾ.ಶ.1342ರ ಹೊಂನಮಾರಯನಾಯ್ಕರ ದಾನ ಶಾಸನ

1ನೇ ಸಾಲು - ಸ್ವಸ್ತಿ ಶ್ರೀ ಶಕಾಬ್ದ ೧೨೬೫ ನೆಯ


ಸ್ವ	ಸ್ತಿ	ಶ್ರೀ	ಶ	ಕಾ	ಬ್ದ	೧	೨
							

೬	೫	ನೆ	ಯ
			


ಜಕ್ಕೂರ ಸಾ.ಶ.10ನೇ ಶತಮಾನದ ಪ್ರಶಸ್ತಿ ಶಾಸನ

1ನೇ ಸಾಲು - .. ಮ . ದ ಗಾಳ್ಗಂ ಗವಾಡಿ ತೊಂಭತ್ತಙುಸಾಯಿ

?	?	ಮ	?	ದ	ಗಾ	ಳ್ಗಂ	ಗ




ವಾ	ಡಿ	ತೊಂ	ಭ	ತ್ತ	ಙು	ಸಾ	ಯಿ



ಜಕ್ಕೂರ ಸಾ.ಶ. ಸು.10ನೇ ಶತಮಾನದ ಕಲ್ನಾಡು ಶಾಸನ

1ನೇ ಸಾಲು - ..... ಮ್ಮಕಲಿಗ ಸ


ಮ್ಮ	ಕ	ಲಿ	ಗ	ಸ



ಜಕ್ಕೂರ ಸಾ.ಶ.1432ರ ಅಲ್ಲಾಳನಾಥ ದೇವರ ಕಂಬದ ಶಾಸನ

1ನೇ ಸಾಲು - [ಜ]ಯಾಭ್ಯುದ


ಜ ?	ಯಾ	ಭ್ಯು	ದ




ಅಲ್ಲಾಳಸಂದ್ರದ ಸಾ.ಶ.1544ರ ರಾಚುರ ನರಸಪಯರ ದಾನ ಶಾಸನ

1ನೇ ಸಾಲು - 0 ಶ್ವಸ್ತಿ ಶ್ರೀ ವಿಜಯಾಭ್ಯುದಯ ಸಾಲಿವಾಹನ ಸ

0	ಶ್ವ	ಸ್ತಿ	ಶ್ರೀ	ವಿ	ಜ	ಯಾ	ಭ್ಯು




ದ	ಯ	ಸಾ	ಲಿ	ವಾ	ಹ	ನ	ಸ




ದಾಸರಹಳ್ಳಿಯ ಸಾ.ಶ.1532ರ ದಾನ ಶಾಸನ

1ನೇ ಸಾಲು - ೦ ಶುಭಮಸ್ತು ಸ್ವಸ್ತಿ ಶ್ರೀ ವಿಜಯಾತಭುದಯ

೦	ಶು	ಭ	ಮ	ಸ್ತು	ಸ್ವ	ಸ್ತಿ	ಶ್ರೀ



ವಿ	ಜ	ಯಾ	ತ	ಭು	ದ	ಯ





ಬೆಂಗಳೂರು ಪ್ರದೇಶದ ಶಾಸನ ಆಧಾರಿತ ಕನ್ನಡ ಲಿಪಿ ಬೆಳವಣಿಗೆ


ಬೆಂಗಳೂರು ಪ್ರದೇಶದಲ್ಲಿ ಎಂಟನೇ ಶತಮಾನದಿಂದ 17ನೇ ಶತಮಾನದವರೆಗೆ ಕನ್ನಡ ಲಿಪಿ ಬದಲಾಗುತ್ತಿರುವುದನ್ನು ಉತ್ತಮ ಗುಣಮಟ್ಟದ ಶಾಸನ 3ಡಿ ಮಾಡಲ್ ಗಳಲ್ಲಿನ ಅಕ್ಷರಗಳ ಚಿತ್ರದ ಸಹಾಯದಿಂದ ಈ ಮುಂದಿನಂತೆ ತಿಳಿಯಬಹುದು.

ಉದಾಹರಣೆಯಾಗಿ **ಚ**, **ಮ**, **ವ**, ಅಕ್ಷರಗಳ ಲಿಪಿ ಬೆಳವಣಿಗೆಯನ್ನು ಕೆಳಗೆ ನೀಡಲಾಗಿದೆ ಹಾಗೂ '**ಉ**' ಕಾರದ ಮತ್ತು '**ಎ**' ಕಾರದ ಬೆಳವಣಿಗೆಯಾಗುವುದನ್ನು ತೋರಿಸಲಾಗಿದೆ.




ಚ ಅಕ್ಷರ ಬೆಳವಣಿಗೆ (ಸಾ.ಶಕ 890ರಿಂದ 1705ರವರೆಗೆ)

ಸಾ. ಶ. 890	ಸಾ.ಶ. 900	ಸಾ.ಶ. 1029	ಸಾ.ಶ. 1342	ಸಾ.ಶ. 1440	ಸಾ.ಶ. 1705
ನಾಗತ್ತರನ ವೀರಗಲ್ಲು (**ಬೇಗೂರು**)	ನಾಗತ್ತರನ ದೇವಾಲಯದ ಶಾಸನ (**ಬೇಗೂರು**)	ಮೌನಿಭಟ್ಟಾರಕನ ದಾನ ಶಾಸನ (**ಸೋಲದೇವನಹಳ್ಳಿ**)	ಹೊಂನಮಾರ-ಯನಾಯ್ಕನ ದಾನ ಶಾಸನ (**ಜಕ್ಕೂರು**)	ಮಲ್ಲರಸನ ಚೊಕ್ಕನಾಥ ದೇವಾಲಯದ ಶಾಸನ (**ದೊಮ್ಮಲೂರು**)	ಕಂಠೀರವ ನರಸರಾಜ ಒಡೆಯರ ಶಾಸನ (**ಕೊತ್ತನೂರು**)
					

ಮ ಅಕ್ಷರ ಬೆಳವಣಿಗೆ (ಸಾ.ಶಕ 750ರಿಂದ 1544ರವರೆಗೆ)



ಸಾ. ಶ. 750	ಸಾ. ಶ. 890	ಸಾ. ಶ. 950	ಸಾ. ಶ. 1029	ಸಾ. ಶ. 1342	ಸಾ. ಶ. 1544
ಕಿತ್ತಯ್ಯನ ವೀರಗಲ್ಲು (**ಹೆಬ್ಬಾಳ**)	ನಾಗತ್ತರನ ವೀರಗಲ್ಲು (**ಬೇಗೂರು**)	ಪ್ರಶಸ್ತಿ ಶಾಸನ (**ಜಕ್ಕೂರು**)	ಮೌನಿಭಟ್ಟಾರಕನ ದಾನ ಶಾಸನ (**ಸೋಲದೇವನಹಳ್ಳಿ**)	ಹೊಂನಮಾರ-ಯನಾಯ್ಕನ ದಾನ ಶಾಸನ (**ಜಕ್ಕೂರು**)	ರಾಚುರ ನರಸಪಯರ ದಾನ ಶಾಸನ (**ಅಲ್ಲಾಳಸಂದ್ರ**)
					



ವ ಅಕ್ಷರ ಬೆಳವಣಿಗೆ (ಸಾ.ಶ. 750ರಿಂದ 1705ರವರೆಗೆ)


ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 950	ಸಾ. ಶ. 1342	ಸಾ. ಶ. 1705
ಕಿತ್ತಯ್ಯನ ವೀರಗಲ್ಲು (**ಹೆಬ್ಬಾಳ**)	ಸಂಬಯ್ಯನ ನ ವೀರಗಲ್ಲು (**ಮೇಡಹಳ್ಳಿ**)	ನಾಗತ್ತರನ ವೀರಗಲ್ಲು (**ಬೇಗೂರು**)	ಪ್ರಶಸ್ತಿ ಶಾಸನ **(ಜಕ್ಕೂರು)**	ಹೊಂನಮಾರ-ಯನಾಯ್ಕನ ದಾನ ಶಾಸನ (**ಜಕ್ಕೂರು**)	ಕಂಠೀರವ ನರಸರಾಜ ಒಡೆಯರ ಶಾಸನ (**ಕೊತ್ತನೂರು**)
					

ಬೆಂಗಳೂರು ಪ್ರದೇಶದಲ್ಲಿ ದೊರಕುವ ಶಾಸನಗಳ ಆಧಾರವಾಗಿ '**ಎ**' ಕಾರ ಹಾಗೂ '**ಉ**' ಕಾರದ ಬೆಳವಣಿಗೆಯನ್ನು ಮುಂದೆ ಕಾಣಬಹುದು. ವಿಶೇಷವಾಗಿ ಈ ಸಂಚಿಕೆಯಲ್ಲಿ ಚರ್ಚಿಸಿರುವ ಎಲ್ಲಾ **ಶಾಸನಗಳಲ್ಲಿ ಬರುವ ಎ ಕಾರ ಕಾರದ ಬದಲಾವಣೆಗಳನ್ನೂ ತೋರಿಸಲಾಗಿದೆ.**


'ಎ' ಕಾರದ ಬೆಳವಣಿಗೆ (ಸಾ.ಶ. 750ರಿಂದ 1544ರವರೆಗೆ)


ಸಾ. ಶ. 750	ಸಾ. ಶ. 750	ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 890
ಕಿತ್ತಯ್ಯನ ವೀರಗಲ್ಲು (**ಹೆಬ್ಬಾಳ**) **ಡೆ**	ಕಿತ್ತಯ್ಯನ ವೀರಗಲ್ಲು (**ಹೆಬ್ಬಾಳ**) **ಲೆ**	ಮಾರೆಯನ ವೀರಗಲ್ಲು (**ಕೆ. ಆರ್ ಪುರಂ**) **ಗೆ**	ಸಂಬಯ್ಯನ ವೀರಗಲ್ಲು (**ಮೇಡಹಳ್ಳಿ**) **ಯೆ**	ನಾಗತ್ತರನ ವೀರಗಲ್ಲು (**ಬೇಗೂರು**) **ಚೆ**	ನಾಗತ್ತರನ ವೀರಗಲ್ಲು (**ಬೇಗೂರು**) **ನೆ**
					

ಸಾ. ಶ. 1029	ಸಾ. ಶ. 950	ಸಾ. ಶ. 950	ಸಾ. ಶ. 950	ಸಾ. ಶ. 1342	ಸಾ. ಶ. 1342
ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**) **ಡೆ**	ಪ್ರಶಸ್ತಿ ಶಾಸನ (**ಜಕ್ಕೂರು**) **ಚೆ**	ಪ್ರಶಸ್ತಿ ಶಾಸನ (**ಜಕ್ಕೂರು**) **ಸೆ**	ಕಲ್ನಾಡು ಶಾಸನ (**ಜಕ್ಕೂರು**) **ಲೆ**	ಹೊಂನಮಾರ-ಯನಾಯ್ಕನ ದಾನ ಶಾಸನ (**ಜಕ್ಕೂರು**) **ನೆ**	ಹೊಂನಮಾರ-ಯನಾಯ್ಕನ ದಾನ ಶಾಸನ (**ಜಕ್ಕೂರು**) **ಸೆ**
					

ಸಾ. ಶ. 1532	ಸಾ. ಶ. 1544
ದಾನ ಶಾಸನ (**ದಾಸರಹಳ್ಳಿಯ**) **ರೆ**	ರಾಚುರ ನರಸಪಯರ ದಾನ ಶಾಸನ (**ಅಲ್ಲಾಳಸಂದ್ರ**) **ದೆ**
	

ಶಾಸನಗಳಲ್ಲಿ ಉ ಕಾರದ ಬೆಳವಣಿಗೆ (ಸಾ.ಶ. 750ರಿಂದ 1705ರವರೆಗೆ)

ಸಾ. ಶ. 750	ಸಾ. ಶ. 750	ಸಾ. ಶ. 890	ಸಾ. ಶ. 890	ಸಾ. ಶ. 1029	ಸಾ. ಶ. 950
ಕಿತ್ತಯ್ಯನ ವೀರಗಲ್ಲು (**ಹೆಬ್ಬಾಳ**) **ಪು**	ಮಾರೆಯನ ವೀರಗಲ್ಲು **(ಕೆ. ಆರ್ ಪುರಂ)** **ಪು**	ನಾಗತ್ತರನ ವೀರಗಲ್ಲು **(ಬೇಗೂರು)** **ತು**	ನಾಗತ್ತರನ ವೀರಗಲ್ಲು **(ಬೇಗೂರು)** **ರು**	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**) **ಯು**	ಕಲ್ನಾಡು ಶಾಸನ **(ಜಕ್ಕೂರು)** **ಡು**
					

ಸಾ. ಶ. 1342	ಸಾ. ಶ. 1342	ಸಾ. ಶ. 1532	ಸಾ. ಶ. 1544
ಹೊಂನಮಾರ- ಯನಾಯ್ಕನ ದಾನ ಶಾಸನ (**ಜಕ್ಕೂರು**) **ಡು**	ಹೊಂನಮಾರ- ಯನಾಯ್ಕನ ದಾನ ಶಾಸನ (**ಜಕ್ಕೂರು**) **ಶು**	ದಾನ ಶಾಸನ (**ದಾಸರಹಳ್ಳಿಯ**) **ಭು**	ರಾಚುರ ನರಸಪಯರ ದಾನ ಶಾಸನ **(ಅಲ್ಲಾಳಸಂದ್ರ)** **ಲು**
			

ಆಕರ ಕನ್ನಡ ಗ್ರಂಥಗಳು

1	ಅರುಣಿ ಎಸ್.ಕೆ : ಬೆಂಗಳೂರು ಪರಂಪರೆ, ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು, 2019.
2	ಕೃಷ್ಣಮೂರ್ತಿ ಪಿ.ವಿ : ತಮಿಳುನಾಡಿನ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2018.
3	ಗೋಪಾಲ್ ಆರ್ (ಸಂ) : ನಾಡಪ್ರಭು ಕೆಂಪೇಗೌಡರ ಜೀವನ ಮತ್ತು ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010.
4	ಚಿದಾನಂದ ಮೂರ್ತಿ ಎಂ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, 2010
5	ಚಿದಾನಂದ ಮೂರ್ತಿ ಎಂ : ವಾಗರ್ಥ, ಬಾಪ್ಕೊ ಪಬ್ಲಿಕೇಷನ್ಸ್, ಬೆಂಗಳೂರು, 1981
6	ಚನ್ನಬಸವಯ್ಯ ಹಿರೇಮಠ : ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
7	ನರಸಿಂಹನ್ ಕೆ.ಆರ್ : ಯಲಹಂಕನಾಡು, ಇತಿಹಾಸದ ನೋಟಗಳು (ಭಾಗ-೧), ಶೋಧನ ಪ್ರಕಾಶನ, ಮಾರುತಿ ನಗರ, ಯಲಹಂಕ, ಬೆಂಗಳೂರು, 2019.
8	ನರಸಿಂಹ ಮೂರ್ತಿ ಎ.ವಿ : ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2003.
9	ಲಲಿತಾಂಬ ಎನ್.ಆರ್ : ಶಾಸನವಲ್ಲಿ ಕರ್ನಾಟಕದ ಹೆಮ್ಮೆಯ ವೀರ ಕುಡಿಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2017.
10	ಶಿವಲಿಂಗಯ್ಯ ಡಿ (ಪ್ರ.ಸಂ) : ತುಮಕೂರು ಜಿಲ್ಲೆಯ ಸ್ಥಳನಾಮಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು, 2011.
11	ಶ್ರೀಕಂಠಕುಮಾರಸ್ವಾಮಿ ಆರ್.ಕೆ : ಅಂತ್ಯೇಷ್ಟಿ, ಶ್ರೀ ಚಾಮುಂಡೇಶ್ವರಿ ಪ್ರಿಂಟರ್ಸ್, ಬೆಂಗಳೂರು, 2014.
12	ಶ್ರೀಕಂಠಕುಮಾರಸ್ವಾಮಿ ಆರ್.ಕೆ : ಶ್ರಾದ್ಧ, ತನುಮನು ಪ್ರಕಾಶಕರು, ಮೈಸೂರು, 2011.
13	ಶ್ರೀನಿವಾಸ ರಿತ್ತಿ : ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2000
14	ಶೇಷಶಾಸ್ತ್ರಿ ಆರ್ : ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, 2005.
15	ಶೇಷಶಾಸ್ತ್ರಿ ಆರ್ : ಕರ್ನಾಟಕದ ವೀರಗಲ್ಲುಗಳು, ಕಾಮಧೇನು ಪುಸ್ತಕ ಭವನ, ಬೆಂಗಳೂರು. 2017.
16	ಸೂರ್ಯನಾಥ ಕಾಮತ್ : ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ ಪಬ್ಲಿಕೇಷನ್, ಬೆಂಗಳೂರು, 2011.
17	ಸೋಮಶೇಖರ್ ಎಸ್.ವೈ : ಕರ್ನಾಟಕದ ಬಿರುದಾವಳಿಗಳು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.
18	ಸುಂಕಂ ಗೋವರ್ಧನ (ಸಂ), ಅಕ್ಷರಮೇರು (ಪಿ.ವಿ.ಕೃಷ್ಣಮೂರ್ತಿ ಅಭಿನಂದನ ಸಂಪುಟ), ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ, ತುಮಕೂರು, 2020.
19	.ಎಂ.ಜಮುನ (ಪ್ರ.ಸಂ), ಎಂ.ಜಿ.ಮಂಜುನಾಥ (ಸಂ), ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, 2006.

English Reference Books

1	Lindsay, Major. A. W. C : Mysore Commission, Supplement to Mysore General Census, Appendices A To H of 1871 (Bangalore, Mysore Government Press, 1875).
2	D.C Sircar, 1966, Indian Ephigraphical Glossary
3	S.K.Ramachandra Rao, Pratima Kosha A Descriptive of Indian Iconography in Six Volumes, S.K.Ramachandra Rao Memorial Trust, Bangalore.
4	Leela Shantakumari, History of the Agrahara, Karnataka 400-1300, New Era Publications, 1986.
5	K Syamalamma , History of the Agraharas in Andhra Desa (From the Earliest to 1500 AD), Raj Publications (Dist.), 2017
6	Savita Sharma, Early Indian Symbols, Agam Kala Prakashan, 1990
7	H.Sarkar and B.M.Pande, Symbols and Graphic Representations in Indian Inscriptions, Aryan Books International, 1999
8	M.Prasanna Kumar, Dana in the History of Mysore, Pub:Saraswathi G Subramanya, 2010
9	B Lewis Rice, Epigraphia Carnatica Vol 09, Inscriptions in the Bangalore District, 1905
10	B Lewis Rice, Epigraphia Carnatica Vol 09, Supplementary, Inscriptions in the Bangalore District

ಬೆಂಗಳೂರು ಇತಿಹಾಸ ವೈಭವ-ಸಿಂಗಾಪುರ ಸಂಚಿಕೆಯ ಲೋಕಾರ್ಪಣೆ ಕಾರ್ಯಕ್ರಮದ ಛಾಯಾಚಿತ್ರಗಳು

"ಬೆಂಗಳೂರು ಇತಿಹಾಸ ವೈಭವ" ಮಾಲಿಕೆಯ ಮೊದಲ 'ಸಿಂಗಾಪುರ' ಸಂಚಿಕೆಯನ್ನು ಸಿಂಗಾಪುರದ ಶ್ರೀ ವರದರಾಜ ಸ್ವಾಮಿ ದೇವಾಲಯದ ಮುಂಭಾಗದಲ್ಲಿ ಅಯೋಜಿಸಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಿಂದಲೇ ಪುಸ್ತಕ ಲೋಕಾರ್ಪಣೆ ಮಾಡಲಾಯಿತು. ಈ ಸಮಾರಂಭಕ್ಕೆ ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದ ವಿ.ನಾಗರಾಜ್ ಅವರು ಒಳಗೊಂಡಂತೆ ಹಲವಾರು ವಿದ್ವಾಂಸರು, ಇತಿಹಾಸಾಕ್ತರು ಮತ್ತು ಸ್ಥಳೀಯರು ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಸಿಂಗಾಪುರ ಸಂಚಿಕೆಯನ್ನು ಬಿಡುಗಡೆ ಮಾಡಿದ ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದ ವಿ.ನಾಗರಾಜ್ ಅವರು ಹಾಗೂ ಸಿಂಗಾಪುರದ ನಿವಾಸಿಗಳಾದ ವಿ.ಶ್ರೀನಿವಾಸ್ ಮತ್ತು ಮೋಹನ್ ನಾಯಕ್ ಅವರು



ಸಿಂಗಾಪುರದ ಹಿರಿಯರಾದ ಮುನಿಯಪ್ಪ ಅವರು ತಮ್ಮ ಬಡಾವಣೆಯ ಇತಿಹಾಸದ ಸಂಚಿಕೆಯನ್ನು ಕೈಯಲ್ಲಿ ಹಿಡಿದಾಗ ಕಣ್ಣಲ್ಲಿ ಆನಂದಬಾಷ್ಪ ಮೂಡಿದ ದೃಶ್ಯ



ದಿ ಮಿಥಿಕ್ ಸೊಸೈಟಿ

ಭಾರತೀಯ ಸಾಂಸ್ಕೃತಿಕ ಅಧ್ಯಯನಕ್ಕೆ ಅರ್ಪಿಸಿಕೊಂಡ ಅಭಿಜಾತ ಸಂಸ್ಥೆಗಳ ಪೈಕಿ 'ದಿ ಮಿಥಿಕ್ ಸೊಸೈಟಿ'ಯು ಹೆಮ್ಮೆಪಡುವಂಥ ಸ್ಥಾನವನ್ನು ಪಡೆದುಕೊಂಡಿದೆ. 1909ರಲ್ಲಿ ಪ್ರಾರಂಭವಾದ ಸಂಸ್ಥೆಯು ಸತತ 112 ವರ್ಷಗಳಿಂದ ಭಾರತೀಯ ಅಧ್ಯಯನ ಶಾಸ್ತ್ರಗಳಾದ ಇತಿಹಾಸ, ಪುರಾತತ್ವ ಶಾಸ್ತ್ರ, ಭಾಷಾಶಾಸ್ತ್ರ, ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ಜಾನಪದ, ಪುರಾಣ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪದ ಕ್ಷೇತ್ರಗಳಲ್ಲಿ ಸಂಶೋಧನೆ, ಪ್ರಚಾರ, ಉಪನ್ಯಾಸ, ಸಂರಕ್ಷಣೆ ಹಾಗೂ ಅವುಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ನಿರಂತರ ಮಾಡುತ್ತಾ ಬರುತ್ತಿದೆ. ಸುಮಾರು 40 ಸಾವಿರಕ್ಕೂ ಹೆಚ್ಚು ಪುಸ್ತಕ ಸಂಗ್ರಹವಿರುವ ಗ್ರಂಥಾಲಯವು ಆಸಕ್ತರು ಮತ್ತು ಸಂಶೋಧಕರಿಗೆ ವರದಾನವಾಗಿದೆ. ಬಿ.ಎಲ್.ರೈಸ್, ಸಿ.ವಿ.ರಾಮನ್, ಆರ್.ಶಾಮಶಾಸ್ತ್ರಿ, ಮಿರ್ಜಾ ಇಸ್ಮಾಯಿಲ್, ಎಸ್.ಆರ್.ರಾವ್ , ಎಸ್.ಶ್ರೀಕಂಠಯ್ಯ, ಆರ್.ನರಸಿಂಹಾಚಾರ್, ಸಿ.ಹಯವದನ ರಾವ್, ಎಂ.ವಿಶ್ವೇಶ್ವರಯ್ಯ ಮತ್ತು ಇತರರು ಸಂಸ್ಥೆಯ ಸುದೀರ್ಘ ಮತ್ತು ಶ್ರೀಮಂತ ಇತಿಹಾಸದೊಂದಿಗೆ ಸಂಬಂಧವನ್ನು ಹೊಂದಿದ್ದರು.



ISBN 978-81-954980-8-6
9 788195 498086

ದಿ ಮಿಥಿಕ್ ಸೊಸೈಟಿಯ ಶಾಸನಗಳ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ದೊಮ್ಮಲೂರು ಮತ್ತು ಶ್ರೀನಿವಾಗಿಲು ಬಡಾವಣೆಯಲ್ಲಿರುವ ಶಾಸನಗಳನ್ನು 3ಡಿ ಸ್ಕ್ಯಾನ್ ಮಾಡುತ್ತಿರುವುದು